ಬೆಂಗಳೂರು
ಸೋಮವಾರ, 30 ಮಾರ್ಚ್ 2026
ಸಂಪುಟ 33, ಸಂಚಿಕೆ 148, ಪುಟಗಳು 12+4
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
RNI: 58231/94
REG No.KA/BG GPO/2532/2021-23
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಸರ್ಕಾರ ನೀಡುವ ಮಾಹಿತಿ ಮಾತ್ರ ನಂಬಿ | 08
2 ಕ್ಷೇತ್ರಗಳಿಂದ ದಳಪತಿ ಸ್ಪರ್ಧೆ | 08
ನುಸುಳುಕೋರರನ್ನು ಹೊರದಬ್ಬುತ್ತೇವೆ | 08

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಶುಕ್ಲ ಪಕ್ಷ, ತಿಥಿ: ದ್ವಾದಶಿ, ನಕ್ಷತ್ರ: ಮಘೆ

ದಿನದ ಮಾತು

ಲೋಕದಲ್ಲಿ ಜೀವನವು ಅಸ್ಥಿರ, ಯೌವನ, ಧನ ಅಸ್ಥಿರ. ಹೆಂಡತಿ ಮಕ್ಕಳು ಅಸ್ಥಿರ. ಆದರೆ ಧರ್ಮ, ಕೀರ್ತಿಗಳು ಮಾತ್ರ ಸ್ಥಿರ.

▲ ಶ್ರೀ ಶಂಕರಾಚಾರ್ಯರು

ಕೊಲಬಾದಲ್ಲಿ ಅಕ್ಷರಕ್ರಾಂತಿ ಮಾಡಿದ ರೂಬಲ್ ನಾಗಿ

ನೇರ ನೋಟ

• ದು.ಗು. ಲಕ್ಷ್ಮಣ

• ಪುಟ ೬

ಕಿರುಸುದ್ದಿ

ಸಾಹಿತ್ಯ ಅಕಾಡೆಮಿಯಿಂದ ಅಂಬೇಡ್ಕರ್ ವಿಶೇಷ ಪುಸ್ತಕ

• **ಬೆಂಗಳೂರು:** ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರ ಮೂಲ ಆಶಯಗಳನ್ನು ಎತ್ತಿ ಹಿಡಿಯುವ ಸಲುವಾಗಿ ಅಂಬೇಡ್ಕರ್ ಕುರಿತ ವಿಶೇಷ ಕೃತಿ ಹೊರತರಲು ಕರ್ನಾಟಕ ಸಾಹಿತ್ಯ ಅಕಾಡೆಮಿ ಸಜ್ಜಾಗಿದೆ. ಪುಸ್ತಕ ರಚನೆಗಾಗಿ ಸರ್ಕಾರವು ಅಕಾಡೆಮಿಗೆ 30 ಲಕ್ಷ ರೂ. ವಿಶೇಷ ಅನುದಾನ ನೀಡಿದೆ. ಪುಸ್ತಕವು ಸುಮಾರು 250 ಪುಟಗಳನ್ನು ಹೊಂದಿರಲಿದ್ದು, ಮಕ್ಕಳು ಮತ್ತು ಸಾಮಾನ್ಯ ಜನರಿಗೆ ಅರ್ಥವಾಗುವಂತೆ ಸರಳ ಕನ್ನಡದಲ್ಲಿರಲಿದೆ.

• ಪುಟ ೨

ಮಾದಕವಸ್ತುಮುಕ್ತ ರಾಜ್ಯ: ಸಿಎಂ ಸಿದ್ದರಾಮಯ್ಯ

• **ಮೈಸೂರು:** ಕರ್ನಾಟಕವನ್ನು ಮಾದಕವಸ್ತು ಮುಕ್ತ ರಾಜ್ಯವನ್ನಾಗಿ ಮಾಡುವುದು ನಮ್ಮ ರಾಜ್ಯ ಸರ್ಕಾರದ ಸಂಕಲ್ಪವಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು. ಭಾನುವಾರ ಮೈಸೂರಿನಲ್ಲಿ ಪೊಲೀಸ್ ಉಪನಿರೀಕ್ಷಕ ಪ್ರಶಿಕ್ಷಣಾರ್ಥಿಗಳ ನಿರ್ಗಮನ ಪಥ ಸಂಚಲನದಲ್ಲಿ ಮಾತನಾಡಿದ ಅವರು, ಮಾದಕವಸ್ತು ಮುಕ್ತ ಸಮಾಜ ನಿರ್ಮಾಣ ಮಾಡುವುದಾಗಿ ಸರ್ಕಾರ ಘೋಷಣೆ ಮಾಡಿದೆ. ಈ ನಿಟ್ಟಿನಲ್ಲಿ ಪೊಲೀಸರು ಕಾರ್ಯಪ್ರವೃತ್ತರಾಗಬೇಕು ಎಂದು ಸೂಚಿಸಿದರು.

• ಪುಟ ೨

ಪರಪ್ಪನ ಜೈಲ್ ವಿಡಿಯೋ 3 ಸಿಬ್ಬಂದಿ ಅಮಾನತು

• **ಬೆಂಗಳೂರು:** ಕೆಲ ದಿನಗಳ ಹಿಂದೆ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಿಂದ ಬಿಡುಗಡೆಯಾಗಿರುವ ಮೂರು ವಿಡಿಯೋಗಳು ತೀವ್ರ ಸಂಚಲನ ಸೃಷ್ಟಿಸಿದ್ದು, ಉದ್ದೇಶಪೂರ್ವಕವಾಗಿ ಡಿಜಿಪಿ ಅಲೋಕ್ ಕುಮಾರ್ ವಿರುದ್ಧವೇ ವಿಡಿಯೋದಲ್ಲಿ ಗಂಭೀರ ಆರೋಪ ಮಾಡಲಾಗಿದೆ. ಇದರ ಬೆನ್ನಲ್ಲೇ ಮೂವರು ಸಿಬ್ಬಂದಿ ಅಮಾನತುಗೊಳಿಸಲಾಗಿದೆ.

• ಪುಟ ೨

ಈಜಲು ತೆರಳಿದ್ದ ನಾಲ್ವರು ಮಕ್ಕಳ ಮೃತ್ಯು

• ಪುಟ ೨

ಶ್ರೀರಾಮನವಮಿ ಪ್ರಸಾದ ಸೇವಿಸಿ 200 ಮಂದಿ ಅಸ್ವಸ್ಥ

• ಪುಟ ೨

ಸಮುದಾಯ ಚಿಕ್ಕದು, ಸಾಧನೆ ದೊಡ್ಡದು

• ಪುಟ ೨

ಪಾಲಕ್ಕಾಡ್ ರ್‍ಯಾಲಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಭರವಸೆ

ಕೇರಳ ಚುಕ್ಕಾಣಿ ನಮ್ದೇ



- ದಶಕಗಳಿಂದ ಯುಡಿಎಫ್, ಎಲ್‌ಡಿಎಫ್ ಭ್ರಷ್ಟಾಚಾರ
- ಇವೆರಡೂ ಬಣಗಳಿಂದ ಅವಕಾಶವಾದಿ ರಾಜಕೀಯ
- ಬದಲಾವಣೆಯ ಸಂದೇಶ ರವಾನಿಸಿದೆ ಕೇರಳ
- ಬಿಜೆಪಿಯೇ ಕೇರಳದ ಅಸಲಿ ಎ-ಟೀಮ್

• **ಪಾಲಕ್ಕಾಡ್:** ಬಿಜೆಪಿಯ ಬಿ-ಟೀಮ್‌ಗಳೆಂದು ಯುಡಿಎಫ್ ಮತ್ತು ಎಲ್‌ಡಿಎಫ್ ಪರಸ್ಪರ ಆರೋಪಿಸುತ್ತ ಕೇರಳ ಜನರ ದಾರಿತಪ್ಪಿಸುತ್ತಿದ್ದಾರೆ. ಬಿಜೆಪಿಯೇ ಕೇರಳದ ನಿಜವಾದ ಎ-ಟೀಮ್ ಎಂಬುದನ್ನು ಎರಡೂ ಬಣಗಳು ಪರೋಕ್ಷವಾಗಿ ಒಪ್ಪಿವೆ. ನಿಮ್ಮೆಲ್ಲರ ಆಶೀರ್ವಾದದೊಂದಿಗೆ ಕೇರಳದಲ್ಲಿ ಮುಂದಿನ ಸರ್ಕಾರ ರಚಿಸಲಿದ್ದೇವೆ ಎಂದು ಪ್ರಧಾನಿ ನರೇಂದ್ರ ಮೋದಿ ಭರವಸೆ ನೀಡಿದ್ದಾರೆ.

ಪಾಲಕ್ಕಾಡ್‌ನಲ್ಲಿ ಆಯೋಜಿಸಿದ್ದ ಬೃಹತ್ ಚುನಾವಣಾ ರ್‍ಯಾಲಿಯಲ್ಲಿ ಮಾತನಾಡಿದ ಪ್ರಧಾನಿ, ಯುಡಿಎಫ್ ಮತ್ತು ಎಲ್‌ಡಿಎಫ್ ಬಣಗಳೆರಡೂ ದಶಕಗಳಿಂದ ಕೇರಳವನ್ನು ಲೂಟಿ ಮಾಡುತ್ತಲೇ ಬಂದಿವೆ. ಇವುಗಳೆರಡರ ಬಲೆಗೆ ಸಿಲುಕಿರುವ ನಮ್ಮ ಕೇರಳ ಚಡಪಡಿಸುತ್ತಿದೆ ಎಂದು ಹೇಳಿದ್ದಾರೆ.

ಕೇರಳದಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಮುಂದಿನ ಸರ್ಕಾರವನ್ನು ರಚಿಸಲಿದೆ ಎಂದು ಮೋದಿ ಭವಿಷ್ಯ ನುಡಿದಿದ್ದಾರೆ. ಕೇರಳ ಜನತೆಯ ಆಶೀರ್ವಾದ ಹಾಗೂ ನಿಮ್ಮೆಲ್ಲರ ಬೆಂಬಲದಿಂದ ನಾವಿಲ್ಲಿ ಮುಂದಿನ ಸರ್ಕಾರ ರಚಿಸಲಿದ್ದೇವೆ. ಕೇರಳದಲ್ಲಿ ಜನಸೇವೆ ಮಾಡುವ ಯಾವುದೇ ಅವಕಾಶವನ್ನು ಬಿಟ್ಟುಕೊಡುವುದಿಲ್ಲ ಎಂದು ಪ್ರಧಾನಿ ಮೋದಿ ಆತ್ಮವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಬದಲಾವಣೆ ಬಯಸುತ್ತಿದೆ ಕೇರಳ: ಈ ಬಾರಿ ಕೇರಳದಲ್ಲಿ ವಿಶೇಷವಾದ ಬದಲಾವಣೆಯ ವಾತಾವರಣವನ್ನು ನೋಡುತ್ತಿದ್ದೇನೆ. ಕೇರಳ ಬದಲಾವಣೆಯ ಸಂದೇಶ ರವಾನಿಸುತ್ತಿದೆ.

➡ ಪುಟ ೯

ತ್ರಿಶ್ಶೂರ್ ರೋಡ್‌ಶೋ: 50 ಸಾವಿರ ಜನ ಭಾಗಿ!

ಎನ್‌ಡಿಎ ಚುನಾವಣಾ ಪ್ರಚಾರದ ಅಂಗವಾಗಿ ತ್ರಿಶ್ಶೂರ್‌ನಲ್ಲಿ ಆಯೋಜಿಸಿದ್ದ ಬೃಹತ್ ರೋಡ್‌ಶೋನಲ್ಲಿ ಪ್ರಧಾನಿ ಮೋದಿ ಪಾಲ್ಗೊಂಡಿದ್ದು, ರಸ್ತೆಯ ಎರಡೂ ಬದಿಗಳಲ್ಲಿ ಸಾವಿರಾರು ಸಂಖ್ಯೆಯಲ್ಲಿ ಸೇರಿದ್ದ ಸಾರ್ವಜನಿಕರು ಅವರನ್ನು ಸ್ವಾಗತಿಸಿದರು. 900 ಮೀ. ದೂರದವರೆಗೆ ವ್ಯಾಪಿಸಿದ್ದ ರೋಡ್‌ಶೋನಲ್ಲಿ 50,000ಕ್ಕೂ ಹೆಚ್ಚು ಜನರು ಪಾಲ್ಗೊಂಡಿದ್ದರೆಂದು ಬಿಜೆಪಿ ಮೂಲಗಳು ತಿಳಿಸಿವೆ. ತ್ರಿಶ್ಶೂರ್ ಜಿಲ್ಲೆಯ ಎನ್‌ಡಿಎ ಅಭ್ಯರ್ಥಿಗಳಾದ ಪದ್ಮಜಾ ವೇಣುಗೋಪಾಲ್ ಮತ್ತು ಕೆ.ಕೆ. ಅನೀಶ್ ಕುಮಾರ್ ಹಾಗೂ ಕೇಂದ್ರ ಸಚಿವ ಸುರೇಶ್ ಗೋಪಿ ಪ್ರಧಾನಿ ಜತೆಗಿದ್ದರು.

ಹೆಚ್ಚಿದ ಎನ್‌ಡಿಎ ಜನಪ್ರಿಯತೆ

ಕೇರಳದಲ್ಲಿ ಎನ್‌ಡಿಎ ಜನಪ್ರಿಯತೆ ಹೆಚ್ಚಾಗುತ್ತಿದೆ. ಜನರಿಗೆ ಬಿಜೆಪಿಯ ಮೇಲಿನ ವಿಶ್ವಾಸ ಹೆಚ್ಚಾಗುತ್ತಿದೆ. ಭಾರೀ ಸಂಖ್ಯೆಯಲ್ಲಿ ಸೇರಿ ಬಿಜೆಪಿಗೆ ನಿಮ್ಮ ಬೆಂಬಲವನ್ನು ತೋರಿಸಿದ್ದೀರಿ. ಪಾಲಕ್ಕಾಡ್‌ನ ಇಂದಿನ ವಾತಾವರಣವು ಕೇರಳದ ಬಯಕೆಯನ್ನು ತೋರಿಸುತ್ತದೆ. ಕೇರಳದ ಯುವಜನತೆ ಬಿಜೆಪಿ ಮತ್ತು ಎನ್‌ಡಿಎ ಮೇಲೆ ವಿಶ್ವಾಸ ಹೊಂದಿರುವುದಲ್ಲದೆ, ಮಹಿಳೆಯರು ಮತ್ತು ಕೃಷಿಕರೂ ಬಿಜೆಪಿ ಮತ್ತು ಎನ್‌ಡಿಎಯನ್ನು ಪ್ರೀತಿಸುತ್ತಾರೆ ಎಂದು ಮೋದಿ ಹೇಳಿದ್ದಾರೆ.

ಲೂಟಿ ಹಣ ಜನರಿಗೆ ವಾಪಸ್

ಪಿಣರಾಯಿ ಸರ್ಕಾರದ ಮೇಲೆ ಕೇಂದ್ರ ಸರ್ಕಾರದ ಹಣಕಾಸಿನ ನೆರವನ್ನು ದುರ್ಬಳಕೆಯ ಆರೋಪ ಹೊರಿಸಿದ ಮೋದಿ, ನಿಮಗೆ (ಜನರಿಗೆ) ಸೇರಬೇಕಾದ ಹಣವನ್ನು ಭ್ರಷ್ಟಾಚಾರ ನಡೆಸಿ ಲೂಟಿ ಮಾಡಿದ್ದಾರೆ. ಎನ್‌ಡಿಎ ಸರ್ಕಾರ ಅಧಿಕಾರ ಕ್ಕೇರಿದ ತಕ್ಷಣ ಎಲ್‌ಡಿಎಫ್ ಸರ್ಕಾರ ನಿಮ್ಮಿಂದ ಲೂಟಿ ಮಾಡಿದ ಹಣವನ್ನು ವಾಪಸ್ ನೀಡುವ ಮೂಲಕ ಕೇರಳದ ಆರ್ಥಿಕ ಪ್ರಗತಿ ಯನ್ನು ಉತ್ತೇಜಿಸುತ್ತೇವೆ ಎಂದು ಮೋದಿ ಭರವಸೆ ನೀಡಿದ್ದಾರೆ.

5 ಲಕ್ಷ ಕೋಟಿ ಸಾಲದ ಹೊರೆ!

ಕಳೆದ 10 ವರ್ಷಗಳಲ್ಲಿ ಎಲ್‌ಡಿಎಫ್ ಸರ್ಕಾರ ಕೇರಳವನ್ನು 5 ಲಕ್ಷ ಕೋಟಿ ರೂ. ಸಾಲದ ಹೊರೆಗೆ ದೂಡಿದೆ. ಕಳೆದೊಂದು ದಶಕದಲ್ಲಿ ಕೇರಳದ ಸಾಲದ ಹೊರೆ ದ್ವಿಗುಣಗೊಂಡಿದೆ. ಜನರ ಹಣವೆಲ್ಲವೂ ಎಲ್‌ಡಿಎಫ್ ಜೇಬನ್ನು ಸೇರಿಕೊಂಡಿದೆ ಎಂದು ಮೋದಿ ಆರೋಪಿಸಿದ್ದಾರೆ.

ಧ್ವನಿವರ್ಧಕದಲ್ಲಿ ಹೊಗೆ, ಆತಂಕ

ಮೋದಿ ರ್‍ಯಾಲಿ ಆರಂಭಕ್ಕೂ ಮುನ್ನ ಧ್ವನಿವರ್ಧಕದಲ್ಲಿ ಹೊಗೆ ಕಂಡುಬಂದಿದ್ದು, ಸ್ವಲ್ಪ ಸಮಯ ಆತಂಕ ಸೃಷ್ಟಿಸಿತ್ತು. ಧ್ವನಿವರ್ಧಕದಿಂದ ಹೊಗೆ ಬಂದಿರುವುದನ್ನು ಪೊಲೀಸರು ದೃಢೀಕರಿಸಿದ್ದಾರೆ. ಜಿಲ್ಲೆಯ ಕೋಟ್ಟ ಮೈದಾನಂನಲ್ಲಿ ಮೋದಿ ಆಗಮಿಸುವ ಮುನ್ನ ಈ ಘಟನೆ ನಡೆದಿತ್ತು.

ಎಲ್ಲಾ ವಲಯಗಳಿಗೂ ನಿರಂತರ ಪೂರೈಕೆ, ಯಾವುದೇ ಆತಂಕ ಬೇಡ ಎಂದ ಸಚಿವ

ಆಟೋ ಎಲ್‌ಪಿಜಿಗಿಲ್ಲ ಕೊರತೆ: ಮುನಿಯಪ್ಪ



• **ಬೆಂಗಳೂರು:** ಎಲ್ಲಾ ವಲಯಗಳಿಗೂ ಯಾವುದೇ ಅಡೆತಡೆ ಇಲ್ಲದೆ ಎಲ್‌ಪಿಜಿ ಸರಬರಾಜು ಮಾಡಲಾಗುತ್ತಿದೆ. ವಿಶೇಷವಾಗಿ ಆಟೋ ಎಲ್‌ಪಿಜಿಗೆ ಯಾವುದೇ ರೀತಿಯ ಕೊರತೆ ಇಲ್ಲ ಎಂದು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವ ಕೆ.ಎಚ್. ಮುನಿಯಪ್ಪ ತಿಳಿಸಿದ್ದಾರೆ.

ರಾಜ್ಯದಲ್ಲಿ ಎಲ್‌ಪಿಜಿ ಸರಬರಾಜು ವ್ಯವಸ್ಥೆಯನ್ನು, ವಿಶೇಷವಾಗಿ ಆಟೋ ಎಲ್‌ಪಿಜಿ ಪೂರೈಕೆಯನ್ನು ರಾಜ್ಯ ಸರ್ಕಾರವು ನಿಕಟವಾಗಿ ಗಮನಿಸುತ್ತಿದೆ. ಕರ್ನಾಟಕದಾದ್ಯಂತ ಒಟ್ಟು 72 ಆಟೋ ಎಲ್‌ಪಿಜಿ ಡಿಸ್ಪೆನ್ಸಿಂಗ್ ಸ್ಟೇಷನ್‌ಗಳು (ಎಎಲ್‌ಡಿಎಸ್) ಕಾರ್ಯನಿರ್ವಹಿಸುತ್ತಿವೆ. ಇವುಗಳಲ್ಲಿ 31 ಕೇಂದ್ರಗಳು ಬೆಂಗಳೂರು ನಗರವೊಂದರಲ್ಲೇ ಇವೆ. ಸಾರ್ವಜನಿಕ ವಲಯದ ಪ್ರಮುಖ ತೈಲ ಮಾರಾಟ ಕಂಪನಿಗಳಾದ (ಒಎಂಸಿಎಸ್) ಐಒಸಿಎಲ್, ಬಿಪಿಸಿಎಲ್ ಮತ್ತು ಎಚ್‌ಪಿಸಿಎಲ್ ಮೂಲಕ ಆಟೋ ಎಲ್‌ಪಿಜಿ ಸರಬರಾಜು ಮಾಡಲಾಗುತ್ತಿದೆ. ಪ್ರಸ್ತುತ ಈ ಸಂಸ್ಥೆಗಳು ಪ್ರತಿ ಲೀಟರ್‌ಗೆ 77.74 ರೂ. ದರದಲ್ಲಿ ಆಟೋ ಎಲ್‌ಪಿಜಿ ಪೂರೈಸುತ್ತಿವೆ ಎಂದು ಮಾಹಿತಿ ನೀಡಿದ್ದಾರೆ.

ಕಳೆದ ವಾರದಲ್ಲಿ ದಿನಕ್ಕೆ ಸರಾಸರಿ 64.9 ಮೆಟ್ರಿಕ್ ಟನ್ ಆಟೋ ಎಲ್‌ಪಿಜಿಯನ್ನು ವಿತರಿಸಲಾಗಿದೆ. ಇಸ್ರೇಲ್-ಇರಾನ್ ಸಂಘರ್ಷದ ಮೊದಲು ಈ ಪ್ರಮಾಣವು ದಿನಕ್ಕೆ 57.6 ಮೆಟ್ರಿಕ್ ಟನ್ ಇತ್ತು. ಇದು ಪೂರೈಕೆಯಲ್ಲಿನ ಗಮನಾರ್ಹ ಹೆಚ್ಚಳವನ್ನು ತೋರಿಸುತ್ತದೆ ಎಂದು ವಿವರಿಸಿದ್ದಾರೆ.

ವಿದ್ಯುತ್-ಸೌರ ಸ್ಟವ್ ಬಳಸಿ

ಸಾರ್ವಜನಿಕರು, ವಾಣಿಜ್ಯ ಬಳಕೆದಾರರು ಅನಾವಶ್ಯಕವಾಗಿ ಮುಂಗಡ ಕಾಯ್ದಿರಿಸದೆ ಸರ್ಕಾರದೊಂದಿಗೆ ಸಹಕರಿಸುವಂತೆ ಹಾಗೂ ವಾಣಿಜ್ಯ ಬಳಕೆದಾರರು ಸಾಧ್ಯವಾದಷ್ಟು ವಿದ್ಯುತ್ ಸ್ಟವ್, ಸೌರ ಆಧಾರಿತ ಅಡುಗೆ ವ್ಯವಸ್ಥೆ ಬಳಸುವಂತೆ ಸಚಿವ ಕೆ.ಎಚ್.ಮುನಿಯಪ್ಪ ಮನವಿ ಮಾಡಿದ್ದಾರೆ. ಹೆಚ್ಚು ದರ ವಸೂಲಿ ಮಾಡಿ ಕಾಳಸಂತೆಯಲ್ಲಿ ಗೃಹಬಳಕೆ, ವಾಣಿಜ್ಯ ಬಳಕೆ, ಆಟೋ ಎಲ್‌ಪಿಜಿಗಳನ್ನು ಮಾರಾಟ ಮಾಡುವುದು ಕಂಡುಬಂದಲ್ಲಿ ಕಾನೂನು ಕ್ರಮವಲ್ಲದೆ ಪರವಾನಗಿ ರದ್ದುಗೊಳಿಸುವ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದ್ದಾರೆ. ಕೇಂದ್ರ ಸರ್ಕಾರದಿಂದ ಹೆಚ್ಚುವರಿ ಸಿಲಿಂಡರ್ ಪೂರೈಕೆ ಭರವಸೆ ದೊರೆತಿರುವುದರಿಂದ ರಾಜ್ಯದಲ್ಲಿ ಎಲ್‌ಪಿಜಿ ಪೂರೈಕೆ ಪರಿಸ್ಥಿತಿ ಮುಂದಿನ ದಿನಗಳಲ್ಲಿ ಗಮನಾರ್ಹವಾಗಿ ಸುಧಾರಿಸುವ ನಿರೀಕ್ಷೆ ಇದೆ. ಶಿಕ್ಷಣ ಸಂಸ್ಥೆ, ವಸತಿ ನಿಲಯ, ಆಸ್ಪತ್ರೆ ಮತ್ತು ಇತರೆ ಅವಶ್ಯಕ ಸಂಸ್ಥೆಗಳಿಗೆ ಪ್ರತಿದಿನ 4200 ಸಿಲಿಂಡರ್ ಹಂಚಿಕೆ ಮಾಡಲಾಗಿದೆ. ಸರ್ಕಾರಿ, ಪಿಎಸ್‌ಯು ಸಂಸ್ಥೆ, ವಿಮಾನ ನಿಲ್ದಾಣ, ರೈಲು, ಬಸ್ ನಿಲ್ದಾಣಗಳ ಕ್ಯಾಂಟೀನ್‌ಗಳಿಗೆ 1200 ಸಿಲಿಂಡರ್ ಹಂಚಲಾಗಿದೆ.

➡ ಪುಟ ೯

ಮಂಗಳೂರು ಕುಕ್ಕರ್ ಬಾಂಬ್ ಸ್ಫೋಟ ಆರೋಪಿ ತಪ್ಪೊಪ್ಪಿಗೆ

ನಾನು ತಪ್ಪು ಮಾಡಿದ್ದೇನೆ: ಶಾರೀಕ್

• **ಬೆಂಗಳೂರು/ಮಂಗಳೂರು:** ನಾಲ್ಕು ವರ್ಷಗಳ ಹಿಂದೆ ಮಂಗಳೂರಿನಲ್ಲಿ ಸಂಭವಿಸಿದ್ದ ಕುಕ್ಕರ್ ಬಾಂಬ್ ಸ್ಫೋಟ ಪ್ರಕರಣದ ಪ್ರಮುಖ ಆರೋಪಿ ಮೊಹಮ್ಮದ್ ಶಾರೀಕ್ ತಪ್ಪೊಪ್ಪಿಕೊಂಡಿದ್ದಾನೆ.



ಈತನ ತಪ್ಪೊಪ್ಪಿಗೆ ಅರ್ಜಿಯನ್ನು ರಾಷ್ಟ್ರೀಯ ತನಿಖಾ ದಳ (ಎನ್‌ಐಎ) ವಿಶೇಷ ನ್ಯಾಯಾಲಯ ಅಂಗೀಕರಿಸಿದೆ. ನಾನು ತಪ್ಪು ಮಾಡಿದ್ದೇನೆ. ನನಗೆ ಪಶ್ಚಾತ್ತಾಪ ವಾಗಿದೆ. ಕಾನೂನು ಪ್ರಕಾರ ಕ್ರಮ ಕೈಗೊಳ್ಳಿ ಎಂದು ತಪ್ಪೊಪ್ಪಿಗೆಯಲ್ಲಿ ಹೇಳಿಕೊಂಡಿದ್ದಾನೆ.

ಪ್ರಕರಣ ಸಂಬಂಧ ಸದ್ಯ ನ್ಯಾಯಾಂಗ ಬಂಧನದಲ್ಲಿರುವ ಶಾರೀಕ್, 2025ರ ಡಿಸೆಂಬರ್‌ನಲ್ಲಿ ಕ್ರಿಮಿನಲ್ ಪ್ರೊಸೀಜರ್ ಕೋಡ್‌ನ ಸೆಕ್ಷನ್ 229 ಅಡಿಯಲ್ಲಿ ತಪ್ಪೊಪ್ಪಿಗೆ ಅರ್ಜಿ ಸಲ್ಲಿಸಿದ್ದು, ನ್ಯಾಯಾಲಯ ಈ ಅರ್ಜಿಯನ್ನು ಅಂಗೀಕರಿಸಿದೆ.

ಏಪ್ರಿಲ್ 10ಕ್ಕೆ ಶಿಕ್ಷೆ ಪ್ರಕಟ

ಮೂರು ತಿಂಗಳ ಹಿಂದೆ ಎನ್‌ಐಎ ವಿಶೇಷ ನ್ಯಾಯಾಲಯಕ್ಕೆ ಸಲ್ಲಿಸಿದ್ದ ತಪ್ಪೊಪ್ಪಿಗೆ ಅರ್ಜಿಯನ್ನು ನ್ಯಾಯಾಲಯ ಮಾನ್ಯ ಮಾಡಿದ್ದು ಏಪ್ರಿಲ್ 10ರಂದು ಶಿಕ್ಷೆಯ ಪ್ರಮಾಣ ಪ್ರಕಟಿಸಲಿದೆ. ಕುಕ್ಕರ್ ಬಾಂಬ್ ಸ್ಫೋಟ ಕುರಿತಂತೆ ಎನ್‌ಐಎ ಅಧಿಕಾರಿಗಳು ತನಿಖೆ ನಡೆಸಿದ್ದರು.

ಪ್ರಕರಣ ಹಿನ್ನೆಲೆ: 2022ರ ನವೆಂಬರ್ 19ರಂದು ಶಿವಮೊಗ್ಗ ಮೂಲದ 27 ವರ್ಷದ ಶಾರೀಕ್, ಆಟೋರಿಕ್ಷಾದಲ್ಲಿ ಸಾಗಿಸುತ್ತಿದ್ದ ಪ್ರೆಶರ್ ಕುಕ್ಕರ್ ಬಾಂಬ್ ಅವನ ಮಡಿಲಲ್ಲೇ ಸ್ಫೋಟಗೊಂಡ ಪರಿಣಾಮ ಗಂಭೀರವಾಗಿ ಗಾಯಗೊಂಡಿದ್ದ. ಚಿಕಿತ್ಸೆ ಬಳಿಕ ಶಾರೀಕ್‌ನನ್ನು ಎನ್‌ಐಎ ಅಧಿಕಾರಿಗಳು ಬಂಧಿಸಿದ್ದರು. ಕುಕ್ಕರ್‌ನಲ್ಲಿ ಐಇಡಿ ಇಟ್ಟು ಸ್ಫೋಟ ಮಾಡಿದ್ದೇನೆ. ಮೂರು ತಿಂಗಳ ವಿಚಾರಣೆ ಬಳಿಕ ನ್ಯಾಯಾಲಯವು ಈ ಅರ್ಜಿಯನ್ನು ಮಾನ್ಯಗೊಳಿಸಿದೆ.

ಮಧ್ಯಪ್ರಾಚ್ಯ ಯುದ್ಧ: ಅಮೆರಿಕಕ್ಕೆ ಇರಾನ್ ಖಡಕ್ ಎಚ್ಚರಿಕೆ

ಭೂ ದಾಳಿ ನಡೆದರೆ ಪ್ರತಿದಾಳಿ

• **ದುಬೈ:** ಅಮೆರಿಕ ಭೂ ದಾಳಿ ನಡೆಸಿದರೆ ಅದರ ಸೈನಿಕರನ್ನು ಬೆಂಕಿಗೆ ತಳ್ಳಲಾಗುತ್ತದೆ ಎಂದು ಇರಾನ್‌ನ ಉನ್ನತ ಅಧಿಕಾರಿಯೊಬ್ಬರು ಕಠಿಣ ಎಚ್ಚರಿಕೆ ನೀಡಿದ್ದಾರೆ. ಇದೇ ವೇಳೆ, ತಿಂಗಳಿನಿಂದ ಮುಂದುವರಿದಿರುವ ಯುದ್ಧಕ್ಕೆ ತೆರೆ ಎಳೆಯಲು ಪ್ರಾದೇಶಿಕ ದೇಶಗಳ ರಾಜತಾಂತ್ರಿಕರು ಪಾಕಿಸ್ತಾನದಲ್ಲಿ ಸಭೆ ಸೇರಿದ್ದಾರೆ.



ಅಮೆರಿಕ ಮಧ್ಯಪ್ರಾಚ್ಯಕ್ಕೆ ಹೆಚ್ಚುವರಿ ಸೈನಿಕರನ್ನು ಕಳುಹಿಸುವುದರಯನ್ನು ಮಾತುಕತೆಯ ವಿರೋಧಿ ಕ್ರಮವೆಂದು ಇರಾನ್ ಸಂಸತ್ ಸ್ಪೀಕರ್ ಮೊಹಮ್ಮದ್ ಬಾಘರ್ ಖಾಲಿಬಾಫ್ ಟೀಕಿಸಿದ್ದಾರೆ. ಇರಾನ್ ತನ್ನ ಭೂಮಿಯಲ್ಲಿ ಯಾವುದೇ ಅಮೆರಿಕ ಪಡೆಗಳನ್ನು ಎದುರಿಸಲು ಸಿದ್ಧವಿದ್ದು, ಅಮೆರಿಕ ಸೈನಿಕರು ಹಾಗೂ ಅದರ ಮಿತ್ರ ರಾಷ್ಟ್ರಗಳ ವಿರುದ್ಧ ಕಠಿಣ ಪ್ರತಿಕ್ರಿಯೆ ನೀಡುವುದಾಗಿ ತಿಳಿಸಿದ್ದಾರೆ. ಇದರ ನಡುವೆ, ಪಾಕಿಸ್ತಾನದಲ್ಲಿ ಸೌದಿ ಅರೇಬಿಯಾ, ಟರ್ಕಿ ಮತ್ತು ಈಜಿಪ್ಟ್ ವಿದೇಶಾಂಗ ಸಚಿವರು ಇಸ್ಲಾಮಾಬಾದ್‌ನಲ್ಲಿ ಅಮೆರಿಕ ಹಾಗೂ ಇಸ್ರೇಲ್ ಪ್ರತಿನಿಧಿಗಳು ಇಲ್ಲದೇ ಮಾತುಕತೆ ನಡೆಸುತ್ತಿದ್ದಾರೆ. ಆದರೆ ಯುದ್ಧ ಶಮನದ ಲಕ್ಷಣಗಳು ಕಾಣಿಸುತ್ತಿಲ್ಲ, ಇಸ್ರೇಲ್ ಮತ್ತು ಅಮೆರಿಕ ಇರಾನ್ ಮೇಲೆ ದಾಳಿಗಳನ್ನು ಮುಂದುವರಿಸುತ್ತಿದ್ದು, ಇರಾನ್ ಪ್ರಾದೇಶಿಕವಾಗಿ ಕ್ಷಿಪಣಿ ಮತ್ತು ಡ್ರೋನ್ ದಾಳಿಗಳನ್ನು ನಡೆಸುತ್ತಿದೆ.

➡ ಪುಟ ೯

ಅಮೆರಿಕದ ಅತ್ಯಾಧುನಿಕ ಕಣ್ಗಾವಲು ವಿಮಾನ ಧ್ವಂಸ?

ಯುದ್ಧಭೂಮಿಯಲ್ಲಿ ಸೈನಿಕರ ಕಣ್ಣು, ಕಿವಿಯಂತೆ ಕೆಲಸ ಮಾಡುವ ಅಮೆರಿಕದ ಕಣ್ಗಾವಲು ವಿಮಾನ ಇ3-ಸೆಂಟ್ರಿ ಮೇಲೆ ಇರಾನ್ ಕ್ಷಿಪಣಿ ದಾಳಿ ಮಾಡಿ ನಾಶಪಡಿಸಿದೆ. ಈ ದಾಳಿಯಲ್ಲಿ ಅಮೆರಿಕದ 10 ಯೋಧರು ಗಾಯಗೊಂಡಿದ್ದಾರೆ. ಸೌದಿ ಅರೇಬಿಯಾದ ಪ್ರಿನ್ಸ್ ಸುಲ್ತಾನ್ ವಾಯುನೆಲೆಯಲ್ಲಿ ಈ ಘಟನೆ ನಡೆದಿದೆ. ಅಮೆರಿಕದ ನಿಯತಕಾಲಿಕ ವಾಲ್ ಸ್ಟ್ರೀಟ್ ಜರ್ನಲ್ ಈ ಮಾಹಿತಿ ಬಹಿರಂಗಪಡಿಸಿದೆ.

ಹಿಂದಿ ಕೈಬಿಟ್ಟದ್ದು ಸರಿಯಲ್ಲ



ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಹೇಳಿಕೆ

• **ಬೆಂಗಳೂರು:** ಕೇವಲ ರಾಜಕೀಯ ವಿರೋಧಕ್ಕಾಗಿ, ಕೇಂದ್ರ ಸರ್ಕಾರದ ಮೇಲಿನ ದ್ವೇಷಕ್ಕಾಗಿ ಮಕ್ಕಳ ಭವಿಷ್ಯದೊಂದಿಗೆ ಚೆಲ್ಲಾಟ ಆಡುತ್ತಿರುವ ರಾಜ್ಯ ಸರ್ಕಾರದ ತೀರ್ಮಾನ ವಿವೇಕರಹಿತ ಹಾಗೂ ಆಘಾತಕಾರಿ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದ್ದಾರೆ.

ಈ ಕುರಿತು ಪ್ರತಿಕ್ರಿಯಿಸಿರುವ ಅವರು, ಹಿಂದಿ ಭಾಷೆ ಏಕಾಏಕಿ ಕೈಬಿಡುವ ನಿಲುವು ತೆಗೆದುಕೊಂಡಿರುವುದು ಆಘಾತಕಾರಿ ಬೆಳವಣಿಗೆ. ಅದರಲ್ಲೂ ಎಸ್‌ಎಸ್‌ಎಲ್‌ಸಿ ಪರೀಕ್ಷೆ ನಡೆಯುತ್ತಿರುವ ಸಂದರ್ಭದಲ್ಲಿ ಸರ್ಕಾರದ ಹಠಾತ್ ನಿಲುವು ವಿದ್ಯಾರ್ಥಿಗಳಲ್ಲಿ ಗೊಂದಲಕ್ಕೆ ಕಾರಣವಾಗಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

➡ ಪುಟ ೯

ರಾಜ್ಯದಲಿ ಬೇಸಿಗೆ ಮಳೆ ಚೇತರಿಕೆ

• **ಬೆಂಗಳೂರು:** ಕರ್ನಾಟಕದ ಒಳನಾಡಿನಾದ್ಯಂತ ಸಮುದ್ರ ಮಟ್ಟದಿಂದ ಸರಾಸರಿ 900 ಮೀಟರ್ ಎತ್ತರದಲ್ಲಿ ಚಂಡಮಾರುತದ ಪ್ರಸರಣದಿಂದಾಗಿ ರಾಜ್ಯದಲ್ಲಿ ಬೇಸಿಗೆ ಮಳೆ ಚೇತರಿಕೆ ಕಂಡಿದೆ. ಭಾರತೀಯ ಹವಾಮಾನ ಇಲಾಖೆಯ ಮುನ್ಸೂಚನೆ ಪ್ರಕಾರ, ರಾಜ್ಯದ ಕರಾವಳಿ ಮತ್ತು ಒಳನಾಡಿನಲ್ಲಿ, ಇನ್ನೂ ಒಂದು ವಾರ ಮಳೆಯಾಗುವ ಸಾಧ್ಯತೆಗಳಿವೆ. ಕಳೆದ 2-3 ಮೂರು ವಾರಗಳಿಂದ ರಾಜ್ಯದ ಅಲ್ಲಲ್ಲಿ ಚದುರಿದಂತೆ ಮಳೆ ಸುರಿಯುತ್ತಿದೆ.

• ವಿವರ ಪುಟ ೨


ಆರು ಆರೋಪಿಗಳ ಬಂಧನ

• **ಬೆಂಗಳೂರು:** ಸಿಸಿಬಿ ವಿಶೇಷ ವಿಚಾರಣಾ ದಳವು ಉದ್ಯೋಗಾಕಾಂಕ್ಷಿಗಳಿಗೆ ಸರ್ಕಾರಿ ಕೆಲಸ ಕೊಡಿಸುವುದಾಗಿ ನಂಬಿಸಿ ಕೋಟ್ಯಂತರ ರೂಪಾಯಿ ವಂಚಿಸುತ್ತಿದ್ದ ಜಾಲವನ್ನು ಭೇದಿಸಿ ಆರೋಪಿಗಳನ್ನು ವಿಚಾರಣೆಗೆ ಒಳಪಡಿಸಿದ್ದಾರೆ.

ರಾಜ್ಯದ ವಿವಿಧ ಜಿಲ್ಲಾ ನ್ಯಾಯಾಲಯಗಳಲ್ಲಿ ಖಾಲಿ ಇರುವ ಎಸ್‌ಡಿಎ, ಎಫ್‌ಡಿಎ, ಪ್ರೋಸೆಸ್ ಸರ್ವರ್, ಪೀವನ್ ಹಾಗೂ ಡ್ರೈವರ್ ಹುದ್ದೆಗಳನ್ನು ಕೊಡಿಸುವುದಾಗಿ ನಂಬಿಸಿ ಸುಮಾರು 450ಕ್ಕೂ ಹೆಚ್ಚು ಜನರಿಂದ ಹಣ ವಸೂಲಿ ಮಾಡಿದ್ದ ಆರು ಮಂದಿ ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ. ಬಂಧಿತ ಆರೋಪಿಗಳಿಂದ ಒಟ್ಟು 38 ಲಕ್ಷ ರೂ. ನಗದನ್ನು ವಶಪಡಿಸಿಕೊಳ್ಳಲಾಗಿದೆ. ಈ ವಂಚಕ ಜಾಲವು ಸಹಕಾರ ನಗರದಲ್ಲಿರುವ ದೀಕ್ಷಾ ಎಜುಕೇಶನ್ ಅಕಾಡೆಮಿ ಮತ್ತು ಆಶೀರ್ವಾದ್ ಎಂಟರ್‌ಪ್ರೈಸಸ್ ಕಚೇರಿಗಳ ಮೂಲಕ ಕಾರ್ಯಾಚರಣೆ ನಡೆಸುತ್ತಿತ್ತು. ಉದ್ಯೋಗಾಕಾಂಕ್ಷಿಗಳನ್ನು ಸೆಳೆಯಲು ಏಜೆಂಟರುಗಳನ್ನು ನೇಮಿಸಿಕೊಂಡಿದ್ದ ಈ ತಂಡ, ಅಭ್ಯರ್ಥಿಗಳಿಂದ ಲಕ್ಷಾಂತರ ರೂಪಾಯಿಗಳನ್ನು ಆನ್‌ಲೈನ್ ಮತ್ತು ನಗದು ರೂಪದಲ್ಲಿ ಪಡೆದುಕೊಳ್ಳುತ್ತಿತ್ತು. ನಂಬಿಕೆ ಹುಟ್ಟಿಸಲು ಅಭ್ಯರ್ಥಿಗಳಿಂದ ಅರ್ಜಿ ನಮೂನೆಗಳನ್ನು ಭರ್ತಿ ಮಾಡಿಸಿಕೊಂಡು, ಗ್ರೀನ್‌ಶೀಟ್, ಎಂಬ ಫಾರ್ಮೆಟ್‌ನಲ್ಲಿ ಸಹಿ ಹಾಗೂ ಹೆಬ್ಬೆರಳಿನ ಗುರುತುಗಳನ್ನು ಪಡೆಯುತ್ತಿದ್ದರು.

ಈ ಜಾಲದ ಅಸಲಿಯತ್ತು ಏನೆಂದರೆ, ಅಭ್ಯರ್ಥಿಗಳಿಗೆ ನ್ಯಾಯಾಲಯದ ನಕಲಿ ಸಹಿ ಮತ್ತು ಸೀಲು ಇರುವ ಉದ್ಯೋಗ ಆಯ್ಕೆ ಪಟ್ಟಿ ಹಾಗೂ ಆದೇಶ ಪ್ರತಿಗಳನ್ನು ನೀಡಿ ವಂಚಿಸಲಾಗುತ್ತಿತ್ತು. ಈ ಸಂಬಂಧ ಸಿಸಿಬಿ ಮತ್ತು ಕೊಡಿಗೇಹಳ್ಳಿ ಪೊಲೀಸ್ ಠಾಣೆಗಳಲ್ಲಿ ಪ್ರತ್ಯೇಕ ಪ್ರಕರಣಗಳು ದಾಖಲಾಗಿದ್ದು ತನಿಖೆ ಚುರುಕುಗೊಂಡಿದೆ. ಪ್ರಕರಣದಲ್ಲಿ ಭಾಗಿಯಾಗಿ ತಲೆಮರೆಸಿಕೊಂಡಿರುವ ಇತರ ಸಹಚರರ ಪತ್ತೆಗಾಗಿ ಪೊಲೀಸರು ಬಲೆ ಬೀಸಿದ್ದಾರೆ. ಈ ಕಾರ್ಯಾಚರಣೆಯು ಅಪರ ಪೊಲೀಸ್ ಆಯುಕ್ತ ಅಜಯ್ ಹಿಲೋರಿ ಮತ್ತು ಡಿಸಿಪಿ ಶ್ರೀಹರಿಬಾಬು ಅವರ ಮಾರ್ಗದರ್ಶನದಲ್ಲಿ ಯಶಸ್ವಿಯಾಗಿ ನಡೆದಿದೆ.

ರಾಮ ಬಾಣ



ಸರ್ಕಾರದಿಂದ ಜನಪರ ಕೆಲಸ: ಉಗ್ರಪ್ಪ

• **ದಾವಣಗೆರೆ:** ಪ್ರಸಕ್ತ ಉಪಚುನಾವಣೆಯ ಫಲಿತಾಂಶವು ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಕಾರ್ಯಕ್ಷಮತೆಯ ಮೇಲೆ ಪ್ರಭಾವ ಬೀರಲಿದೆ. ರಾಜ್ಯದ ಕಾಂಗ್ರೆಸ್ ಸರ್ಕಾರವು ಸದಾ ಜನಪರ ಕೆಲಸ ಮಾಡುವ ಮೂಲಕ ಜನರ ವಿಶ್ವಾಸಕ್ಕೆ ಪಾತ್ರವಾಗಿದೆ. ಆದರೆ ಕೇಂದ್ರದಲ್ಲಿ ಅಧಿಕಾರದಲ್ಲಿರುವ



ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರವು ಜನರಿಗೆ ನೀಡಿದ ಭರವಸೆ ಈಡೇರಿಸುವಲ್ಲಿ ಸಂಪೂರ್ಣ ವಿಫಲವಾಗಿದೆ. ಕೇವಲ ಮಾತಿನಲ್ಲಿ ಮರಳು ಮಾಡುವ ಮೂಲಕ ಮತ ಹಾಕಿಸಿಕೊಂಡು ಜನರನ್ನು ವಂಚಿಸುತ್ತಿದೆ ಎಂದು ಕಾಂಗ್ರೆಸ್ ಮುಖಂಡ ವಿ.ಎಸ್.ಉಗ್ರಪ್ಪ ಹೇಳಿದರು.

ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೇಂದ್ರದ ಮೋದಿ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದ ಇಂಧನ ಬೆಲೆಗಳನ್ನು ಏರಿಸುತ್ತಲಿದೆ. ಕೋವಿಡ್ ಸಮಯದಲ್ಲಿ ಪಿಎಂ ಕೇರ್ ಫಂಡ್ ಮೂಲಕ ಸಾವಿರಾರು ಕೋಟಿ ರೂ. ಸಂಗ್ರಹಿಸಿದ್ದರೂ, ಅದರ ಯಾವುದೇ ಲೆಕ್ಕಾಚಾರ ಈವರೆಗೂ ಜನರಿಗೆ ಸಿಕ್ಕಿಲ್ಲ, ಅದಕ್ಕೆ ಆದಾಯ ತೆರಿಗೆ ಇಲಾಖೆಯಾಗಲಿ, ಇಡಿ ಯಾಗಲಿ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ ಎಂದರು.

ಮಳೆಗಾಲದಲ್ಲಿ ಜಾಗ್ರತೆ ಇರಲಿ: ರಾಜೇಂದ್ರ

• **ಬೆಂಗಳೂರು:** ಮಳೆಗಾಲದ ಹಿನ್ನೆಲೆಯಲ್ಲಿ ರಸ್ತೆ, ಚರಂಡಿ ಹಾಗೂ ಪಾದಚಾರಿ ಮಾರ್ಗಗಳ ಸಮಗ್ರ ಪರಿಶೀಲನೆ ನಡೆಸಿ ಯಾವುದೇ ತೊಂದರೆ ಉಂಟಾಗದಂತೆ ಮುಂಚಿತವಾಗಿ ಅಗತ್ಯ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಬೆಂಗಳೂರು ಪಶ್ಚಿಮ ನಗರ ಪಾಲಿಕೆ ಆಯುಕ್ತ ಡಾ. ರಾಜೇಂದ್ರ ಕೆ.ವಿ. ತಿಳಿಸಿದರು. ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಮಳೆಗಾಲದ ಸಂದರ್ಭದಲ್ಲಿ ಯಾವುದೇ ಅನಾಹುತಗಳು ಸಂಭವಿಸದಂತೆ ಮುಂಚಿತವಾಗಿ ಅಗತ್ಯ ಕ್ರಮಗಳನ್ನು ಕೈಗೊಂಡು, ನಗರ ಪಾಲಿಕೆ ವ್ಯಾಪ್ತಿಯಲ್ಲಿ ಮಳೆ ನೀರು ನಿಲ್ಲದೆ ಸರಾಗವಾಗಿ ಹರಿದುಹೋಗುವಂತೆ ಸೂಕ್ತ ವ್ಯವಸ್ಥೆ ಮಾಡಬೇಕು. ಯಾವುದೇ ಪ್ರದೇಶದಲ್ಲಿ ಪ್ರವಾಹ ಉಂಟಾಗದಂತೆ ವಿಶೇಷ ಗಮನ ಹರಿಸಬೇಕು ಎಂದರು.

ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

◈ ಯಾವುದೇ ಕೆಲಸವನ್ನು ಪ್ರೀತಿಯಿಂದ ಮಾಡಿದಾಗ ಮಾತ್ರ ಪ್ರಗತಿ ಕಾಣಲು ಸಾಧ್ಯ
- ಕಿರಣ್ ಕೊಡ್ಲಿ

– ಅಕ್ಕಿಯ ಮೇಲೆ ಆಸೆ, ನೆಂಟರ ಮೇಲೆ ಪ್ರೀತಿ ಎಂಬುದು ಹಳೆಯ ಗಾದೆ . ಕೆಲಸ ಸಿಗುವ ಆಸೆ, ಸಂಬಳದ ಮೇಲೆ ಪ್ರೀತಿ ಎಂಬುದು ಲೇಟೆಸ್ಟ್ ಗಾದೆ!

ದಿನ ಭವಿಷ್ಯ

ಮೇಷ
ಭಾವುಕ ಸನ್ನಿವೇಶ. ನಿಮ್ಮ ಮನಸ್ಸಿನ ದೌರ್ಬಲ್ಯ ಎಲ್ಲರಿಗೂ ತಿಳಿಯದಂತೆ ಎಚ್ಚರ ವಹಿಸಿ. ಕೌಟುಂಬಿಕ ಅಶಾಂತಿ ಹೆಚ್ಚಲು ಅವಕಾಶ ಕೊಡಬೇಡಿ.

ವೃಷಭ
ನಿಮ್ಮ ಪ್ರಗತಿಗೆ ಅಡ್ಡಿ ತರುತ್ತಿರುವ ವಿಷಯ ಪರಿಹರಿಸಿಕೊಳ್ಳಿ. ನಿಮ್ಮ ಬಗ್ಗೆ ಕೆಲವರು ಈರ್ಷ್ಯೆ ತೋರುವರು. ಅವರಿಂದ ಟೀಕೆ ಕೇಳುವಿರಿ.

ಮಿಥುನ
ಸ್ವಂತ ವ್ಯವಹಾರದಲ್ಲಿ ಎಚ್ಚರದಿಂದ ಹೆಜ್ಜೆ ಇಡಿ. ಸಮೀಪ ಬಂಧುಗಳ ಅಸಹಕಾರ ಎದುರಿಸುವಿರಿ. ಮನೆಯಲ್ಲಿ ಬಿಗು ವಾತಾವರಣ ಸಂಭವ.

ಕಟಕ
ಕೆಲಸದ ಒತ್ತಡದಿಂದ ಹೊರಬಂದು ಕುಟುಂಬ ಸದಸ್ಯರ ಜತೆ ಕಾಲ ಕಳೆಯಿರಿ. ಅವರ ಸಂತೋಷಕ್ಕೂ ಗಮನ ಕೊಡಿ. ಧನವ್ಯಯ.

ಸಿಂಹ
ಕಠಿಣವೆಂದು ಭಾವಿಸಿದ ಕಾರ್ಯ ಸುಲಭದಲ್ಲಿ ಪೂರ್ಣ. ಆದರೂ ಏನೋ ಕೊರಗು ಉಳಿಯಲಿದೆ. ಬಂಧು ಜತೆ ತಿಕ್ಕಾಟ ಸಂಭವ.

ಕನ್ಯಾ
ಕಾಯುತ್ತಿದ್ದ ಅವಕಾಶವೊಂದು ಇಂದು ಸಿಗುವುದು. ಆದರೆ ಅದರಿಂದ ನಿಮಗೆ ಹೆಚ್ಚು ಲಾಭವಾಗದು. ಕೌಟುಂಬಿಕ ವೈಮನಸ್ಸು.

ತುಲಾ
ಹೆಚ್ಚು ಉತ್ಸಾಹದ ದಿನ. ಸಣ್ಣ ವಿಷಯಕ್ಕೆ ಅತಿಯಾದ ಪ್ರಾಮುಖ್ಯತೆ ಕೊಡಬೇಡಿ. ಸಂಘರ್ಷಕ್ಕಿಂತ ಹೊಂದಾಣಿಕೆ ಒಳಿತು. ಆರ್ಥಿಕ ಉನ್ನತಿ.

ವೃಶ್ಚಿಕ
ಹೊಸ ವ್ಯವಹಾರಕ್ಕೆ ಈಗಲೆ ಕೈಹಾಕದಿರಿ. ವಿಘ್ನಗಳು ಕಾಡಬಹುದು. ನಿಮ್ಮ ತಪ್ಪು ತಿದ್ದಿಕೊಳ್ಳಿ. ಟೀಕೆಗೆ ಅವಕಾಶ ಕೊಡಬೇಡಿ.

ಧನು
ಗುರಿ ಸಾಧನೆಗೆ ಕೆಲವರು ಅಡ್ಡಗಾಲು ಹಾಕುವರು. ಖರ್ಚು ಕಡಿಮೆ ಮಾಡಲು ಗಮನ ಕೊಡಿ. ಬಂಧುಗಳ ಜತೆ ಜಗಳವಾಡದಿರಿ.

ಮಕರ
ವಿರೋಧಿಗಳ ಮನಸ್ಸನ್ನೂ ಇಂದು ಒಲಿಸುವಿರಿ. ಇದು ನಿಮ್ಮ ವ್ಯವಹಾರವನ್ನು ಸುಲಲಿತಗೊಳಿಸಲಿದೆ. ಆರ್ಥಿಕ ಸ್ಥಿತಿ ಉನ್ನತಿ.

ಕುಂಭ
ನಿಮ್ಮ ನಿಲುವಿನಲ್ಲಿ ಬದಲಾವಣೆ ತರುವ ಬೆಳವಣಿಗೆ. ನಿಮ್ಮ ಮೂಗಿನ ನೇರಕ್ಕೇ ವ್ಯವಹರಿಸಬೇಡಿ. ಇತರರ ಮಾತಿಗೂ ಬೆಲೆಯಿರಲಿ.

ಮೀನ
ಕೆಲಸದ ಒತ್ತಡದಿಂದ ಮುಕ್ತಿ. ಸ್ವಲ್ಪ ಮಟ್ಟಿನ ನಿರಾಳತೆ. ಮನೆಯಲ್ಲೂ ಪೂರಕ ಬೆಳವಣಿಗೆ. ಮಕ್ಕಳ ಸಾಧನೆಯಿಂದ ತೃಪ್ತಿ. ಖರ್ಚು ಹೆಚ್ಚಬಹುದು.

ರಾಹುಕಾಲ: 7.30-9.00
ಗುಳಿಕಕಾಲ: 1.30-3.00

ಅದೃಷ್ಟ ಸಂಖ್ಯೆ 7,4,2,5

ವಿದ್ಯುತ್-ಸೌರ ಸ್ಟವ್ ಬಳಸಿ

ಪುಟ 1 ➡ ಹೋಟೆಲ್, ಡಾಬಾ, ರೆಸ್ಟೋರೆಂಟ್, ಕ್ಯಾಂಟೀನ್, ಕೆಫೆ, ಬೇಕರಿ, ಸಮುದಾಯ ಅಡುಗೆ ಕೇಂದ್ರ, ಪಿ.ಜಿ. ವಸತಿನಿಲಯಗಳಿಗೆ 17,500 ಸಿಲಿಂಡರ್, ಬೀಜ ಸಂಸ್ಕರಣೆ, ಕೃಷಿ ಮತ್ತು ಸಂಬಂಧಿತ ಕ್ಷೇತ್ರಗಳಿಗೆ 6000, ಇತರ ಅವಶ್ಯಕತೆ ಆಧಾರದ ಮೇಲೆ 563 ಸಿಲಿಂಡರ್ ಸೇರಿದಂತೆ ಒಟ್ಟು 29,463 ವಾಣಿಜ್ಯ ಸಿಲಿಂಡರ್ ನಿತ್ಯ ವಿತರಿಸಲಾಗುತ್ತಿದೆ ಎಂದು ಮಾಹಿತಿ ನೀಡಿದ್ದಾರೆ.

ಸರಣಿ ಅಪಘಾತ: ಚಾಲಕನಿಗೆ ಥಳಿತ

• **ನೆಲಮಂಗಲ:** ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ- ಕುಣಿಗಲ್ ರಾಷ್ಟ್ರೀಯ ಹೆದ್ದಾರಿಯಲ್ಲಿ ಭಾನುವಾರ ಸಂಜೆ ಸರಣಿ ಅಪಘಾತ ಸಂಭವಿಸಿದೆ. ಹಾಸನದಿಂದ ಬೆಂಗಳೂರು ಕಡೆಗೆ ಬರುತ್ತಿದ್ದ ಪುಷ್ಪಕ್ ಪ್ಲಸ್ ಇವಿ ಬಸ್ ಓವರ್ ಟೇಕ್ ಮಾಡಲು ಹೋಗಿ ಎರಡು ಕಾರುಗಳಿಗೆ ಡಿಕ್ಕಿ ಹೊಡೆದಿದೆ. ಪರಿಣಾಮ ಒಂದು ಕಾರಿನ ಹಿಂಭಾಗ ನಜ್ಜುಗುಜ್ಜಾಗಿದ್ದು ಪ್ರಯಾಣಿಕರು ಅಪಾಯದಿಂದ ಪಾರಾಗಿದ್ದಾರೆ. ಈ ವೇಳೆ ಚಾಲಕ ಮತ್ತು ಉಳಿದ ವಾಹನಗಳ ಚಾಲಕರು, ಪ್ರಯಾಣಿಕರ ಮಧ್ಯೆ ವಾಗ್ವಾದ ನಡೆದಿದ್ದು, ಬಸ್ ಚಾಲಕನಿಗೆ ಥಳಿಸಿದ್ದಾರೆ. ಸಾಮಾನ್ಯವಾಗಿ ಭಾನುವಾರ ಊರಿನಿಂದ ಬೆಂಗಳೂರಿಗೆ ಬರುವ ವಾಹನಗಳ ಸಂಖ್ಯೆ ಈ ಹೆದ್ದಾರಿಯಲ್ಲಿ ಜಾಸ್ತಿ ಇರುತ್ತದೆ ಎಂದು ಸ್ಥಳೀಯರು ತಿಳಿಸಿದ್ದಾರೆ. ಚಾಲಕ ಮತ್ತು ಸವಾರರ ಮಧ್ಯೆ ಜಗಳ ನಡೆದ ಪರಿಣಾಮ ಹೆದ್ದಾರಿಯಲ್ಲಿ ಕೆಲವು ಗಂಟೆಗಳ ಕಾಲ ಕಿಲೋಮೀಟರ್‌ಗಟ್ಟಲೇ ವಾಹನಗಳ ಟ್ರಾಫಿಕ್ ಜಾಮ್ ಉಂಟಾಗಿತ್ತು.

ಸಮಿತಿ ರಚಿಸಿದ ಸರ್ಕಾರ | 30 ಲಕ್ಷ ರೂ. ಅನುದಾನ | 250 ಪುಟದ ಪುಸ್ತಕ

ಸಾಹಿತ್ಯ ಅಕಾಡೆಮಿಯಿಂದ ಅಂಬೇಡ್ಕರ್ ವಿಶೇಷ ಕೃತಿ

▸ **ದೇವಿತಾ ಸಿ.ಎಸ್.**

• **ಬೆಂಗಳೂರು:** ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರ ಮೂಲ ಆಶಯಗಳನ್ನು ಎತ್ತಿ ಹಿಡಿಯುವ ಸಲುವಾಗಿ ಅಂಬೇಡ್ಕರ್ ಕುರಿತ ವಿಶೇಷ ಕೃತಿ ಹೊರತರಲು ಕರ್ನಾಟಕ ಸಾಹಿತ್ಯ ಅಕಾಡೆಮಿ ಸಜ್ಜಾಗಿದೆ.

ದಿಗಂತ ವಿಶೇಷ

ಅಂಬೇಡ್ಕರ್ ಅವರ ಬರವಣಿಗೆ, ಆಲೋಚನಾ ಕ್ರಮದ ಅರಿವು ದೇಶಕ್ಕೆ ಎಷ್ಟು ಮುಖ್ಯವೆಂಬುದು ಇಂದು ಎಲ್ಲರಿಗೂ ಅರ್ಥವಾಗಿದೆ. ಕನ್ನಡಿಗರು ಮಹಾತ್ಮ ಗಾಂಧಿ ಅವರನ್ನು ತಿಳಿದಷ್ಟು ಅಂಬೇಡ್ಕರ್ ಬಗ್ಗೆ ತಿಳಿಯಲು ಸಾಧ್ಯವಾಗಿಲ್ಲ. ಅಂಬೇಡ್ಕರ್ ಹುಟ್ಟು, ಬೆಳವಣಿಗೆ, ಶಿಕ್ಷಣ, ವ್ಯಕ್ತಿ, ಸಾಮಾಜಿಕ ಹೋರಾಟ, ರಾಜಕೀಯ ಜೀವನ ಸೇರಿದಂತೆ ಅವರ ಜೀವಿತ ಕಾಲದಲ್ಲಿ ಮಾಡಿದ ಮಹತ್ವಪೂರ್ಣ ಸಾಧನೆಗಳು ಪುಸ್ತಕದಲ್ಲಿ ಇರಲಿವೆ.

ಸರ್ಕಾರದಿಂದಲೇ ಸಮಿತಿ ರಚನೆ: ಸರ್ಕಾರವೇ ಪುಸ್ತಕ ರಚನಾ ಸಮಿತಿ ರೂಪಿಸಿದ್ದು, ಡಾ. ನೆಲ್ಲಿಕಟ್ಟೆ ಎಸ್. ಸಿದ್ದೇಶ್ ಹಾಗೂ ಡಾ. ರವಿಕುಮಾರ್ ನೀಹಾ ಸಂಪಾದಕರಾಗಿ, ಇಂದೂಧರ ಹೊನ್ನಾಪುರ, ಡಾ. ಎಲ್.ಹನುಮಂತಯ್ಯ, ಡಾ. ಬಂಜಗೆರೆ ಜಯಪ್ರಕಾಶ್, ದು.ಸರಸ್ವತಿ ಅವರು ಸಲಹಾ ಸಮಿತಿ ಸದಸ್ಯರಾಗಿ ಕಾರ್ಯನಿರ್ವಹಿಸಲಿದ್ದಾರೆ. ಅವರ ಸಲಹೆ ಮೇರೆಗೆ 20 ವಿಷಯ ಆಯ್ಕೆ ಮಾಡಿಕೊಂಡು, ಯಾವ ಲೇಖಕರಿಂದ ಬರೆಸಬೇಕು ಎಂದು ತೀರ್ಮಾನಿಸಲಾಗುವುದು. ಪುಸ್ತಕ ರಚನೆಗಾಗಿ ಸರ್ಕಾರವು ಅಕಾಡೆಮಿಗೆ 30 ಲಕ್ಷ ರೂ. ವಿಶೇಷ ಅನುದಾನ ನೀಡಿದೆ. ಪುಸ್ತಕವು ಸುಮಾರು 250 ಪುಟಗಳನ್ನು ಹೊಂದಿರಲಿದ್ದು, ಮಕ್ಕಳು ಮತ್ತು ಸಾಮಾನ್ಯ ಜನರಿಗೆ ಅರ್ಥವಾಗುವಂತೆ ಸರಳ ಕನ್ನಡದಲ್ಲಿರಲಿದೆ.

20 ವಿಷಯ, 20 ಲೇಖನ

ಅಂಬೇಡ್ಕರ್ ಅವರು ಮಹಿಳೆಯರ ಸ್ವಾತಂತ್ರ್ಯ, ಸಮಾನ ಅವಕಾಶ, ಕಾರ್ಮಿಕರ ಕಲ್ಯಾಣಕ್ಕಾಗಿ ನೀಡಿದ ಕೊಡುಗೆ ಅನನ್ಯ. ಜತೆಗೆ, ಮಹಿಳಾ ಮೀಸಲಾತಿ ವಿಧೇಯಕ ಅಂಗೀಕಾರವಾಗದ ಕಾರಣ ಲೋಕಸಭೆ ಸ್ಥಾನಕ್ಕೆ ರಾಜೀನಾಮೆ ನೀಡಿದ ಚೇತನ ಅಂಬೇಡ್ಕರ್ ವಿಷಯವಲ್ಲದೆ ಅವರ ಧಾರ್ಮಿಕ ನಿಲುವು, ಬೌದ್ಧ ಧಮ್ಮ ಸ್ವೀಕಾರ, ಸಾಮಾಜಿಕ ಸುಧಾರಣೆ, ಇತಿಹಾಸದ ದಾಖಲೆ, ರಾಜಕೀಯ, ಪತ್ರಿಕೋದ್ಯಮ ಜೀವನ ಆಧಾರದಲ್ಲಿ 20 ವಿಷಯ ಕುರಿತು 20 ಲೇಖನಗಳು ಈ ಪುಸ್ತಕದಲ್ಲಿರಲಿವೆ.

ಅಂಬೇಡ್ಕರ್ ಜಯಂತಿಗೆ ಲೋಕಾರ್ಪಣೆ



ಪುಸ್ತಕ ರಚನೆ ಕಾರ್ಯ ಚುರುಕುಗೊಳಿಸಲಾಗಿದ್ದು, 2026ರ ಏ.14 (ಅಂಬೇಡ್ಕರ್ ಜಯಂತಿ)ರಂದು ಲೋಕಾರ್ಪಣೆಗೊಳಿಸುವ ಉದ್ದೇಶವಿದೆ. ಅದೇ ವೇಳೆ ಪುಸ್ತಕದ ಡಿಜಿಟಲ್ ಆವೃತ್ತಿಯನ್ನೂ ಲೋಕಾರ್ಪಣೆಗೊಳಿಸಲು ಅಕಾಡೆಮಿ ನಿರ್ಧರಿಸಿದೆ.

10 ಸಾವಿರ ಪ್ರತಿ ಮುದ್ರಣ

ಒಂದೇ ಬಾರಿ ಪುಸ್ತಕದ 10 ಸಾವಿರ ಪ್ರತಿಗಳನ್ನು ಮುದ್ರಿಸಲು ನಿರ್ಧರಿಸಲಾಗಿದೆ. ಅವುಗಳನ್ನು ಜನರಿಗೆ ತಲುಪಿಸುವುದೇ ಮುಖ್ಯ ಉದ್ದೇಶವಾಗಿರುವುದರಿಂದ ಶಾಲಾ-ಕಾಲೇಜು ವಿದ್ಯಾರ್ಥಿಗಳಿಗೆ ಉಚಿತವಾಗಿ ಒದಗಿಸುವುದು ಅಥವಾ 20-30 ರೂ.ಗೆ ದರ ನಿಗದಿ ಮಾಡುವ ಆಲೋಚನೆಯಿದೆ.

ಅಂಬೇಡ್ಕರ್ ಕುರಿತ ಪ್ರಮುಖ ಅಂತಗಳನ್ನು ಅತಿ ಸರಳ ಭಾಷೆಯಲ್ಲಿ ಪುಸ್ತಕದಲ್ಲಿ ಅಳವಡಿಸಲಾಗುವುದು. ಅಂಬೇಡ್ಕರ್ ಕುರಿತು ಎಷ್ಟು ಪುಸ್ತಕ ಬಂದರೂ ಕಡಿಮೆಯೇ. ಅದರಂತೆ, ಇದು ಪುಸ್ತಕ ರಚನೆಯಲ್ಲ, ಚಳವಳಿ.

■ **ಪ್ರೊ.ಎಲ್.ಎನ್. ಮುಕುಂದರಾಜ್,** ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ

ಪರಪ್ಪನ ಜೈಲ್ ವಿಡಿಯೋ ಮೂರು ಸಿಬ್ಬಂದಿ ಅಮಾನತು

• **ಬೆಂಗಳೂರು:** ಕೆಲ ದಿನಗಳ ಹಿಂದೆ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಿಂದ ಬಿಡುಗಡೆಯಾಗಿರುವ ಮೂರು ವಿಡಿಯೋಗಳು ತೀವ್ರ ಸಂಚಲನ ಸೃಷ್ಟಿಸಿದ್ದು, ಉದ್ದೇಶಪೂರ್ವಕವಾಗಿ ಡಿಜಿಪಿ ಅಲೋಕ್ ಕುಮಾರ್ ವಿರುದ್ಧವೇ ವಿಡಿಯೋದಲ್ಲಿ ಗಂಭೀರ ಆರೋಪ ಮಾಡಲಾಗಿದೆ. ಇದರ ಬೆನ್ನಲ್ಲೇ ಮೂವರು ಸಿಬ್ಬಂದಿ ಅಮಾನತುಗೊಳಿಸಲಾಗಿದೆ.

ವಿಡಿಯೋ ವೈರಲ್ ಆದ ಬೆನ್ನಲ್ಲೇ ಡಿಜಿಪಿ ಅಲೋಕ್ ಕುಮಾರ್ ಜೈಲಿನ ಮೂವರು ಸಿಬ್ಬಂದಿಯನ್ನು ಅಮಾನತುಗೊಳಿಸಿ ಆದೇಶಿಸಿದ್ದಾರೆ. ಕೈದಿಗಳಿದ್ದ ಬ್ಯಾರಕ್ ನೋಡಿಕೊಳ್ಳುತ್ತಿದ್ದ ಶಿವಾನಂದ ಕರ್ಲಬಟ್ಟಿ, ನಿರಂಜನ್ ಎ. ಕಾಮತ್ ಮತ್ತು ಹನುಮಂತಪ್ಪ ಹಡಪದ್ ಅವರನ್ನು ಅಮಾನತುಗೊಳಿಸಿದ್ದಾರೆ.

ಮತ್ತೊಂದೆಡೆ ವಿಡಿಯೋ ವೈರಲ್ ಆಗುತ್ತಿದ್ದಂತೆ ಪೊಲೀಸ್ ಅಧಿಕಾರಿಗಳು ಜೈಲಿನ ಮೇಲೆ ದಾಳಿ ನಡೆಸಿ, 9 ಮೊಬೈಲ್‌ಗಳು ಮತ್ತು 6 ಸಿಮ್ ಕಾರ್ಡ್‌ಗಳು, ಇಯರ್‌ಬಡ್ಸ್, ಚಾರ್ಜರ್‌ಗಳನ್ನು ವಶಕ್ಕೆ ಪಡೆದುಕೊಂಡಿದ್ದಾರೆ. ಜೊತೆಗೆ, ಕೇಂದ್ರ ಕಾರಾಗೃಹದ 1ನೇ ಬ್ಯಾರಕ್‌ನಲ್ಲಿ ಪರಿಶೀಲನೆ ನಡೆಸಿದಾಗ ಡ್ರೈನೇಜ್ ಮಾರ್ಗದಲ್ಲಿ ಮೊಬೈಲ್‌ಗಳು ಪತ್ತೆಯಾಗಿವೆ. ಹಾಲಿನ ಪ್ಯಾಕೆಟ್‌ಗಳಲ್ಲಿ ಸುತ್ತಿ ಅಡಗಿಸಲಾಗಿದ್ದ ಮೊಬೈಲ್‌ಗಳನ್ನು ಅಧಿಕಾರಿಗಳು ಕೈದಿಗಳಿಂದ ಹೊರತೆಗೆದಿದ್ದಾರೆ.

ಜೈಲಿನಲ್ಲಿ ಸುತ್ತಮುತ್ತಲಿನ ಕೆಲವು ಕಡೆಗಳಲ್ಲಿ ಏರ್‌ಟೆಲ್ ಸಿಗ್ನಲ್‌ಗಳು ಸಿಗುತ್ತಿರುವ ಮಾಹಿತಿ ಲಭ್ಯವಾಗಿದ್ದು, ಅದನ್ನು ಸರಿಪಡಿಸಲು ಸಂಬಂಧಪಟ್ಟವರಿಗೆ ಅಲೋಕ್ ಕುಮಾರ್ ಸೂಚಿಸಿದ್ದಾರೆ.

ಜೈಲಾಧಿಕಾರಿಗಳೇ ಷಡ್ಯಂತ್ರ?: ಕಾರಾಗೃಹದಲ್ಲಿ ಅಲೋಕ್ ಕುಮಾರ್ ಅವರು ಕೈಗೊಂಡಿದ್ದ ಕಟ್ಟುನಿಟ್ಟಿನ ಕ್ರಮದಿಂದಾಗಿ ಕೆಲ ವಿಚಾರಣಾಧೀನ ಕೈದಿಗಳು ಹಾಗೂ ಸಜಾ ಕೈದಿಗಳು ಮಾತ್ರವಲ್ಲದೆ, ಜೈಲಿನ ಅಧಿಕಾರಿಗಳೇ ಅಲೋಕ್ ಕುಮಾರ್ ವಿರುದ್ಧ ಷಡ್ಯಂತ್ರ ರೂಪಿಸುತ್ತಿದ್ದರು.

ಈ ಬೆನ್ನಲ್ಲೇ ಅದಕ್ಕೆ ಪ್ರತಿಕಾರ ತೀರಿಸಿಕೊಳ್ಳುವ ಉದ್ದೇಶ ದಿಂದ ಈ ವಿಡಿಯೋ ಮಾಡಿ ಹರಿಬಿಟ್ಟಿದ್ದಾರೆ. ಇದರಲ್ಲಿ ಜೈಲು ಸಿಬ್ಬಂದಿ ಕೈವಾಡವೂ ಇದೆ ಎಂಬುದು ತಿಳಿದುಬಂದಿದೆ.

ಏನಿದು ಪ್ರಕರಣ

ಕಳೆದ ಶನಿವಾರ ರಾತ್ರಿ 9 ಗಂಟೆ ಸುಮಾರಿಗೆ ವೆಬ್‌ಪೋರ್ಟಲ್‌ನಲ್ಲಿ ಪರಪ್ಪನ ಅಗ್ರಹಾರ ಜೈಲಿನಿಂದ ಚಿತ್ರೀಕರಿಸಿದ್ದಂತಹ ಐಪಿಎಲ್ ಮ್ಯಾಚ್ ಇದೆ ಎಂದು ಹೇಳುವುದರ ಜೊತೆಗೆ ಜೈಲಿನಲ್ಲಿ ಮೊಬೈಲ್, ಟಿವಿ- ನೆಟ್ ಫ್ಲಿಕ್ಸ್ ಸೌಲಭ್ಯಗಳಿವೆ ಎಂಬ ಮೂರು ವಿಡಿಯೋಗಳನ್ನು ಅಪ್ಲೋಡ್ ಮಾಡಲಾಗಿತ್ತು. ಈ ಮೊಬೈಲ್‌ಗಳನ್ನು ಡಿಜಿಪಿ ಅಲೋಕ್ ಕುಮಾರ್ ಅವರೇ ತಂದು ಕೊಟ್ಟಿದ್ದಾರೆ ಎಂದು ವಿಡಿಯೋದಲ್ಲಿರುವ ವ್ಯಕ್ತಿಗಳು ಆರೋಪಿಸಿದ್ದರು. ಈ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ಸಾಕಷ್ಟು ವೈರಲ್ ಆಗಿತ್ತು.

ಹಿಂದಿ ಕೈಬಿಟ್ಟದ್ದು ಸರಿಯಲ್ಲ

ಪುಟ 1 ➡ ಕಳೆದ ಹಲವು ದಶಕಗಳಿಂದ ದೇಶದಲ್ಲೇ ಮಾದರಿ ಶಿಕ್ಷಣದಲ್ಲಿ ತ್ರಿಭಾಷಾ ನೀತಿ ಹೊಂದಿರುವ ಕರ್ನಾಟಕದಲ್ಲಿ ಯಾವುದೇ ಪೂರ್ವಾಪರ ಚರ್ಚೆ, ಶಿಕ್ಷಣ ತಜ್ಞರ ಸಲಹೆ, ಪ್ರತಿಪಕ್ಷಗಳ ನಿಲುವು ಯಾವುದನ್ನು ಪರಿಗಣನೆಗೆ ತೆಗೆದುಕೊಳ್ಳದೆ ಹಿಂದಿ ಭಾಷೆ ಕೈಬಿಡುವ ನಿರ್ಧಾರ ತೆಗೆದುಕೊಂಡಿರುವುದು ಆಘಾತಕಾರಿ ಬೆಳವಣಿಗೆ ಎಂದಿದ್ದಾರೆ.

ನಾವು ಕನ್ನಡ ಭಾಷೆಯಲ್ಲಿ ಕಲಿಕೆಗೆ ವಿರೋಧ ವ್ಯಕ್ತಪಡಿಸುತ್ತಿಲ್ಲ, ಕನ್ನಡ ನಮ್ಮ ಮಾತೃಭಾಷೆ. ಕನ್ನಡವು ನಮ್ಮ ಬೋಧನಾ ಭಾಷೆಯಾಗಿ, ಜಾಗತಿಕ ದೃಷ್ಟಿಕೋನದಿಂದ ಇಂಗ್ಲಿಷ್ ಕಲಿಕೆಗೂ ನಮ್ಮ ಅಭ್ಯಂತರವಿಲ್ಲ, ಹಾಗೆಯೇ ಕನ್ನಡಿಗರು ದೇಶದ ಅನೇಕ ರಾಜ್ಯಗಳಿಗೆ ಉದ್ಯೋಗ ಅರಸಿ ಹೋದಾಗ ಕನಿಷ್ಠ ಮಟ್ಟದ ಹಿಂದಿ ಭಾಷಾ ಜ್ಞಾನ ಇರಬೇಕಾಗುತ್ತದೆ. ಕೇಂದ್ರ ಸರ್ಕಾರದ ಉದ್ಯೋಗಗಳಿಗೆ ಸ್ಪರ್ಧೆಗೊಳ್ಳುವ ಕರ್ನಾಟಕದ ಯುವ ಸಮೂಹವು ರಾಷ್ಟ್ರಮಟ್ಟದಲ್ಲಿ ಹಿಂದೆ ಬೀಳಬಾರದು ಎಂಬ ಕಾಳಜಿ ನಮ್ಮದು ಎಂದು ಅಭಿಪ್ರಾಯಿಸಿದ್ದಾರೆ.

ಕರ್ನಾಟಕದಲ್ಲಿ ಹಲವು ವರ್ಷಗಳಿಂದ ಅನುಸರಿಸಲಾಗುತ್ತಿರುವ ತ್ರಿಭಾಷಾ ಸೂತ್ರವೂ ಕನ್ನಡವನ್ನು ಅಸ್ಮಿತೆಯಾಗಿ, ಇಂಗ್ಲಿಷ್‌ನ್ನು ಸಂವಹನ ಭಾಷೆಯಾಗಿ ಹಾಗೂ ಹಿಂದಿಯನ್ನು ರಾಷ್ಟ್ರೀಯ ದೃಷ್ಟಿಕೋನದಿಂದ ನೋಡಲಾಗುತ್ತಿದೆ. ಆದರೂ ಹಿಂದಿ ಭಾಷೆಯನ್ನು ಕೈಬಿಡುವುದಾದರೆ ಇದರ ಬಗೆಗೆ ಭಾಷಾ ತಜ್ಞರು, ಶಿಕ್ಷಣ ತಜ್ಞರು, ಎಲ್ಲ ಭಾಷೆಯ ಸಾಹಿತಿಗಳು ಸೇರಿದಂತೆ ಸಾರ್ವಜನಿಕವಾಗಿ ವ್ಯಾಪಕ ಚರ್ಚೆ ನಡೆಸುವ ಅಗತ್ಯವಿದೆ ಎಂದು ವಿಜಯೇಂದ್ರ ಹೇಳಿದ್ದಾರೆ.

ಕೇರಳ ಚುಕ್ಕಾಣಿ ನಮ್ದೇ

ಪುಟ 1 ➡ ಯುವಜನರು, ಮಹಿಳೆಯರು ಮತ್ತು ಕೃಷಿಕರು ಬಿಜೆಪಿಗೆ ಬೆಂಬಲವಾಗಿ ನಿಂತಿದ್ದಾರೆ ಎಂದು ರಾಜ್ಯದಲ್ಲಿ ಹೆಚ್ಚುತ್ತಿರುವ ಬಿಜೆಪಿ ಜನಪ್ರಿಯತೆಯನ್ನು ಮೋದಿ ಉಲ್ಲೇಖಿಸಿದ್ದಾರೆ.

ಕೇರಳದಲ್ಲಿ ಮಾತ್ರ ಬದ್ಧವೈರಿಗಳು: ಯುಡಿಎಫ್ ಮತ್ತು ಎಲ್‌ಡಿಎಫ್ ಬಣಗಳು ಕೇರಳದಲ್ಲಿ ಮಾತ್ರ ಪರಸ್ಪರ ಬದ್ಧವೈರಿಗಳಂತೆ ಕೈಪೋಟಿ ನಡೆಸುತ್ತವೆ. ಆದರೆ ಕೇರಳ ಹೊರತುಪಡಿಸಿ ಇತರ ರಾಜ್ಯಗಳಲ್ಲಿ ಸ್ನೇಹ ಹೊಂದಿವೆ. ಕೇರಳ ಜನತೆಯ ಕಣ್ಣಿಗೆ ಮಣ್ಣೆರಚುವುದಕ್ಕಾಗಿ ಬದ್ಧವೈರಿಗಳಂತೆ ನಾಟಕವಾಡುತ್ತವೆ. ಕಾಂಗ್ರೆಸ್ ಮತ್ತು ಎಡಪಕ್ಷಗಳು ಪರಸ್ಪರ ಬೈಯುತ್ತವೆ. ಇವೆರಡೂ ಬಣಗಳ ಬಗ್ಗೆ ಕೇರಳದ ಮಹಾಜನತೆ ಎಚ್ಚರದಿಂದ ಇರಬೇಕೆಂದು ಮೋದಿ ಹೇಳಿದ್ದಾರೆ.

ಭಯ ಹುಟ್ಟಿಸಿದೆ ಬಿಜೆಪಿ ಬೆಳವಣಿಗೆ: ಕೇರಳದಲ್ಲಿ ಹೆಚ್ಚುತ್ತಿರುವ ಬಿಜೆಪಿ ಜನಪ್ರಿಯತೆಯು ಯುಡಿಎಫ್ ಮತ್ತು ಎಲ್‌ಡಿಎಫ್ ಬಣಗಳಲ್ಲಿ ಭಯ ಹುಟ್ಟಿಸಿದೆ. ಬಿಜೆಪಿ ಏನಾದರೂ ಅಧಿಕಾರಕ್ಕೇರಿದರೆ ತಮ್ಮ ಕೆಟ್ಟ ಕೆಲಸಗಳೆಲ್ಲವೂ ಬಯಲಿಗೆಳೆಯುತ್ತಾರೆ ಎಂಬ ಭಯ ಇವೆರಡೂ ಬಣಗಳಿಗಿವೆ ಎಂದು ಮೋದಿ ಹೇಳಿದ್ದಾರೆ.

ಸಮರ್ಥ್ ಮತಯಾಚನೆ



• **ದಾವಣಗೆರೆ:** ದಕ್ಷಿಣ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸಮರ್ಥ್ ಶಾಮನೂರು ಭಾನುವಾರ ಜಾಲಿನಗರ ಹಾಗೂ ಸುರೇಶ್ ನಗರ ಭಾಗಗಳಲ್ಲಿ ಕಾಲ್ನಡಿಗೆ ಮೂಲಕ ಮನೆ-ಮನೆಗೆ ತೆರಳಿ ಮತಯಾಚನೆ ನಡೆಸಿದರು.

ಈ ವೇಳೆ ಹಿರಿಯರೊಂದಿಗೆ ಸಮಾಲೋಚನೆ ನಡೆಸಿದ ಅವರು, ಹಿರಿಯರ ಅನುಭವ ಹಾಗೂ ಯುವಜನರ ಆಲೋಚನೆಗಳು ಒಟ್ಟಿಗೆ ಮೈದಳೆದಾಗಲೇ ನಿಜವಾದ ಅಭಿವೃದ್ಧಿ ಸಾಧ್ಯ. ನನ್ನ ತಾತನವರ ಮಾರ್ಗದರ್ಶನವೇ ನನಗೆ ಪ್ರೇರಣೆಯಾಗಿದೆ. ತಾತನವರು ಸಚಿವರು, ಸಂಸದರು ಹಾಗೂ ಶಾಸಕರಾಗಿ ಹಲವು ಅಭಿವೃದ್ಧಿ ಕಾರ್ಯಗಳನ್ನು ಮಾಡಿ, ಜನಮನದಲ್ಲಿ ಶಾಶ್ವತ ಸ್ಥಾನ ಗಳಿಸಿದ್ದಾರೆ. ಅವರ ಆದರ್ಶಗಳನ್ನು ಅನುಸರಿಸಿ ನಾನು ಕೂಡ ಜನಸೇವೆಯಲ್ಲಿ ತೊಡಗಿದ್ದೇನೆ ಎಂದರು.

ಸಮಾನತೆ ಹಾಗೂ ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಂಡಿದ್ದ ತಾತನವರೇ ನನಗೆ ಸ್ಫೂರ್ತಿ. ಅವರಂತೆ ಎಲ್ಲರನ್ನು ಒಟ್ಟಾಗಿ ಕರೆದುಕೊಂಡು ಹೋಗುವ ಜವಾಬ್ದಾರಿಯನ್ನು ನಿಭಾಯಿಸುತ್ತೇನೆ. ಉಪಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾದ ನನಗೆ ಮತ ನೀಡಿ ಮತ್ತಷ್ಟು ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಅವಕಾಶ ನೀಡಬೇಕು ಎಂದು ಅವರು ಮನವಿ ಮಾಡಿದರು.

ಭೂ ದಾಳಿ ನಡೆದರೆ, ಪ್ರತಿದಾಳಿಗೆ ಸಿದ್ಧ

ಪುಟ 1 ➡ ತಿಂಗಳಿನಿಂದ ಮುಂದುವರಿದಿರುವ ಈ ಯುದ್ಧದಲ್ಲಿ 3,000ಕ್ಕೂ ಹೆಚ್ಚು ಮಂದಿ ಮೃತಪಟ್ಟಿದ್ದಾರೆ. ಅಮೆರಿಕ ಮತ್ತು ಇಸ್ರೇಲ್ ಇರಾನ್ ಮೇಲೆ ನಡೆಸಿದ ದಾಳಿಯಿಂದ ಯುದ್ಧ ಆರಂಭವಾಗಿ, ನಂತರ ಇರಾನ್ ಇಸ್ರೇಲ್ ಹಾಗೂ ಗಲ್ಫ್ ಪ್ರದೇಶದ ಅರಬ್ ರಾಷ್ಟ್ರಗಳ ಮೇಲೆ ಪ್ರತಿದಾಳಿ ನಡೆಸಿದೆ. ಇಸ್ರೇಲ್‌ನ ಧಾರ್ಮಿಕ ಕೇಂದ್ರಗಳನ್ನು ಗುರಿಯಾಗಿಸಿ ಇರಾನ್ ಭಾನುವಾರ ಮತ್ತಷ್ಟು ದಾಳಿಗಳನ್ನು ನಡೆಸಿದೆ. ಇದೇ ವೇಳೆ ಟೆಹ್ರಾನ್ ನಗರದಲ್ಲಿ ಸ್ಫೋಟಗಳ ಶಬ್ದಗಳು ಕೇಳಿಬಂದಿವೆ.

ನಿರ್ಬಂಧ ಸಡಿಲಿಸಿದ ಇರಾನ್: ಈ ನಡುವೆ, ಹಾರ್ಮುಜ್ ಸಮುದ್ರ ಮಾರ್ಗದಲ್ಲಿ ಸಾಗುವ ವಾಣಿಜ್ಯ ಹಡಗುಗಳ ಮೇಲಿನ ಕೆಲವು ನಿರ್ಬಂಧಗಳನ್ನು ಇರಾನ್ ಸಡಿಲಿಸಿದೆ. ಪಾಕಿಸ್ತಾನದ ಧ್ವಜ ಹೊಂದಿರುವ 20 ಹಡಗುಗಳಿಗೆ ಸಂಚಾರಕ್ಕೆ ಅನುಮತಿ ನೀಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಆದರೆ, ಈ ಮಾತುಕತೆಗಳು ಅಮೆರಿಕ ಮತ್ತು ಇರಾನ್ ನಡುವಿನ ಭಿನ್ನಾಭಿಪ್ರಾಯಗಳನ್ನು ಕಡಿಮೆ ಮಾಡುವಲ್ಲಿ ಪರಿಣಾಮಕಾರಿಯಾಗಿಲ್ಲ, ಯುದ್ಧ ನಿರ್ಣಾಯಕ ಹಂತ ತಲುಪಿದೆ ಎಂದು ಅಮೆರಿಕ ಹೇಳುತ್ತಿದ್ದರೂ, ಇರಾನ್ ನಾಯಕರು ಸಾರ್ವಜನಿಕವಾಗಿ ಮಾತುಕತೆಗಳನ್ನು ತಳ್ಳಿಹಾಕುತ್ತಿದ್ದಾರೆ. ಒಟ್ಟಿನಲ್ಲಿ, ಈ ಯುದ್ಧ ತೀವ್ರಗೊಳ್ಳುತ್ತಿದ್ದು, ರಾಜತಾಂತ್ರಿಕ ಪ್ರಯತ್ನಗಳು ಇನ್ನೂ ಫಲ ನೀಡಿಲ್ಲ, ಪ್ರಾದೇಶಿಕ ಮತ್ತು ಜಾಗತಿಕ ಮಟ್ಟದಲ್ಲಿ ಉದ್ವಿಗ್ನತೆ ಹೆಚ್ಚುತ್ತಿದ್ದು, ಮುಂದಿನ ದಿನಗಳಲ್ಲಿ ಪರಿಸ್ಥಿತಿ ಇನ್ನಷ್ಟು ಸಂಕೀರ್ಣವಾಗುವ ಸಾಧ್ಯತೆ ಇದೆ.

ಸಾವಿನ ಸಂಖ್ಯೆ ಹೆಚ್ಚಳ: ಈ ಯುದ್ಧದಲ್ಲಿ ಸಾವಿನ ಸಂಖ್ಯೆ ನಿರಂತರವಾಗಿ ಏರುತ್ತಿದೆ. ಇರಾನ್‌ನ 1,900ಕ್ಕೂ ಹೆಚ್ಚು ಮಂದಿ, ಇಸ್ರೇಲ್ 19, ಲೆಬನಾನ್ 1,100 ಕ್ಕೂ ಹೆಚ್ಚು, ಇರಾಕ್‌ನಲ್ಲಿ 80 ಭದ್ರತಾ ಸಿಬ್ಬಂದಿ, ಗಲ್ಫ್ ರಾಷ್ಟ್ರಗಳಲ್ಲಿ 20 ಮತ್ತು ವೆಸ್ಟ್ ಬ್ಯಾಂಕ್‌ನಲ್ಲಿ ನಾಲ್ವರು ಮೃತಪಟ್ಟಿದ್ದಾರೆ.

ಜಾತಿಗಣತಿ ವರದಿ ವಿಳಂಬಕ್ಕೆ ಒಳಮೀಸಲಾತಿ ಗೊಂದಲವೇ ಕಾರಣ

▸ **ವೀರಣ್ಣ ಬಳಿಗಾರ**

• **ಬೆಂಗಳೂರು:** ಒಳಮೀಸಲಾತಿ ಗೊಂದಲ ಬಗೆಹರಿಯದ ಕಾರಣ ಹಿಂದುಳಿದ ವರ್ಗಗಳ ಆಯೋಗವು ರಾಜ್ಯದಲ್ಲಿ ನಡೆಸಿರುವ ಸಾಮಾಜಿಕ ಹಾಗೂ ಶೈಕ್ಷಣಿಕ ಸಮೀಕ್ಷೆ ವರದಿ ವಿಳಂಬವಾಗುವ ಸಾಧ್ಯತೆ ಇದ್ದು, ಮೇ ತಿಂಗಳ ಒಳಗೆ ಸಮೀಕ್ಷೆ ವರದಿಯನ್ನು ಸರ್ಕಾರ ಸ್ವೀಕರಿಸುವುದು ಅನುಮಾನವಾಗಿದೆ.

ದಿಗಂತ ವಿಶೇಷ

ಪರಿಶಿಷ್ಟ ಜಾತಿಗಳಿಗೆ ಒಳಮೀಸಲು ಹಂಚಿಕೆ ಮಾಡುವುದು ಸರ್ಕಾರಕ್ಕೆ ಸವಾಲಾಗಿ ಪರಿಣಮಿಸಿದ್ದು, ಮಾ.27ರಂದು ನಿಗದಿಯಾಗಿದ್ದ ವಿಶೇಷ ಸಂಪುಟ ಸಭೆಯಲ್ಲಿ ಒಳಮೀಸಲಾತಿ ಕುರಿತು ಸ್ಪಷ್ಟ ನಿರ್ಧಾರ ಕೈಗೊಳ್ಳಲು ಸರ್ಕಾರ ತೀರ್ಮಾನಿಸಿತ್ತು. ಆದರೆ, ಉಪಚುನಾವಣೆ ಹಿನ್ನಲೆಯಲ್ಲಿ ಮಾದರಿ ನೀತಿ ಸಂಹಿತೆ ಕಾರಣ ಒಳಮೀಸಲಾತಿ ಘೋಷಣೆ ಮುಂದಕ್ಕೆ ಹೋಗಿರುವುದರಿಂದ ಜಾತಿಗಣತಿ ವರದಿ ಇನ್ನಷ್ಟು ಮುಂದಕ್ಕೆ ಹೋಗಲಿದೆ.



ಈ ಹಿಂದೆ ಕಾಂತರಾಜ್ ಆಯೋಗ ಸಲ್ಲಿಸಿದ ವರದಿಯನ್ನು ಅನುಷ್ಠಾನಗೊಳಿಸಲು ಸಾಕಷ್ಟು ಕ್ರಮ ವಹಿಸಿದರೂ ಕೂಡಾ ಪ್ರಬಲ ಸಮುದಾಯಗಳ ವಿರೋಧದಿಂದ ಸ್ವೀಕರಿಸಲಾಗಲಿಲ್ಲ, ಇನ್ನೂ ಮಧುಸೂದನ್ ನಾಯ್ಕ ಅವರ ನೇತೃತ್ವದಲ್ಲಿ ನಡೆಸಿರುವ ವರದಿ ವಿಶ್ಲೇಷಣೆ ಹಂತದಲ್ಲಿದ್ದು, ಕೇಂದ್ರ ಸರ್ಕಾರದ ಜನಗಣತಿಯ ಪೂರ್ವದಲ್ಲೇ ಸ್ವೀಕರಿಸಿದರೆ ಉತ್ತಮ ಎಂದು ಹಿಂದುಳಿದ ನಾಯಕರು ಹೇಳಿದ್ದಾರೆ.

ಮಧುಸೂದನ್ ಆಯೋಗ ಸಲ್ಲಿಸಲಿರುವ ವರದಿಯು ಮುಂದಿನ ಎರಡು ದಶಕಗಳವರೆಗೆ ಪರಿಶಿಷ್ಟ ಜಾತಿ, ಪಂಗಡ, ಹಿಂದುಳಿದ ವರ್ಗಗಳ ಹಾಗೂ ಸಾಮಾನ್ಯ ವರ್ಗದ ಜನರ ಜೀವನಮಟ್ಟ, ಸಾಮಾಜಿಕ ಸ್ಥಿತಿಗತಿ, ಆರ್ಥಿಕ ಪರಿಸ್ಥಿತಿ, ಶೈಕ್ಷಣಿಕ ಅರ್ಹತೆ ಸೇರಿದಂತೆ ಹಲವು ಮಹತ್ವದ ವಿಷಯಗಳು ವರದಿಯಲ್ಲಿ ಇವೆ. ಇದರ ಆಧಾರದ ಮೇಲೆ ಹಿಂದುಳಿದ ವರ್ಗಗಳ ಮೀಸಲಾತಿ ವರ್ಗೀಕರಣ ಮರು ಪ್ರತಿಷ್ಠಾಪನೆ ಆಗಲಿದೆ. ಆದರೆ, ಸದ್ಯದ ರಾಜಕೀಯ ಸ್ಥಿತಿಗತಿಯಲ್ಲಿ ವರದಿ ವಿಳಂಬ ಎಂದು ಹೇಳಲಾಗುತ್ತಿದೆ.

ಶೇ.90ರಷ್ಟು ಸಮೀಕ್ಷೆ: ಸೆ.21ರಿಂದ ಸ.10 ರವರೆಗೆ 51 ದಿನಗಳ ಕಾಲ ರಾಜ್ಯಾದ್ಯಂತ 1.5 ಲಕ್ಷ ಶಿಕ್ಷಕರು ಹಾಗೂ ಸರ್ಕಾರಿ ನೌಕರರು ಸಮೀಕ್ಷೆ ನಡೆಸಿದ್ದು, ಶೇ.90ಕ್ಕೂ ಹೆಚ್ಚು ಗುರಿ ಸಾಧಿಸಲಾಗಿದೆ. ರಾಜ್ಯಾದ್ಯಂತ ಶೇ.97.51ರಷ್ಟು ಗುರಿ ತಲುಪಿದ್ದರೆ, ಜಿಬಿಎ ವ್ಯಾಪ್ತಿಯಲ್ಲಿ ಶೇ.60ರಷ್ಟು ಗುರಿ ಸಾಧನೆ ಆಗಿದೆ ಎಂದು ಆಯೋಗದ ಮೂಲಗಳು ತಿಳಿಸಿವೆ. ರಾಜ್ಯದಲ್ಲಿ ಸುಮಾರು 6.50 ಕೋಟಿ ಜನರನ್ನು ಸಮೀಕ್ಷೆಗೆ ಒಳಪಡಿಸಲಾಗಿತ್ತು. ಸಮೀಕ್ಷೆ ವೇಳೆ ಶೇ.4.22 ಕುಟುಂಬಗಳು ಸಮೀಕ್ಷೆಯಲ್ಲಿ ಭಾಗವಹಿಸಲು ನಿರಾಕರಿಸಿದ್ದರೆ, 34.49 ಲಕ್ಷ ಮನೆಗಳು ಖಾಲಿ ಅಥವಾ ಬೀಗ ಹಾಕಿದ್ದವು. ಈ ಗಣತಿಗೆ ಸುಮಾರು 180 ಕೋಟಿ ರೂ.ಗಳ ವೆಚ್ಚ ಮಾಡಲಾಗಿದೆ.

ವರದಿಯ ದತ್ತಾಂಶ ವಿಶ್ಲೇಷಣೆ

ಈಗಾಗಲೇ ಗಣತಿ ಕಾರ್ಯ ಮುಗಿದು 4 ತಿಂಗಳೇ ಗತಿಸಿದ್ದು, ಸಮೀಕ್ಷೆಯೋತ್ತರ ದತ್ತಾಂಶ ವಿಶ್ಲೇಷಣೆ ಕಾರ್ಯ ಪ್ರಗತಿಯಲ್ಲಿದೆ. ಆನ್‌ಲೈನ್ ಮೂಲಕವೇ ಗಣತಿ ಕಾರ್ಯ ಕೈಗೊಂಡಿದ್ದು, ಅಂಕಿ-ಸಂಖ್ಯೆಗಳ ವಿಶ್ಲೇಷಣೆ ನಡೆಸಿ, ಅವುಗಳ ಮೇಲೆ ವರದಿಯನ್ನು ಸಿದ್ಧಪಡಿಸುತ್ತಿದೆ ಆಯೋಗವು ತಿಳಿಸಿದೆ.



ಹಿಂದುಳಿದ ವರ್ಗಗಳ ಆಯೋಗವು ಈಗಾಗಲೇ ಸಮೀಕ್ಷೆ ಮುಗಿಸಿ. ಅಂಕಿ-ಅಂಶಗಳ ಅಧ್ಯಯನ ನಡೆಸಿದೆ. ವರದಿ ಬೇಗನೇ ಸರ್ಕಾರಕ್ಕೆ ಸಲ್ಲಿಕೆ ಆಗುವ ನಿರೀಕ್ಷೆ ಇದೆ. ವರದಿ ಬರುವ ಮೊದಲು ಈ ಬಗ್ಗೆ ಏನನ್ನೂ ಹೇಳಲಾರೆ.

■ **ಶಿವರಾಜ್ ತಂಗಡಗಿ,** ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ

ರಾಜ್ಯಾದ್ಯಂತ ಬೇಸಿಗೆ ಮಳೆ ಚೇತರಿಕೆ

• ಬೆಂಗಳೂರು: ಕರ್ನಾಟಕದ ಒಳನಾಡಿನಾದ್ಯಂತ ಸಮುದ್ರ ಮಟ್ಟದಿಂದ ಸರಾಸರಿ 900 ಮೀಟರ್ ಎತ್ತರದಲ್ಲಿ ಚಂಡಮಾರುತದ ಪ್ರಸರಣದಿಂದಾಗಿ ರಾಜ್ಯದಲ್ಲಿ ಮುಂಗಾರು ಪೂರ್ವ ಮಳೆ ಚೇತರಿಕೆ ಕಂಡಿದೆ.

ಭಾರತೀಯ ಹವಾಮಾನ ಇಲಾಖೆಯ ಮುನ್ಸೂಚನೆ ಪ್ರಕಾರ, ರಾಜ್ಯದ ಕರಾವಳಿ ಮತ್ತು ಒಳನಾಡಿನಲ್ಲಿ ಇನ್ನೂ ಒಂದು ವಾರ ಮಳೆಯಾಗುವ ಸಾಧ್ಯತೆಗಳಿವೆ. ಕಳೆದ 2-3 ಮೂರು ವಾರಗಳಿಂದ ರಾಜ್ಯದ ಅಲ್ಲಲ್ಲಿ ಚದುರಿದಂತೆ ಮಳೆ ಸುರಿಯುತ್ತಿದೆ. ಕೆಲವೆಡೆ ಆಲಿಕಲ್ಲು ಮಳೆಯಾಗಿದ್ದರೆ, ಇನ್ನೂ ಕೆಲವೆಡೆ ಗುಡುಗು-ಸಿಡಿಲು ಸಹಿತ ಗಾಳಿ ಮಳೆಯಾಗುತ್ತಿದೆ. ಶನಿವಾರ ರಾತ್ರಿ ಮತ್ತು ಭಾನುವಾರ ರಾಜಧಾನಿ ಬೆಂಗಳೂರಿನಲ್ಲಿಯೂ ವರ್ಷಧಾರೆಯಾಗಿ ವಾತಾವರಣ ತಂಪಾಗಿದೆ. ಅಲ್ಲದೇ ರಾಜ್ಯದ ಕರಾವಳಿ, ಮೈಸೂರು, ಮಂಡ್ಯ, ಚಿಕ್ಕಮಗಳೂರು, ಶಿವಮೊಗ್ಗ ಸೇರಿದಂತೆ ಹಲವೆಡೆ ಮಳೆ ಬಿದ್ದಿದೆ.

ಸಾಧಾರಣ ಮಳೆಯ ಸಂಭವ: ಹವಾಮಾನ ಮುನ್ಸೂಚನೆ ಪ್ರಕಾರ, ಏ.4ರವರೆಗೆ ರಾಜ್ಯದ ಹಲವೆಡೆ ಭಾಗಶಃ ಮೋಡ ಕವಿದ ವಾತಾವರಣ ಕಂಡುಬರಲಿದೆ. ಕೆಲವೆಡೆ ಸಂಜೆ ಹಾಗೂ ರಾತ್ರಿ ವೇಳೆ ಚದುರಿದಂತೆ ಹಗುರದಿಂದ ಸಾಧಾರಣ ಮಳೆಯಾಗುವ ಸಾಧ್ಯತೆಗಳಿವೆ. ಒಂದೆರಡು ಕಡೆ ಬಿರುಗಾಳಿ, ಆಲಿಕಲ್ಲು ಸಹಿತ ಮಳೆಯಾಗುವ ಮುನ್ಸೂಚನೆಗಳಿವೆ. ಏ.2ರ ವರೆಗೆ ಕರಾವಳಿಯ ಮೂರು ಜಿಲ್ಲೆಗಳ ಒಂದೆರಡು ಸ್ಥಳಗಳಲ್ಲಿ ಬಿರುಗಾಳಿಯೊಂದಿಗೆ ಸಾಧಾರಣ ಅಥವಾ ಗುಡುಗು ಸಹಿತ ಮಳೆಯಾಗುವ ಸಂಭವವಿದೆ. ನಂತರದ ಎರಡು ದಿನ ಉಡುಪಿ ಮತ್ತ ದಕ್ಷಿಣ ಕನ್ನಡ ಜಿಲ್ಲೆಗಳ ಒಂದೆರಡು ಕಡೆ ಹಗುರ ಮಳೆ ಸುರಿಯುವ ಸಾಧ್ಯತೆಯಿದೆ.

ಉತ್ತರ ಒಳನಾಡಿನ ಬೆಳಗಾವಿ, ಧಾರವಾಡ, ಗದಗ, ಕಲಬುರಗಿ, ವಿಜಯಪುರ, ಬೀದರ್ ಮತ್ತು ಹಾವೇರಿ ಜಿಲ್ಲೆಗಳಲ್ಲಿ ಒಂದೆರಡು ಕಡೆ ಸಾಧಾರಣ ಮಳೆ ಸುರಿಯಲಿದೆ. ದಕ್ಷಿಣ ಒಳನಾಡಿನ ಶಿವಮೊಗ್ಗ, ಚಿಕ್ಕಮಗಳೂರು, ಹಾಸನ, ಕೊಡಗು, ಚಾಮರಾಜನಗರ, ಮೈಸೂರು, ಕೋಲಾರ, ತುಮಕೂರು, ಬೆಂಗಳೂರು, ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಒಂದು ಅಥವಾ ಎರಡು ಸ್ಥಳಗಳಲ್ಲಿ ಬಲವಾದ ಗಾಳಿಯೊಂದಿಗೆ ಹಗುರದಿಂದ ಸಾಧಾರಣ ಮಳೆ ಅಥವಾ ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ.



ಮೇಲುಕೋಟೆ ಚಲುವನಾರಾಯಣಸ್ವಾಮಿಗೆ ಭಾನುವಾರ ಮುಂಜಾನೆಯಲ್ಲಿ ರಾಜಮುಡಿ ಉತ್ಸವ ವೈಭವದಿಂದ ನೆರವೇರಿತು. ಮಳೆಯನ್ನೂ ಲೆಕ್ಕಿಸದೆ ದರ್ಶನಕ್ಕೆ ಸೇರಿದ್ದ ಭಕ್ತಸ್ತೋಮ.

ಸಮುದಾಯ ಚಿಕ್ಕದು ಸಾಧನೆ ದೊಡ್ಡದು

• ಬೆಂಗಳೂರು: ವಿಶ್ವದಾದ್ಯಂತ ಅಂದಾಜು 4 ಲಕ್ಷ ಮಂದಿ ಹವ್ಯಕ ಬ್ರಾಹ್ಮಣರಿರುವ ಈ ಸಮಾಜವು ಅತೀ ದೊಡ್ಡ ಸಮುದಾಯವಲ್ಲ, ಆದರೆ, ಹವ್ಯಕರ ಸಾಧನೆ ಮಾತ್ರ ಗಗನಮುಖಿಯಾಗಿದೆ ಎಂದು ವಿಮರ್ಶಕ, ಕವಿ ಮತ್ತು ಪ್ರಬಂಧಕಾರ ಚಿಂತಾಮಣಿ ಕೊಡ್ಲೆಕೆರೆ ಹೇಳಿದರು.

ನಗರದ ಮಲ್ಲೇಶ್ವರದ ಶ್ರೀ ಅಖಿಲ ಹವ್ಯಕ ಮಹಾ ಸಭಾ ವತಿಯಿಂದ ಹವ್ಯಕ ಪತ್ರಿಕೆ ವಜ್ರಮಹೋತ್ಸವ ವಿಶೇಷಾಂಕ ಲೋಕಾರ್ಪಣೆ ಮತ್ತು ಸಂಸ್ಥಾಪನೋತ್ಸವ ಹವ್ಯಕ ವಿಶೇಷ ಪ್ರಶಸ್ತಿ, ಪಲ್ಲವ ಪುರಸ್ಕಾರ ಪ್ರದಾನ ಸಮಾರಂಭವನ್ನು ಭಾನುವಾರ ಅವರು ಉದ್ಘಾಟಿಸಿದರು. ಕಡು ಬಡತನವನ್ನು ಕಂಡ, ಅತ್ಯಂತ ಸಣ್ಣ ಸಮುದಾಯವಾಗಿರುವ ಹವ್ಯಕರು ರಾಜಕೀಯವಾಗಿ ನಿರ್ಣಾಯಕರಲ್ಲ, ಆದರೂ, ಹಲವು ನಾಯಕರು ನಮ್ಮ ಸಮಾಜದಿಂದ ಬಂದಿದ್ದಾರೆ. ಕ್ರೀಡೆ, ಕಲಾ ಪ್ರಕಾರಗಳಲ್ಲಿ, ಯಕ್ಷಗಾನ ಹೀಗೆ ಅನೇಕ ಕ್ಷೇತ್ರಗಳಲ್ಲಿ ಅಸಾಮಾನ್ಯ ಸಾಧನೆಯನ್ನು ಮಾಡಿದ್ದಾರೆ ಎಂದು ಉಲ್ಲೇಖಿಸಿದರು.

ಮಹಾಲಕ್ಷ್ಮಿಪುರಬ್ರಾಹ್ಮಣಸಭಾಅಧ್ಯಕ್ಷರಾಘವೇಂದ್ರ ಭಟ್ ಮಾತನಾಡಿ, ನಮ್ಮ ಸಂಸ್ಕೃತಿ, ಸಂಸ್ಕಾರಗಳೇ ನಮ್ಮ ಜೀವನದ ಮೂಲಾಧಾರ. ಬ್ರಾಹ್ಮಣರಿಗೆ ಶಾಸ್ತ್ರಜ್ಞಾನ, ಸಂಸ್ಕಾರ ಹಾಗೂ ಆಚರಣೆ ಗಳು ಬಹಳ ಮುಖ್ಯವಾಗಿವೆ. ಇವುಗಳ ಮೂಲಕ ಸಮಾಜದ ಉನ್ನತಿ ಮತ್ತು ಉತ್ತಮ ಜೀವನ ಸಾಧ್ಯವಾಗುತ್ತದೆ ಎಂದರು. ಇದೇ ವೇಳೆ ಹವ್ಯಕ ಪತ್ರಿಕೆಯಲ್ಲಿ ಸಂಪಾದಕರಾಗಿ ಸೇವೆ ಸಲ್ಲಿಸಿದವರನ್ನು ಗೌರವ ಸಲ್ಲಿಸಲಾಯಿತು. ಕಾರ್ಯಕ್ರಮದಲ್ಲಿ ಅಖಿಲ ಹವ್ಯಕ ಮಹಾಸಭಾ ಅಧ್ಯಕ್ಷ ಡಾ. ಗಿರಿಧರ ಕಜೆ, ಆರ್ಥಿಕ ತಜ್ಞ ಗೋಪಾಲಕೃಷ್ಣ ಹೆಗಡೆ ಸೇರಿದಂತೆ ಇತರರಿದ್ದರು.



ಹವ್ಯಕ ವಿಶೇಷ ಪ್ರಶಸ್ತಿ ಪ್ರದಾನ

ಹವ್ಯಕ ವಿಭೂಷಣ: ಮೂಡಂಬೈಲು ಗೋಪಾಲ ಕೃಷ್ಣ ಶಾಸ್ತ್ರಿ, ಎಸ್. ಶಂಭು ಭಟ್ ಕಡತೋಕ

ಹವ್ಯಕ ಭೂಷಣ: ನೀರ್ನಳ್ಳಿ ಗಣಪತಿ, ಡಾ.ವೈ.ವಿ. ಕೃಷ್ಣಮೂರ್ತಿ, ಉಮೇಶ ಬಂದಗದ್ದೆ

ಹವ್ಯಕ ಶ್ರೀ: ಪೂರ್ಣಿಮಾ ಕೆ.ಭಟ್, ಸುಚೇತನ ಭಟ್, ಆನಂದ ಹೆಗಡೆ, ಪ್ರತ್ಯೂಷ ಕುಮಾರ್

ಹವ್ಯಕ ಸೇವಾಶ್ರೀ: ಡಾ.ಬಿ.ಟಿ. ನರಹರಿ ರಾವ್, ಬೋನಂತಾಯ ಶಿವಶಂಕರ ಭಟ್, ಕೃಷ್ಣಮೂರ್ತಿ ಹೆಗಡೆ ತ್ಯಾಗಲಿ

ಕಿರುಸುದ್ದಿ

ಸರ್ಕಾರದಿಂದ ಜನರಿಗೆ ಅನುಕೂಲ ಇಲ್ಲ: ಬಿವೈವಿ



• ದಾವಣಗೆರೆ: ಬಾಗಲಕೋಟೆ ಹಾಗೂ ದಾವಣಗೆರೆ ದಕ್ಷಿಣ ಕ್ಷೇತ್ರದ ಉಪಚುನಾವಣೆಯಲ್ಲಿ ಬಿಜೆಪಿ ಗೆಲುವು ಸಾಧಿಸಲಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ವಿಶ್ವಾಸ ವ್ಯಕ್ತಪಡಿಸಿದರು. ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕಾಂಗ್ರೆಸ್ ಸರ್ಕಾರದ ಆಡಳಿತ ವೈಫಲ್ಯದಿಂದ ಜನ ಬೇಸತ್ತಿದ್ದಾರೆ. ಸಿಎಂ ಸಿದ್ದರಾಮಯ್ಯರಿಂದ ರಾಜ್ಯಕ್ಕೆ ಯಾವುದೇ ಅನುಕೂಲವಾಗಿಲ್ಲ, ಪಂಚ ರಾಜ್ಯಗಳ ಚುನಾವಣೆ ನಂತರ ಹೈಕಮಾಂಡ್ ನಿರ್ಧಾರಕ್ಕೆ ಮಣಿಯುವ ಅನಿವಾರ್ಯತೆ ಯಲ್ಲಿರುವುದು ಅವರ ಮಾತಿನಿಂದಲೇ ಗೊತ್ತಾಗುತ್ತಿದೆ. ಈ ಹಿನ್ನೆಲೆಯಲ್ಲಿ ರಾಜ್ಯದ ರಾಜಕೀಯ ದಿಕ್ಕು ಬದಲಾ ಯಿಸುವ ಶಕ್ತಿ ಪ್ರಸಕ್ತ ಉಪಚುನಾವಣೆಗೆ ಇದೆ. ಎರಡೂ ಉಪಚುನಾವಣೆಗಳಲ್ಲಿ ಜನಾದೇಶ ಬಿಜೆಪಿ ಪರವಾಗಿ ಬರಲಿದೆ ಎಂದರು.

ವೃದ್ಧನ ಹತ್ಯೆ ಮಾಡಿ ಸುಟ್ಟ ದುಷ್ಕರ್ಮಿಗಳು

• ವಿಜಯಪುರ: ಜಿಲ್ಲೆಯ ಭೀಮಾತೀರದ ಇಂಡಿ ತಾಲೂಕಿನ ತೆನಹಳ್ಳಿ ಗ್ರಾಮದಲ್ಲಿ ದುಷ್ಕರ್ಮಿಗಳು ವೃದ್ಧನ ಬರ್ಬರ ಹತ್ಯೆಗೈದು, ಸುಟ್ಟು ಹಾಕಿರುವ ಘಟನೆ ನಡೆದಿದೆ. ಗುರುಬಸಯ್ಯ ರೇವಯ್ಯ ಹಿರೇಮಠ (72) ಮೃತಪಟ್ಟ ವೃದ್ಧ. ಗುರುಬಸಯ್ಯ ಅವನಿಗೆ ಹತ್ಯೆಗೈದು ಮುಖಕ್ಕೆ ಬೆಂಕಿ ಹಚ್ಚಿ ದುಷ್ಕರ್ಮಿಗಳು ಪರಾರಿಯಾಗಿದ್ದು, ಹತ್ಯೆಗೆ ನಿಖರವಾದ ಕಾರಣ ತಿಳಿದುಬಂದಿಲ್ಲ, ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದರು. ಇಂಡಿ ಗ್ರಾಮೀಣ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ಘಟನೆ ನಡೆದಿದೆ.

ಈಜಲು ತೆರಳಿದ್ದ ನಾಲ್ವರು ಮಕ್ಕಳು ಮೃತ್ಯು

• ಯಾದಗಿರಿ: ಕೃಷಿ ಹೊಂಡದಲ್ಲಿ ಈಜಲು ಹೋದ ನಾಲ್ವರು ಮಕ್ಕಳು ಮೃತಪಟ್ಟ ಘಟನೆ ಜಿಲ್ಲೆಯ ಸುರಪುರ ತಾಲೂಕಿನ ನಗನೂರ ಗ್ರಾಮದಲ್ಲಿ ಭಾನುವಾರ ನಡೆದಿದೆ. ಕಿರಣ (6), ಬಸಮ್ಮ (11), ಶರತ್ (6), ಹನುಮೇಶ್ (7) ಮೃತಪಟ್ಟ ನತದೃಷ್ಟ ಮಕ್ಕಳು. ಶಾಲೆಗೆ ರಜೆ ಇದ್ದ ಕಾರಣಕ್ಕೆ ಮಕ್ಕಳು ಕೃಷಿ ಹೊಂಡದಲ್ಲಿ ಈಜಲು ಹೋಗಿದ್ದರು. ಹೊಂಡದಲ್ಲಿ ನೀರು ಹೆಚ್ಚಿದ್ದ ಕಾರಣ ಹೊರಗೆ ಬರಲಾರದೆ ಮುಳುಗಿದ್ದಾರೆ. ಮಕ್ಕಳನ್ನು ಕಳೆದುಕೊಂಡ ಪಾಲಕರ ಆಕ್ರಂದನ ಮುಗಿಲು ಮುಟ್ಟಿದೆ. ಕೆಂಭಾವಿ ಪೊಲೀಸರು ಸ್ಥಳಕ್ಕೆ ಆಗಮಿಸಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಆತ್ಮಹತ್ಯೆಗೆ ಯತ್ನ: ಇಬ್ಬರ ಸಾವು

• ಆನೇಕಲ್: ಸಾಲ ಬಾಧೆ ತಾಳಲಾಗದೆ ಒಂದೇ ಕುಟುಂಬದ ನಾಲ್ವರು ಆತ್ಮಹತ್ಯೆಗೆ ಯತ್ನಿಸಿದ್ದು, ತಾಯಿ, ಮಗಳು ಮೃತರಾಗಿರುವ ಘಟನೆ ಅತ್ತಿಬೆಲೆ ಪೊಲೀಸ್ ಠಾಣೆ ವ್ಯಾಪ್ತಿಯ ಮಳ್ಳೇನ ಹಳ್ಳಿ ಗ್ರಾಮದಲ್ಲಿ ನಡೆದಿದೆ. ತಾಯಿ ಆಶಾ (50), ಮಗಳು ವರ್ಷಿತಾ (35) ಸ್ಥಳದಲ್ಲಿಯೇ ಮೃತರಾದವರು. ಪುತ್ರ ಮೋಹನ್ ಗೌಡ (27), ಹಾಗೂ ಮೊಮ್ಮಗ ಮಾಯನ್ ಗೌಡ (11) ಸ್ಥಿತಿ ಗಂಭೀರ ಸ್ಥಿತಿಯಲ್ಲಿರುವುದರಿಂದ ಆಸ್ಪತ್ರೆಗೆ ದಾಖಲಿಸಲಾಗಿದೆ. ಇನ್ನು ಮೋಹನ್‌ಗೌಡ ತನ್ನ ತಾಯಿ, ಅಕ್ಕ ಹಾಗೂ ಅಕ್ಕನ ಮಗನ ಕತ್ತು ಕೊಯ್ದು ಬಳಿಕ ತಾನೂ ಆತ್ಮಹತ್ಯೆಗೆ ಯತ್ನ ಮಾಡಿದ್ದಾನೆ ಎಂದು ಪ್ರಥಮಿಕವಾಗಿ ತಿಳಿದು ಬಂದಿದೆ. ಚೀಟಿ ವ್ಯವಹಾರ ಸೇರಿದಂತೆ ಬೇರೆ ಬೇರೆ ವ್ಯವಹಾರವನ್ನು ನಡೆಸುತ್ತಿದ್ದರು. ಮೋಹನ್ ಗೌಡ ಕೋಟ್ಯಂತರ ರೂಪಾಯಿ ಸಾಲ ಮಾಡಿಕೊಂಡಿದ್ದ ರು ಎನ್ನಲಾಗಿದೆ. ಸಾಲಗಾರರ ಉಪಟಳದಿಂದ ಮನನೊಂದು ಮೋಹನ್‌ಗೌಡ ಈ ರೀತಿ ಮಾಡಿದ್ದಾನೆ ಎಂದು ಹೇಳಲಾಗಿದೆ ಬೆಂಗಳೂರು ಗ್ರಾಮಾಂತರ ಪೊಲೀಸ್ ವರಿಷ್ಠಾಧಿಕಾರಿ ಚಂದ್ರಕಾಂತ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಡ್ರಗ್ಸ್ ಮಾರಾಟ ಮಾಡುವವರ ವಿರುದ್ಧ ಕಠಿಣ ಕ್ರಮ: ಸಿದ್ದರಾಮಯ್ಯ

ಮಾದಕವಸ್ತು ಮುಕ್ತ ರಾಜ್ಯ

• ಮೈಸೂರು: ಕರ್ನಾಟಕವನ್ನು ಮಾದಕವಸ್ತು ಮುಕ್ತ ರಾಜ್ಯವನ್ನಾಗಿ ಮಾಡುವುದು ನಮ್ಮ ರಾಜ್ಯ ಸರ್ಕಾರದ ಸಂಕಲ್ಪವಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಭಾನುವಾರ ಮೈಸೂರಿನ ಕರ್ನಾಟಕ ಪೊಲೀಸ್ ಅಕಾಡೆಮಿಯಲ್ಲಿ ನಡೆದ ಮೈಸೂರು ಘಟಕದ 46ನೇ ತಂಡದ ಸಿವಿಲ್ ಪೊಲೀಸ್ ಉಪನಿರೀಕ್ಷಕ ಪ್ರಶಿಕ್ಷಣಾರ್ಥಿಗಳ ನಿರ್ಗಮನ ಪಥ ಸಂಚಲನದಲ್ಲಿ ಪಾಲ್ಗೊಂಡು, ತರಬೇತಿ ಪೂರ್ಣಗೊಳಿಸಿದ ಎಲ್ಲ ಪೊಲೀಸ್ ಸಬ್ ಇನ್ಸ್‌ಪೆಕ್ಟರ್‌ಗಳಿಗೆ ಶುಭ ಹಾರೈಸಿ ಮಾತನಾಡಿದ ಅವರು, ಮಾದಕವಸ್ತು ಮುಕ್ತ ಸಮಾಜ ನಿರ್ಮಾಣ ಮಾಡುವುದಾಗಿ ಸರ್ಕಾರ ಘೋಷಣೆ ಮಾಡಿದೆ. ಈ ನಿಟ್ಟಿನಲ್ಲಿ ಪೊಲೀಸರು ತಮ್ಮ ಠಾಣಾ ವ್ಯಾಪ್ತಿಯಲ್ಲಿ ಮಾದಕವಸ್ತು ತಯಾರಕರು, ಮಾರಾಟ ಮಾಡುವವರ ಮೇಲೆ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿದರು.

ಪ್ರಸ್ತುತ ಸಮಾಜದಲ್ಲಿ ಅನೇಕ ಸಮಸ್ಯೆಗಳು ತಲೆದೋರುತ್ತಿವೆ. ಅದರಲ್ಲೂ ಇಂದು ಯುವಕ ಮತ್ತು ಯುವತಿಯರು ಹೆಚ್ಚಿನ ಪ್ರಮಾಣದಲ್ಲಿ ಮಾದಕವಸ್ತುಗಳಿಗೆ ದಾಸರಾಗಿರುವುದನ್ನು ಕಾಣಬಹುದಾಗಿದೆ. ಮಾದಕವಸ್ತು ಮುಕ್ತ ಸಮಾಜವನ್ನು ನಿರ್ಮಾಣ ಮಾಡುವುದು ನಮ್ಮೆಲ್ಲರ ಜವಾಬ್ದಾರಿ. ಸಮಾಜದಲ್ಲಿ ಕಾನೂನು ವ್ಯವಸ್ಥೆಗಳನ್ನು ಕಾಪಾಡಬೇಕಾದ್ದು ಪೊಲೀಸ್ ಇಲಾಖೆಯ ಕರ್ತವ್ಯವಾಗಿದೆ ಎಂದರು.

ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಸಂವಿಧಾನ ರಚನಾ ಸಭೆಯಲ್ಲಿ ಈ ದೇಶಕ್ಕೆ ಸ್ವಾತಂತ್ರ್ಯ ಬಂದದ್ದು ಸಾರ್ಥಕವಾಗಬೇಕಾದರೆ ಪ್ರತಿಯೊಬ್ಬರಿಗೂ ಆರ್ಥಿಕ, ಸಾಮಾಜಿಕ ಸ್ವಾತಂತ್ರ್ಯವಿರಬೇಕು. ಹಾಗೂ ನಿರ್ಭಯವಾಗಿ ಬದುಕುವಂತಹ ವಾತಾವರಣವಿರಬೇಕು ಸಮಾಜದಲ್ಲಿ ಸಮಾನ ನ್ಯಾಯ ವಿತರಣೆ ಬಹಳ ಮುಖ್ಯ ಎಂದು ತಿಳಿಸಿದರು.

ತರಬೇತಿ ಸಮಯದಲ್ಲಿ ತಮಗೆ ಹೇಳಿ ಕೊಟ್ಟಿರುವ ವಿಷಯಗಳನ್ನು ಜೀವನದಲ್ಲಿ ಪಾಲನೆ ಮಾಡಬೇಕು. ಇತ್ತೀಚಿನ ದಿನಗಳಲ್ಲಿ ಸೈಬರ್ ಅಪರಾಧಗಳ ಸಂಖ್ಯೆ ಹೆಚ್ಚುತ್ತಿದೆ ಇಂತಹ ಅಪರಾಧಗಳನ್ನು ತಡೆಗಟ್ಟುವ ಪ್ರಯತ್ನವನ್ನು ಮಾಡಬೇಕು ಎಂದು ಹೇಳಿದರು.

ಪೊಲೀಸ್ ಅಧಿಕಾರಿಗಳಿಗೆ ಮೊದಲನೆಯದಾಗಿ ಧೈರ್ಯ ಇರಬೇಕು. ಧೈರ್ಯವನ್ನು ಪ್ರದರ್ಶಿಸುವಂತಹ ಕೆಲಸವನ್ನು ತಾವೆಲ್ಲರೂ ಮಾಡುತ್ತೀರಿ ಎಂಬ ನಂಬಿಕೆ ನಮಗಿದೆ. ಇಂದು 327 ಪೊಲೀಸ್ ಸೇವೆಗೆ ಸೇರ್ಪಡೆಯಾಗುತ್ತಿದ್ದೀರಿ. ನಾವು ಈ ವರ್ಷದ ಬಜೆಟ್‌ನಲ್ಲಿ ಹೇಳಿರುವ ಹಾಗೆ ಖಾಲಿ ಇರುವ 8000 ಹುದ್ದೆಗಳನ್ನು ಭರ್ತಿ ಮಾಡುತ್ತೇವೆ. ಸರ್ಕಾರ ಸದಾ ಕಾಲ ನಿಮ್ಮ ಜತೆಗೆ ಇರುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಗೃಹ ಸಚಿವ ಡಾ.ಜಿ.ಪರಮೇಶ್ವರ್, ಸಮಾಜ ಕಲ್ಯಾಣ ಇಲಾಖೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಚ್.ಸಿ ಮಹದೇವಪ್ಪ, ಪಶು ಸಂಗೋಪನೆ ಸಚಿವ ವೆಂಕಟೇಶ್, ಶಾಸಕ ತನ್ವೀರ್ ಸೇಠ್, ಟಿ.ಎಸ್. ಶ್ರೀವತ್ಸ, ಪೊಲೀಸ್ ಮಹಾ ನಿರ್ದೇಶಕ ಡಾ.ಎಂ. ಎ. ಸಲೀಂ, ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕ ದೇವ ಜ್ಯೋತಿ ರೇ, ಕರ್ನಾಟಕ ಪೊಲೀಸ್ ಅಕಾಡೆಮಿಯ ನಿರ್ದೇಶಕ ವಿಷ್ಣುವರ್ಧನ್, ಉಪನಿರ್ದೇಶಕ ಚನ್ನಬಸಪ್ಪ ಹಾಗೂ ಹಿರಿಯ ಪೊಲೀಸ ಅಧಿಕಾರಿಗಳು ಇದ್ದರು.



ಪ್ರಾಮಾಣಿಕವಾಗಿ ಕೆಲಸ ಮಾಡಿ

ಪೊಲೀಸ್ ಇಲಾಖೆ ಎಷ್ಟೇ ಕಷ್ಟವಾದರೂ ನ್ಯಾಯ ವಿತರಣೆಯಲ್ಲಿ ನ್ಯಾಯವನ್ನು ಎತ್ತಿ ಹಿಡಿಯುವಂತಹ ಕೆಲಸವನ್ನು ಮಾಡಬೇಕು. ಯಾವುದೇ ಕಾರಣಕ್ಕೂ ನ್ಯಾಯ ವಿತರಣೆ ಮಾಡುವ ಕೆಲಸದಲ್ಲಿ ಯಾರ ಜತೆಯಲ್ಲೂ ರಾಜಿ ಆಗಬಾರದು ಹಾಗೂ ಆಸೆ ಆಮಿಷಗಳಿಗೆ ಬಲಿಯಾಗದೆ ನಿಷ್ಠೆಯಿಂದ ಪ್ರಾಮಾಣಿಕವಾಗಿ ಕೆಲಸ ಮಾಡಬೇಕು ಎಂದು ಕಿವಿ ಮಾತು ಹೇಳಿದರು. ಇಂದು ನಿರ್ಗಮನ ಪಥ ಸಂಚಲನ ಕರ್ನಾಟಕ ಪೊಲೀಸ್ ಅಕಾಡೆಮಿ ಘಟಕದ 46ನೇ ತಂಡ ತರಬೇತಿಯನ್ನು ಪಡೆದು ಸೇವೆಗೆ ಸೇರುತ್ತಿರುವ ಸಂದರ್ಭ ಇದಾಗಿದೆ. ಪೊಲೀಸ್ ಎಂದರೆ ಶಿಸ್ತು, ಸಂಯಮ, ವಿನಯ, ಪ್ರಾಮಾಣಿಕತೆ ಹಾಗೂ ಮಾನವೀಯತೆ ಇರುವ ವ್ಯಕ್ತಿಗಳಾಗಿರಬೇಕು ಎಂದು ಹೇಳಿದರು.

ವಿದ್ಯಾರ್ಥಿಗಳ ಭವಿಷ್ಯದ ಜತೆ ಚೆಲ್ಲಾಟ ಸಲ್ಲ: ಕಾಗೇರಿ

• ಶಿರಸಿ: ಕರ್ನಾಟಕದ ಶಾಲಾ ಶಿಕ್ಷಣ ಇಲಾಖೆಯು ಎಸ್‌ಎಸ್‌ಎಲ್‌ಸಿ ಪರೀಕ್ಷಾ ಪದ್ಧತಿಯಲ್ಲಿ ಕೈಗೊಂಡಿರುವ ಬದಲಾವಣೆಗಳು ಅತ್ಯಂತ ದುರದೃಷ್ಟಕರ ಮತ್ತು ವಿದ್ಯಾರ್ಥಿ ವಿರೋಧಿಯಾಗಿವೆ. ದಶಕಗಳಿಂದಲೂ ರಾಜ್ಯದಲ್ಲಿ ಯಶಸ್ವಿಯಾಗಿ ಜಾರಿಯಲ್ಲಿದ್ದ ತ್ರಿಭಾಷಾ ಸೂತ್ರಕ್ಕೆ ಕೊಡಲಿ ಪೆಟ್ಟು ನೀಡಿರುವ ಶಿಕ್ಷಣ ಸಚಿವ ಮಧು ಬಂಗಾರಪ್ಪನವರ ಅಪ್ರಬುದ್ಧ ನಿರ್ಧಾರವು ರಾಜ್ಯದ ಶೈಕ್ಷಣಿಕ ಘನತೆಗೆ ದೊಡ್ಡ ಧಕ್ಕೆ ತಂದಿದೆ ಎಂದು ಮಾಜಿ ಶಿಕ್ಷಣ ಸಚಿವರೂ ಆಗಿರುವ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ.



ಈ ಕುರಿತು ಹೇಳಿಕೆ ನೀಡಿರುವ ಅವರು, ತೃತೀಯ ಭಾಷೆಯ ಅಂಕಗಳನ್ನು ಸಂಪೂರ್ಣವಾಗಿ ಕೈಬಿಟ್ಟು ಕೇವಲ ಗ್ರೇಡ್ ಪದ್ಧತಿಗೆ ಸೀಮಿತಗೊಳಿಸಿರುವುದು ಮತ್ತು ಒಟ್ಟು ಅಂಕಗಳನ್ನು 625ರಿಂದ 525ಕ್ಕೆ ಇಳಿಸಿರುವುದು ಶಿಕ್ಷಣ ಕ್ಷೇತ್ರದಲ್ಲಿ ಅರಾಜಕತೆಯನ್ನು ಸೃಷ್ಟಿಸುತ್ತಿದೆ. ನಮ್ಮ ರಾಜ್ಯದ ಮಕ್ಕಳು ಕನ್ನಡವನ್ನು ಅಸ್ಮಿತೆಯಾಗಿ, ಇಂಗ್ಲಿಷ್ ಅನ್ನು ಸಂವಹನ ಭಾಷೆಯಾಗಿ ಹಾಗೂ ಹಿಂದಿ ಅಥವಾ ಸಂಸ್ಕೃತವನ್ನು ರಾಷ್ಟ್ರೀಯ ಮತ್ತು ಸಾಂಸ್ಕೃತಿಕ ದೃಷ್ಟಿಕೋನದಿಂದ ಕಲಿಯುತ್ತಿದ್ದರು. ಆದರೆ, ಈಗ ತೃತೀಯ ಭಾಷೆಯು ಆಟಕ್ಕುಂಟು ಲೆಕ್ಕಕ್ಕಿಲ್ಲ ಎಂಬ ಸ್ಥಿತಿಗೆ ತಲುಪಿದ್ದು, ಇದು ಮಕ್ಕಳ ಭಾಷಾ ಸಾಮರ್ಥ್ಯವನ್ನು ತೀವ್ರವಾಗಿ ಕುಂಠಿತಗೊಳಿಸಲಿದೆ ಎಂದಿದ್ದಾರೆ.

ಶಿಕ್ಷಣ ಇಲಾಖೆಯು ಕೇವಲ ಅಂಕಗಳ ಕಡಿತದ ಮೇಲೆ ಗಮನ ಹರಿಸುತ್ತಿದೆಯೇ ಹೊರತು, ಗುಣಮಟ್ಟದ ಕಲಿಕೆಯ ಮೇಲಲ್ಲ ಎಂಬುದು ಈ ನಿರ್ಧಾರದಿಂದ ಸ್ಪಷ್ಟವಾಗುತ್ತದೆ. ಸಾರ್ವಜನಿಕವಾಗಿ ಅಥವಾ ಶಿಕ್ಷಣ ತಜ್ಞರ ಜತೆ ಯಾವುದೇ ಪೂರ್ವಭಾವಿ ಚರ್ಚೆ ನಡೆಸದೆ, ಏಕಾಏಕಿ ಇಂತಹ ಮಹತ್ವದ ಬದಲಾವಣೆಗಳನ್ನು ಜಾರಿಗೊಳಿಸುತ್ತಿರುವುದು ಸಚಿವರ ಸರ್ವಾಧಿಕಾರಿ ಧೋರಣೆಯನ್ನು ಎತ್ತಿ ತೋರಿಸುತ್ತದೆ ಎಂದರು.

ರಾಜಕೀಯಪ್ರಯೋಗ ಶಾಲೆಯಲ್ಲ

ಶಿಕ್ಷಣ ಕ್ಷೇತ್ರವು ರಾಜಕೀಯ ಪ್ರಯೋಗಶಾಲೆಯಲ್ಲ. ಒಬ್ಬ ಮಾಜಿ ಶಿಕ್ಷಣ ಸಚಿವನಾಗಿ ನಾನು ಈ ಕ್ರಮವನ್ನು ತೀವ್ರವಾಗಿ ಖಂಡಿಸುತ್ತೇನೆ. ಸಚಿವರ ಈ ಅಪ್ರಬುದ್ಧ ನಿರ್ಧಾರವು ನಮ್ಮ ವಿದ್ಯಾರ್ಥಿಗಳು ರಾಷ್ಟ್ರೀಯ ಮಟ್ಟದ ಸ್ಪರ್ಧೆಗಳಲ್ಲಿ ಹಿನ್ನಡೆ ಅನುಭವಿಸುವಂತೆ ಮಾಡಲಿದೆ. ರಾಜ್ಯದ ಮುಖ್ಯಮಂತ್ರಿಗಳು ಇಂತಹ ಗಂಭೀರ ಶೈಕ್ಷಣಿಕ ವಿಚಾರಗಳ ಬಗ್ಗೆ ಗಮನಹರಿಸುವ ಬದಲು, ಕೇವಲ ಅಧಿಕಾರ ಹಸ್ತಾಂತರದ ಚಿಂತೆಯಲ್ಲೇ ಮುಳುಗಿರುವುದು ರಾಜ್ಯದ ದೌರ್ಭಾಗ್ಯವಾಗಿದೆ. ಸರ್ಕಾರವು ಕೂಡಲೇ ಈ ಆದೇಶವನ್ನು ರದ್ದುಗೊಳಿಸಬೇಕು ಹಾಗೂ ಭಾಷಾ ತಜ್ಞರು ಮತ್ತು ಸಾಹಿತಿಗಳ ಸಮ್ಮುಖದಲ್ಲಿ ಪಾರದರ್ಶಕ ಚರ್ಚೆ ನಡೆಸಿ ಮುಂದಿನ ತೀರ್ಮಾನ ಕೈಗೊಳ್ಳಬೇಕೆಂದು ಎಂದರು.

ಬೆಳಗಾವಿ ರೈತನ ಸಾಧನೆ ಮೆಚ್ಚಿದ ಮೋದಿ

• ಬೆಳಗಾವಿ: ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಮನ್ ಕಿ ಬಾತ್ ಕಾರ್ಯಕ್ರಮದಲ್ಲಿ ಬೆಳಗಾವಿ ತಾಲೂಕಿನ ಬೋಡಕ್ಯಾನಟ್ಟಿ ಗ್ರಾಮದ ರೈತ ಶಿವಲಿಂಗಪ್ಪ ಸಾತಪ್ಪ ಹುದ್ದಾರ ಮೀನು ಸಾಕಾಣಿಕೆಯಲ್ಲಿ ಯಶಸ್ಸು ಕಂಡಿದ್ದಾರೆ. ಇವರ ಸಾಧನೆಯ ಬಗ್ಗೆ ಪ್ರಧಾನಿ ಮೋದಿ ಅವರ ಮೆಚ್ಚುಗೆಯಿಂದ ಹುದ್ದಾರ ಕುಂಟುಂಬದಲ್ಲಿ ಸಂತಸ ಇಮ್ಮಡಿಗೊಂಡಿದೆ.

ಬೆಳಗಾವಿ ತಾಲೂಕಿನ ಬೋಡಕ್ಯಾನಟ್ಟಿ ಪುಟ್ಟ ಗ್ರಾಮದಲ್ಲಿ ಶಿವಲಿಂಗಪ್ಪ ತಮ್ಮ ಪುತ್ರ ರಾಜು ಅವರ ನೆರವಿನಿಂದ ತಮ್ಮ ಒಂದು ಎಕರೆಯಲ್ಲಿ ಕೃಷಿ ಹೊಂಡದಲ್ಲಿ ಬಯೋಫ್ಲಾಕ್ ತಂತ್ರಜ್ಞಾನ ಬಳಸಿ ಕುಚ್ಚು (ಮರಲ್) ಮೀನು ಸಾಕಾಣಿಕೆ ಮಾಡಿ, ಲಕ್ಷ ಲಕ್ಷ ಆದಾಯ ಗಳಿಸುತ್ತಿದ್ದಾರೆ.

ರೈತನ ಸಾಧನೆಯ ಬಗ್ಗೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ತಮ್ಮ ಮನ್ ಕಿ ಬಾತ್‌ನಲ್ಲಿ ಶಿವಲಿಂಗಪ್ಪ ಹುದ್ದಾರ ಅವರ ಯಶಸ್ವಿ ಮೀನುಗಾರಿಕೆಯ ಸಾಧನೆಯ ಬಗ್ಗೆ ದೇಶಕ್ಕೆ ತಿಳಿಸಿದ್ದಾರೆ. ದೇಶದಲ್ಲಿರುವ ಎಲ್ಲ ರೈತರು ಇದೇ ರೀತಿಯಲ್ಲಿ ವಿಭಿನ್ನ ರೀತಿಯಲ್ಲಿ ಕೃಷಿ ಪ್ರಾರಂಭ ಮಾಡುವಂತೆ ಸಲಹೆ ನೀಡಿದರು. ಹೀಗೆ ಮಾಡುವುದರಿಂದ ಆರ್ಥಿಕವಾಗಿ ಸದೃಢರಾಗಬಹುದು. ಅಲ್ಲದೇ, ದೇಶದ ಆರ್ಥಿಕ ಶಕ್ತಿಗೂ ದೊಡ್ಡ ಕೊಡುಗೆ ನೀಡಬಹುದಾಗಿದೆ ಎಂದು ಸಲಹೆ ನೀಡಿದರು.

ಶಿವಲಿಂಗಪ್ಪ ಸಾತಪ್ಪ ಹುದ್ದಾರ ಅವರು ಸಾಂಪ್ರದಾಯಿಕ ಕೃಷಿಯ ಬದಲಿಗೆ ಬೇರೆ ಮಾರ್ಗವನ್ನು ಆಯ್ದುಕೊಂಡಿದ್ದಾರೆ. ಅವರು ಮೀನು ಸಾಕಾಣಿಕೆಯಲ್ಲಿ ಯಶಸ್ಸು ಕಂಡಿದ್ದಾರೆ. ಇದಕ್ಕಾಗಿ ತರಬೇತಿಯನ್ನೂ ಪಡೆದಿದ್ದಾರೆ. ಇದರಿಂದ ಉತ್ತಮ ಆದಾಯ ಗಳಿಸುತ್ತಿದ್ದಾರೆ. ನಮ್ಮ ಆರ್ಥಿಕತೆಯನ್ನು ಬಲಿಷ್ಠಗೊಳಿಸಲು ಇವರೆಲ್ಲರ ಪ್ರಯತ್ನ ಪ್ರಶಂಸನೀಯ. ಸಮಾಜದಲ್ಲಿನ ಸಣ್ಣ ಸಣ್ಣ ಪ್ರಯತ್ನವೂ ಕೂಡ ದೊಡ್ಡ ಬದಲಾವಣೆ ತರುತ್ತದೆ ಎಂದು ಮೋದಿ ತಮ್ಮ ಅನಿಸಿಕೆಯನ್ನು ವ್ಯಕ್ತಪಡಿಸಿದ್ದಾರೆ.



ಪ್ರಧಾನಿಗಳು ನಮ್ಮ ಮೀನುಗಾರಿಕೆಯ ಬಗ್ಗೆ ಮನ್ ಕಿ ಬಾತ್‌ನಲ್ಲಿ ಮಾತನಾಡಿದ್ದಕ್ಕೆ ಬಹಳಷ್ಟು ಖುಷಿ ಆಗುತ್ತಿದೆ. ಇದನ್ನು ನಾವು ನಿರೀಕ್ಷೆ ಮಾಡಿರಲಿಲ್ಲ, ಆದರೆ, ನಮ್ಮ ಮೀನು ಸಾಕಾಣಿಕೆ ಸಾಧನೆ ಪ್ರಧಾನಿಗಳವರೆಗೂ ಮುಟ್ಟಿದೆ. ಇದು ನಮಗೆ ಇನ್ನಿಲ್ಲದ ಸಂತಸ ತಂದಿದೆ ಎಂದು ರೈತ ರಾಜು ತಿಳಿಸಿದರು.

ಉಪಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಸೋಲು

• ಕಲಬುರಗಿ: ರಾಜ್ಯದ ದಾವಣಗೆರೆ ಹಾಗೂ ಬಾಗಲಕೋಟೆ ಉಪಚುನಾವಣೆಯಲ್ಲಿ ಎರಡು ಕ್ಷೇತ್ರಗಳಲ್ಲಿ ಈ ಬಾರಿ ಬಿಜೆಪಿ ಗೆಲುವು ಸಾಧಿಸಲಿದ್ದು, ಕಾಂಗ್ರೆಸ್ ಪಕ್ಷಕ್ಕೆ ಸೋಲಿನ ಕಹಿ ಅನುಭವವಾಗಲಿದೆ ಎಂದು ವಿಧಾನ ಪರಿಷತ್ತಿನ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ತಿಳಿಸಿದರು.

ನಗರದ ಐವನ ಶಾಹಿ ಅತಿಥಿ ಗೃಹದಲ್ಲಿ ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಬಾಗಲಕೋಟೆಯಲ್ಲಿ ಈ ಹಿಂದೆ ಅಲ್ಪ ಮತಗಳ ಅಂತರದಲ್ಲಿ ಸೋತಿದ್ದೇವೆ. ಈ ಬಾರಿ ಅದನ್ನು ಸರಿಪಡಿಸಲಿದ್ದೇವೆ. ಒಳಮೀಸಲಾತಿ ವಿಚಾರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗೊಂದಲ ಸೃಷ್ಟಿಸಿದ್ದು, ಇದರಿಂದ ದಲಿತರು ಹಾಗೂ ಅಲ್ಪಸಂಖ್ಯಾತರು ಕಾಂಗ್ರೆಸ್ ವಿರುದ್ಧ ತಿರುಗಿ ಬಿದ್ದಿದ್ದಾರೆ. ದಾವಣಗೆರೆಯಲ್ಲಿ 70-80 ಸಾವಿರ ಮುಸ್ಲಿಂ ಸಮುದಾಯದವರಿದ್ದಾರೆ. ಈ ಬಾರಿ ಟಿಕೆಟ್ ಕೇಳಿದ್ದರೂ ನೀಡಿಲ್ಲ, ಬದಲಾಗಿ ಶ್ರೀಮಂತರಿಗೆ ಟಿಕೆಟ್ ನೀಡಿದ್ದಾರೆ. ಇದು ಆ ಸಮುದಾಯಕ್ಕೆ ಮಾಡಿದ ಅನ್ಯಾಯವಾಗಿದ್ದು, ಈ ಬಾರಿ ಅವರು ಬಿಜೆಪಿಗೆ ಬೆಂಬಲ ನೀಡಲಿದ್ದಾರೆ ಎಂದು ಹೇಳಿದರು.

ಮೈಸೂರಿನಲ್ಲಿ ಪತ್ತೆಯಾದ 12 ಕೋಟಿ ಮೌಲ್ಯದ ಮಾದಕ ವಸ್ತು ಕುರಿತು ಮಾತನಾಡಿ, ಅಧಿಕಾರದ ಮದ ಏರಿದೆ. ಜವಾಬ್ದಾರಿಯುತ ಆಡಳಿತ ಕಾಣುತ್ತಿಲ್ಲ, ಗೃಹ ಸಚಿವ ಪರಮೇಶ್ವರ ಅವರಂತು ಏನೆ ಕೇಳಿದರೂ, ನಾನು ತಿಳಿದುಕೊಂಡು ಮಾತನಾಡುತ್ತೇನೆ ಅಂತ ಹೇಳುತ್ತಾರೆ. ಉಡಾಫೆ ಉತ್ತರ ನೀಡುವ ಮೂಲಕ ಅಧಿಕಾರದ ಮದ ಜಾಸ್ತಿಯಾಗಿದೆ. ಕಾಂಗ್ರೆಸ್ ಸರ್ಕಾರದ ಆಡಳಿತದಲ್ಲಿ ಎಲ್ಲರೂ ಮದದ ರಾಜಕಾರಣ ಮಾಡುತ್ತಿದೆ ಎಂದರು.

ಮೋದಿ 'ಧುರಂಧರ' ನಾಯಕ



ಮಧ್ಯಪ್ರಾಚ್ಯದಲ್ಲಿ ಯುದ್ಧ ನಡೆದಿದೆ. ಹಾರ್ಮೋಜ್ ಜಲಸಂಧಿಯಿಂದ ಯಾವುದೇ ಹಡಗುಗಳು ಬರುತ್ತಿಲ್ಲ. ನಿನ್ನೆಯಷ್ಟೆ ಪಾಕಿಸ್ತಾನದ ಹಡಗನ್ನು ಹೊಡೆದುರುಳಿಸಿದ್ದಾರೆ. ಆದರೆ, ಭಾರತದ ಹಡಗನ್ನು ಸುರಕ್ಷಿತವಾಗಿ ಬಿಟ್ಟಿದ್ದಾರೆ. ಅವರೊಂದಿಗಿನ ನಮ್ಮ ಸಂಬಂಧ, ಒಳ್ಳೆಯ ಬಾಂಧವ್ಯ. ಸಂಯಮ ನಾಯಕತ್ವದಿಂದ ದೇಶದ ಸಮಸ್ಯೆಗಳನ್ನು ತಮ್ಮ ಬುದ್ಧಿವಂತಿಕೆಯಿಂದ ಎದುರಿಸುತ್ತಿದ್ದರೇ, ಮೋದಿ ಸರೆಂಡರ್ ಎಂದು ಹೇಳುವುದು ಎಷ್ಟು ಸರಿ. ಸಂಯಮ ಶರಣಾಗತಿ ಅಲ್ಲ, ಹೀಗಾಗಿ ಮೋದಿ ಇಸ್ ನಾಟ್ ಎ ಸರೆಂಡರ್ ನಾಯಕ, ಮೋದಿ ಇಸ್ ಎ ಧುರಂಧರ ನಾಯಕ. ಈ ಮಾತನ್ನು ದೇಶದ ಜನರು ಅರ್ಥ ಮಾಡಿಕೊಂಡಿದ್ದು, ಕಾಂಗ್ರೆಸ್ ಅರ್ಥ ಮಾಡಿಕೊಳ್ಳಬೇಕು ಎಂದರು.

ಕಳೆದ ನಾಲ್ಕು ವರ್ಷಗಳಲ್ಲಿ ಎಸ್ಸಿಪಿ/ಟಿಎಸ್ಪಿಗೆ 1.58 ಲಕ್ಷ ಕೋಟಿ ಮೀಸಲಿಟ್ಟಿದ್ದೇವೆ ಎಂದು ಸರ್ಕಾರ ಹೇಳುತ್ತಿದೆ. ಆದರೆ, ಅದರಲ್ಲಿ 78 ಸಾವಿರ ಕೋಟಿ ಹಣ ಬೇರೆ ಇಲಾಖೆಗಳಿಗೆ ವರ್ಗಾಯಿಸಲಾಗಿದೆ. ಉಳಿದ ಹಣದಲ್ಲಿ 52 ಸಾವಿರ ಕೋಟಿ ಗ್ಯಾರಂಟಿ ಯೋಜನೆಗಳಿಗೆ ಬಳಸಲಾಗಿದೆ. ದಲಿತರ ಅಭಿವೃದ್ಧಿಗೆ ಮೀಸಲಿಟ್ಟ ಹಣವನ್ನು ಬೇರೆ ಕಡೆಗೆ ಬಳಸುವುದು ದಲಿತರಿಗೆ ಮಾಡಿದ ಅನ್ಯಾಯ.

■ **ಛಲವಾದಿ ನಾರಾಯಣಸ್ವಾಮಿ,** ವಿಪಕ್ಷ ನಾಯಕ

ನೀರು ಬಂದಿತು ಜೀವ ಅರಳಿತು...

▸ ಮೇಘಾ ಪ್ರಮೋದ್

ಸೇವಾಗಾಥೆ
ಕಥೆ-1

ಇದು ಡೋಂಗ್ರಿಪಾಡ ಎಂಬ ಹಳ್ಳಿಯಲ್ಲಿ ಏಳು ದಶಕಗಳ ಕಾಯುವಿಕೆ ಕೊನೆಗೊಂಡು ಹಳ್ಳಿಯ ಜನರು ಸಂತೋಷದಿಂದ ನಲಿದಾಡಿದ ಕಥೆ. ಮನೆ ಮನೆಗೂ ನೀರನ್ನು ತಲುಪಿಸುವ ಸೋಲಾರ್ ಪಂಪ್ ಅನ್ನು ತದೇಕ ಚಿತ್ತರಾಗಿ ದೃಷ್ಟಿಸಿ ನೋಡುತ್ತಿದ್ದ ಶಾಂತಾಬಾಯಿ ಖಂಜೋಡೆ ಅವರ ಕಣ್ಣೀರು ನಿಲ್ಲಲೇ ಇಲ್ಲ. ಮುಂಬೈಯಿಂದ ಕೇವಲ 80 ಕಿಮೀ ದೂರದಲ್ಲಿರುವ ಪಾಲ್ಘರ್ ಜಿಲ್ಲೆಯ ಈ ಹಳ್ಳಿಯ ಜನರು ಕಳೆದ 72 ವರ್ಷಗಳಿಂದ ಕುಡಿಯುವ ನೀರಿನ ನಿರೀಕ್ಷೆಯಲ್ಲಿದ್ದರು. ಗರ್ಭಿಣಿ ಅಥವಾ 12 ವರ್ಷದ ಬಾಲಕಿಯೇ ಇರಬಹುದು, ಬೆಟ್ಟದ ಮೇಲೆ ಇರುವ ಡೋಂಗ್ರಿಪಾಡ ಹಳ್ಳಿಯಿಂದ ಉಬ್ಬು ತಗ್ಗಾದ ರಸ್ತೆಯಲ್ಲಿ ಒಂದೂವರೆ ಕಿಮೀ ನಷ್ಟು ದೂರದಲ್ಲಿ ಕೆಳಗೆ ಇದ್ದ ಬಾವಿಯಿಂದ ನೀರು ತರುವುದು ಅನಿವಾರ್ಯವಾಗಿತ್ತು.

ಹಾಗೆಯೇ ಮಳೆಗಾಲದಲ್ಲಂತೂ ಓಡಾಡುವ ರಸ್ತೆಯೂ ಮುಚ್ಚಿಹೋಗು ತ್ತಿತ್ತು. ನೀರು ಇಲ್ಲದೇ, ವಿದ್ಯುತ್ ಇಲ್ಲದೇ, ಸರ್ಕಾರಿ ಶಾಲೆಯೂ ಇಲ್ಲದ 33 ಪರಿವಾರಗಳ ಈ ಸೇವಾಬಸ್ತಿಯಲ್ಲಿ ಕೇವಲ 7 ರೈತರು ತಮ್ಮ ಗದ್ದೆಗಳಲ್ಲಿ ಬೇಸಾಯ ಮಾಡಬಹುದಾಗಿತ್ತು. ಆದರೆ ಇಂದು ಈ ಕಥೆಯನ್ನು ಓದುತ್ತಿರುವ ಓದುಗರಿಗೆ ಆಶ್ಚರ್ಯವಾಗಬಹುದು...! ಇಂದು ಈ ಹಳ್ಳಿಯಲ್ಲಿ ಆಸ್ಟ್ರೋಟರ್ಫ್ ಆಟದ ಮೈದಾನವಿದೆ, ಮಹಿಳೆಯರಿಗೆ ಹೊಲಿಗೆ ಕಲಿಯಲು ತರಬೇತಿ ಕೇಂದ್ರವಿದೆ.



ಪುಟ್ಟ ಮಕ್ಕಳಿಗೆ ಮಾಧವ ಬಾಲ ಸಂಸ್ಕಾರ ಕೇಂದ್ರವಿದೆ ಹಾಗೂ ಕಂಪ್ಯೂಟರ್ ತರಬೇತಿಯನ್ನೂ ನೀಡಲಾಗುತ್ತಿದೆ, ಅಧ್ಯಯನಕ್ಕಾಗಿ ಒಂದು ಚಿಕ್ಕ ಪುಸ್ತಕಾಲಯವೂ ಇದೆ. ಹಾಗೆಯೇ, ಎಲ್ಲಕ್ಕಿಂತ ಮುಖ್ಯವಾದ ಅಂಶವೆಂದರೆ ಅದು ನೀರು. ಈಗ ಪ್ರತೀ ಎಂಟು ಮನೆಗಳ ಮಧ್ಯದಲ್ಲಿ ಒಂದು ನಲ್ಲಿ ಇದೆ ಅಷ್ಟೇ ಅಲ್ಲ ಪ್ರತೀ ಮನೆಗೂ ವಿದ್ಯುತ್ ಪೂರೈಕೆ ಆಗುತ್ತಿದೆ. ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಂಸ್ಥಾಪಕರಾದ ಡಾ.ಕೇಶವ ಬಲಿರಾಮ್ ಹೆಡ್ಗೇವಾರ್ ಅವರ ಸ್ಮರಣಾರ್ಥವಾಗಿ ಭಯಂದರ್‌ನಲ್ಲಿ ನಡೆಯುತ್ತಿರುವ ಕೇಶವ ಸೃಷ್ಟಿ ಎಂಬ ಬಹುಮುಖಿ ಪ್ರಕಲ್ಪದ ಮೂಲಕ ನಡೆಯುತ್ತಿರುವ ಗ್ರಾಮ ವಿಕಾಸ ಯೋಜನೆಯಿಂದ ಇವೆಲ್ಲ ಸಾಧ್ಯವಾಗಿದೆ. ಈ ವಿಕಾಸ ಯಾತ್ರೆಯಲ್ಲಿ ಹೆಜ್ಜೆ ಹೆಜ್ಜೆಗೂ ಗ್ರಾಮವಾಸಿಗರ ಸಹಾಯ ದೊರಕಿತು.

ನೀರಿನ ಟ್ಯಾಂಕ್‌ನಿಂದ ಮನೆಗಳಿಗೆ ಪೈಪ್‌ಲೈನ್ ಎಳೆಯುವುದರಿಂದ ಹಿಡಿದು ಸಮಾಜ ಮಂದಿರದ ನಿರ್ಮಾಣದ ತನಕ ರಾತ್ರಿ-ಹಗಲು ಎನ್ನದೇ ಶ್ರಮಸೇವೆ ಮಾಡುವ ಮೂಲಕ ಕಾರ್ಯಗಳನ್ನು ಪೂರ್ಣಗೊಳಿಸಿದರು. ಇಷ್ಟೇ ಅಲ್ಲದೆ ಅಭಿವೃದ್ಧಿಯು ಗ್ರಾಮವನ್ನು ಪ್ರವೇಶಿಸಿದಂತೆಲ್ಲ ಗ್ರಾಮಸ್ಥರ ಸಹಕಾರವೂ ಕೂಡ ಹೆಚ್ಚುತ್ತಾ ಹೋಯಿತು ಎಂದು ಡೋಂಗ್ರಿಪಾಡ ಗ್ರಾಮದ ವಿಕಾಸ ಯಾತ್ರೆಯ ಶಿಲ್ಪಿಯಾದ ಮುಂಬೈ ಮಹಾನಗರದ ಹಿಂದಿನ ಕಾರ್ಯವಾಹ ವಿಮಲ್ ಕೇಡಿಯಾ ಅವರು ಹೇಳುತ್ತಾರೆ. ಹಳ್ಳಿಯ ಜನ ಒಂದು ಸಮಿತಿಯನ್ನು ರಚಿಸಿ ಒಂದು ನಿಶ್ಚಿತ ಮೊತ್ತವನ್ನು ಈ ಎಲ್ಲಾ ಕೆಲಸಗಳಿಗಾಗಿ ಶೇಖರಣೆ ಮಾಡಲು ನಿರ್ಧರಿಸಿದರು. ಒಂದೂವರೆ ಕಿಮೀ ಕೆಳಗೆ ಇದ್ದ ಬಾವಿಯಿಂದ ನೀರಿನ ಟ್ಯಾಂಕ್ ತನಕ ಪೈಪ್ ಲೈನ್ ಹಾಗೂ ಮನೆ ಮನೆಗೂ ನೀರನ್ನು ತಲುಪಿಸುವ ಹಾಗೂ ಸೋಲಾರ್ ಪ್ಯಾನೆಲ್‌ಗಳನ್ನು ಅಳವಡಿಸುವ ಕೆಲಸವನ್ನು ಪುಣೆಯ ಗ್ರಾಮ್ ಉರ್ಜಾ ಎಂಬ ಖಾಸಗಿ ಕಂಪೆನಿಯು ಮಾಡಿತು.

ಈ ಪ್ರಮುಖ ಹೆಜ್ಜೆಯ ನಂತರ ಗ್ರಾಮವಾಸಿಗಳು ಕೇಶವ ಸೃಷ್ಟಿಯಿಂದ ಏನನ್ನೂ ತೆಗೆದುಕೊಳ್ಳಲಿಲ್ಲ, ನದಿಯಿಂದ ಹೊಲಗಳಿಗೆ ನೀರನ್ನು ಹಾಯಿಸುವ ವ್ಯವಸ್ಥೆ ಹಾಗು ಮುಂದಿನ ಎಲ್ಲಾ ನಿರ್ವಹಣೆಯ ವೆಚ್ಚವನ್ನು ಹಳ್ಳಿಗರೇ ಭರಿಸಲು ನಿರ್ಧರಿಸಿದರು. ಪ್ರಕೃತಿಯು ಡೋಂಗ್ರಿಪಾಡ ಗ್ರಾಮಕ್ಕೆ ಅಗಾಧವಾದ ಸೌಂದರ್ಯವನ್ನು ನೀಡಿತ್ತು.

ಪ್ರತಿಷ್ಠಿತ ಲೇಖಕರಾದ ರತನ್ ಶಾರದಾರವರು ಡೋಂಗ್ರಿಪಾಡದ ಈ ವಿಕಾಸಯಾತ್ರೆಗೆ ಅಕ್ಷರ ರೂಪ ನೀಡಲು ಅಲ್ಲಿಗೆ ಬಂದಾಗ, ಅವರ ಪತ್ನಿ ಶ್ಯಾಮಾಜಿ ಕುತೂಹಲದಿಂದ ಅಲ್ಲಿನ ಮಹಿಳೆಯರಲ್ಲಿ, ನಿಮಗೆ ಮುಂದೆ ಇನ್ನೇನು ಬೇಕು? ಎಂದು ಕೇಳಿದಾಗ ಅಲ್ಲಿನ ವನವಾಸಿ ಪರಿವಾರಗಳು ನಮಗೆ ಏನು ಬೇಕಿತ್ತೋ ಅದೆಲ್ಲವೂ ಸಿಕ್ಕಿದೆ, ಇನ್ನು ನಮ್ಮ ಮುಂದಿನ ದಾರಿಯನ್ನು ನಾವೇ ನಿರ್ಧರಿಸುತ್ತೇವೆ ಎಂದು ಹೇಳಿದ ಈ ಒಂದು ಘಟನೆ ಡೋಂಗ್ರಿಪಾಡ ಗ್ರಾಮದ ಪರಿವರ್ತನೆಯನ್ನು ನಮಗೆ ಅರ್ಥ ಮಾಡಿಸುತ್ತದೆ.

ಶ್ರೀರಾಮನವಮಿ ಪ್ರಸಾದ ಸೇವಿಸಿ 200 ಮಂದಿ ಅಸ್ವಸ್ಥ

• ದೇವನಹಳ್ಳಿ: ಶ್ರೀರಾಮನವಮಿ ಅನ್ನ ಪ್ರಸಾದ ಸ್ವೀಕರಿಸಿದ 200ಕ್ಕೂ ಹೆಚ್ಚು ಜನರು ಅಸ್ವಸ್ಥಗೊಂಡು ಆಸ್ಪತ್ರೆಗೆ ದಾಖಲಾದ ಘಟನೆ ತಾಲೂಕಿನ ಕುಂದಾಣ ಹೋಬಳಿ, ಜಾಲಿಗೆ ಗ್ರಾಪಂ ವ್ಯಾಪ್ತಿಯ ಬೆಟ್ಟೇನಹಳ್ಳಿ ಗ್ರಾಮದಲ್ಲಿ ನಡೆದಿದೆ.

ಶ್ರೀರಾಮನವಮಿ ಹಿನ್ನೆಲೆಯಲ್ಲಿ ಪ್ರತಿವರ್ಷದಂತೆ ಆಚರಣೆ ಮಾಡಲಾಯಿತು. ಈ ಸಂದರ್ಭದಲ್ಲಿ ಭಕ್ತರಿಗೆ ಅನ್ನ ಪ್ರಸಾದ ವಿತರಣೆ ಮಾಡಲಾಯಿತು. ಗ್ರಾಮದ ಜನರು ಪ್ರಸಾದ ಸ್ವೀಕರಿಸಿದ ಕೆಲವು ಗಂಟೆಯಲ್ಲೇ ವಾಂತಿಭೇದಿ ಕಾಣಿಸಿಕೊಂಡು ತೀವ್ರವಾಗಿ ಅಸ್ವಸ್ಥಗೊಂಡರು. ಗ್ರಾಮದಿಂದ ಅಂಬುಲೆನ್ಸ್ ಮೂಲಕ ತೀವ್ರವಾಗಿ ಅಸ್ವಸ್ಥಗೊಂಡವರನ್ನು ತಾಲೂಕು ಆಸ್ಪತ್ರೆಗೆ ದಾಖಲಿಸಲಾಯಿತು.



ಸುದ್ದಿ ತಿಳಿದ ಕೂಡಲೇ ಸ್ಥಳಕ್ಕೆ ಆಗಮಿಸಿದ ಜಿಲ್ಲಾ ಆರೋಗ್ಯಾಧಿಕಾರಿ ಲಕ್ಷ್ಮೀಪತಿರೆಡ್ಡಿ ಅವರು ಗ್ರಾಮದಲ್ಲಿ ನಡೆದ ಶ್ರೀರಾಮನವಮಿ ಸಂದರ್ಭದಲ್ಲಿ ಆಹಾರ ತಯಾರಿಸಲಾಗಿದೆ. ಈ ಸಂದರ್ಭದಲ್ಲಿ ಪಾತ್ರೆಗಳಲ್ಲಿ ಉಂಟಾಗಿರುವ ವ್ಯತ್ಯಯದಿಂದಾಗಿ ಆಹಾರ ವಿಷವಾಗಿ ಪರಿಣಮಿಸಿದೆ ಎಂದು ತಿಳಿಸಿದ್ದಾರೆ. ಗ್ರಾಮದ ಅಸ್ವಸ್ಥಗೊಂಡವರನ್ನು ಖಾಸಗಿ ಮತ್ತು ಸರಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಯಾವುದೇ ಆತಂಕವಿಲ್ಲ, ಎಲ್ಲರೂ ಚಿಕಿತ್ಸೆಗೆ ಸ್ಪಂದಿಸುತ್ತಿದ್ದಾರೆಂದು ತಿಳಿದು ಬಂದಿದೆ.

ಕಿರುಸುದ್ದಿ

ಅಗ್ನಿಬನ್ನಿರಾಯ ಸ್ವಾಮಿ ಜಯಂತ್ಯುತ್ಸವ

• **ಗುಬ್ಬಿ:** ತಿಗಳ ಸಮಾಜದ ಯುವಕರು ಸಂಘಟಿತರಾಗಿ ಸಮುದಾಯದ ಅಭಿವೃದ್ಧಿಗೆ ಶ್ರಮಿಸಬೇಕು ಎಂದು ಯಜಮಾನರಾದ ರಂಗಸ್ವಾಮಯ್ಯ ತಿಳಿಸಿದರು. ತಾಲೂಕಿನ ಕಸಬ ಹೋಬಳಿ ಜಿ.ಹೊಸಹಳ್ಳಿ ಗ್ರಾಮದಲ್ಲಿ ಶ್ರೀ ಅಗ್ನಿಬನ್ನಿರಾಯಸ್ವಾಮಿ ಯುವಕರ ಸಂಘ ಹಾಗೂ ತಿಗಳ ಸಮಾಜದ ವತಿಯಿಂದ ಏರ್ಪಡಿಸಿದ್ದ ಅಗ್ನಿಬನ್ನಿರಾಯ ಸ್ವಾಮಿ ಜಯಂತ್ಯೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿ, ತಿಗಳ ಸಮಾಜದ ಮೂಲಪುರುಷ ಶ್ರಮ ಸಂಸ್ಕೃತಿಯ ಸಂಕೇತವಾದ ಅಗ್ನಿ ಬನ್ನಿರಾಯ ಸ್ವಾಮೀ ಜಯಂತಿಯನ್ನು ಆಚರಿಸಲಾಗುತ್ತಿದೆ. ತಿಗಳರ ಸಮುದಾಯದ ಏಳಿಗೆಗೆ ಇತಿಹಾಸ ಮತ್ತು ಆಚಾರ ವಿಚಾರಗಳನ್ನು ಸ್ಮರಿಸುವ ಈ ದಿನವಾಗಿದ್ದು ಕೃಷಿ ಮಾಡಿ ಜೀವನ ನಡೆಸುವ ನಮ್ಮ ಸಮಾಜವು ಶೈಕ್ಷಣಿಕವಾಗಿ ಅಭಿವೃದ್ಧಿ ಹೊಂದಬೇಕು ಎಂದರು. ಮುಖಂಡ ಗಂಗಾಧರ್ ಮಾತನಾಡಿ, ಅಗ್ನಿವಂಶದ ಇತಿಹಾಸ ಪುರಾತನ ಸಂಪ್ರದಾಯಗಳನ್ನು ಇಂದಿಗೂ ನಮ್ಮ ಸಮುದಾಯ ಪಾಲಿಸಿಕೊಂಡು ಬರುತ್ತಿದೆ ಎಂದು ತಿಳಿಸಿದರು. ಯಜಮಾನ್ ವೀರಪ್ಪ, ಆಕ್ಕಾರ್ ನಾಗರಾಜಣ್ಣ, ಹನುಮಂತಣ್ಣ, ಸಣ್ಣಮರಿ, ಕೃಷ್ಣಮೂರ್ತಿ, ಮುದ್ರೆ ಹುಚ್ಚಪ್ಪ, ದೊಡ್ಡೀರಪ್ಪ, ವೀರಭದ್ರಯ್ಯ, ರಂಗಸ್ವಾಮಣ್ಣ, ಪೂಜಾರ್ ವೀರಪ್ಪ, ಇತರರು ಇದ್ದರು.

ರೋಡ್ ರೋಲರ್ ತಗುಲಿ ಬೈಕ್ ಸವಾರ ಸಾವು

• **ಚಿಕ್ಕನಾಯಕನಹಳ್ಳಿ:** ತಾಲೂಕಿನ ಬೈರಗಾನಹಳ್ಳಿ ಬಳಿ ರಸ್ತೆ ಕಾಮಗಾರಿ ನಡೆಯುತ್ತಿದ್ದ ಸಂದರ್ಭದಲ್ಲಿ ರೋಡ್ ರೋಲರ್ ತಗುಲಿ ಬೈಕ್ ಸವಾರ ಸ್ಥಳದಲ್ಲಿಯೇ ಸಾವನ್ನಪ್ಪಿದ ಘಟನೆ ಭಾನುವಾರ ಬೆಳಗ್ಗೆ 10.30ರಲ್ಲಿ ನಡೆದಿದೆ. ಅಪಘಾತದಲ್ಲಿ ಮೃತಪಟ್ಟ ವ್ಯಕ್ತಿ ತುರುವೇಕೆರೆ ತಾಲೂಕು ದಂಡಿನಶಿವರದ ಬಳಿಕಟ್ಟೆಪಾಳ್ಯ ನಾಗರಾಜ್ (50) ಎಂದು ತಿಳಿದುಬಂದಿದೆ. ತಾಲೂಕಿನ ಬೈರಗಾನಹಳ್ಳಿಗೆ ರಸ್ತೆಕಾಮಗಾರಿ ನಡೆಯುತ್ತಿದ್ದು, ಬೈಕ್ ಮೂಲಕ ಗೋಡೆಕೆರೆಯಿಂದ ಚಿಕ್ಕನಾಯಕನಹಳ್ಳಿಗೆ ತೆರಳಲು ಈ ಹಾದಿಯಲ್ಲಿ ತನ್ನ ಪತ್ನಿ ಭಾಗ್ಯಮ್ಮರೊಂದಿಗೆ ಬರುತ್ತಿದ್ದಾಗ ರಸ್ತೆ ಕಾಮಗಾರಿಯಿಂದಾಗಿ ರಸ್ತೆ ಹಾಳಾಗಿದ್ದ ಕಾರಣ ಬೈಕ್ ಆಯತಪ್ಪಿ ಬಿದ್ದಿದೆ. ಪತ್ನಿ ಒಂದು ಬದಿ ಬಿದ್ದರೆ ಸವಾರ ನಾಗರಾಜ್ ಮತ್ತೊಂದು ರಸ್ತೆಗೆ ಬಿದ್ದಿದ್ದಾನೆ, ತಕ್ಷಣ ಆತನ ತಲೆಯ ಮೇಲೆ ರೋಡ್ ರೋಲರ್ ಹರಿದ ಪರಿಣಾಮ ಸ್ಥಳದಲ್ಲಿಯೇ ಅಸುನೀಗಿದ್ದಾನೆ. ಈ ಅಪಘಾತಕ್ಕೆ ರಸ್ತೆನಿರ್ಮಾಣದಲ್ಲಿ ಸುರಕ್ಷತಾ ಕ್ರಮಗಳನ್ನು ಅನುಸರಿಸದೆ, ಸೂಚನಾ ಫಲಕ ಹಾಕದಿರುವುದು ಈ ಜೀವಹಾನಿಗೆ ಕಾರಣವಾಗಿದ್ದು, ನಿರ್ಲಕ್ಷ್ಯ ತೋರಿದ ಗುತ್ತಿಗೆದಾರ ಹಾಗೂ ಅಜಾಗರೂಕತೆ ಚಾಲನೆ ಮಾಡಿದ ರೋಡ್ ರೋಲರ್‌ನ ಚಾಲಕನ ಮೇಲೆ ಕ್ರಮ ಜರುಗಿಸುವಂತೆ ಸ್ಥಳೀಯರು ಒತ್ತಾಯಿಸಿದ್ದಾರೆ. ಸ್ಥಳಕ್ಕೆ ಶಾಸಕ ಸಿ.ಬಿ. ಸುರೇಶ್‌ಬಾಬು ಭೇಟಿ ನೀಡಿದರು. ಸಿಪಿಐ ಜಗನ್ನಾಥ್ ಪ್ರಕರಣ ದಾಖಲಿಸಿ ತನಿಖೆ ಕೈಗೊಂಡಿದ್ದಾರೆ.

ಕೆರೆಯಲ್ಲಿ ಈಜಲು ಹೋಗಿ ವಿದ್ಯಾರ್ಥಿ ಸಾವು

• **ಕುಣಿಗಲ್:** ಈಜಲು ಹೋಗಿ ಶಾಲಾ ವಿದ್ಯಾರ್ಥಿಯೊಬ್ಬ ಕೆರೆಯಲ್ಲಿ ಮುಳುಗಿ ಸಾವನ್ನಪ್ಪಿರುವ ಘಟನೆ ಯಲಿಯೂರು ಗ್ರಾಮದಲ್ಲಿ ನಡೆದಿದೆ. ತಾಲೂಕಿನ ಹುತ್ರಿ ದುರ್ಗ ಹೋಬಳಿಯ ಯಲಿಯೂರು ಗ್ರಾಮದ ಚಂದ್ರಶೇಖರ ಮಗನಾದ 16 ವರ್ಷದ ಕುಶಾಲ್ ಈಜಲು ಹೋಗಿ ಕೆರೆಯಲ್ಲಿ ಮುಳುಗಿ ಸಾವನ್ನಪ್ಪಿದ್ದಾನೆ. ಕುಶಾಲ್ ಯಲಿಯೂರು ಗ್ರಾಮದ ಆದಿಚುಂಚನಗಿರಿ ವಿದ್ಯಾಸಂಸ್ಥೆಯಲ್ಲಿ 10ನೇ ತರಗತಿ ವ್ಯಾಸಂಗ ಮಾಡುತ್ತಿದ್ದು ಪರೀಕ್ಷೆ ಬರೆಯುತ್ತಿದ್ದನು. ಭಾನುವಾರ ಶಾಲೆಗೆ ರಜೆ ಮತ್ತು ಬೇಸಿಗೆಯಾದ ಕಾರಣ ಊರಿನ ಪಕ್ಕದಲ್ಲೇ ಇರುವ ಯಲಿಯೂರು ಕೆರೆಗೆ ಒಬ್ಬನೇ ಈಜಾಡಲು ಹೋಗಿದ್ದಾನೆ. ಈಜು ಬಾರದೆ ನೀರಿನಲ್ಲಿ ಮುಳುಗಿ ಸಾವನ್ನಪ್ಪಿದ್ದಾನೆ. ವಿಷಯ ತಿಳಿದ ಕೂಡಲೇ ಅಗ್ನಿಶಾಮಕ ದಳ ಮತ್ತು ಪೊಲೀಸ್ ಇಲಾಖೆ ವಿದ್ಯಾರ್ಥಿಯ ಶವ ಹೊರ ತೆಗೆಯಲು ಗ್ರಾಮಸ್ಥರ ಸಹಕಾರದೊಂದಿಗೆ ಕಾರ್ಯಾಚರಣೆ ನಡೆಸುತ್ತಿದ್ದಾರೆ.



ಚಿಕ್ಕನಾಯಕನಹಳ್ಳಿ ತಾಲ್ಲೂಕು ದಸೂಡಿ ಗ್ರಾಮದ ಶ್ರೀ ಆಂಜನೇಯಸ್ವಾಮಿ ಬ್ರಹ್ಮರಥೋತ್ಸವವು ಸಹಸ್ರಾರು ಭಕ್ತರ ಸಮ್ಮುಖದಲ್ಲಿ ಅದ್ದೂರಿಯಿಂದ ನೆರವೇರಿತು.

ಶಿವಕುಮಾರ ಸ್ವಾಮೀಜಿ ಜನ್ಮದಿನ | ಕೋಲಾರದಿಂದ ಕಾಣಿಕೆ

ಅನ್ನದಾಸೋಹಕ್ಕೆ ದೇಣಿಗೆ



• **ಕೋಲಾರ:** ತ್ರಿವಿಧ ದಾಸೋಹಿ ತುಮಕೂರಿನ ಸಿದ್ದಗಂಗಾ ಮಠದ ಶಿವಕುಮಾರ ಸ್ವಾಮೀಜಿಯವರ 119ನೇ ಜನ್ಮದಿನಾಚರಣೆ ಹಿನ್ನೆಲೆಯಲ್ಲಿ ಕೋಲಾರ ನಗರದ ಡೂಮ್ ಲೈಟ್ ವೃತ್ತದಿಂದ ಅಕ್ಕಿ, ಬೆಲ್ಲ, ಬೇಳೆ, ಎಣ್ಣೆ, ತರಕಾರಿ ಸೇರಿದಂತೆ ಎರಡು ಲಾರಿಗಳಲ್ಲಿ ವಿವಿಧ ದಿನಸಿ ವಸ್ತುಗಳನ್ನು ದೇಣಿಗೆಯಾಗಿ ಕಳುಹಿಸಿಕೊಡಲಾಯಿತು.

ಕಳೆದ 10 ವರ್ಷಗಳಿಂದಲೂ ನಿರಂತರವಾಗಿ ಕೋಲಾರ, ಕಳ್ಳೀಪುರ ಗ್ರಾಮ, ವೇಮಗಲ್, ನರಸಾಪುರ, ರಾಮಸಂದ್ರ ಗ್ರಾಮ ಸೇರಿದಂತೆ ಸುತ್ತಮುತ್ತಲಿನ ಹಲವು ಗ್ರಾಮಗಳಿಂದ ದಿನಸಿ ವಸ್ತುಗಳು ಮತ್ತು ತರಕಾರಿಗಳನ್ನು ಸಂಗ್ರಹಿಸಿ ಕಳುಹಿಸಿಕೊಡಲಾಗುತ್ತಿದೆ.

ಏ.1 ರಂದು ಶ್ರೀಗಳ ಜನ್ಮದಿನದ ಅಂಗವಾಗಿ ಕೋಲಾರದಿಂದ ತುಮಕೂರಿನ ಮಠಕ್ಕೆ ತೆರಳಲು ವಾಹನ ವ್ಯವಸ್ಥೆಯನ್ನು ಮಾಜಿ ನಗರಸಭೆ ಸದಸ್ಯ ಪ್ರಸಾದ್ ಬಾಬು ಮತ್ತು ಕಳ್ಳೀಪುರ ನಾಗರಾಜ್ ಮಾಡಿದ್ದಾರೆ.

ಈ ವೇಳೆ ಡೂಮ್ ಲೈಟ್ ಸರ್ಕಲ್ ಸಿಆರ್ ಶೇಖರ್ ಮಾತನಾಡಿ, ತುಮಕೂರಿನ ಸಿದ್ದಗಂಗಾ ಮಠವು ಪ್ರಸಿದ್ಧ ತ್ರಿವಿಧ ದಾಸೋಹ ಕೇಂದ್ರವಾಗಿದ್ದು, ಇಲ್ಲಿ ನಿತ್ಯ ಸಾವಿರಾರು ವಿದ್ಯಾರ್ಥಿಗಳಿಗೆ ಮತ್ತು ಭಕ್ತರಿಗೆ ಅನ್ನದಾನ ನಡೆಯುತ್ತದೆ. ಹಾಗಾಗಿ ಸಿದ್ದಗಂಗಾ ಮಠದ ಶಿವಕುಮಾರ ಶ್ರೀಗಳ 119ನೇ ಹುಟ್ಟುಹಬ್ಬದ ಪ್ರಯುಕ್ತವಾಗಿ ಮಠದ ದಾಸೋಹಕ್ಕೆ ಅಕ್ಕಿ, ಬೇಳೆ, ಎಣ್ಣೆ, ತರಕಾರಿ ಸೇರಿದಂತೆ ಎರಡು ಲಾರಿಗಳಲ್ಲಿ ವಿವಿಧ ದಿನಸಿ ವಸ್ತುಗಳು ಮತ್ತು ತರಕಾರಿಗಳನ್ನು ದೇಣಿಗೆಯಾಗಿ ಕೊಡುತ್ತಿರುವುದಾಗಿ ಹೇಳಿದರು. ಮುಂದೆಯೂ ಶಿವಕುಮಾರ ಶ್ರೀಗಳ ಜನ್ಮದಿನದ ಪ್ರಯುಕ್ತ ನಿರಂತರವಾಗಿ ದಿನಸಿ ವಸ್ತುಗಳು ಮತ್ತು ತರಕಾರಿಗಳನ್ನು ನೀಡುವುದಾಗಿ ಭರವಸೆ ನೀಡಿದರು.

ಜಿಲ್ಲಾ ಸಹಕಾರಿ ಯೂನಿಯನ್ ನಿರ್ದೇಶಕ ಅಣ್ಣಿಹಳ್ಳಿ ನಾಗರಾಜ್ ಮಾತನಾಡಿ, ಕೋಟ್ಯಾಂತರ ಭಕ್ತಗಣ ಸಲುಹಿದ ಕಾಯಕ ಯೋಗಿ ನಡೆದಾಡುವ ಬಸವ ಸ್ವರೂಪಿ ಪದ್ಮಭೂಷಣ ಪರಮಪೂಜ್ಯ ಡಾ. ಶ್ರೀ ಶಿವಕುಮಾರ ಮಹಾ ಶಿವಯೋಗಿಗಳ ಜನ್ಮದಿನವನ್ನು ಜಾತ್ಯಾತೀತ,ಧರ್ಮಾತೀತವಾಗಿ ಎಲ್ಲರೂ ಆಚರಿಸುತ್ತಾರೆ ಎಂದರು.

ಅವರು ತೋರಿದ ಮಾರ್ಗದಲ್ಲಿ ಸಾಗುವ ಮೂಲಕ ನಮ್ಮ ಬದುಕನ್ನು ಸಾರ್ಥಕಗೊಳಿಸಬೇಕು, ಈ ನಿಟ್ಟಿನಲ್ಲಿ ಕೋಲಾರದ ಭಕ್ತರು ನಿರಂತರವಾಗಿ ದಾಸೋಹಕ್ಕೆ ನೆರವಾಗುತ್ತಿದ್ದಾರೆ ಎಂದರು.

ಕಳೆದ ನಾಲ್ಕು ದಿನಗಳಿಂದ ಭಕ್ತಾದಿಗಳಿಂದ ದವಸ ಸಂಗ್ರಹಿಸಿ ಕಳ್ಳಿಪುರ ಗ್ರಾಮದ ನಾಗರಾಜಪ್ಪ ಮತ್ತು ಮಕ್ಕಳು ಹಾಗೂ ಕೋಲಾರದ ಮಾಜಿ ನಗರಸಭಾ ಸದಸ್ಯರಾದ ಪ್ರಸಾದ್ ಬಾಬು ಮತ್ತು ಸಹೋದರರು ಉಚಿತವಾಗಿ ನೀಡಿದ ಲಾರಿಗಳಲ್ಲಿ ಕೋಲಾರ ಎ.ಪಿ.ಎಂ.ಸಿ .ತರಕಾರಿ ಮಂಡಿಗಳವರಿಂದ ಸಂಗ್ರಹಿಸಿದ ಆರುವರೆ ಟನ್ ತರಕಾರಿ, 230 ಮೂಟೆ ಬೆಲ್ಲ, 105 ಮೂಟೆ ಅಕ್ಕಿ, ಉಪ್ಪು 510 ಕೆಜಿ ಹೆಸರುಬೇಳೆ , ರವೆ, ಬೇಳೆ ಕಾಳುಗಳನ್ನು ಭಕ್ತರಿಂದ ಸಂಗ್ರಹಿಸಿ ಕಳುಹಿಸಿಕೊಡಲಾಯಿತು .

ಕಳ್ಳೀಪುರ ನಟರಾಜ್, ಅಮರನಾಥ್, ಪೊಲೀಸ್ ಬಸವರಾಜ್, ರೇಣುಕಯ್ಯ, ಡೂಮ್ ಲೈಟ್ ಸರ್ಕಲ್ ಸಿಆರ್ ಶೇಖರ್, ಅಣ್ಣಿಹಳ್ಳಿ ನಾಗರಾಜ್, ನಗರಸಭಾ ಸದಸ್ಯ ರಾಕೇಶ್, ವಕ್ಕಲೇರಿ ರಾಜಪ್ಪ, ವೆಂಕಟೇಶ್, ಶ್ರೀನಿವಾಸ್, ಶ್ರೀ ರಾಮ್ ಕಾಫಿ ವರ್ಕ್ಸ್ ಪವನ್, ಅನಿಲ್ ಸೇರಿದಂತೆ ಮಠದ ಎಲ್ಲಾ ಭಕ್ತಾದಿಗಳು ಮತ್ತು ದಾನಿಗಳು ಮಠಕ್ಕೆ ದಾನ ಮಾಡಿದ್ದಾರೆ.

ಗುರುಗಳಿಗೆ ವಿಶೇಷ ಸ್ಥಾನ

ಭಾರತದ ಸನಾತನ ಧರ್ಮದ ಇತಿಹಾಸದಲ್ಲಿ ಗುರುಗಳಿಗೆ ವಿಶೇಷವಾದ ಸ್ಥಾನಮಾನಗಳಿವೆ. ಪ್ರತಿ ಆದಿ ಹಾಗೂ ಅಂತ್ಯದಲ್ಲಿ ಗುರುವಿನ ಮಹತ್ವ ದೊಡ್ಡದಿದೆ. ಮನುಕುಲವನ್ನು ಶ್ರೀಗಳು ತ್ರಿವಿಧ ದಾಸೋಹದ ಮೂಲಕ ಸಮಾಜವನ್ನು ಬೆಳಗಿದಂತ ಮಹಾ ಜ್ಞಾನದೀಪವಾಗಿದ್ದಾರೆ.

ಸಂಪೂರ್ಣ ಸಹಕಾರ ನೀಡುವೆ: ಶಾಸಕ ಭರವಸೆ

• **ಮುಳಬಾಗಿಲು:** ಮುಳಬಾಗಿಲು ಯೋಜನಾ ಪ್ರಾಧಿಕಾರದ ಅಧ್ಯಕ್ಷರಾಗಿ ಆರ್ ಎಸ್ ಸುಹಾಸ್ ಶೆಟ್ಟಿ, ಮತ್ತು ಸದಸ್ಯರನ್ನಾಗಿ ಆರ್ ಶಂಕರಪ್ಪ, ಆರ್ ವಿ ಆಂಜನೇಯ ರೆಡ್ಡಿ, ಮೊಹಮ್ಮದ್ ಹಿದಾಯತ್ ಅಲಿರನ್ನುಸರ್ಕಾರ ನೇಮಿಸಿದ್ದು, ಅವರಿಗೆ ಪೂರ್ಣ ಸಹಕಾರ ನೀಡುವುದಾಗಿ ಶಾಸಕ ಸಮೃದ್ಧಿ ವಿ ಮಂಜುನಾಥ್ ತಿಳಿಸಿದರು.

ಅವರು ನಗರಸಭೆ ಕಚೇರಿಯಲ್ಲಿ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಮತ್ತು ಸದಸ್ಯರ ಪದಗ್ರಹಣ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ತಾಲೂಕಿನಲ್ಲಿ ನಗರಸಭೆಯಾಗಿ ಮೊಟ್ಟ ಮೊದಲಿಗೆ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಮತ್ತು ಸದಸ್ಯರ ಆಯ್ಕೆ ಮಾಡುವ ಮುಖಾಂತರ ನಗರದಲ್ಲಿ ಮೂಲಭೂತ ಸೌಲಭ್ಯಗಳ ಬಗ್ಗೆ ಸೂಕ್ತಕ್ರಮ ತೆಗೆದುಕೊಳ್ಳಲು ಈ ಯೋಜನಾ ಪ್ರಾಧಿಕಾರದ ಆದ್ಯ ಕರ್ತವ್ಯ ಆಗಿರುತ್ತದೆ ಎಂದು ತಿಳಿಸಿದರು.

ನಗರಾಭಿವೃದ್ಧಿ ಪ್ರಾಧಿಕಾರ ಹಾಗೂ ಗ್ರಾಮಾಂತರ ಯೋಜನೆಗಳನ್ನು ಕಾರ್ಯಗತಗೊಳಿಸಿ ಯಾವುದೇ ಬಡಾವಣೆಗಳು ನಿರ್ಮಾಣ ಮಾಡಿದರು ಯೋಜನಾ ಪ್ರಾಧಿಕಾರದ ಅನುಮತಿಯ ಮೇರೆಗೆ ಬಡಾವಣೆಗಳು ನಿರ್ಮಿಸಿ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಒಳಗೊಂಡ ಬಡಾವಣೆಗಳಿಗೆ ಮಾತ್ರ ಯೋಜನೆಯ ಪ್ರಾಧಿಕಾರದಿಂದ ಅನುಮತಿ ನೀಡಲು ಸೂಕ್ಷ್ಮ ನಿಗಾ ವಹಿಸಿ ಅನುಮತಿ ನೀಡಬೇಕು ಎಂದು ತಿಳಿಸಿದರು.

ಯೋಜನಾ ಪ್ರಾಧಿಕಾರದ ಅಧ್ಯಕ್ಷ ಆರ್ ಎಸ್ ಸುಹಾಸ್ ಶೆಟ್ಟಿ ಮಾತನಾಡಿ, ನಗರದ ಬಹುದೊಡ್ಡ ಜವಾಬ್ದಾರಿ ನಮಗೆ ನೀಡಿರುವುದರಿಂದ ನಾನು ಪಕ್ಷಾತೀತವಾಗಿ ಯಾವುದೇ ಅನಧಿಕೃತ ಬಡಾವಣೆಗಳಿಗೆ ಅನುಮತಿ ನೀಡದ ಕಾರ್ಯ ನಿರ್ವಹಿಸಲು ಕ್ರಮ ಜರುಗಿಸುತ್ತೇವೆ ಹಾಗೂ ನಗರದಲ್ಲಿ ಬಹುತೇಕ ಹಿಂದುಳಿದ ವರ್ಗ ಕುಟುಂಬಗಳೆ ಜೀವನ ಮಾಡುತ್ತಿದ್ದು ಸ್ಥಳೀಯ ಶಾಸಕ ಹಾಗೂ ಕೋಲಾರ ಜಿಲ್ಲಾ ಉಸ್ತುವಾರಿ ಸಚಿವ ಬೈರತಿ ಸುರೇಶ್ ರವರು ನಗರಾಭಿವೃದ್ಧಿ ಯೋಜನೆಯ ಸಚಿವರಾಗಿರುವುದರಿಂದ ನಗರದ ಸುತ್ತಮುತ್ತಲು 100 ಎಕರೆ ಜಮೀನು ಮಂಜೂರು ಮಾಡಿಸಿ ಬಡಾವಣೆ ನಿರ್ಮಿಸಿ ರಿಯಾಯಿತಿ ದರದಲ್ಲಿ ನಿವೇಶನಗಳನ್ನು ನೀಡಲು ಮುಂದಾಗುವುದಾಗಿ ತಿಳಿಸಿದರು.

ನಗರದಲ್ಲಿ ಬಹುತೇಕ ಬಡಾವಣೆಗಳಲ್ಲಿ ಸೂಕ್ತ ರಸ್ತೆಗಳು ಮತ್ತು ಚರಂಡಿಗಳ ವ್ಯವಸ್ಥೆ ಇಲ್ಲದೆ ರಸ್ತೆಗಳಲ್ಲಿ ಕೊಳಚೆ ನೀರು ಹರಿಯುತ್ತಿದ್ದು ಸಂಬಂಧ ಪಟ್ಟ ಅಧಿಕಾರಿಗಳ ಜೊತೆ ನಗರ ವೀಕ್ಷಣೆ ಮಾಡಿ,ಮಾದರಿ ನಗರವನ್ನಾಗಿ ಮಾರ್ಪಾಡು ಮಾಡಲು ನಮ್ಮ ಯೋಜನಾ ಪ್ರಾಧಿಕಾರ ಕಾರ್ಯ ನಿರ್ವಹಿಸುತ್ತದೆ ಎಂದು ತಿಳಿಸಿದರು.

ಈ ಕಾರ್ಯಕ್ರಮದಲ್ಲಿ ಕಾಂಗ್ರೆಸ್ ನಗರ ಬ್ಲಾಕ್ ಅಧ್ಯಕ್ಷ ಮೊಹಮ್ಮದ್ ಅಮಾನುಲ್ಲಾ, ಕಾಂಗ್ರೆಸ್ ಹಿರಿಯ ಮುಖಂಡ ಗುಮ್ಮಕಲ್ ರಾಮರೆಡ್ಡಿ,ಟಿಎಪಿಸಿಎಂಎಸ್ ನಿರ್ದೇಶಕರಾದ ಮೇಲಾಗಾಣಿ ಎಂ ಸಿ ಸರ್ವಜ್ಞ ಗೌಡ, ದರ್ಗಾಸ್ತು ಸಮಿತಿ ಸದಸ್ಯ ಜಮ್ಮನಹಳ್ಳಿ ಕೃಷ್ಣಪ್ಪ,,ದೇವರಾಯ ಸಮುದ್ರ ರಾಜಪ್ಪ, ಹನುಮನಹಳ್ಳಿ ಸುಬ್ರಮಣಿ, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಉಪಾಧ್ಯಕ್ಷೆ ನಾಗೇಶ್ವರಿ ಇತರರಿದ್ದರು.



ಎಂ.ಬಿ.ಪಾಟೀಲ್ ಭೇಟಿ ಮಾಡಿದ ಉದ್ಯಮಿಗಳ ನಿಯೋಗ

ಕೈಗಾರಿಕಾ ಉತ್ತೇಜನಕ್ಕೆ ಮನವಿ

• **ಹಾಸನ:** ಜಿಲ್ಲೆಯ ಕೈಗಾರಿಕಾ ಅಭಿವೃದ್ಧಿಗೆ ಉತ್ತೇಜನ ನೀಡುವ ಉದ್ದೇಶದಿಂದ ಹಾಸನ ಉದ್ಯಮಿಗಳ ನಿಯೋಗವು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್ ಅವರನ್ನು ಭೇಟಿ ಮಾಡಿ ವಿವಿಧ ಪ್ರಮುಖ ಬೇಡಿಕೆಗಳನ್ನು ಒಳಗೊಂಡ ಮನವಿ ಸಲ್ಲಿಸಿದೆ. ಪ್ರಮುಖ ಕೈಗಾರಿಕೋದ್ಯಮಿ, ಹಾಸನ ಜಿಲ್ಲಾ ಚೇಂಬರ್ ಉಪಾಧ್ಯಕ್ಷರು, ಎಫ್‌ಕೆಸಿಸಿಐ ನಿರ್ದೇಶಕರು ಹಾಗೂ ಐಟಿ ಬೆಳವಣಿಗೆ ಮತ್ತು ನಾವೀನ್ಯತೆ ವಿಭಾಗದ ಅಧ್ಯಕ್ಷರಾದ ಹೆಚ್.ಎ. ಕಿರಣ್ ಅವರ ನೇತೃತ್ವದಲ್ಲಿ ನಡೆದ ಈ ಭೇಟಿಯಲ್ಲಿ, ಹಾಸನ ಜಿಲ್ಲೆಯ ಕೈಗಾರಿಕಾ ಸಾಮರ್ಥ್ಯ ಮತ್ತು ಅಭಿವೃದ್ಧಿ ಸಾಧ್ಯತೆಗಳ ಕುರಿತು ವಿವರವಾದ ಪ್ರಸ್ತುತಿ ನೀಡಲಾಯಿತು. ನಿಯೋಗವು ಹಾಸನ ಜಿಲ್ಲೆಯ ಹಿರೀಸಾವೆ ಗಡಿಯಲ್ಲಿರುವ ಪ್ರದೇಶದಲ್ಲಿ ಹೊಸ ಕೈಗಾರಿಕಾ ಪಾರ್ಕ್ ಸ್ಥಾಪನೆ ಮಾಡುವಂತೆ ಪ್ರಸ್ತಾಪಿಸಿದೆ. ನೆಲಮಂಗಲಕ್ಕೆ ಸಮೀಪವಿರುವ ಹಾಸನ ಜಿಲ್ಲೆಯ ಭೌಗೋಳಿಕ ಸ್ಥಾನಮಾನ, ಉತ್ತಮ ಹವಾಮಾನ ಹಾಗೂ ನಾಲ್ಕು ಪಥಗಳ ರಸ್ತೆಗಳ ಮೂಲಕ ಹೊಂದಿರುವ ಸುಗಮ ಸಂಪರ್ಕ ಕೈಗಾರಿಕಾ ಹೂಡಿಕೆಗೆ ಅನುಕೂಲಕರವೆಂದು ವಿವರಿಸಲಾಗಿದೆ.



ಹಾಸನ ಜಿಲ್ಲೆಯಲ್ಲಿ ಪ್ರತಿವರ್ಷ ಸುಮಾರು 5,000 ತಾಂತ್ರಿಕ ನುರಿತ ಪದವೀಧರರು, ಡಿಪ್ಲೊಮಾ ಮತ್ತು ಐಟಿಐ ವಿದ್ಯಾರ್ಥಿಗಳು ಹೊರಬರುತ್ತಿರುವುದರಿಂದ ಕೈಗಾರಿಕೆಗಳಿಗೆ ಅಗತ್ಯ ಮಾನವ ಸಂಪನ್ಮೂಲ ಲಭ್ಯವಿರುವುದನ್ನು ಎತ್ತಿ ತೋರಿಸಲಾಗಿದೆ. ಈ ಕುರಿತು ಎಫ್‌ಕೆಸಿಸಿಐ ನಿರ್ದೇಶಕರು ಹಾಗೂ ಅಂತರರಾಜ್ಯ ಚೇಂಬರ್ ಸಮಿತಿ ಅಧ್ಯಕ್ಷ ಪಿ.ಹೆಚ್. ರಾಜಪುರೋಹಿತ್ ಹಾಗೂ ಐಟಿ ಸಮಿತಿ ಸದಸ್ಯರು ಹಾಗೂ ಉದ್ಯಮಿಗಳು ಟಿ.ಆರ್. ಪ್ರಸಾದ್ ಮಾಹಿತಿ ನೀಡಿದರು. ಇದೇ ವೇಳೆ 'ಇನ್ವೆಸ್ಟ್ ಕರ್ನಾಟಕ 2026' ಅಡಿಯಲ್ಲಿ ಘೋಷಿಸಲಾದ 51,400 ಕೋಟಿ ಹೂಡಿಕೆ ಯೋಜನೆಗೆ ಸಚಿವರನ್ನು ಅಭಿನಂದಿಸಿದ ನಿಯೋಗವು, ಹಾಸನ ಜಿಲ್ಲೆಯನ್ನೂ ಪ್ರಮುಖ ಹೂಡಿಕೆ ತಾಣವಾಗಿ ಪರಿಗಣಿಸುವಂತೆ ಮನವಿ ಮಾಡಿದೆ.

ಶ್ರೀರಾಮನವಮಿ: ಸಾಮೂಹಿಕ ಯಜ್ಞ

• **ಹಾಸನ:** ಶ್ರೀರಾಮನವಮಿ ಹಬ್ಬದ ಅಂಗವಾಗಿ ಪತಂಜಲಿ ಯೋಗ ಪರಿವಾರ್ ಹಾಗೂ ವೇದಭಾರತಿ ಇವರ ಸಂಯುಕ್ತ ಆಶ್ರಯದಲ್ಲಿ ನಗರದ ಗೌರಿಕೊಪ್ಪಲು ಸಮುದಾಯ ಭವನದಲ್ಲಿರುವ ಶ್ರೀ ವಿನಾಯಕ ಯೋಗಕೇಂದ್ರದಲ್ಲಿ ಭಾನುವಾರ ಬೆಳಗ್ಗೆ ಭಕ್ತಿಭಾವದಿಂದ ಸಾಮೂಹಿಕ ಯಜ್ಞ ಕಾರ್ಯಕ್ರಮವನ್ನು ನಡೆಯಿತು. ಬಾಬು ರಾಮದೇವ್ ಅವರ ಸನ್ಯಾಸ ದೀಕ್ಷಾ ದಿನವನ್ನೂ ಆಚರಿಸಲಾಯಿತು. ಬೆಳಿಗ್ಗೆ ಆರಂಭವಾದ ಕಾರ್ಯಕ್ರಮದಲ್ಲಿ ವೇದ ಮಂತ್ರೋಚ್ಚಾರಣೆಗಳ ನಡುವೆ ಯಜ್ಞ ನೆರವೇರಿದ ದೃಶ್ಯ ಭಕ್ತರಲ್ಲಿ ಆಧ್ಯಾತ್ಮಿಕ ಭಾವನೆಗಳನ್ನು ಮೂಡಿಸಿತು.



ಸುಮಾರು 200ಕ್ಕೂ ಹೆಚ್ಚು ಯೋಗಸಾಧಕರು ಹಾಗೂ ಭಕ್ತರು ಯಜ್ಞದಲ್ಲಿ ಭಾಗವಹಿಸಿ ಸಮಿತ್ತನ್ನು ಸಮರ್ಪಿಸುವ ಮೂಲಕ ಧಾರ್ಮಿಕ ಆಚರಣೆಗೆ ಸಾಥ್ ನೀಡಿದರು. ಸಮೂಹ ಯಜ್ಞದ ಮೂಲಕ ಸಮಾಜದಲ್ಲಿ ಶಾಂತಿ, ಆರೋಗ್ಯ ಹಾಗೂ ಸದ್ಭಾವನೆ ವೃದ್ಧಿಯಾಗಲಿ ಎಂಬ ಪ್ರಾರ್ಥನೆ ಸಲ್ಲಿಸಲಾಯಿತು.

ರಾಜ್ಯ ಸಮಿತಿ ಸದಸ್ಯ ಪರಮೇಶ್ವರ ಸುವರ್ಣಸಾ ಮತ್ತು ವೇದಭಾರತಿಯ ಸಂಯೋಜಕರಾದ ಹರಿಹರಪುರ ಶ್ರೀಧರ್ ಮಾತನಾಡಿ, ಶ್ರೀರಾಮನ ಆದರ್ಶ ಜೀವನ, ಧರ್ಮನಿಷ್ಠೆ ಹಾಗೂ ಸತ್ಯದ ಮಾರ್ಗವನ್ನು ಅನುಸರಿಸುವ ಮಹತ್ವವನ್ನು ಸವಿಸ್ತಾರವಾಗಿ ವಿವರಿಸಿದರು. ಯೋಗದ ಮೂಲಕ ದೈಹಿಕ ಮತ್ತು ಮಾನಸಿಕ ಆರೋಗ್ಯ ಕಾಪಾಡಿಕೊಳ್ಳುವ ಅಗತ್ಯವಿದ್ದು, ಆಯುರ್ವೇದ, ನ್ಯಾಚುರೋಪತಿ ಹಾಗೂ ಸ್ವದೇಶಿ ಚಿಂತನೆಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಹೇಳಿದರು.

ಜಿಲ್ಲಾ ಪ್ರಭಾರಿಗಳಾದ ನಾಗೇಶ್ ಕೇಶವಮೂರ್ತಿ ಹಾಗೂ ಶಾರದಾ ಅವರು ಯೋಗಾಸನ ಪ್ರದರ್ಶನ ನಡೆಸಿ, ಯೋಗಾಭ್ಯಾಸದ ಮಹತ್ವವನ್ನು ಪ್ರಾಯೋಗಿಕವಾಗಿ ತಿಳಿಸಿದರು. ರಾಜ್ಯ ಯುವ ಪ್ರಭಾರಿ ಸುರೇಶ್ ಪ್ರಜಾಪತಿ ಅವರು ಪತಂಜಲಿ ಸಂಸ್ಥೆಯ ಬೆಳವಣಿಗೆ ಹಾಗೂ ಸಮಾಜಮುಖಿ ಕಾರ್ಯಗಳನ್ನು ಪರಿಚಯಿಸಿದರು. ಜಿಲ್ಲಾ ಪ್ರಭಾರಿ ನಟರಾಜ್, ಜಿಲ್ಲಾ ಸಂರಕ್ಷಕರಾದ ಲೋಕನಾಥ್, ಎಲ್ಲಾ ಪ್ರಭಾರಿಗಳು, ಯೋಗಸಾಧಕರು ಹಾಗೂ ವೇದಭಾರತಿಯ ಸದಸ್ಯರು ಭಾಗವಹಿಸಿದ್ದರು.

ಕೊಗೋಡು ಬಳಿ ಆನೆಗಳ 'ರಿಟರ್ನ್ ಎಂಟ್ರಿ', ಗ್ರಾಮಸ್ಥರಲ್ಲಿ ಭೀತಿ

ರಜೆ ಮುಗಿಸಿ ಗಜಪಡೆ ಮತ್ತೆ ಹಾಜರು

• **ಬೇಲೂರು:** ತಾಲೂಕಿನ ಕೊಗೋಡು ಸಮೀಪದ ಗ್ರಾಮಗಳಲ್ಲಿ ಮತ್ತೆ ಗಜಪಡೆಗಳ ಹಾವಳಿ ಪ್ರಾರಂಭವಾಗಿದ್ದು, ಕೆಲವು ತಿಂಗಳುಗಳಿಂದ ನೆಮ್ಮದಿಯಾಗಿದ್ದ ಗ್ರಾಮಸ್ಥರು ಇದೀಗ ಆತಂಕದಲ್ಲಿ ಜೀವನ ನಡೆಸುವಂತಾ ಗಿದೆ. ದಿನದಿಂದ ದಿನಕ್ಕೆ ಆನೆಗಳ ಸಂಚಾರ ಹೆಚ್ಚುತ್ತಿರುವುದರಿಂದ ಹಳ್ಳಿಗಳಲ್ಲಿ ಭಯದ ವಾತಾವರಣ ನಿರ್ಮಾಣ ವಾಗಿದೆ.

ಕಳೆದ ಕೆಲವು ತಿಂಗಳು ಗಳಿಂದ ಆನೆಗಳ ಯಾವುದೇ ಸುಳಿವು ಕಾಣಿಸದ ಹಿನ್ನೆಲೆಯಲ್ಲಿ ರೈತರು ಹಾಗೂ ಗ್ರಾಮ ಸ್ಥರು ತಮ್ಮ ದೈನಂದಿನ ಚಟುವಟಿಕೆಗಳನ್ನು ಭಯವಿಲ್ಲದೆ ನಡೆಸುತ್ತಿದ್ದರು.



ಆದರೆ ಇದೀಗ ಆನೆಗಳು ಮತ್ತೆ ನಾಡಿನತ್ತ ಮುಖಮಾಡಿದ್ದು, ವಿಶೇಷವಾಗಿ ಕಾಫಿ ತೋಟಗಳು ಹಾಗೂ ಗ್ರಾಮದ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಎಗ್ಗಿಲ್ಲದಂತೆ ಸಂಚರಿ ಸುತ್ತಿವೆ.ಶಾಲಾ ವಿದ್ಯಾರ್ಥಿ ಗಳು ಪರೀಕ್ಷೆಗಳ ನಂತರ ಊರಿಗೆ ತೆರಳಿ ರಜೆ ಮುಗಿದ ಮೇಲೆ ಮತ್ತೆ ಶಾಲೆಗೆ ಬರುವಂತೆ, ಕೆಲ ಕಾಲ ಕಾಣೆಯಾಗಿದ್ದ ಆನೆಗಳು ಇದೀಗ ಪುನಃ ಹಳ್ಳಿಗಳತ್ತ ಮರಳಿರು ವುದು ಗಮನಾರ್ಹ ವಾಗಿದೆ. ಈ ಅನಿರೀಕ್ಷಿತ ಮರಳುವಿಕೆಯಿಂದ ಗ್ರಾಮಸ್ಥರು ಬೆಚ್ಚಿಬಿದ್ದಿ ದ್ದಾರೆ.ಕೊಗೋಡು ಸಮೀ ಪದ ಕಾಫಿ ಎಸ್ಟೇಟ್‌ನಲ್ಲಿ ಸುಮಾರು 16 ಆನೆಗಳ ದೊಡ್ಡ ಹಿಂಡು ಕಂಡು ಬಂದಿದ್ದು, ಅವು ದಿನದ ಹೊತ್ತಲ್ಲಿಯೇ ತೋಟ ಗಳಲ್ಲಿ ಸುಳಿದಾಡುತ್ತಿವೆ. ಇಲ್ಲೇ ನೆಲೆಸಿದ್ದೇವೆ ಎನ್ನುವಂತೆ ಅವುಗಳ ವರ್ತನೆ ಕಂಡು ಬರುತ್ತಿದೆ ಎಂದು ಸ್ಥಳೀಯರು ತಿಳಿಸಿದ್ದಾರೆ. ಇದರಿಂದ ಕಾಫಿ ಬೆಳೆಗಳಿಗೆ ಹಾನಿ ಉಂಟಾಗುವ ಭೀತಿ ಹೆಚ್ಚಾಗಿದೆ.

ಗ್ರಾಮಸ್ಥರು ಅರಣ್ಯ ಇಲಾಖೆಗೆ ತಕ್ಷಣ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದ್ದು, ಆನೆಗಳನ್ನು ಕಾಡಿ ನೊಳಗೆ ಹಿಮ್ಮೆಟ್ಟಿಸಿ ಜನರಿಗೆ ಭದ್ರತೆ ಒದಗಿಸು ವಂತೆ ಆಗ್ರಹಿಸಿದ್ದಾರೆ.

ತೃತೀಯ ಭಾಷೆ ಅಂಕ ರದ್ದು ಖಂಡನೀಯ: ನಬಿಸಾಬ್

ಕೊಡಿಗೇನಹಳ್ಳಿ: ಶಿಕ್ಷಣ ಇಲಾಖೆ ಎಸ್ ಎಸ್ ಎಲ್ ಸಿ ಪರೀಕ್ಷೆಯ ಹಿಂದಿ ದ್ವಿತೀಯ ಭಾಷೆ ಅಂಕ ರದ್ದುಪಡಿಸಿ ಗ್ರೇಡಿಂಗ್ ಸಿಸ್ಟಮ್ ಮಾಡಿರುವ ಏಕ ಪಕ್ಷೀಯ ನಿರ್ಧಾರಕ್ಕೆ ಸರ್ವೋದಯ ಪ್ರೌಢಶಾಲೆಯ ನಿವೃತ್ತ ಹಿಂದಿ ಶಿಕ್ಷಕ ನಬಿ ಸಾಬ್ ಖಂಡನೆ ವ್ಯಕ್ತಪಡಿಸಿದ್ದಾರೆ. ಎಸ್ ಎಸ್ ಎಲ್ ಸಿ ಪರೀಕ್ಷೆ ನಡೆಯುವ ಸಮಯದಲ್ಲಿ ಇಂತಹ ಹಠಾತ್ ನಿರ್ಧಾರ ಸೂಕ್ತವಲ್ಲ ಎಂದು ನಿವೃತ್ತ ಹಿಂದಿ ಶಿಕ್ಷಕ ನಬಿಸಾಬ್ ಬೇಸರ ವ್ಯಕ್ತಪಡಿಸಿದ್ದಾರೆ. ಹಾಗೂ ಈ ನಿರ್ಧಾರ ಮಕ್ಕಳ ಪರಿಶ್ರಮಕ್ಕೆ ದ್ರೋಹ ಬಗೆದಿದ್ದಾರೆ ಎಂದು ಖಂಡಿಸಿದ್ದಾರೆ. ನಿರ್ಧಾರವನ್ನು 2025ರ ಜೂನ್ ನಲ್ಲಿ ತೆಗೆದುಕೊಂಡಿದ್ದರೆ ಇದಕ್ಕೆ ಒಂದು ಅರ್ಥ ಇರುತ್ತಿತ್ತು ಈಗ ಯಾವುದೇ ತಜ್ಞರ ಭೇಟಿ ಹಾಗೂ ಹಿರಿಯರ ಸಲಹೆ ಅಥವಾ ಚರ್ಚೆ ಇಲ್ಲದೆ ರದ್ದು ಮಾಡಿರುವುದು ಪರ ವಿರೋಧಕ್ಕೆ ಕಾರಣವಾಗಿದೆ. ಕೆಲವು ಪರೀಕ್ಷೆಗಳು ಪ್ರಾರಂಭವಾಗಿ ಮುಗಿಯುವ ಹಂತಕ್ಕೆ ಬಂದಿದ್ದು ದಿಢೀರನೆ ಪರೀಕ್ಷೆಗಳ ಒಟ್ಟು ಅಂಕಗಳನ್ನು 625 ಕ್ಕೆ 525 ಇಳಿಸಲಾಗಿರುವ ತೀರ್ಮಾನ ಪ್ರಕಟಿಸಿರುವುದು ಸರ್ಕಾರ ಶಿಕ್ಷಣದ ನೀತಿಯ ಹಾಗೂ ಪರೀಕ್ಷೆ ಕುರಿತು ಸರ್ಕಾರಕ್ಕಿರುವ ಗಾಂಭೀರ್ಯತೆ ಕೊರತೆ ಎಷ್ಟು ಇದೆ ಎಂದು ದೂರಿದ್ದಾರೆ. ಹಾಗೂ ತೃತೀಯ ಭಾಷೆಯನ್ನು ಅಟಕ್ಕುಂಟು ಲೆಕ್ಕಕ್ಕಿಲ್ಲ ಎಂಬಂತೆ ಮಾಡಿದ್ದಾರೆ ಎಂದರು.

ಶ್ಯಾಗತ್ತೂರು ಎಂಪಿಸಿಎಸ್‌ನಲ್ಲಿ ಪಡಿತರ ವಿತರಣೆ

ಸಹಕಾರ ಬ್ಯಾಂಕ್ ಸ್ಥಾಪಿಸಲು ಗುರಿ: ಸುಧಾಕರ್

• **ಕೋಲಾರ:** ಶ್ಯಾಗತ್ತೂರು ಹಾಲು ಉತ್ಪಾದಕರ ಸಹಕಾರ ಸಂಘದಲ್ಲಿ ಇದೆ ಮೊದಲ ಬಾರಿಗೆ ಪಡಿತರ ವಿತರಣೆ ಮಾಡುವುದರ ಜೊತೆಗೆ ಸಹಕಾರ ಬ್ಯಾಂಕ್ ಸ್ಥಾಪಿಸುವ ಗುರಿ ಹೊಂದಿದ್ದೇವೆ ಎಂದು ಸಂಘದ ನೂತನ ಅಧ್ಯಕ್ಷ ಎಸ್.ವಿ. ಸುಧಾಕರ್ ತಿಳಿಸಿದರು.



ಶ್ರೀನಿವಾಸಪುರ ತಾಲೂಕಿನ ಯಲ್ದೂರು ಹೋಬಳಿ ಲಕ್ಷ್ಮೀಸಾಗರ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಬರುವ ಶ್ಯಾಗತ್ತೂರು ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರಾಗಿ 3ನೇ ಬಾರಿಗೆ ಅವಿರೋಧವಾಗಿ ಆಯ್ಕೆಯಾಗಿ ಮಾತನಾಡಿದ ಎಸ್.ವಿ. ಸುಧಾಕರ್, ನಮ್ಮ ಸಂಘದಲ್ಲಿ ಈಗಾಗಲೆ ಪಕ್ಷಾತೀತವಾಗಿ 12 ಮಂದಿ ನಿರ್ದೇಶಕರು ಆಯ್ಕೆಯಾಗಿದ್ದು, ಇಂದು ನಡೆದ ಅಧ್ಯಕ್ಷ ಸ್ಥಾನಕ್ಕೆ ನನ್ನನ್ನು ಅವಿರೋಧವಾಗಿ ಸತತ 3ನೇ ಬಾರಿಗೆ ಆಯ್ಕೆ ಮಾಡಿದ ಸಂಘದ ಎಲ್ಲ ನಿರ್ದೇಶಕರಿಗೆ ಗ್ರಾಮದ ಮುಖಂಡರಿಗೆ, ಉತ್ಪಾದಕರಿಗೆ ಕೃತಜ್ಞತೆಗಳನ್ನು ಸಲ್ಲಿಸಿದರು. ಈ ಹಿಂದೆ ಬೇರೆಯವರ ಪರವಾನಿಗೆ ಹೆಸರಿನಲ್ಲಿ ಪಡಿತರ, ಸಂಘದ ಮೂಲಕ ವಿತರಣೆಯಾಗುತ್ತಿತ್ತು.

ಸುಮಾರು 4 ಹಳ್ಳಿಗಳಿಗಳಲ್ಲಿ 580 ಪಡಿತರ ಕಾರ್ಡುದಾರರಿದ್ದಾರೆ, ಗ್ರಾಹಕರ ಹಿತ ದೃಷ್ಟಿಯಿಂದ ಶ್ರಮವಹಿಸಿ ನಮ್ಮ ಸಂಘದ ಮೂಲಕ ಅಧಿಕೃತವಾಗಿ ಪಡಿತರ ಅಕ್ಕಿ ವಿತರಿಸಲು ನಿಯಮಾನುಸಾರ ಮುಂದಾಗಿದ್ದೇವೆ ಎಂದರು. ಮುಂದಿನ ದಿನಗಳಲ್ಲಿ ಸಹಕಾರ ಬ್ಯಾಂಕ್ ನಮ್ಮ ಸಂಘದಲ್ಲಿ ನಡೆಯಲು ಸಿದ್ದತೆಗಳನ್ನು ಮಾಡುತ್ತಿದ್ದೇವೆ, ನಮ್ಮ ಸಂಘಕ್ಕೆ ಮಾಜಿ ಸ್ಪೀಕರ್ ಕೆ.ಆರ್. ರಮೇಶ್ ಕುಮಾರ್ ಹೆಚ್ಚಿನ ಸಹಕಾರ ನೀಡಿದ್ದಾರೆ, ಜೊತೆಗೆ ಕೋಮುಲ್ ತಾಲ್ಲೂಕು ಘಟಕ ನಿರ್ದೇಶಕರು, ಉಪ ವ್ಯವಸ್ಥಾಪಕರು ಉತ್ತಮ ಸಹಕಾರ ನೀಡಿದ್ದಾರೆ.

ಮುಂದಿನ ದಿನಗಳಲ್ಲಿ ನಮ್ಮ ಗ್ರಾಮದಲ್ಲಿ ಬಿ.ಎಂ.ಸಿ ಕೇಂದ್ರ ಪ್ರಾರಂಭಿಸಲು ಸಿದ್ದರಾಗಿದ್ದೇವೆ, ಹಾಲು ಉತ್ಪಾದಕರು ಗುಣಮಟ್ಟ ಹಾಲು ಹಾಕುವುದರ ಮೂಲಕ ಸಂಘವನ್ನು ಮತ್ತಷ್ಟು ಬಲಪಡಿಸಬೇಕು. ಜಿಲ್ಲೆಯಲ್ಲೇ ಮಾದರಿ ಸಂಘ ಮಾಡಲು ತೀರ್ಮಾನಿಸಿದ್ದೇವೆ ಎಂದರು.

ಚುನಾವಣಾ ಪ್ರಕ್ರಿಯೆಯನ್ನು ಮುಸ್ತಾಕ್ ಅಹಮದ್ ನಡೆಸಿಕೊಟ್ಟಿದ್ದಾರೆ. ನಿರ್ದೇಶಕರಾದ ಅಮೀರ್ ಜಾನ್, ಶ್ರೀನಿವಾಸಗೌಡ, ವೆಂಕಟರಾಮೇಗೌಡ, ಆಂಜನೇಯರೆಡ್ಡಿ, ವೆಂಕಟೇಶ್‌ಗೌಡ, ಶ್ರೀನಿವಾಸ್, ವೆಂಕಟರಾಮೇ ಗೌಡ, ಭಾಸ್ಕರ್, ವೆಂಕಟಮ್ಮ, ಪ್ರಮೀಳ, ಮಾಜಿ ಅಧ್ಯಕ್ಷ ಬಚ್ಚಿರೆಡ್ಡಿ, ಕಾರ್ಯದರ್ಶಿ ಎಸ್.ವಿ. ಮುನಿನಾರಾಯಣ, ಗುಮಾಸ್ತ, ಎಸ್.ವಿ. ಮಂಜುನಾಥ್, ಕೃಷ್ಣೇಗೌಡ, ಗ್ರಾ.ಪಂ ಸದಸ್ಯ ವಿವೇಕ್, ರಮೇಶ್, ಪಿಳ್ಳೆಗೌಡ, ಎಲ್ಲ ಉರ್ದೇಶಕರು, ಗ್ರಾಮಸ್ಥರು ಭಾಗವಹಿಸಿದ್ದರು.

ಕೆ.ಕುರುಪ್ಪಲ್ಲಿಯಲ್ಲಿ ಏ.10 ರಿಂದ ಕುರುಬರ ದೊಡ್ಡ ದ್ಯಾವರ ಹಿನ್ನೆಲೆ

ಭಂಡಾರಪೆಟ್ಟಿ, ಗೋಪೂಜೆ ಕಾರ್ಯಕ್ರಮ

• **ಕೋಲಾರ:** ಕುರುಬ ಸಮಾಜದ ದೊಡ್ಡದ್ಯಾವರ ಉತ್ಸವದ ಪ್ರಯುಕ್ತ ಸಂಪ್ರದಾಯದಂತೆ ನಗರದ ಕಠಾರಿಪಾಳ್ಯದ ಶ್ರೀ ವೇಣುಗೋಪಾಲಸ್ವಾಮಿ ದೇವಾಲಯದ ಆವರಣದಲ್ಲಿ ಭಂಡಾರಪೆಟ್ಟಿ ಪೂಜೆ ಮತ್ತು ಗೋ ಪೂಜೆ, ತೆಂಗಿನಕಾಯಿ ಪವಾಡ ಕಾರ್ಯಕ್ರಮ ವಿಜೃಂಭಣೆಯಿಂದ ನಡೆಯಿತು.




ಶ್ರೀನಿವಾಸಪುರ ತಾಲೂಕಿನ ಕೆ.ಕುರಪಲ್ಲಿ ಗ್ರಾಮದ ಬೀರೇಶ್ವರ, ಭಕ್ತೇಶ್ವರ, ಸಿದ್ದೇಶ್ವರ ಸ್ವಾಮಿಯ ದೇವಾಲಯದ ದ್ಯಾವರ ಉತ್ಸವದ ಪೂರ್ವಸಿದ್ಧತೆ ಹಿನ್ನೆಲೆ ಕಠಾರಿಪಾಳ್ಯದಲ್ಲಿ ಭಂಡಾರ ಪೂಜೆ ಆಚರಣೆ ಕಳೆಗಟ್ಟಿತು.

ಬಲಾಹರೇ, ಬಲಾಹರೇ ಎಂದು ತಲೆ ಮೇಲೆ ತೆಂಗಿನಕಾಯಿ ಒಡೆಯುವ ಪವಾಡ ಕಾರ್ಯಕ್ರಮ ಜನರ ಕಣ್ಮನ ಸೆಳೆಯಿತು. ತಲೆ ಮೇಲೆ ತೆಂಗಿನಕಾಯಿ ಒಡೆದಕ್ಷಣ ತೆಂಗಿನಕಾಯಿ ಚೂರು, ಚೂರು ಆಗುವುದನ್ನು ಗಮನಿಸಿದ ಸಾರ್ವಜನಿಕರು ಕೆಲಹೊತ್ತು ಆಶ್ಚರ್ಯಚಕಿತರಾದರು. ಬಸವನ ಎದುರು ಮೈ ಮರೆತು ತೆಂಗಿನಕಾಯಿ ಒಡೆಸಿಕೊಳ್ಳುವ ವೀರಕುಮಾರರ ಪವಾಡ ನೋಡುಗರ ಗಮನ ಸೆಳೆಯಿತು.

ಏಪ್ರಿಲ್ ತಿಂಗಳ 10 ರಿಂದ 13 ನೇ ತಾರೀಖಿನ ವರೆಗೆ ದೇವರ ಉತ್ಸವ, ಕುರುಬರ ದೊಡ್ಡ ದ್ಯಾವರ ಇರುವ ಹಿನ್ನೆಲೆ ಭಂಡಾರ ಪೆಟ್ಟಿಗೆ ಮತ್ತು ಬಸವ ಪ್ರತಿ ಮನೆಗೂ ತೆರಳುವುದು ಸಂಪ್ರದಾಯವಾಗಿದೆ. ಬಸವನ ಜೊತೆಗೆ ಭಂಡಾರ ಪೂಜೆ ನೆರವೇರಿಸಿದ ನಂತರ ಕುರುಬ ಸಮಾಜದ ಗುರುಗಳು ತೆಂಗಿನಕಾಯಿ ಪವಾಡ ಮಾಡಿದರು. ಕಲಾತಂಡಗಾರರು ನೃತ್ಯ ಪ್ರದರ್ಶಿಸಿದರು. ಶಿವಪೂಜೆ, ಗಂಗೆ ಪೂಜೆ ನೆರವೇರಿಸಿದ ನಂತರ ಮಹಾಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ ಜರುಗಿತು. ಹಾಲುಮತಸ್ಥರಾದ ಕೈಲಾಸ್, ಅಂಚೆ ಅಶ್ವತ್, ಅಂಚೆ ವಿಜಯ್, ಕೆ.ಮಂಜುನಾಥ್, ಶಿವಕುಮಾರ್, ರಾಜಣ್ಣ, ಪ್ರಭಾಕರ್, ಚಂದ್ರಪ್ಪ, ರಾಮಕೃಷ್ಣಪ್ಪ, ಗೋಪಾಲಪ್ಪ, ಶಿವಪ್ರಕಾಶ್, ವಿಶ್ವನಾಥ್, ಸೋಮಶೇಖರ್, ರಾಜಶೇಖರ್, ಶ್ರೀಧರ್, ಚಂದ್ರಶೇಖರ್, ಶಿವಪ್ರಕಾಶ್, ಈಶ್ವರ್ ದರ್ಶನ್, ಗಾಯತ್ರಿ, ಜಯಂತಿ, ರಾಕೇಶ್, ಚರಣ್, ರವಿಕುಮಾರ್, ವೇಣುಗೋಪಾಲ್, ನಾಗರಾಜು, ವೆಂಕಟಾಚಲಪತಿ, ದೇವರಾಜ್ ಹಾಗೂ ಕುಲಬಾಂಧವರು ಪಾಲ್ಗೊಂಡಿದ್ದರು.

» ಹಾರ್ಮುಜ್ ಜಲಸಂಧಿ ಸಮೀಪದ ಕರಾವಳಿ ಪ್ರದೇಶಗಳು, ಖಾರ್ಗ್ ದ್ವೀಪದ ಮೇಲೆ ದಾಳಿಗೆ ಅಮೆರಿಕ ಭಾರೀ ಸಿದ್ಧತೆ



ಇರಾನ್ ಮೇಲೆ ಭೂ ದಾಳಿಗೆ ಸನ್ನದ್ಧ

• **ದುಬೈ:** ಪಶ್ಚಿಮ ಏಷ್ಯಾದ ಸಂಘರ್ಷವು ಐದನೇ ವಾರಕ್ಕೆ ಕಾಲಿಡುತ್ತಿದ್ದಂತೆ, ಹಾರ್ಮುಜ್ ಜಲಸಂಧಿಯ ಸಮೀಪವಿರುವ ಕರಾವಳಿ ಪ್ರದೇಶಗಳು ಮತ್ತು ಖಾರ್ಗ್ ದ್ವೀಪದ ಮೇಲೆ ದಾಳಿ ಸೇರಿದಂತೆ ಇರಾನ್‌ನಲ್ಲಿ ವಾರಗಳ ಕಾಲ ಭೂಸೇನಾ ಕಾರ್ಯಾಚರಣೆ ನಡೆಸಲು ಪೆಂಟಗನ್ ಸಿದ್ಧತೆ ನಡೆಸುತ್ತಿದೆ.

ವಾಣಿಜ್ಯ ಮತ್ತು ಮಿಲಿಟರಿ ಹಡಗುಗಳನ್ನು ಗುರಿಯಾಗಿಸುವ ಶಸ್ತ್ರಾಸ್ತ್ರಗಳನ್ನು ನಾಶಪಡಿಸಲು, ಇರಾನ್‌ನ ಶೇ.90 ರಷ್ಟು ಕಚ್ಚಾ ತೈಲ ರಫ್ತು ಮಾಡುವ ಖಾರ್ಗ್ ದ್ವೀಪವನ್ನು ವಶಪಡಿಸಿಕೊಳ್ಳುವ ಬಗ್ಗೆ ಟ್ರಂಪ್ ಆಡಳಿತ ಚರ್ಚಿಸುತ್ತಿದೆ. ವಿಶೇಷ ಕಾರ್ಯಾಚರಣೆ ಪಡೆಗಳು ಮತ್ತು ಕಾಲಾಳುಗಳನ್ನು ಒಳಗೊಂಡ ಈ ಯೋಜನೆ, ಮುಂದಿನ ಮಾತುಕತೆಗಳಲ್ಲಿ ಇರಾನ್ ಮೇಲೆ ಒತ್ತಡ ಹೇರಲು ನೆರವಾಗಲಿದೆ ಎನ್ನಲಾಗುತ್ತಿದೆ. ಮಿಲಿಟರಿ ಈ ಬಗ್ಗೆ ವಿಸ್ತೃತ ಯೋಜನೆಗಳನ್ನು ರೂಪಿಸಿದ್ದರೂ, ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಅಂತಿಮ ನಿರ್ಧಾರ ಇನ್ನೂ ಬಾಕಿ ಇದೆ.

ಕಾರ್ಯಾಚರಣೆಯ ಕಾಲಮಿತಿ: ಈ ಉದ್ದೇಶಗಳನ್ನು ಪೂರ್ಣಗೊಳಿಸಲು ಹಲವಾರು ವಾರಗಳಿಂದ ಎರಡು ತಿಂಗಳುಗಳ ಕಾಲಾವಕಾಶ ಬೇಕಾಗಬಹುದು ಎಂದು ಅಧಿಕಾರಿಗಳು ಅಂದಾಜಿಸಿದ್ದಾರೆ. ಖಾರ್ಗ್ ದ್ವೀಪದಂತಹ ಪ್ರದೇಶಗಳನ್ನು ವಶಪಡಿಸಿಕೊಳ್ಳುವುದು ಸುಲಭವಾದರೂ, ಅಲ್ಲಿ ನೆಲೆ ನಿಂತು ದ್ವೀಪವನ್ನು ಕಾಯುವ ಅಮೆರಿಕದ ಪಡೆಗಳನ್ನು ರಕ್ಷಿಸುವುದು ದೊಡ್ಡ ಸವಾಲು ಎಂದು ಮಾಜಿ ರಕ್ಷಣಾ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮಿಲಿಟರಿ ಜಮಾವಣೆ: ಶನಿವಾರ ಯುಎಸ್ ಸೆಂಟ್ರಲ್ ಕಮಾಂಡ್ ಮಾಹಿತಿ ನೀಡಿದಂತೆ, 3,500 ಮರೀನ್ ಪಡೆಗಳು ಮತ್ತು ನಾವಿಕರು ಯುಎಸ್‌ಎಸ್ ಟ್ರಿಪೋಲಿ ಯುದ್ಧನೌಕೆಯ ಮೂಲಕ ಪಶ್ಚಿಮ ಏಷ್ಯಾವನ್ನು ತಲುಪಿದ್ದಾರೆ. ಎಫ್-35 ಫೈಟರ್ ಜೆಟ್ ಮತ್ತು ಸಾರಿಗೆ ವಿಮಾನಗಳನ್ನು ಒಳಗೊಂಡಿರುವ ಈ ನಿಯೋಜನೆ, ಕಳೆದ ಎರಡು ದಶಕಗಳಲ್ಲಿ ಆ ಪ್ರದೇಶದಲ್ಲಿ ಅಮೆರಿಕ ಕೈಗೊಂಡಿರುವ ಅತಿದೊಡ್ಡ ಮಿಲಿಟರಿ ಜಮಾವಣೆ ಎನಿಸಿದೆ.

ರಾಜತಾಂತ್ರಿಕ ನಿಲುವು: ಯುದ್ಧವನ್ನು ಕೊನೆಗೊಳಿಸುವ ಒಪ್ಪಂದಕ್ಕೆ ಇರಾನ್ ಒಪ್ಪದಿದ್ದರೆ ಮಿಲಿಟರಿ ಕ್ರಮವನ್ನು ತೀವ್ರಗೊಳಿಸಲು ಅಧ್ಯಕ್ಷರು ಸಿದ್ಧರಿದ್ದಾರೆ ಎಂದು ಶ್ವೇತಭವನದ ಪತ್ರಿಕಾ ಕಾರ್ಯದರ್ಶಿ ಕರೋಲಿನ್ ಲೀವಿಟ್ ಹೇಳಿದ್ದಾರೆ. ಮತ್ತೊಂದೆಡೆ, ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರೂಬಿಯೊ, ಭೂಸೇನೆಯನ್ನು ಬಳಸದೆಯೇ ಗುರಿಗಳನ್ನು ಸಾಧಿಸಬಹುದು ಎಂದು ಸೂಚಿಸಿದ್ದಾರೆ. ಫೆಬ್ರವರಿ 28ರಂದು ಅಮೆರಿಕ ಮತ್ತು ಇಸ್ರೇಲ್ ನಡೆಸಿದ ದಾಳಿಯೊಂದಿಗೆ ಈ ಸಂಘರ್ಷ ಆರಂಭವಾಗಿತ್ತು. ಇತ್ತ ಅಮೆರಿಕ ಮಾತುಕತೆಯಲ್ಲಿ ಪ್ರಗತಿಯಾಗಿದೆ ಎಂದು ಹೇಳುತ್ತಿದ್ದರೂ, ಇರಾನ್ ಯಾವುದೇ ಅಧಿಕೃತ ಮಾತುಕತೆ ನಡೆಯುತ್ತಿಲ್ಲ ಎಂದು ವಾದಿಸುತ್ತಿದೆ.

ಸಾರ್ವಜನಿಕ ಪ್ರತಿಕ್ರಿಯೆ: ಅಮೆರಿಕದಲ್ಲಿ ಈ ಕುರಿತು ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿದೆ. ನೋ ಕಿಂಗ್ಸ್ ಪ್ರತಿಭಟನಾಕಾರರು ಸಂಭಾವ್ಯ ಯುದ್ಧವನ್ನು ಖಂಡಿಸುತ್ತಿದ್ದರೆ, ಟ್ರಂಪ್ ಬೆಂಬಲಿಗರು ನಿರ್ಣಾಯಕ ಕ್ರಮವನ್ನು ಬೆಂಬಲಿಸುತ್ತಿದ್ದಾರೆ. ಇಸ್ರೇಲ್ ಈ ಕಾರ್ಯಾಚರಣೆಗೆ ಗುಪ್ತಚರ ಮತ್ತು ಲಾಜಿಸ್ಟಿಕ್ ಬೆಂಬಲ ನೀಡಲಿದೆ, ಪ್ರಾದೇಶಿಕ ಭದ್ರತೆಗೆ ಖಾರ್ಗ್ ದ್ವೀಪದ ತಟಸ್ಥೀಕರಣ ಅತ್ಯಗತ್ಯ ಎಂದು ಅದು ಪರಿಗಣಿಸಿದೆ.



ಇರಾನ್ ಇಂಟರ್‌ನೆಟ್ ಬ್ಲ್ಯಾಕ್‌ಔಟ್‌ಗೆ 30 ದಿನ

ಇರಾನ್‌ನಲ್ಲಿನ ಇಂಟರ್‌ನೆಟ್ ಬ್ಲ್ಯಾಕ್‌ಔಟ್ 30 ದಿನಗಳನ್ನು ದಾಟಿದ್ದು, ಸುಮಾರು 696 ಗಂಟೆಗಳಿಂದ ಇರಾನ್ ನಾಗರಿಕರು ಇಂಟರ್‌ನೆಟ್ ಸಂಪರ್ಕ ವಂಚಿತರಾಗಿದ್ದಾರೆ ಎಂದು ಇಂಟರ್‌ನೆಟ್ ನಿರೀಕ್ಷಕ ನೆಟ್‌ಬ್ಲಾಕ್ಸ್ ಹೇಳಿದೆ. ಬ್ಲ್ಯಾಕ್‌ಔಟ್ ಒಂದು ತಿಂಗಳು ದಾಟಿದ್ದು, ಇನ್ನೂ ಜಾರಿಯಲ್ಲಿದೆ. ಇದು ಇರಾನಿಯನ್ನರ ಸಂವಹನ ಮತ್ತು ಮಾಹಿತಿ ಹಕ್ಕುಗಳ ಉಲ್ಲಂಘನೆ ಎಂದು ನೆಟ್‌ಬ್ಲಾಕ್ಸ್ ಎಕ್ಸ್‌ನಲ್ಲಿ ಅಭಿಪ್ರಾಯಿಸಿದೆ. ಫೆ.28ರಂದು ಯುದ್ಧ ಆರಂಭವಾದಲ್ಲಿಂದ ದೇಶಾದ್ಯಂತ ಇಂಟರ್‌ನೆಟ್ ಬ್ಲಾಕ್ ಮಾಡಲು ಇರಾನ್ ನಿರ್ಧರಿಸಿತ್ತು.

ದುಬೈ, ಕುವೈತ್ ಮೇಲೆ ಇರಾನ್ ದಾಳಿ

ದುಬೈ: ಇರಾನ್‌ನ ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್(ಐಆರ್‌ಜಿಸಿ), ದುಬೈ ಮತ್ತು ಕುವೈತ್‌ನಲ್ಲಿರುವ ಅಮೆರಿಕದ ಮಿಲಿಟರಿ ನೆಲೆಗಳ ಮೇಲೆ ಕ್ಷಿಪಣಿ ಮತ್ತು ಡ್ರೋನ್ ದಾಳಿ ನಡೆಸಿರುವುದಾಗಿ ಹೇಳಿಕೊಂಡಿದೆ. ಆದರೆ ಅಮೆರಿಕದ ಸೆಂಟ್ರಲ್ ಕಮಾಂಡ್ ಈ ವರದಿಗಳನ್ನು ನಿರಾಕರಿಸಿದೆ. ಕುವೈಟ್ ಬಂದರು ಮತ್ತು ದುಬೈ ಕರಾವಳಿಯಲ್ಲಿ ಬ್ಯಾಲಿಸ್ಟಿಕ್ ಮತ್ತು ಕ್ರೂಸ್ ಕ್ಷಿಪಣಿಗಳನ್ನು ಬಳಸಿ ಅಮೆರಿಕದ ಸಿಬ್ಬಂದಿ ಮತ್ತು ನೌಕಾ ಹಡಗುಗಳನ್ನು ಗುರಿಯಾಗಿಸಿಕೊಂಡಿರುವುದಾಗಿ ಐಆರ್‌ಜಿಸಿ ತಿಳಿಸಿದೆ. ಜೊತೆಗೆ, ಕುವೈತ್ ಅಂತರಾಷ್ಟ್ರೀಯ ವಿಮಾನ ನಿಲ್ದಾಣದ ಮೇಲೆ ಡ್ರೋನ್ ದಾಳಿ ನಡೆದಿದ್ದು, ರೇಡಾರ್ ವ್ಯವಸ್ಥೆಗಳಿಗೆ ಹಾನಿಯಾಗಿದೆ, ಎಂದಿದೆ. ಅಮೆರಿಕದ ಅಧಿಕಾರಿಗಳು ಈ ಪ್ರತಿಪಾದನೆಗಳನ್ನು ಸುಳ್ಳು ಎಂದಿದ್ದು, ದುಬೈನಲ್ಲಿ ಯಾವುದೇ ಸಿಬ್ಬಂದಿಯ ಮೇಲೆ ದಾಳಿ ನಡೆದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಇರಾನ್ ಮೇಲೆ ದಾಳಿ ನಡೆಸಲು ಅಮೆರಿಕ ಅಥವಾ ಇಸ್ರೇಲ್‌ಗೆ ತಮ್ಮ ಭೂಪ್ರದೇಶವನ್ನು ಬಳಸಲು ಅವಕಾಶ ನೀಡದಂತೆ ಇರಾನ್ ಅಧ್ಯಕ್ಷ ಮಸೂದ್ ಪೆಜೆಶ್ಕಿಯಾನ್ ಗಲ್ಫ್ ರಾಷ್ಟ್ರಗಳಿಗೆ ಎಚ್ಚರಿಕೆ ನೀಡಿದ್ದಾರೆ. ಈ ನಡುವೆ, ಹೌತಿ ಬಂಡುಕೋರರು ದಕ್ಷಿಣ ಇಸ್ರೇಲ್ ಮೇಲೆ ಕ್ಷಿಪಣಿ ದಾಳಿ ನಡೆಸಿರುವುದಾಗಿ ಹೇಳಿಕೊಂಡಿದ್ದು, ಸಂಘರ್ಷ ಒಂದು ತಿಂಗಳು ಪೂರೈಸಿದೆ.

28,455 ಕೋಟಿ ರೂ. ಅಮೆರಿಕ ರಕ್ಷಣಾ ನಷ್ಟ

ಇರಾನ್ ಯುದ್ಧದ ಮೊದಲ ಮೂರು ವಾರಗಳಲ್ಲಿ ಅಮೆರಿಕದ ಸೈನಿಕ ಸಂಪತ್ತಿಗೆ ಭಾರೀ ಹಾನಿಯಾಗಿದೆ. ಸುಮಾರು 28,455 ಕೋಟಿ ರೂ.(3 ಬಿಲಿಯನ್ ಡಾಲರ್) ನಷ್ಟವಾಗಿದೆ. ವರದಿಗಳ ಪ್ರಕಾರ, ಈ ನಷ್ಟ ಮತ್ತು ದುರಸ್ತಿ ವೆಚ್ಚವು ಸುಮಾರು 1.4 ಬಿಲಿಯನ್‌ನಿಂದ 2.9 ಬಿಲಿಯನ್ ಡಾಲರ್ ನಡುವೆಯಾಗಿದೆ. ಇರಾನ್‌ನ ಬ್ಯಾಲಿಸ್ಟಿಕ್ ಕ್ಷಿಪಣಿಗಳು ಮತ್ತು ಡ್ರೋನ್ ದಾಳಿಗಳು ಮಧ್ಯಪ್ರಾಚ್ಯದ ಅಮೆರಿಕ ಮತ್ತು ಮಿತ್ರ ರಾಷ್ಟ್ರಗಳ ಸೌಲಭ್ಯಗಳನ್ನು ಗುರಿಯಾಗಿಸಿವೆ. ಈ ನಷ್ಟಗಳನ್ನು ಪರಿಗಣಿಸಿ ಪೆಂಟಗನ್ ಸುಮಾರು 200 ಬಿಲಿಯನ್ ಡಾಲರ್ ಹೆಚ್ಚುವರಿ ವೆಚ್ಚ ಪ್ರಸ್ತಾವನೆಯನ್ನು ವೈಟ್ ಹೌಸ್‌ಗೆ ಸಲ್ಲಿಸುವ ನಿರೀಕ್ಷೆಯಿದೆ.

ಯುದ್ಧ ವಿಮಾನಗಳ ನಷ್ಟ: ಉನ್ನತ ಮೌಲ್ಯದ ಯುದ್ಧ ವಿಮಾನಗಳು ದೊಡ್ಡ ಪ್ರಮಾಣದಲ್ಲಿ ಹಾನಿಗೊಳಗಾಗಿವೆ. ಮಾ.1ರಂದು ಮೂರು ಎಫ್-15ಇ ಸ್ಟ್ರೈಕ್ ಈಗಲ್ ವಿಮಾನಗಳನ್ನು ತಪ್ಪಾಗಿ ಕುವೈತ್‌ನ ಎಫ್/ಎ-18 ಮೂಲಕ ಹೊಡೆದುರುಳಿಸಲಾಗಿದೆ. ಪ್ರತಿಯೊಂದು ವಿಮಾನದ ಬೆಲೆ ಸುಮಾರು 100 ಮಿಲಿಯನ್ ಡಾಲರ್. ಮಾ. 19ರಂದು ಒಂದು ಎಫ್-35ಎ ಲೈಟ್ನಿಂಗ್ ತುರ್ತು ಲ್ಯಾಂಡಿಂಗ್ ಮಾಡಬೇಕಾಯಿತು, ಇದನ್ನು ಇರಾನ್ ಗುರಿಯಾಗಿಸಿದೆ ಎಂದು ಹೇಳಿದೆ. ಈ ವಿಮಾನದ ಬೆಲೆ ಸುಮಾರು 82.5 ಮಿಲಿಯನ್ ಡಾಲರ್.



ಟ್ಯಾಂಕರ್ ಮತ್ತು ಸಿಬ್ಬಂದಿ ನಷ್ಟ: ಎ ಕೆಸಿ-135 ಸ್ಟ್ರಾಟೋಟ್ಯಾಂಕರ್ ವಿಮಾನವು ಇರಾಕ್‌ನಲ್ಲಿ ಪತನಗೊಂಡಿದ್ದು, ಆರು ಸಿಬ್ಬಂದಿ ಮೃತಪಟ್ಟಿದ್ದಾರೆ. ಸೌದಿ ಅರೇಬಿಯಾದಲ್ಲಿ ಐದು ಕೆಸಿ-135 ವಿಮಾನಗಳು ಕ್ಷಿಪಣಿ ದಾಳಿಯಿಂದ ಹಾನಿಗೊಳಗಾಗಿವೆ. ಈ ವಿಮಾನಗಳ ಉತ್ಪಾದನೆ ನಿಂತಿರುವುದರಿಂದ, ಕೆಸಿ-46 ಪೆಗಾಸಸ್ ವಿಮಾನಗಳಿಂದ ಅವುಗಳನ್ನು ಬದಲಿಸುವ ಸಾಧ್ಯತೆ ಇದೆ.

ಡ್ರೋನ್ ನಷ್ಟಗಳು: ಎಂಕ್ಯೂ-9 ರೀಪರ್ ಡ್ರೋನ್‌ಗಳಲ್ಲಿ ಡಜನ್‌ಗಿಂತ ಹೆಚ್ಚು ನಷ್ಟವಾಗಿದೆ. ಕನಿಷ್ಠ ಎಂಟು ಡ್ರೋನ್‌ಗಳನ್ನು ಕ್ಷಿಪಣಿಗಳು ಹೊಡೆದುರುಳಿಸಿದರೆ, ಕೆಲವು ನೆಲದಲ್ಲೇ ನಾಶವಾಗಿವೆ. ಪ್ರತಿಯೊಂದು ಡ್ರೋನ್ ಬೆಲೆ 16 ಮಿಲಿಯನ್‌ನಿಂದ 30 ಮಿಲಿಯನ್ ಡಾಲರ್‌ವರೆಗೆ ಇದೆ. ಜೋರ್ಡಾನ್‌ನ ಎಎನ್/ಟಿಪಿವೈ-2 ರಡಾರ್ ಮತ್ತು ಕತಾರ್‌ನ ಎಎನ್/ಎಫ್‌ಪಿಎಸ್-132 ರಡಾರ್ ಹಾನಿಗೊಳಗಾಗಿವೆ. ಈ ವ್ಯವಸ್ಥೆಗಳು ನೂರಾರು ಮಿಲಿಯನ್ ಡಾಲರ್ ಮೌಲ್ಯದವು. ಇವುಗಳ ಜತೆಗೆ ಇತರ ಗಲ್ಫ್ ರಾಷ್ಟ್ರಗಳಲ್ಲಿಯೂ ರಕ್ಷಣಾ ವ್ಯವಸ್ಥೆಗಳು ಹಾನಿಗೊಂಡಿವೆ.

ನೌಕಾಪಡೆ ಸಮಸ್ಯೆಗಳು: ಯುಎಸ್‌ಎಸ್ ಜೆರಾಲ್ಡ್ ಆರ್ ಫೋರ್ಡ್ ಹಡಗಿನಲ್ಲಿ ಬೆಂಕಿ ಕಾಣಿಸಿಕೊಂಡು ಹಲವು ಭಾಗಗಳಿಗೆ ಹಾನಿಯಾಗಿದೆ. ಇದ ದುರಸ್ತಿ ಗ್ರೀಸ್‌ನಲ್ಲಿ ನಡೆಯುತ್ತಿದೆ. ಈ ಆರಂಭಿಕ ನಷ್ಟವೇ ಯುದ್ಧದ ಗಂಭೀರತೆಯನ್ನು ತೋರಿಸುತ್ತದೆ. ಭವಿಷ್ಯದಲ್ಲಿ ವೆಚ್ಚ ಇನ್ನಷ್ಟು ಹೆಚ್ಚುವ ಸಾಧ್ಯತೆ ಇದೆ.

ಹಾರ್ಮುಜ್ ದಾಟಿದ ಭಾರತದ 2 ನೌಕೆಗಳು

ಭಾರತದ ರಾಷ್ಟ್ರಧ್ವಜವಿರುವ ಎರಡು ಅಡುಗೆ ಅನಿಲ(ಎಲ್‌ಪಿಜಿ) ಕ್ಯಾರಿಯರ್ ಹಡಗುಗಳು ಯುದ್ಧ ಬಾಧಿತ ಹಾರ್ಮುಜ್ ಜಲಸಂಧಿಯನ್ನು ದಾಟಿದ್ದು, ಎರಡು ದಿನಗಳೊಳಗೆ ಭಾರತವನ್ನು ತಲುಪುವ ನಿರೀಕ್ಷೆಯಿದೆ. ಎರಡೂ ಹಡಗುಗಳಲ್ಲಿ ಒಟ್ಟು 94,000 ಟನ್‌ಗಳಷ್ಟು ಎಲ್‌ಪಿಜಿ ಕಾರ್ಗೋ ಇದೆ. ಬಿಡಬ್ಲ್ಯೂ ಟೈರ್ ಮತ್ತು ಇಎಲ್‌ಎಂ ಹೆಸರಿನ ಎಲ್‌ಪಿಜಿ ಕ್ಯಾರಿಯರ್‌ಗಳು ಭಾರತದತ್ತ ಬರುತ್ತಿವೆಯೆಂಬ ಮಾಹಿತಿ ಲಭಿಸಿದೆ. ಇವುಗಳಲ್ಲಿ ಟೈರ್ ಹಡಗು ಮಾ.31ರಂದು ಮುಂಬೈ ಕರಾವಳಿ ತಲುಪಲಿದ್ದು, ಇಎಲ್‌ಎಂ ಹಡಗು ಏ.1ರಂದು ನವ ಮಂಗಳೂರು ಬಂದರಿಗೆ ಪ್ರವೇಶಿಸುವ ನಿರೀಕ್ಷೆಯಿದೆ. ಜಗತ್ತಿನ ಯಾವುದೇ ರಾಷ್ಟ್ರಗಳಿಗೆ ಅನುಮತಿ ನೀಡಿರದ ಇರಾನ್, ಮೊದಲು ಭಾರತೀಯ ಹಡಗುಗಳಿಗೆ ಮಾತ್ರ ತೈಲ ಮತ್ತು ಅನಿಲ ಸಾಗಣೆಗೆ ಅವಕಾಶ ನೀಡಿತ್ತು. ಇದೀಗ ಭಾರತ ಸಹಿತ ಐದು ಮಿತ್ರ ರಾಷ್ಟ್ರಗಳಿಗೆ ಇರಾನ್ ಅನುಮತಿ ನೀಡಿದೆ. ಈಗಾಗಲೇ 6 ಭಾರತೀಯ ಹಡಗುಗಳು ಭಾರತಕ್ಕೆ ತಲುಪಿವೆ. ಅವುಗಳಲ್ಲಿ ಪೈನ್ ಗ್ಯಾಸ್ ಮತ್ತು ಜಗ್ ವಸಂತ್ 92,612 ಟನ್, ಎಂಟಿ ಶಿವಾಲಿಕ್ ಮತ್ತು ನಂದಾದೇವಿ 92,712 ಟನ್ ಎಲ್‌ಪಿಜಿ ಹೊತ್ತು ತಂದಿದ್ದವು. ಈ 6 ಅನಿಲ ಟ್ಯಾಂಕರ್‌ಗಳಲ್ಲದೆ, ಯುಎಇನಿಂದ 80,886 ಟನ್ ಕಚ್ಚಾ ತೈಲ ಹೊತ್ತ ಜಗ್ ಲಾಡ್ಕಿ ಹಡಗು ಮಾ.18ರಂದು ಮೊದಲಿಗೆ ಭಾರತ ತಲುಪಿತ್ತು.

ವಿದೇಶಾಂಗ ಸಚಿವರ ಸಮಾಗಮ

• **ಇಸ್ಲಾಮಾಬಾದ್:** ಪಶ್ಚಿಮ ಏಷ್ಯಾದಲ್ಲಿ ಉಂಟಾಗಿರುವ ಉದ್ವಿಗ್ನತೆಯನ್ನು ಶಮನಗೊಳಿಸುವ ಉದ್ದೇಶದಿಂದ ಪಾಕಿಸ್ತಾನ ಆಯೋಜಿಸಿರುವ ಎರಡು ದಿನಗಳ ಚತುರ್ಭುಜ ಶೃಂಗಸಭೆಯಲ್ಲಿ ಭಾಗವಹಿಸಲು ಸೌದಿ ಅರೇಬಿಯಾ, ಈಜಿಪ್ಟ್ ಮತ್ತು ಟರ್ಕಿಯ ವಿದೇಶಾಂಗ ಸಚಿವರು ಆಗಮಿಸಿದ್ದಾರೆ. ಉಪ ಪ್ರಧಾನ ಮಂತ್ರಿ ಇಶಾಕ್ ದಾರ್ ಆಹ್ವಾನದ ಮೇರೆಗೆ ಪ್ರಿನ್ಸ್ ಫೈಸಲ್ ಬಿನ್ ಫರ್ಹಾನ್ ಅಲ್ ಸೌದ್, ಬದ್ರ್ ಅಬ್ದೆಲಾಟ್ಟಿ ಮತ್ತು ಹಕನ್ ಫಿದಾನ್ ಪ್ರಾದೇಶಿಕ ಬೆಳವಣಿಗೆಗಳ ಕುರಿತು ಚರ್ಚೆ ನಡೆಸಲಿದ್ದಾರೆ. ಈ ನಾಯಕರು ಪ್ರಧಾನ ಮಂತ್ರಿ ಶೆಹಬಾಜ್ ಷರೀಫ್ ಅವರನ್ನೂ ಭೇಟಿ ಮಾಡುವ ಕಾರ್ಯಕ್ರಮವಿದೆ. ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಗ್ಚಿ ಅವರೊಂದಿಗೆ ನಡೆಸಿದ ದೂರವಾಣಿ ಸಂಭಾಷಣೆಯ ವೇಳೆ, ಹಾರ್ಮುಜ್ ಜಲಸಂಧಿಯ ಮೂಲಕ ಹಾದುಹೋಗಲು 20 ಪಾಕಿಸ್ತಾನಿ ಧ್ವಜದ ಹಡಗುಗಳಿಗೆ ಇರಾನ್ ಅನುಮತಿ ನೀಡಲಿದೆ ಎಂದು ದಾರ್ ಘೋಷಿಸಿದರು. ಪ್ರತಿದಿನ ಎರಡು ಹಡಗುಗಳು ಜಲಸಂಧಿಯನ್ನು ದಾಟಲಿವೆ. ಮಾತುಕತೆ ಮತ್ತು ರಾಜತಾಂತ್ರಿಕತೆಯ ಮೂಲಕ ಸಂಘರ್ಷವನ್ನು ಅಂತ್ಯಗೊಳಿಸಲು ಪಾಕಿಸ್ತಾನ ಸಂಬಂಧಿತ ದೇಶಗಳೊಂದಿಗೆ ಮಾತುಕತೆ ಮುಂದುವರಿಸಿದೆ.

ಅಮೆರಿಕ, ಯುರೋಪಿನಾದ್ಯಂತ ನೋ ಕಿಂಗ್ಸ್ ಬೃಹತ್ ಪ್ರತಿಭಟನೆ



• **ಸೇಂಟ್ ಪಾಲ್:** ಇರಾನ್ ಮೇಲಿನ ಯುದ್ಧ ಮತ್ತು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಕ್ರಮಗಳನ್ನು ವಿರೋಧಿಸಿ ಅಮೆರಿಕ ಮತ್ತು ಯುರೋಪಿನಾದ್ಯಂತ ನಡೆದ ನೋ ಕಿಂಗ್ಸ್ ರ್‍ಯಾಲಿಯಲ್ಲಿ ಲಕ್ಷಾಂತರ ಜನರು ಭಾಗವಹಿಸಿದ್ದರು.

ಆಯೋಜಕರು ಅಮೆರಿಕದ ಎಲ್ಲಾ 50 ರಾಜ್ಯಗಳಲ್ಲಿ 3,100ಕ್ಕೂ ಹೆಚ್ಚು ಕಾರ್ಯಕ್ರಮಗಳನ್ನು ನಡೆಸಿದ್ದು, ಮಿನ್ನೇಸೋಟ ಈ ಪ್ರತಿಭಟನೆಯ ಕೇಂದ್ರವಾಗಿತ್ತು. ಈ ವಾರ 90 ಲಕ್ಷ ಜನರು ಭಾಗವಹಿಸುವ ನಿರೀಕ್ಷೆಯಿದೆ ಎಂದು ಆಯೋಜಕರು ತಿಳಿಸಿದ್ದಾರೆ. ನ್ಯೂಯಾರ್ಕ್ ಮತ್ತು ಸ್ಯಾನ್ ಡಿಯಾಗೋದಂತಹ ಪ್ರಮುಖ ನಗರಗಳಲ್ಲದೆ, ಇಡಾಹೊ ಮತ್ತು ವ್ಯೋಮಿಂಗ್ ನಂತಹ ರಾಜ್ಯಗಳಲ್ಲೂ ಪ್ರತಿಭಟನೆಗಳು ನಡೆದಿವೆ.

ಪ್ರಮುಖ ಆರೋಪಗಳು: ವಲಸೆ ಜಾರಿ ಕ್ರಮಗಳು, ಲೈಂಗಿಕ ಅಲ್ಪಸಂಖ್ಯಾತರ(ಟ್ರಾನ್ಸ್ ಜೆಂಡರ್) ಹಕ್ಕುಗಳ ಹಿಂತೆಗೆತ ಮತ್ತು ಇರಾನ್ ಮೇಲಿನ ಯುದ್ಧದ ವಿರುದ್ಧ ಪ್ರತಿಭಟನಾಕಾರರು ಸಿಡಿದೆದ್ದಿದ್ದಾರೆ. ಸೇಂಟ್ ಪಾಲ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಗಾಯಕ ಬ್ರೂಸ್ ಸ್ಪ್ರಿಂಗ್‌ಸ್ಟೀನ್, ಫೆಡರಲ್ ಏಜೆಂಟ್‌ಗಳ ಗುಂಡಿಗೆ ಬಲಿಯಾದ ರೆನೀ ಗುಡ್ ಮತ್ತು ಅಲೆಕ್ಸ್ ಪ್ರೆಟ್ಟಿ ಅವರಿಗೆ ಗೌರವ ಸಲ್ಲಿಸಿದರು. ಲಂಡನ್, ಪ್ಯಾರಿಸ್ ಮತ್ತು ರೋಮ್‌ಗಳಲ್ಲೂ ಯುದ್ಧ ವಿರೋಧಿ ರ್‍ಯಾಲಿಗಳು ನಡೆದಿವೆ.

ಕಿರುಸುದ್ದಿ

ಡಿಎಂಕೆ ಪ್ರಾಬಲ್ಯದ ಎರಡು ಕ್ಷೇತ್ರಗಳಿಂದ ದಳಪತಿ ಸ್ಪರ್ಧೆ

• **ಚೆನ್ನೈ:** ಮುಂಬರುವ ತಮಿಳುನಾಡು ವಿಧಾನಸಭೆ ಚುನಾವಣೆಗಾಗಿ ತಮಿಳಗ ವೆಟ್ರಿ ಕಳಗಂ (ಟಿವಿಕೆ) ಪಕ್ಷ ತನ್ನ ಅಭ್ಯರ್ಥಿಗಳ ಹೆಸರನ್ನು ಪ್ರಕಟಿಸಿದ್ದು, ಪಕ್ಷದ ಮುಖ್ಯಮಂತ್ರಿ ಅಭ್ಯರ್ಥಿ ದಳಪತಿ ವಿಜಯ್ ಎರಡು ಕ್ಷೇತ್ರಗಳಿಂದ ಸ್ಪರ್ಧಿಸುವುದಾಗಿ ಭಾನುವಾರ ಘೋಷಿಸಿದೆ. ಡಿಎಂಕೆ ಅಧಿಕಾರದಲ್ಲಿರುವ ಪೆರಂಬೂರ್ ಮತ್ತು ತಿರುಚ್ಚಿ(ಪೂರ್ವ) ವಿಧಾನಸಭಾ ಕ್ಷೇತ್ರಗಳಿಂದ ನಟ ವಿಜಯ್ ಸ್ಪರ್ಧಿಸಲಿದ್ದಾರೆ. ಇದೇ ಮೊದಲ ಬಾರಿಗೆ ಚುನಾವಣಾ ಕಣಕ್ಕಿಳಿದಿರುವ ವಿಜಯ್, ತಮ್ಮ ಪಕ್ಷಕ್ಕೊಂದು ಅವಕಾಶ ನೀಡಬೇಕೆಂದು ಜನತೆಗೆ ಮನವಿ ಮಾಡಿದ್ದಾರೆ.

ರೇಮಂಡ್ ಗ್ರೂಪ್ ಮಾಜಿ ಅಧ್ಯಕ್ಷ ವಿಜಯಪತ್ ನಿಧನ

• **ಮುಂಬೈ:** ರೇಮಂಡ್ ಗ್ರೂಪ್‌ನ ಮಾಜಿ ಅಧ್ಯಕ್ಷರು, ಪದ್ಮಭೂಷಣ ಪ್ರಶಸ್ತಿ ಪುರಸ್ಕೃತ ವಿಜಯಪತ್ ಸಿಂಘಾನಿಯಾ(87) ಅವರು ನಿಧನ ಹೊಂದಿದ್ದಾರೆ. ಮಗ, ಸಮೂಹದ ಹಾಲಿ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಗೌತಮ್ ಸಿಂಘಾನಿಯಾ ಅವರು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ನಿಧನ ವಾರ್ತೆಯನ್ನು ತಿಳಿಸಿದ್ದಾರೆ.

ದಶಕದ ನಂತರ ಕಛ್‌ನಲ್ಲಿ ಜನ್ಮ ತಾಳಿದ ಹೆಬ್ಬಕ ಮರಿ



• **ಗಾಂಧಿನಗರ:** ಗುಜರಾತ್ ಮತ್ತು ರಾಜಸ್ಥಾನದ ಅರಣ್ಯ ಇಲಾಖೆಗಳ ಯಶಸ್ವಿ ಸಂರಕ್ಷಣಾ ಯೋಜನೆಯ ಫಲವಾಗಿ ಒಂದು ದಶಕದ ನಂತರ ಕಛ್‌ನ ಅಬ್ಡಾಸ ಪ್ರದೇಶದಲ್ಲಿ, ಬಿಳಿ ಹೆಬ್ಬಕದ (ಗ್ರೇಟ್ ಇಂಡಿಯನ್ ಬಸ್ಟರ್ಡ್) ಮರಿ ಜನ್ಮ ತಾಳಿದೆ. ರಾಜಸ್ಥಾನದ ಸಂತಾನೋತ್ಪತ್ತಿ ಕೇಂದ್ರದಿಂದ ತಂದ ಫಲವತ್ತಾದ ಮೊಟ್ಟೆಯಿಂದ ಮೂಲಕ ಮಾರ್ಚ್ 26ರಂದು ಮರಿ ಜನಿಸಿದೆ ಎಂದು ಅರಣ್ಯ ಸಚಿವ ಅರ್ಜುನ್ ಮೊಧ್ವಾಡಿಯಾ ಖಚಿತಪಡಿಸಿದ್ದಾರೆ. ಮಾರ್ಚ್ 22ರಂದು ಜಂಪ್ ಸ್ಟಾರ್ಟ್ ಅಪ್ರೋಚ್ ಅನ್ವಯ ಅಧಿಕಾರಿಗಳು ಹೆಣ್ಣು ಪಕ್ಷಿಯ ಗೂಡಿನಲ್ಲಿದ್ದ ಬಂಜೆ ಮೊಟ್ಟೆ ತೆಗೆದು, ಅದರ ಬದಲಿಗೆ ಈ ಫಲವತ್ತಾದ ಮೊಟ್ಟೆಯನ್ನು ಇರಿಸಿದ್ದರು.

ಯೋಜನೆಯ ಹಿನ್ನೆಲೆ ಏನು? ಬಿಳಿ ಹೆಬ್ಬಕಗಳ ನೈಸರ್ಗಿಕ ವಾಸಸ್ಥಾನವನ್ನು ಸಂರಕ್ಷಿಸುವ ಉದ್ದೇಶದಿಂದ 2016ರಲ್ಲಿ ಪ್ರಾಜೆಕ್ಟ್ ಜಿಐಬಿ ಅನ್ನು ಪ್ರಾರಂಭಿಸಲಾಗಿತ್ತು. ಪ್ರಸ್ತುತ ಆರೋಗ್ಯ ರಕ್ಷಣಾ ತಂಡಗಳು ಹೆಣ್ಣು ಪಕ್ಷಿ ಮತ್ತು ಆರೋಗ್ಯಕರ ಮರಿಯ ಸುರಕ್ಷತೆ ಹಾಗೂ ಬೆಳವಣಿಗೆಯನ್ನು ನಿರಂತರವಾಗಿ ಗಮನಿಸುತ್ತಿವೆ.

ತ.ನಾಡು ಮಹಿಳೆಯರಿಗೆ 8,000 ರೂ.ಗಳ ಕೂಪನ್

• **ಚೆನ್ನೈ:** ವಿಧಾನಸಭೆ ಚುನಾವಣೆಗೆ ಡಿಎಂಕೆ ತಮ್ಮ ಪಕ್ಷದ ಪ್ರಣಾಳಿಕೆಯನ್ನು ಭಾನುವಾರ ಬಿಡುಗಡೆ ಮಾಡಿದ್ದು, ಮಹಿಳೆಯರಿಗೆ ಮನೆ ಉಪಕರಣಗಳನ್ನು ಖರೀದಿಸಲು ಅಥವಾ ಬದಲಾಯಿಸಲು ಇಲ್ಲತರಾಸಿ ರೂಪದಲ್ಲಿ 8,000 ರೂ. ಮೌಲ್ಯದ ಕೂಪನ್ ನೀಡಲಾಗುತ್ತದೆ ಎಂದು ತಮಿಳುನಾಡಿನ ಮುಖ್ಯಮಂತ್ರಿ ಮತ್ತು ಡಿಎಂಕೆ ಅಧ್ಯಕ್ಷ ಎಂ.ಕೆ. ಸ್ಟಾಲಿನ್ ಘೋಷಿಸಿದ್ದಾರೆ. ಈ ಕೂಪನ್ ಟಿವಿ, ಫ್ರಿಜ್, ವಾಷಿಂಗ್ ಮಷಿನ್, ಮೈಕ್ರೋವೇವ್ ಓವೆನ್, ಮಿಕ್ಸಿ, ಇಂಡಕ್ಷನ್ ಸ್ಟವ್ ಮುಂತಾದ ಉಪಕರಣಗಳಿಗೆ ಬಳಸಬಹುದು. ಹಿರಿಯ ನಾಗರಿಕರು ಮತ್ತು 50 ವರ್ಷ ಮೇಲ್ಪಟ್ಟ ಮಹಿಳೆಯರಿಗೆ ಪಿಂಚಣಿ 2,000 ರೂ.ಗೆ ಹೆಚ್ಚಳ, ಸಿಎಂ ಆರೋಗ್ಯ ರಕ್ಷಣೆ ಯೋಜನೆಯ ವ್ಯಾಪ್ತಿ 10 ಲಕ್ಷ ರೂ.ವರೆಗೆ ಹೆಚ್ಚಳ, 20 ಲಕ್ಷ ಕೃಷಿಕರಿಗೆ ಉಚಿತ ವಿದ್ಯುತ್ ಉಪಕರಣಗಳೊಂದಿಗೆ ಎಲೆಕ್ಟ್ರಿಕ್ ಪಂಪ್ ಸೆಟ್ ನೀಡಲಾಗುವುದು. 10 ಲಕ್ಷ ನೂತನ ಕಾಂಕ್ರೀಟ್ ಮನೆ ನಿರ್ಮಾಣ, 5 ಲಕ್ಷ ಯುವಕರಿಗೆ 1,500 ರೂ. ಮಾಸಿಕ ಸಹಾಯ, 50 ಲಕ್ಷ ಉದ್ಯೋಗ ಸೃಷ್ಟಿ ಮತ್ತು 35 ಲಕ್ಷ ಉಚಿತ ಲ್ಯಾಪ್‌ಟಾಪ್ ಹಂಚಿಕೆ ಮತ್ತು ಕೊಯಂಬತ್ತೂರು, ಸಲೇಮ್, ಮಧುರೈ, ತಿರುಚಿರಾಪಳ್ಳಿ ಬಳಿ ಭವಿಷ್ಯದ ಅತ್ಯಾಧುನಿಕ ವಿಜ್ಞಾನಗರಗಳ ನಿರ್ಮಾಣ ಮಾಡುತ್ತೇವೆ.

ಹೆಲ್ತ್ ಸೆಕ್ಟರ್‌ನಲ್ಲಿ ಡಯಾಲಿಸಿಸ್ ಘಟಕಗಳನ್ನು ದುಪ್ಪಟ್ಟು ಮಾಡಲಾಗುತ್ತದೆ ಮತ್ತು 11 ಸರ್ಕಾರಿ ಆಸ್ಪತ್ರೆಗಳಲ್ಲಿ ಕ್ಯಾನ್ಸರ್ ಚಿಕಿತ್ಸಾ ಕೇಂದ್ರ ಸ್ಥಾಪಿಸಲಾಗುತ್ತದೆ. ಮೀನುಗಾರರಿಗೆ ಮತ್ತು ಹಾಲು ಉತ್ಪಾದಕರಿಗೆ ಸಹಾಯದ ಪ್ರಮಾಣ ಹೆಚ್ಚಿಸಲಾಗುತ್ತದೆ ಎಂದು ಡಿಎಂಕೆ ಭರವಸೆ ನೀಡಿದೆ.

ಇಂಧನ, ಎಲ್‌ಪಿಜಿ ಪೂರೈಕೆ ವ್ಯತ್ಯಯವಾಗದಂತೆ ಕ್ರಮ

• **ಹೊಸದಿಲ್ಲಿ:** ಹಾರ್ಮುಜ್ ಜಲಸಂಧಿ ಮುಚ್ಚಲ್ಪಟ್ಟ ಹಿನ್ನೆಲೆಯಲ್ಲಿ, ಸರ್ಕಾರ ಇಂಧನ ಮತ್ತು ಅನಿಲ ಪೂರೈಕೆಯಲ್ಲಿ ಯಾವುದೇ ವ್ಯತ್ಯಯವಾಗದಂತೆ ಖಚಿತಪಡಿಸಿಕೊಳ್ಳಲು ಕ್ರಮಗಳನ್ನು ಜಾರಿಗೊಳಿಸಿದ್ದು, ಆತಂಕದಿಂದ ಇಂಧನ ಖರೀದಿ ಮಾಡದಂತೆ ನಾಗರಿಕರಿಗೆ ಸೂಚಿಸಿದೆ. ಸಂಸ್ಕರಣಾಗಾರಗಳು ಹೆಚ್ಚಿನ ಸಾಮರ್ಥ್ಯದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ದೇಶಾದ್ಯಂತ ಕಚ್ಚಾ ತೈಲ, ಪೆಟ್ರೋಲ್ ಮತ್ತು ಡೀಸೆಲ್‌ನ ಸಾಕಷ್ಟು ದಾಸ್ತಾನು ಇದೆ. ವದಂತಿಗಳಿಂದಾಗಿ ಕೆಲವು ರಾಜ್ಯಗಳಲ್ಲಿ ತಾತ್ಕಾಲಿಕವಾಗಿ ಬೇಡಿಕೆ ಹೆಚ್ಚಾಗಿದ್ದರೂ, ಎಲ್ಲಾ ಪೆಟ್ರೋಲ್ ಬಂಕ್‌ಗಳಲ್ಲಿ ಪೂರೈಕೆಗೆ ಅಗತ್ಯವಿರುವಷ್ಟು ದಾಸ್ತಾನು ಲಭ್ಯವಿದೆ. ಪೈಪ್ಡ್ ನೈಸರ್ಗಿಕ ಅನಿಲ(ಪಿಎನ್‌ಜಿ) ಮತ್ತು ಸಿಎನ್‌ಜಿ (ಸಿಎನ್‌ಜಿ) ಪೂರೈಕೆಗೆ ಶೇ.100ರಷ್ಟು ಆದ್ಯತೆ ನೀಡಲಾಗಿದೆ. ಕೈಗಾರಿಕಾ ಬಳಕೆದಾರರು ಸರಾಸರಿ ಬಳಕೆಯ ಶೇ.80ರಷ್ಟು ಪೂರೈಕೆಯನ್ನು ಪಡೆಯುತ್ತಿದ್ದರೆ, ರಸಗೊಬ್ಬರ ಘಟಕಗಳು ಶೇ.70ರಿಂದ 75ರಷ್ಟು ಪೂರೈಕೆಯನ್ನು ಪಡೆಯುತ್ತಿವೆ. ಮಾರ್ಚ್‌ನಲ್ಲಿ 2,90,000ಕ್ಕೂ ಹೆಚ್ಚು ಹೊಸ ಪೈಪ್ಡ್ ಗ್ಯಾಸ್ ಸಂಪರ್ಕಗಳನ್ನು ಒದಗಿಸಲಾಗಿದೆ. ದೈನಂದಿನ ಎಲ್‌ಪಿಜಿ ವಿತರಣೆ 55 ಲಕ್ಷ ಸಿಲಿಂಡರ್‌ಗಳನ್ನು ಮೀರಿದೆ. ವಾಣಿಜ್ಯ ಬಳಕೆಯ ಪೂರೈಕೆ ಬಿಕ್ಕಟ್ಟಿನ ಪೂರ್ವದ ಮಟ್ಟದ ಶೇ.70ರಷ್ಟನ್ನು ತಲುಪಿದೆ. ಅಕ್ರಮ ದಾಸ್ತಾನು ತಡೆಗಟ್ಟಲು ಅಧಿಕಾರಿಗಳು 2,900 ದಾಳಿಗಳನ್ನು ನಡೆಸಿ 1,000 ಸಿಲಿಂಡರ್‌ಗಳನ್ನು ವಶಪಡಿಸಿಕೊಂಡಿದ್ದಾರೆ. ಇದೇ ವೇಳೆ ರಾಜ್ಯಗಳಿಗೆ ಸೀಮೆಎಣ್ಣೆ ಹಂಚಿಕೆಯನ್ನು ಹೆಚ್ಚಿಸಲಾಗಿದೆ. ದೇಶೀಯ ಲಭ್ಯತೆಯನ್ನು ಹೆಚ್ಚಿಸಲು ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಅಬಕಾರಿ ಸುಂಕವನ್ನು ಪ್ರತಿ ಲೀಟರ್‌ಗೆ 10 ರೂ. ಕಡಿತಗೊಳಿಸಲಾಗಿದೆ.

ಮಿಗ್29 ಫೈಟರ್ ಜೆಟ್‌ಗೆ ಶೀಘ್ರವೇ ಆಧುನಿಕ ಕ್ಷಿಪಣಿ

• **ಹೊಸದಿಲ್ಲಿ:** ಭಾರತೀಯ ವಾಯುಪಡೆಯ(ಐಎಎಫ್) ಮಿಗ್-29 ಯುದ್ಧ ವಿಮಾನಗಳಲ್ಲಿನ ರಷ್ಯಾ ಶಸ್ತ್ರಾಸ್ತ್ರಗಳ ಬದಲಿಗೆ ಯುರೋಪಿನ ಅತ್ಯಾಧುನಿಕ ಕಡಿಮೆ ದೂರವ್ಯಾಪ್ತಿಯ ಏರ್-ಟು-ಏರ್ ಕ್ಷಿಪಣಿಗಳನ್ನು ಅಳವಡಿಸುವ ಪ್ರಕ್ರಿಯೆಯನ್ನು ಕೇಂದ್ರ ಸರ್ಕಾರ ಆರಂಭಿಸಿದೆ. ಇದರಿಂದ ಐಎಎಫ್‌ನ ಯುದ್ಧ ಸಾಮರ್ಥ್ಯವು ಇನ್ನಷ್ಟು ಹೆಚ್ಚಾಗಲಿದೆ. ರಷ್ಯಾ ಮೂಲದ ಯುದ್ಧ ವಿಮಾನಗಳಲ್ಲಿ, ಸುಮಾರು 25 ಕಿ.ಮೀ. ದೂರವ್ಯಾಪ್ತಿ ಇರುವ ಅತ್ಯಾಧುನಿಕ ಯುದ್ಧ ಕ್ಷಿಪಣಿಗಳನ್ನು ನಿಯೋಜಿಸಲು ರಕ್ಷಣಾ ಸಚಿವಾಲಯವು ಟೆಂಡರ್ ಆಹ್ವಾನಿಸಿತ್ತು. ಪ್ರಸ್ತುತ ಈ ರೀತಿಯ 50ಕ್ಕೂ ಹೆಚ್ಚು ಯುದ್ಧವಿಮಾನಗಳನ್ನು ವಾಯುಪಡೆಯು ಹೊಂದಿದ್ದು, ಅದರಲ್ಲಿ ಎರಡು ಆಸನಗಳ 8 ತರಬೇತಿ ಯುದ್ಧ ವಿಮಾನಗಳೂ ಸೇರಿವೆ. ಭಾರತೀಯ ವಾಯುಪಡೆಯ ಯುದ್ಧ ವಿಮಾನಗಳಲ್ಲಿ ಎಸ್‌ಆರ್‌ಎಎಎಂ ಕ್ಷಿಪಣಿಗಳ ಅಳವಡಿಕೆಯಿಂದ 1980ರ ದಶಕದ ಇನ್‌ಫ್ರಾರೆಡ್ ಮಾರ್ಗದರ್ಶಿತ ಆರ್-73 ಕ್ಷಿಪಣಿಯನ್ನು (10ರಿಂದ 15 ಕಿ.ಮೀ. ವ್ಯಾಪ್ತಿ) ಹಿಂಪಡೆಯಲಾಗುತ್ತದೆ.

ಸಂಘರ್ಷಗಳಿಂದ ಜಾಗತಿಕ ಇಂಧನ ಪೂರೈಕೆಗೆ ಸಂಕಷ್ಟ: ಮನ್ ಕಿ ಬಾತ್‌ನಲ್ಲಿ ಮೋದಿ

ಸರ್ಕಾರ ನೀಡುವ ಮಾಹಿತಿಯನ್ನು ಮಾತ್ರ ನಂಬಿ

• **ಹೊಸದಿಲ್ಲಿ:** ಜಾಗತಿಕ ಇಂಧನ ಪರಿಸ್ಥಿತಿ ಕುರಿತು ಎಚ್ಚರಿಕೆ ನೀಡಿರುವ ಪ್ರಧಾನಿ ನರೇಂದ್ರ ಮೋದಿಯವರು, ವಿಶ್ವದ ಹಲವು ಭಾಗಗಳಲ್ಲಿ ನಡೆಯುತ್ತಿರುವ ಯುದ್ಧಗಳು ಮತ್ತು ಸಂಘರ್ಷಗಳು ಪೆಟ್ರೋಲ್ ಹಾಗೂ ಡೀಸೆಲ್ ಸರಬರಾಜಿನ ಮೇಲೆ ಪರಿಣಾಮ ಬೀರುತ್ತಿದ್ದು, ಜಾಗತಿಕ ಮಟ್ಟದಲ್ಲಿ ಇಂಧನ ಸಂಕಷ್ಟ ರೂಪುಗೊಳ್ಳುತ್ತಿದೆ ಎಂದು ಹೇಳಿದರು.

ತಮ್ಮ 132ನೇ ಮನ್ ಕಿ ಬಾತ್ ಕಾರ್ಯಕ್ರಮದಲ್ಲಿ ಮಾತನಾಡಿರುವ ಅವರು, ಇಂತಹ ಸವಾಲುಗಳ ನಡುವೆಯೂ ಭಾರತವು ಪರಿಸ್ಥಿತಿಯನ್ನು ಸ್ಥಿರವಾಗಿ ಎದುರಿಸುತ್ತಿದೆ. ಇಂತಹ ಸಮಯದಲ್ಲಿ ದೇಶದ ಜನರು ಏಕತೆ ಪ್ರದರ್ಶಿಸಬೇಕು ಮತ್ತು ಅಪಪ್ರಚಾರಗಳಿಗೆ ಕಿವಿಗೊಡಬಾರದು. ಸರ್ಕಾರ ನೀಡುವ ಮಾಹಿತಿಯನ್ನು ಮಾತ್ರ ನಂಬಬೇಕು ಎಂದು ಮನವಿ ಮಾಡಿದರು.

ಕೋವಿಡ್ ನಂತರ ವಿಶ್ವವು ಪುನಶ್ಚೇತನಗೊಳ್ಳಲಿದೆ ಎಂದು ನಿರೀಕ್ಷಿಸಿದ್ದರೂ, ವಿವಿಧ ಪ್ರದೇಶಗಳಲ್ಲಿ ಯುದ್ಧಗಳು ಮುಂದುವರಿದಿವೆ. ವಿಶೇಷವಾಗಿ ಅಮೆರಿಕ, ಇಸ್ರೇಲ್ ಮತ್ತು ಇರಾನ್ ನಡುವೆ ನಡೆಯುತ್ತಿರುವ ಸಂಘರ್ಷವನ್ನು ಉಲ್ಲೇಖಿಸಿದ ಅವರು, ಗಲ್ಫ್ ರಾಷ್ಟ್ರಗಳಲ್ಲಿ ಕೆಲಸ ಮಾಡುತ್ತಿರುವ ಲಕ್ಷಾಂತರ ಭಾರತೀಯರ



ಸುರಕ್ಷತೆ ಹಾಗೂ ಅಲ್ಲಿ ದೊರೆಯುತ್ತಿರುವ ಸಹಕಾರಕ್ಕೆ ಕೃತಜ್ಞತೆ ವ್ಯಕ್ತಪಡಿಸಿದರು. ಈ ಪ್ರದೇಶವು ಭಾರತದ ಪ್ರಮುಖ ಇಂಧನ ಮೂಲವಾಗಿರುವುದರಿಂದ ಇಂಧನ ಸರಬರಾಜಿನ ಮೇಲೆ ಪರಿಣಾಮ ಕಂಡುಬರುತ್ತಿದೆ ಎಂದು ಹೇಳಿದರು.

ಜ್ಞಾನ ಭಾರತಂ ಆ್ಯಪ್: ಜ್ಞಾನ ಭಾರತಂ ಸಮೀಕ್ಷೆಯ ಕುರಿತು ಮಾತನಾಡಿದ ಅವರು, ದೇಶದ ಹಸ್ತಪ್ರತಿಗಳ ಮಾಹಿತಿ ಸಂಗ್ರಹಿಸುವ ಈ ಯೋಜನೆಯಲ್ಲಿ ಜನರ ಪಾಲ್ಗೊಳ್ಳುವಿಕೆಯನ್ನು ಕೋರಿದರು. ಜ್ಞಾನ ಭಾರತಂ ಆ್ಯಪ್ ಮೂಲಕ ಮಾಹಿತಿ ಹಂಚಿಕೊಳ್ಳಬಹುದು ಎಂದು ಹೇಳಿದರು.

ಭಾರತದ ಜಯ ದೇಶಕ್ಕೆ ಹೆಮ್ಮೆ: ಕ್ರೀಡೆಗಳ ಕುರಿತು ಮಾತನಾಡಿದ ಪ್ರಧಾನಿ, ಟಿ20 ವಿಶ್ವಕಪ್‌ನಲ್ಲಿ ಭಾರತದ ಜಯ ದೇಶಕ್ಕೆ ಹೆಮ್ಮೆ ತಂದಿದೆ. ಜಮ್ಮು-ಕಾಶ್ಮೀರದಲ್ಲಿ ಕ್ರೀಡೆಗಳಿಗೆ ಹೆಚ್ಚುತ್ತಿರುವ ಪ್ರೋತ್ಸಾಹವನ್ನು ಉಲ್ಲೇಖಿಸಿ, ಯುವಕರು ವಿವಿಧ ಕ್ರೀಡೆಗಳಲ್ಲಿ ತೊಡಗಿಸಿಕೊಂಡಿರುವುದು ಸಂತಸದ ವಿಚಾರ ಎಂದರು.

ಆರೋಗ್ಯದ ಮಹತ್ವವನ್ನು ಒತ್ತಿಹೇಳಿದ ಅವರು, ಸಕ್ಕರೆ ಮತ್ತು ಖಾದ್ಯ ತೈಲ ಬಳಕೆಯನ್ನು ಕಡಿಮೆ ಮಾಡಲು ಸಲಹೆ ನೀಡಿದರು. ಅಂತಾರಾಷ್ಟ್ರೀಯ ಯೋಗ ದಿನಾಚರಣೆಗೆ ತಯಾರಾಗುವಂತೆ ಕರೆ ನೀಡಿದರು.

ಶಿಕ್ಷಣ ಕ್ಷೇತ್ರದಲ್ಲಿ ನಿರಂತರ ಅಭ್ಯಾಸದ ಅಗತ್ಯವನ್ನು ಒತ್ತಿ ಹೇಳಿದ ಅವರು, ಬೆಂಗಳೂರಿನ ಪ್ರಯೋಗಾ ಸಂಸ್ಥೆಯ ಅನ್ವೇಷಣೆ ಕಾರ್ಯಕ್ರಮವನ್ನು ಮೆಚ್ಚಿದರು. ಇದು ವಿದ್ಯಾರ್ಥಿಗಳಿಗೆ ಸಂಶೋಧನಾ ಅವಕಾಶ ಒದಗಿಸುತ್ತದೆ ಎಂದು ಹೇಳಿದರು. ಜೊತೆಗೆ ನಾಗಾ ಸಮುದಾಯದ 'ಮೊರುಂಗ್' ಶಿಕ್ಷಣ ಪದ್ಧತಿಯನ್ನು ಉದಾಹರಣೆಯಾಗಿ ನೀಡಿ, ಪರಂಪರ ಜ್ಞಾನವನ್ನು ಉಳಿಸುವ ಮಹತ್ವವನ್ನು ವಿವರಿಸಿದರು.

ಕಳೆದ ಹತ್ತು ವರ್ಷಗಳಲ್ಲಿ ಅಕ್ರಮ ನುಸುಳುವಿಕೆ ತಡೆಗಟ್ಟಿದ ಬಿಜೆಪಿ: ಶಾ

ನುಸುಳುಕೋರರನ್ನು ಹೊರದಬ್ಬುತ್ತೇವೆ

• **ಧೇಕಿಯಾಜುಲಿ(ಅಸ್ಸಾಂ):** ಕಳೆದ ಹತ್ತು ವರ್ಷಗಳಲ್ಲಿ ಬಿಜೆಪಿ ಸರ್ಕಾರ ಅಸ್ಸಾಂನಲ್ಲಿ ನುಸುಳುವಿಕೆಯನ್ನು ತಡೆಗಟ್ಟಿದೆ. ಆದರೆ ಅದಷ್ಟೇ ಸಾಕಾಗುವುದಿಲ್ಲ, ಬಂಧಿಸಲ್ಪಟ್ಟ ಪ್ರತಿಯೊಬ್ಬ ನುಸುಳುಕೋರನನ್ನೂ ವಾಪಸ್ ಹೊರದಬ್ಬಬೇಕು ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಗುಡುಗಿದ್ದಾರೆ. ಅಸ್ಸಾಂನ ಸೋನಿತ್ಪುರ್ ಜಿಲ್ಲೆಯ ಧೇಕಿಯಾಜುಲಿ ಪ್ರದೇಶದಲ್ಲಿ ಭಾನುವಾರ ನಡೆದ ಚುನಾವಣಾ ಸಭೆಯಲ್ಲಿ ಮಾತನಾಡಿದ ಅವರು, ಅಸ್ಸಾಂಗೆ ನುಸುಳುಕೋರರು ಪ್ರವೇಶಿಸದಂತೆ ತಡೆಯುತ್ತೇವೆಂದು ಹತ್ತು ವರ್ಷಗಳ ಹಿಂದೆ ನೀಡಿದ್ದ ವಾಗ್ದಾನವನ್ನು ಬಿಜೆಪಿ ಈಡೇರಿಸಿದೆ ಎಂದು ಹೇಳಿದ್ದಾರೆ.

ಉದ್ಯೋಗ, ಆಹಾರಧಾನ್ಯ ಕಸಿದ ಅಕ್ರಮ ವಲಸಿಗರು: ಒಳನುಸುಳುಕೋರರು ಅಸ್ಸಾಮಿ ಯುವಕರ ಉದ್ಯೋಗ ಕಸಿದುಕೊಂಡಿದ್ದು, ಬಡವರ ಆಹಾರಧಾನ್ಯವನ್ನೂ ಕಬಳಿಸಿದ್ದಾರೆ ಎಂದು ಶಾ ಆರೋಪಿಸಿದರು.

1.25 ಲಕ್ಷ ಎಕರೆ ನುಸುಳುಕೋರ ಮುಕ್ತ: ಹಿಮಂತ ಬಿಸ್ವ ಶರ್ಮಾ ಸರ್ಕಾರವು ನುಸುಳುಕೋರರು ಅಕ್ರಮವಾಗಿ ಅತಿಕ್ರಮಿಸಿದ್ದ 1.25 ಲಕ್ಷ ಎಕರೆ ಭೂಮಿಯನ್ನು ನುಸುಳುಕೋರ ಮುಕ್ತಗೊಳಿಸಿದೆ. ಮುಂದಿನ ಐದು ವರ್ಷಗಳಲ್ಲಿ ನುಸುಳುಕೋರರ ನಿಯಂತ್ರಣದಲ್ಲಿ ಭೂಮಿ ಉಳಿಯದಂತೆ ಶರ್ಮಾ ಖಚಿತಪಡಿಸುವರು ಎಂದು ಶಾ ಭರವಸೆ ನೀಡಿದ್ದಾರೆ.

ನುಸುಳುಕೋರರ ರಕ್ಷಣೆಗೆ ನಿಂತ ರಾಹುಲ್: ನುಸುಳುಕೋರರ



ರಕ್ಷಿಸುವ ಉದ್ದೇಶದಿಂದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹಲವು ರಾಜ್ಯಗಳಲ್ಲಿ ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್)ಗೆ ವಿರೋಧಿಸುತ್ತಲೇ ಇದ್ದಾರೆಂದು ಶಾ ಆರೋಪಿಸಿದ್ದಾರೆ.

ಹುತಾತ್ಮರಿಗೆ ಸ್ಮಾರಕ ಕಟ್ಟಲಿಲ್ಲ ಕಾಂಗ್ರೆಸ್: ಅಸ್ಸಾಂ ಚಳವಳಿಯ ಹುತಾತ್ಮರಿಗಾಗಿ ಕಾಂಗ್ರೆಸ್ ಏನೇನೂ ಮಾಡಿಲ್ಲ, ಹುತಾತ್ಮರ ಸ್ಮರಣಾರ್ಥ ಗುವಾಹಟಿಯಲ್ಲಿ ಶಹೀದ್ ಸ್ಮಾರಕವನ್ನು ರಾಜ್ಯದ ಬಿಜೆಪಿ ಸರ್ಕಾರವೇ ನಿರ್ಮಾಣ ಮಾಡಿದೆ ಎಂದು ಶಾ ಹೇಳಿದರು. ಕಾಂಗ್ರೆಸ್ ದೇಶದ ಭದ್ರತೆಗೆ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಲಿಲ್ಲ, ಆದರೆ ಪ್ರಧಾನಿ ಮೋದಿ ಭಯೋತ್ಪಾದಕರ ವಿರುದ್ಧ ಕಠಿಣ ನಿಲುವುಗಳನ್ನು ತೆಗೆದುಕೊಂಡಿದ್ದಾರೆಂದ ಶಾ, ತಮ್ಮ ಭಾಷಣದಲ್ಲಿ ಸರ್ಜಿಕಲ್ ಸ್ಟ್ರೈಕ್, ಬಾಲಾಕೋಟ್ ಏರ್ ಸ್ಟ್ರೈಕ್ ಮತ್ತು ಆಪರೇಷನ್ ಸಿಂಧೂರವನ್ನು ಉಲ್ಲೇಖಿಸಿದ್ದಾರೆ.

ಸಂಪಾದಕೀಯ

ಕಳ್ಳರ ಮೊರೆಹೋದ ಇರಾನ್!

ಹೌತಿ ಭಯೋತ್ಪಾದಕರು ಅಧಿಕೃತವಾಗಿ ಮಧ್ಯಪ್ರಾಚ್ಯ ಯುದ್ಧದಲ್ಲಿ ಇರಾನಿಗೆ ಬೆಂಬಲ ನೀಡುವುದರೊಂದಿಗೆ ಅನೇಕರ ಯುದ್ಧ ವಿಶ್ಲೇಷಣೆಗಳಿಗೆ ಅಸಲಿ ಉತ್ತರ ನೀಡಿದೆ. ಏಕೆಂದರೆ ಆರಂಭದಲ್ಲಿ ಅಮೆರಿಕಾದ ತೈಲದಾಹ, ಎಕನಾಮಿಕ್ ಹಿಟ್ಮನ್ ಗುಣ, ಇಸ್ರೇಲಿನ ಆಕ್ರಮಣಕಾರಿ ಸ್ವಭಾವ ಮುಂತಾದ ಕಾರಣಗಳನ್ನು ಕೊಡುತ್ತಿದ್ದವರಿಗೆ ಇದೀಗ ಹೌತಿ ಇರಾನಿಗೆ ಬೆಂಬಲ ನೀಡುವುದರೊಂದಿಗೆ, ಈ ಯುದ್ಧವು ಜಿಹಾದ್ ಆಗಿ ಬದಲಾಗಿದೆ ಎಂದು ಜಗತ್ತು ಒಪ್ಪಿಕೊಳ್ಳಲೇಬೇಕಾಗಿದೆ.

ಜಗತ್ತಿನ ಅತ್ಯಂತ ಅಪಾಯಕಾರಿ ಭಯೋತ್ಪಾದಕ ಗುಂಪುಗಳಲ್ಲಿ ಯೆಮನ್‌ನ ಹೌತಿ ಒಂದು. ಇಡೀ ಜಗತ್ತು ಮತದ ಆಧಾರದಲ್ಲಿ ಆಡಳಿತಕ್ಕೊಳಪಡಬೇಕೆಂದು ನಂಬುವ ಕಟ್ಟರ್‌ಪಂಥೀಯ ಹೌತಿಗಳು ಶಸ್ತ್ರಾಸ್ತ್ರ ಹೋರಾಟವೊಂದೇ ಅದಕ್ಕೆ ಮಾರ್ಗ ಎನ್ನುತ್ತದೆ. ಅದಕ್ಕಾಗಿ ಅವರು ಮುಸ್ಲಿಮರನ್ನು ಹತ್ಯೆಗೈಯಲೂ ಹೇಸುವುದಿಲ್ಲ. ಯೆಮನ್ ಆಡಳಿತದ ವಿರುದ್ಧ ಹುಟ್ಟಿಕೊಂಡ ಈ ಸಂಘಟನೆಯನ್ನು ಆರಂಭದಿಂದಲೂ ಇರಾನ್ ಪೋಷಿಸಿತು. ಸ್ವತಃ ಇರಾನ್ ಅದನ್ನು ಆರಂಭಿಸಿತು ಎಂದು ಕೂಡ ಹೇಳಲಾಗುತ್ತದೆ. ಜೊತೆಗೆ ಮತ, ರಾಜತಾಂತ್ರಿಕತೆ, ಮಾನಸಿಕತೆಯಲ್ಲಿ ಅದು ಇರಾನಿನ ಪಡಿಯಚ್ಚು. ಹಿಂದೆ ಗಾಜಾ ಯುದ್ಧದಲ್ಲಿ ಹೌತಿಗಳು ಪೂರ್ಣ ಶಕ್ತಿಯನ್ನು ಹಾಕಿದ್ದರು. ಇಸ್ರೇಲಿಯರಿಂದ ಪೆಟ್ಟುತಿಂದರೂ ಇದೀಗ ಚೇತರಿಸಿಕೊಂಡಂತೆ ಮತ್ತೆ ಯುದ್ಧರಂಗಕ್ಕಿಳಿದಿದೆ. ಒಂದೆಡೆ ಮಹಾನ್ ರಾಜತಾಂತ್ರಿಕ ಮುಖವಾಡವನ್ನು ಹೊದ್ದು ಯುದ್ಧದಲ್ಲಿ ಜಿದ್ದಿನಿಂದ ಹೋರಾಟ ನಡೆಸುತ್ತಿರುವ ಇರಾನ್, ಇನ್ನೊಂದೆಡೆ ಅಂಥ ಇರಾನಿಗೆ ನೇರ ಬೆಂಬಲ ನೀಡುವ ತರಬೇತಿಯಿಲ್ಲದ, ಕೌಶಲ್ಯರಹಿತ ಜಿಹಾದಿಗಳು ಈ ಯುದ್ಧದ ಸ್ವರೂಪವನ್ನು ಮಾತ್ರವಲ್ಲ, ವ್ಯಾಖ್ಯಾನವನ್ನೂ ಬದಲಿಸಲಿದೆ. ಯೆಮನ್‌ಗಾಗಲೀ, ಹೌತಿಗಳಿಗಾಗಲೀ ಇಸ್ರೇಲ್ ಎಂದಿಗೂ ಕಂಟಕವಾಗಿರಲಿಲ್ಲ, ಇಸ್ರೇಲಿಗೆ ತಲೆಕೆಡಿಸಿಕೊಳ್ಳಲು ನೂರಾರು ಸಂಗತಿಗಳಿವೆ. ಆದರೆ ಹೌತಿಗಳು ಇಸ್ರೇಲಿನ ವಿರುದ್ಧ ಸದಾ ಕಾಲುಕೆರೆದು ಜಗಳಕ್ಕೆ ನಿಲ್ಲುತ್ತದೆ. ಅಮೆರಿಕದ ವಿರುದ್ಧ ಕೂಡ ಹೌತಿಗಳು ಹಿಂದಿನಿಂದಲೂ ಕೆಂಡಕಾರುತ್ತಲೇ ಬಂದಿದೆ. ಹಿಂದಿನಿಂದಲೂ ಹೌತಿಗಳದ್ದು 'ಡೆತ್ ಟು ಅಮೇರಿಕಾ, ಡೆತ್ ಟು ಇಸ್ರೇಲ್' ಎಂಬ ಘೋಷಣೆಯನ್ನು ಧ್ಯೇಯವಾಕ್ಯದಂತೆ ಪಾಲಿಸಿಕೊಂಡು ಬಂದಿರುವುದರಲ್ಲೇ ಅದರ ಮಾನಸಿಕತೆ ಎದ್ದು ಕಾಣುತ್ತದೆ. ಹೀಗೆ ಹೇಳಿಕೊಳ್ಳುವ ಹೌತಿಗಳು ಕೆಂಪು ಸಮುದ್ರದಲ್ಲಿ ಸಾಗುವ ವ್ಯಾಪಾರಿ ಹಡಗುಗಳ ಮೇಲೆ ದಾಳಿ ಮಾಡಿ ಸಂಪತ್ತನ್ನು ಸಂಗ್ರಹಿಸುತ್ತಿತ್ತು ಎಂದರೆ ಇವರನ್ನು ಕಡಲ್ಗಳ್ಳರೆನ್ನದೆ ಇನ್ನೇನನ್ನಬೇಕು? ಇಂಥವರು ಇಂದು ಇರಾನಿನ ಪರ ನಿಂತಿದ್ದಾರೆ. ಇರಾನಿಗೂ ಈಗ ಇಂಥವರ ಸಹವಾಸ ಬೇಕಿದೆ. ನೇರ ಯುದ್ಧದಲ್ಲಿ ಬಲಾಢ್ಯ ಪಡೆಗಳನ್ನು ಎದುರಿಸಲಾಗದ ಇರಾನ್ ಕಳ್ಳರ ಮೊರೆಹೋಗಿದೆ.

ಪ್ರಸಕ್ತ ಯುದ್ಧದಲ್ಲಿ ಭಾರತ ಯಾರ ಪರ ಎನ್ನುವುದನ್ನು ಸ್ಪಷ್ಟಪಡಿಸಬೇಕೆನ್ನುವುದು ಹುಚ್ಚುತನದ ಪ್ರಶ್ನೆ. ಎಲ್ಲೋ ನಡೆಯುವ ಯುದ್ಧದಲ್ಲಿ, ಅದರ ಪರಿಣಾಮಗಳಿಂದ ತಮ್ಮನ್ನು ರಕ್ಷಿಸಿಕೊಳ್ಳುವುದು ಮಾತ್ರ ಈಗ ತಟಸ್ಥ ದೇಶಗಳ ಮುಖ್ಯ ಉದ್ದೇಶವೇ ಹೊರತು, ಇತ್ತಂಡಗಳಲ್ಲಿ ಒಂದು ಬಣ ಸೇರಿ ಅದನ್ನು ವಿಶ್ವಯುದ್ಧದ ಮಟ್ಟಿಗೆ ಬೆಳೆಸುವುದಲ್ಲ. ಆದರೆ ಹೌತಿಗಳ ಸೇರ್ಪಡೆ ಯುದ್ಧವನ್ನು ರಾಕ್ಷಸತನಕ್ಕೆ ಕೊಂಡೊಯ್ಯುತ್ತದೆ ಎಂಬುದು ಸತ್ಯ.

ಕೊಲಬಾದಲ್ಲಿ ಅಕ್ಷರಕ್ರಾಂತಿ ಮಾಡಿದ ರೂಬಲ್ ನಾಗಿ

ಕೊಳೆಗೇರಿಯ ಮಕ್ಕಳಿಗೆ ಶಿಕ್ಷಣದ ಹಾದಿ ತೋರಿದ ರೂಬಲ್ ನಾಗಿಯ ಸಾಧನೆ ಆದರ್ಶನೀಯ.

ನೇರ ನೋಟ
• ದು.ಗು. ಲಕ್ಷ್ಮಣ
dugulakshman@yahoo.com



ಅದು ಮುಂಬೈ ಮಹಾನಗರಿಯ ಕೊಲಬಾ ಕೊಳೆಗೇರಿಯಲ್ಲಿ ಸದ್ದಿಲ್ಲದೆ ನಡೆದ ಶಿಕ್ಷಣ ಕ್ರಾಂತಿ. 30 ವರ್ಷಗಳ ಹಿಂದೆ ಆ ಕೊಳೆಗೇರಿಯ ಮುರುಕು ಗುಡಿಸಲುಗಳಲ್ಲಿ ಹರಿದ ಬಟ್ಟೆ ತೊಟ್ಟು, ಎಣ್ಣೆಕಾಣದ ಕೆದರಿದ ತಲೆಗೂದಲು ಹರಡಿಕೊಂಡ ಮಕ್ಕಳಿಗೆ ಶಿಕ್ಷಣವೆಂಬುದು ಮರೀಚಿಕೆಯಾಗಿತ್ತು. ಪೋಷಕರೊಂದಿಗೆ ಮಕ್ಕಳೂ ಹೊಟ್ಟೆಪಾಡಿಗಾಗಿ ದುಡಿಯಲೇಬೇಕಿದ್ದ ಅನಿವಾರ್ಯತೆ, ಅಂತಹ ಕೆಟ್ಟ ಬಡತನ.

ಆದರೆ ಅಲ್ಲೊಂದು ಸದ್ದಿಲ್ಲದ ಶಿಕ್ಷಣ ಕ್ರಾಂತಿಯೇ ನಡೆದುಹೋಯಿತು. ಕೊಳೆಗೇರಿಯ ಮುರುಕು ಗುಡಿಸಲ ಗೋಡೆಗಳ ಮೇಲೆ ಬಣ್ಣದ ಚಿತ್ತಾರಗಳು ಕಂಗೊಳಿಸಿದವು. ಬಣ್ಣ ಬಳಿದ ಆ ಒಡಕಲು ಗೋಡೆಗಳ ಮೇಲೆ ಬರೆಯಲಾದ ವಿಜ್ಞಾನ, ಗಣಿತ, ಚರಿತ್ರೆ, ಭಾಷೆಯ ಪಾಠಗಳು, ವಿಜ್ಞಾನದ ಚಿತ್ರಗಳು ಅಲ್ಲಿನ ಶಿಕ್ಷಣ ವಂಚಿತ ಬಡಮಕ್ಕಳನ್ನು ಆಕರ್ಷಿಸಿದವು. ಸಣ್ಣ ಪುಟ್ಟ ಕೆಲಸಕ್ಕೆ ಹೋಗುತ್ತಿದ್ದ ಮಕ್ಕಳು ಆ ಗೋಡೆಗಳ ಕೆಳಗೇ ಕುಳಿತು ಶಿಕ್ಷಣದ ಓನಾಮ ಕಲಿಯತೊಡಗಿದರು. ಶಿಕ್ಷಣ ಕೇಂದ್ರ ಎಂಬ ನಿಶ್ಚಿತ ಸ್ಥಾನವೇ ಅಲ್ಲಿರಲಿಲ್ಲ, ಕೆಲವೆಡೆ ಆ ಕೊಳೆಗೇರಿಯ ಮನೆಗಳೇ ಶಾಲೆಗಳಾಗಿ ಬದಲಾಗುತ್ತಿತ್ತು. ಕ್ರಮೇಣ ಇಡೀ ಕೊಳೆಗೇರಿಯನ್ನು ಸ್ವಚ್ಛವಾಗಿಡುವ, ಕೊಳೆಕಸ ಗಲೀಜು ಇರದಂತೆ ನೋಡಿಕೊಳ್ಳುವ ಹೊಣೆಯನ್ನು ಇದೇ ಬಡಮಕ್ಕಳು ಖುಷಿಯಿಂದ ನಿರ್ವಹಿಸಿದರು. ಮಕ್ಕಳ ಈ ಶಿಕ್ಷಣ ಕೈಂಕರ್ಯಕ್ಕೆ ಪೋಷಕರೂ ಕ್ರಮೇಣ ಕೈಜೋಡಿಸಿದರು.

ಕೊಳೆಗೇರಿಯ ಆ ಮಕ್ಕಳ ಮನದಲ್ಲಿ ಶಿಕ್ಷಣ ಕಲಿಕೆಯ ಕನಸು ಬಿತ್ತಿ ಆಕರ್ಷಿಸಿ ಪ್ರೇರಣೆ ನೀಡಿದ್ದು ರೂಬಲ್ ನಾಗಿ ಆರ್ಟ್ ಫೌಂಡೇಶನ್ (ಆರ್‌ಎನ್‌ಎಎಫ್) ಎಂಬ ಒಂದು ಸರ್ಕಾರೇತರ ಖಾಸಗಿ ಸಂಸ್ಥೆ. ವಾಸ್ತವವಾಗಿ ಅದೊಂದು ಕಲೆಗೆ ಸಂಬಂಧಿಸಿದ ಸಂಸ್ಥೆಯಾಗಿದ್ದರೂ ಕೊಳೆಗೇರಿ ಶಿಕ್ಷಣ ವಂಚಿತ ಮಕ್ಕಳ ಶಿಕ್ಷಣಕ್ಕೆ ಆದ್ಯತೆ ನೀಡಿದ ಪರಿಣಾಮವೇ ಶಿಕ್ಷಣ ವಂಚಿತರು ಅಕ್ಷರವಂತರಾದರು. ಅನೇಕರು ವಿದ್ಯಾವಂತರಾದರು. ಶಿಕ್ಷಣವಂಚಿತ ಬಡಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಬೇಕೆಂಬ ಕನಸು ಕಂಡು, ಅದನ್ನು ನನಸು ಮಾಡಿದವರು 45ರ ಹರೆಯದ ಜಮ್ಮು-ಕಾಶ್ಮೀರ ಮೂಲದ ರೂಬಲ್ ನಾಗಿ ಎಂಬ ಕಲಾವಿದೆ ಹಾಗೂ ಶಿಕ್ಷಣಪ್ರೇಮಿ.

ರೂಬಲ್ ನಾಗಿ ಹುಟ್ಟಿದ್ದು ಕಾಶ್ಮೀರ ಕಣಿವೆಯ ಒಂದು ಪುಟ್ಟ ಗ್ರಾಮದಲ್ಲಿ. ಆಕೆಯ ತಂದೆ ಕರ್ನಲ್ ಗ್ಯಾನ್‌ಸಿಂಗ್ ಸೂಡಾನ್, ತಾಯಿ ರಸ್ ವಿಂದರ್ ಕೌರ್. ಕರ್ನಲ್ ಗ್ಯಾನ್‌ಸಿಂಗ್ ಭಾರತೀಯ ಸೇನಾಪಡೆಯಲ್ಲಿ ಅಧಿಕಾರಿಯಾಗಿದ್ದರಿಂದ ಆಗಾಗ ವರ್ಗಾವಣೆ, ಹಾಗಾಗಿ ಬೇರೆ ಬೇರೆ ಸ್ಥಳಗಳಿಗೆ ಅಲೆದಾಟ. ಪುಟ್ಟ ಬಾಲಕಿಯಾಗಿದ್ದ ರೂಬೆಲ್‌ಗೆ ಹೀಗಾಗಿ ಇಡೀ ಭಾರತದ ವಿವಿಧೆಡೆಯ ಜನಜೀವನ, ರೀತಿನೀತಿ, ಸಂಸ್ಕೃತಿ ಪರಂಪರೆಯನ್ನು ಹತ್ತಿರದಿಂದ ನೋಡುವ, ತಿಳಿಯುವ ಅವಕಾಶ ಅಯಾಚಿತವಾಗಿಯೇ ದೊರಕಿತ್ತು. ರಾಜಕೀಯ ವಿಜ್ಞಾನದಲ್ಲಿ ಪದವಿ ಮುಗಿಸಲಾಗದಿದ್ದರೂ ಲಂಡನ್‌ನ ಪ್ರತಿಷ್ಠಿತ ಸ್ಲೇಡ್ ಸ್ಕೂಲ್ ಆಫ್ ಫೈನ್ ಆರ್ಟ್ಸ್ ಮತ್ತು ಸೊತೆಬೀಸ್ ಇನ್‌ಸ್ಟಿಟ್ಯೂಟ್ ಆಫ್ ಆರ್ಟ್‌ನಲ್ಲಿ ಯುರೋಪಿಯನ್ ಕಲೆಯನ್ನು ಅಧ್ಯಯನ ಮಾಡಿದರು. ಮುಂಬೈನಲ್ಲಿ ತನ್ನದೇ ಆದ ರೂಬಲ್ ನಾಗಿ ಆರ್ಟ್ ಫೌಂಡೇಶನ್ ಪ್ರಾರಂಭಿಸಿದರು. ಈ ಸಂಸ್ಥೆಗೆ ಒಂದು ದಿನ ಚಿತ್ರಕಲೆ ವೀಕ್ಷಿಸಲು ಕೊಳೆಗೇರಿಯ ಹುಡುಗಿಯೊಬ್ಬಳು ಬಂದಿದ್ದಳು. ಆ ಹುಡುಗಿಗೆ ಕಲೆ ಎಂದರೆ ಏನೆಂದೇ ತಿಳಿದಿರಲಿಲ್ಲ, ತನ್ನ ಬಟ್ಟೆ ಗಲೀಜಾಗಿರುವುದೇ ಕಲೆ ಎಂದು ಆಕೆ ಭಾವಿಸಿದ್ದಿರಬಹುದು. ಕುತೂಹಲದಿಂದ ಬಣ್ಣದ ಚಿತ್ತಾರಗಳನ್ನು ನೋಡಲು ಬಂದಿದ್ದಳಷ್ಟೆ.

ಆದರೆ ರೂಬಲ್‌ಗೆ ಆ ಹುಡುಗಿಯನ್ನು ನೋಡಿದ ಬಳಿಕ ಮನದಲ್ಲಿ ಹೊಳೆದ ವಿಚಾರಗಳೇ ಬೇರೆ. ತನ್ನ ಕಲಾ ಸಂಸ್ಥೆ ಇರುವುದು ಕೇವಲ ವಿವಿಧ ಕಲಾವಿದರ ಚಿತ್ರಪ್ರದರ್ಶನಕ್ಕೆ ಅಷ್ಟೇ ಆಗಬಾರದು. ಕೊಳೆಗೇರಿಯ ಶಿಕ್ಷಣ ವಂಚಿತ ಮಕ್ಕಳಲ್ಲಿ ಕಲಿಕೆಯ ಆಸಕ್ತಿ ಮೂಡಿಸಲು ಈ ಕಲೆ ಮಾಧ್ಯಮವಾಗಬೇಕು ಎಂದುಕೊಂಡರು. ಇಂತಹುದೊಂದು ವಿಚಾರದ ಹುಳು ತಲೆಯಲ್ಲಿ ಹೊಕ್ಕಿದ್ದೇ ತಡ ಮತ್ತೆ ರೂಬಲ್ ಮರುಯೋಚಿಸಲಿಲ್ಲ, ಮುಂಬೈಯ ಕೊಲಾಬಾ ಕೊಳೆಗೇರಿಯನ್ನೇ ತನ್ನ ಕನಸನ್ನು ನನಸಾಗಿಸುವ ಮೊದಲ ತಾಣವನ್ನಾಗಿ ಮಾಡಿಕೊಂಡರು.. ಅಲ್ಲಾದರೋ ಬಹುತೇಕ ನಿವಾಸಿಗಳು ಬಟ್ಟೆ ಒಗೆದು ಒಣಗಿಸಿ, ಇಸ್ತ್ರಿ ಹಾಕಿಕೊಡುವ ದೋಭಿ ವೃತ್ತಿಯ ಮಂದಿ. ಅವರ ಮಕ್ಕಳು, ಹೆಂಗಸರು ಇನ್ನಾರದೋ ಮನೆಕೆಲಸ ಮಾಡಿ ಹೊಟ್ಟೆ ಹೊರೆಯುತ್ತಿದ್ದರು. ರೂಬೆಲ್ ಮೊದಲು ಅಲ್ಲಿನ ಒಂದು ಲಕ್ಷಕ್ಕೂ ಹೆಚ್ಚು ಗುಡಿಸಲುಗಳ ಗೋಡೆಗಳಿಗೆ ಬಣ್ಣ ಹೊಡೆದು ವಿವಿಧ ಬಗೆಯ ಚಿತ್ರ ಚಿತ್ತಾರಗಳನ್ನು ರಚಿಸಿದರು. ಬಣ್ಣ ಬಣ್ಣದ ಚಿತ್ತಾರಗಳ ಗೋಡೆಗಳನ್ನು ನೋಡಿ ಕುತೂಹಲದಿಂದ ಅಲ್ಲಿಗೆ ಬಂದ ಮಕ್ಕಳಿಗೆ ಕ್ರಮೇಣ ಅಕ್ಷರ ಕಲಿಸಿ, ಜೊತೆಗೆ ಗಣಿತ, ವಿಜ್ಞಾನ, ಇತಿಹಾಸದ ಸರಳ ಪಾಠಗಳನ್ನೂ ಶಿಕ್ಷಕರ ಮೂಲಕ ಕಲಿಸುವ ವ್ಯವಸ್ಥೆ ಮಾಡಿದರು. ನೋಡನೋಡುತ್ತಾ ಕಲಿಯುವ ಆಸಕ್ತಿ ಹೊಂದಿ ಬರುವವರ ಸಂಖ್ಯೆ ಬೆಳೆಯತೊಡಗಿತು.



ಆದರೆ ಇದೇನೂ ಹೇಳಿದಷ್ಟು ಸುಲಭವಾಗಿರಲಿಲ್ಲ. ಬಡತನ ರೇಖೆಗಿಂತ ಕೆಳಗಿದ್ದ ಅಲ್ಲಿನ ನಿವಾಸಿಗಳಿಗೆ ಎರಡು ಹೊತ್ತಿನ ಹಸಿವು ನೀಗಿಸಿಕೊಳ್ಳುವುದೇ ದೊಡ್ಡ ಸಾಹಸವಾಗಿತ್ತು. ಇದನ್ನರಿತ ರೂಬೆಲ್ ತನ್ನ ಸಂಸ್ಥೆಯ ಮೂಲಕ ಎಲ್ಲ ಮನೆಗಳಿಗೆ ಅಗತ್ಯ ರೇಶನ್ ಪದಾರ್ಥಗಳನ್ನು ಪೂರೈಕೆ ಮಾಡಿ ಮೊದಲು ಹಸಿವೆಯ ಚಿಂತೆಯನ್ನು ದೂರಗೊಳಿಸಿದರು. ಹೊಟ್ಟೆ ತುಂಬಿದ ಬಳಿಕ ಅಕ್ಷರ ಕಲಿಕೆ, ವಿಜ್ಞಾನ, ಗಣಿತ, ಇತಿಹಾಸ, ನಾಡು-ನುಡಿಯ ಬಗ್ಗೆ ವಿದ್ಯಾಭ್ಯಾಸ.

ರೂಬಲ್ ನಾಗಿ ಆರ್ಟ್ ಫೌಂಡೇಶನ್ (ಆರ್‌ಎನ್‌ಎಎಫ್) ಇದೀಗ ದೇಶದಾದ್ಯಂತ 100ಕ್ಕೂ ಹೆಚ್ಚು ಶಿಕ್ಷಣ ವಂಚಿತ ಬಡ ಸಮುದಾಯಗಳು ವಾಸಿಸುವೆಡೆ 800ಕ್ಕೂ ಹೆಚ್ಚು ಕಲಿಕಾಕೇಂದ್ರ ಸ್ಥಾಪಿಸಿ ಅಕ್ಷರವಂಚಿತರನ್ನು ಸಾಕ್ಷರರಾಗಿರೂಪಿಸುವ ಅದ್ಭುತ ಕಾರ್ಯ ನಿರ್ವಹಿಸುತ್ತಿದೆ. ಆರ್‌ಎನ್‌ಎಎಫ್ ಕಲಿಕಾ ಕೇಂದ್ರಗಳೆಂದರೆ ಅಲ್ಲಿ ಬೆಂಚುಗಳಿಲ್ಲ, ಶಿಕ್ಷಕಿಗೆ ಕೂರಲು ಕುರ್ಚಿಯಿಲ್ಲ, ಅಲ್ಲಿಗೆ ಬರುವ ಮಕ್ಕಳಿಗೆ ಪೆನ್ಸಿಲ್ ಎಂದರೆ ಏನೆಂಬುದೇ ಗೊತ್ತಿಲ್ಲ, ಹರಕಲು ಚಾಪೆಗಳೇ ಮಕ್ಕಳಿಗೆ ಬೆಂಚು. ಆದರೆ ಅಲ್ಲಿ ಕಲಿಸಲಾಗುವ ಶಿಕ್ಷಣ ಮಾತ್ರ ಅತ್ಯಂತ ಸಮಗ್ರ, ಸಮೃದ್ಧ. ಸಾವಿರಾರು ಬಡಮಕ್ಕಳು ಸಾಕ್ಷರವಂತರಾಗಲು ರೂಬಲ್ ಸದ್ದಿಲ್ಲದೆ ಕೆಲಸ ಮಾಡಿದ್ದಾರೆ.

ರೂಬಲ್ ಅವರ ಈ ಸದ್ದಿಲ್ಲದ ಶಿಕ್ಷಣ ಕ್ರಾಂತಿ ಅದೆಷ್ಟು ಪ್ರಭಾವಿ ಹಾಗೂ ಪರಿಣಾಮಕಾರಿಯಾಗಿತ್ತೆಂದರೆ, ಶಿಕ್ಷಣ ವಂಚಿತ ಮಕ್ಕಳಲ್ಲಿ ಕಲಿಕೆಯ ಅಭಿರುಚಿ ಮೂಡಿಸಿದ ಮಹೋನ್ನತ ಕಾರ್ಯಕ್ಕಾಗಿ 2026ರ ಜಾಗತಿಕ ಶಿಕ್ಷಕ ಪ್ರಶಸ್ತಿ (Global Teacher Prize 2026) ಆಕೆಯನ್ನರಸಿಕೊಂಡು ಬಂದಿತ್ತು. ಅದೊಂದು ಶಿಕ್ಷಣ ರಂಗದ ನೊಬೆಲ್ ಪ್ರಶಸ್ತಿ ಎಂದೇ ಖ್ಯಾತವಾಗಿದೆ. ಆ ಪ್ರಶಸ್ತಿಗೆ ಭಾರತವೂ ಸೇರಿದಂತೆ 139 ದೇಶಗಳಿಂದ 5 ಸಹಸ್ರ ಅರ್ಜಿಗಳು ಬಂದಿದ್ದವು. ಆದರೆ ಕೊನೆಯ ಹಂತದಲ್ಲಿ ಆಯ್ಕೆಯಾಗಿದ್ದು ಆರ್‌ಎನ್‌ಎಎಫ್ ಸಂಸ್ಥೆ. ಆ ಪ್ರಶಸ್ತಿಯ ನಗದು ಮೊತ್ತವೇ ಬರೋಬ್ಬರಿ ಒಂದು ದಶಲಕ್ಷ ಅಮೆರಿಕನ್ ಡಾಲರ್ (ಸುಮಾರು 9,48,64,200 ರೂ.ಗಳು) ದುಬೈಯಲ್ಲಿ ಕಳೆದ ಫೆ. 5ರಂದು ವರ್ಲ್ಡ್ ಗವರ್ನ್‌ಮೆಂಟ್ಸ್ ಸಮ್ಮಿಟ್ ನಡೆದಿದ್ದಾಗ ದುಬೈಯ ಯುವರಾಜಕುಮಾರ ಶೇಖ್ ಹಮ್ದಾನ್ ಬಿನ್ ಮಹಮ್ಮದ್ ಬಿನ್ ರಶೀದ್ ಅಲ್ ಮುಕ್ತುಮ್ ಈ ಪ್ರಶಸ್ತಿ ವಿಜೇತೆ ರೂಬಲ್ ಹೆಸರನ್ನು ಘೋಷಿಸಿದಾಗ, ವೇದಿಕೆಯ ಮುಂಭಾಗದಲ್ಲಿದ್ದ ರೂಬಲ್ ಆನಂದಭಾಷ್ಪದಿಂದ ಎದೆತುಂಬಿ ಹೇಳಿದ್ದೇನು ಗೊತ್ತೆ: ''India won. ಭಾರತ್ ಕಾ ವಿಜಯ್'' (ಕನ್ನಡದ ಬೂಕರ್ ಪ್ರಶಸ್ತಿ ವಿಜೇತೆಯಿಂದ ಇಂತಹ ಪ್ರತಿಕ್ರಿಯೆ ಕೇಳಿಬಂದಿರಲಿಲ್ಲ, ತನ್ನ ಕೃತಿಯನ್ನು ಅನುವಾದಿಸಿದ ಸಹಲೇಖಕಿಯನ್ನೂ ಆಕೆ ಆ ಸಂದರ್ಭದಲ್ಲಿ ಸ್ಮರಿಸಿಕೊಂಡಿರಲಿಲ್ಲ, ಬಿಡಿ, ಆ ವಿಚಾರ ಬೇರೆ!). ಪ್ರಶಸ್ತಿ ಸ್ವೀಕರಿಸಿದ ರೂಬಲ್ ತನಗೆ ದೊರಕಿದ ಅಷ್ಟೂ ಪ್ರಶಸ್ತಿ ಮೊತ್ತವನ್ನು ಶಿಕ್ಷಣ ವಂಚಿತ ಬಡಮಕ್ಕಳ ಅಂಧಕಾರದ ಬದುಕಲ್ಲಿ ಬೆಳ್ಳಿರೇಖೆ ಮೂಡಿಸಲು ಬಳಸಿಕೊಳ್ಳುವುದಾಗಿ ಘೋಷಿಸಿದರು. ಆಕೆ ಆ ಉನ್ನತ ಪ್ರಶಸ್ತಿಗೆ ಎಷ್ಟು ಅರ್ಹಳು ಎನ್ನುವುದಕ್ಕೆ ಇದೊಂದೇ ನಿದರ್ಶನ ಸಾಕಲ್ಲವೆ?

ರೂಬಲ್ ಫೌಂಡೇಶನ್ ನೆರವಿನಿಂದ ಅಕ್ಷರವಂತರಾದ ಹಲವರು ಈಗ ಋಣ ತೀರಿಸುತ್ತಿದ್ದಾರೆ. ಮಯೂರ್ ಎಂಬ ಯುವಕ ತನ್ನದೇ ಸ್ವಂತ ಕಲಾ ತರಗತಿಗಳನ್ನು ನಡೆಸುವುದರ ಜೊತೆಗೆ ಸಣ್ಣ ಪ್ರಮಾಣದ ಮುದ್ರಣ ವ್ಯವಹಾರವನ್ನೂ ಆರಂಭಿಸಿದ್ದಾನೆ. 'ಕಲಿಕೆ ಎಂಬುದು ಎಲ್ಲಿ ಬೇಕಾದರೂ ಸಂಭವಿಸಬಹುದು. ಆದರೆ ನೀವು ಅದನ್ನು ಆಸಕ್ತಿಕರವಾಗಿಸಬೇಕು' ಎಂದು ಕಿವಿಮಾತು ಹೇಳುವ ರೂಬಲ್, ''ಕೊಳೆಗೇರಿಗಳಲ್ಲಿ ಕಾರ್ಯನಿರ್ವಹಿಸುವಾಗ ಕೇವಲ ಮಕ್ಕಳೊಂದಿಗಷ್ಟೇ ಅಲ್ಲ, ಅಲ್ಲಿನ ಇಡೀ ನಿವಾಸಿಗಳೊಂದಿಗೆ ಉತ್ತಮ ಸಂಬಂಧಗಳನ್ನು ಬೆಸೆಯಬೇಕಾಗುತ್ತದೆ. ಯಾರಿಗೋ ಹಣದ ನೆರವು ಬೇಕಿರುತ್ತದೆ. ಇನ್ನಾರೋ ಮನೆಯಲ್ಲಿ ಆಹಾರ ಪದಾರ್ಥಗಳಿಲ್ಲದೆ ತೊಳಲಾಡುತ್ತಿರುತ್ತಾರೆ. ಮತ್ತಿನ್ನಾರೋ ಸಂಕಟದಲ್ಲಿರುತ್ತಾರೆ. ಇಂಥವರೆಲ್ಲರ ಅವಶ್ಯಕತೆಗಳನ್ನು ಸಕಾಲಕ್ಕೆ ಪೂರೈಸಿದಲ್ಲಿ ನಾವು ನಮ್ಮ ಕೆಲಸವನ್ನು ಸುಸೂತ್ರವಾಗಿ ಮುಂದುವರಿಸಬಹುದು'' ಎಂದು ವಿವರಿಸುತ್ತಾರೆ. ಮನೆಗೆಲಸ ನಿರ್ವಹಿಸುವ ತಾಯಿಯೊಬ್ಬಳ ಏಳು ವರ್ಷದ ಮಗಳು ಖುಷಿಗೆ ಇಂತಹ ಶಾಲೆಗೆ ಬರುವುದೆಂದರೆ ಎಲ್ಲಿಲ್ಲದ ಖುಷಿ. ತಾನು ಹೀಗೆ ಓದಿ ಮುಂದೆ ಶಿಕ್ಷಕಿಯಾಗಬೇಕು ಎಂಬುದು ಆ ಪುಟ್ಟ ಖುಷಿಯ ಕನಸು. ಹೀಗೆ ಇಂತಹ ಕನಸುಗಳನ್ನು ಅದೆಷ್ಟೋ ಮಕ್ಕಳಲ್ಲಿ ರೂಬಲ್ ಬಿತ್ತುತ್ತಲೇ ಇದ್ದಾರೆ.

ಗ್ಲೋಬಲ್ ಟೀಚರ್ ಪ್ರಶಸ್ತಿಯನ್ನು 2017ರಿಂದ ವಾರ್ಕೆ ಫೌಂಡೇಶನ್ ಯುನೆಸ್ಕೋ ಸಂಸ್ಥೆಯ ಸಹಯೋಗದೊಂದಿಗೆ ನೀಡುತ್ತಾ ಬಂದಿದೆ. 2017ರಲ್ಲಿ ಮ್ಯಾಗಿ ಮೆಕ್ ಡೊನಾಲ್ಡ್ (ಕೆನಡಾ), 2018ರಲ್ಲಿ ಆಡ್ರಿಯಾ ಝುಸಿರಕೊವ್ (ಇಂಗ್ಲೆಂಡ್), 2019ರಲ್ಲಿ ಪೀಟರ್ ಟಬಿಚಿ (ಕೀನ್ಯಾ) ಹಾಗೂ 2020ರಲ್ಲಿ ರಣಜಿತ್ ಸಿನ್ಹ ಡಿಸೇಲ್ (ಭಾರತ) ಮೊದಲಾದವರಿಗೆ ಈ ಪ್ರಶಸ್ತಿ ದೊರೆತಿತ್ತು.

ಶಿಕ್ಷಣದ ಕನಸು ಬಿತ್ತಿದ ರೂಬಲ್ ನಾಗಿ ಅವರಿಗೆ ನಮ್ಮೆಲ್ಲರ ಒಂದು ಶುಭಾಶಯ ಮೊಳಗಲಿ.

ಹರೆಯ ಮತ್ತು ಕೌಟುಂಬಿಕ ಪರಿಸರ

ಹರೆಯದವರ ವರ್ತನೆಗಳನ್ನು ಪೋಷಕರು ಗಮನಿಸುವುದು ಮುಖ್ಯ. ಇದರಿಂದ ಹರೆಯದವರು ಹಲವಾರು ಅಪಾಯಗಳಿಗೆ ಒಳಗಾಗುವುದನ್ನು ತಪ್ಪಿಸಬಹುದು.

ತಾರುಣ್ಯ ತಲ್ಲಣ
• ಡಾ.ಕೆ.ಆರ್. ಶ್ರೀಧರ್
drkrsridhar208@gmail.com



ಮನೆಯೇ ಮೊದಲ ಶಾಲೆ, ತಾಯಿಯೇ ಮೊದಲ ಗುರು ಎಂಬ ನಾಣ್ಣುಡಿಯನ್ನು ಕೇಳಿದ್ದೇವಲ್ಲವೇ. ವ್ಯಕ್ತಿಯ ಕಲಿಕೆ, ಅವನ ಸರ್ವತೋಮುಖ ಅಭಿವೃದ್ಧಿಯಾಗಲು ಕುಟುಂಬದ ಪರಿಸರ ಅವಶ್ಯ. ಬಾಲ್ಯದಲ್ಲಿ ಹಿತವಾದ, ಪ್ರೀತಿ, ಮಮತೆಯಿಂದ ಕೂಡಿದ ಕೌಟುಂಬಿಕ ಪರಿಸರವು ಹರೆಯದಲ್ಲಿ ಜರುಗುವ ವ್ಯಕ್ತಿತ್ವ ವಿಕಸನಕ್ಕೆ, ಶೈಕ್ಷಣಿಕ ಸಾಧನೆಗೆ, ಎದುರಾಗುವ ಸವಾಲುಗಳನ್ನು ನಿಭಾಯಿಸಲು ಅವಶ್ಯ. ಪ್ರವಾಹದೋಪಾದಿಯಲ್ಲಿ ಎದುರಾಗುವ ಒತ್ತಡಗಳಿಗೆ ಪರಿಹಾರ ಕಂಡುಕೊಂಡು ನೆಮ್ಮದಿಯಿಂದ ಮುನ್ನಡೆಯಲು ಪೋಷಕರ ಬೆಂಬಲ ಬೇಕು. ಹರೆಯಕ್ಕೂ, ಕುಟುಂಬದ ಪರಿಸರಕ್ಕೂ ಇರುವ ನಿಕಟವಾದ ಸಂಬಂಧವನ್ನು ಸಂಕ್ಷಿಪ್ತವಾಗಿ ತಿಳಿಯೋಣ.

ಹನ್ನೆರಡು ವರ್ಷದ ಒಂಭತ್ತನೇ ತರಗತಿಯ ವಿದ್ಯಾರ್ಥಿ ರಘು. ತರಗತಿಯಲ್ಲಿ ಚೆನ್ನಾಗಿ ಓದುತ್ತಿದ್ದ ರಘು, ಈಗ ಓದಿನಲ್ಲಿ ಹಿಂದುಳಿದಿದ್ದಾನೆ. ಒಮ್ಮೊಮ್ಮೆ ತರಗತಿಯಲ್ಲಿ ನಿದ್ದೆ ಹೋಗಿ, ಶಿಕ್ಷಕರಿಂದ ಬೈಸಿಕೊಂಡಿದ್ದೂ ಉಂಟು. ಓದಿನಲ್ಲಿ ನಿರಾಸಕ್ತಿ. ಮನೆಗೆ ಅತಿಥಿಗಳು ಬಂದರೆ, ಅವರೊಂದಿಗೆ ಬೆರೆಯುತ್ತಿದ್ದವನು, ಈಗ ಅತಿಥಿಗಳು ಬಂದಾಕ್ಷಣ ರೂಮಿನೊಳಗೆ ಹೋಗಿ ಬಾಗಿಲು ಹಾಕಿಕೊಳ್ಳುತ್ತಾನೆ. ರಘುವಿನ ಬದಲಾದ ವರ್ತನೆ ನೋಡಿದ ತಾಯಿ ರಮಾ, ರಘುವಿಗೆ ಪ್ರೀತಿಯ ಮಾತಿನಿಂದ ಹಾಗೆಲ್ಲಾ ಮಾಡಬಾರದು, ಚೆನ್ನಾಗಿ ಓದಿ ಬುದ್ಧಿವಂತನಾಗಬೇಕು ಎಂದರು. ಏನು ಹೇಳಿದರೂ ರಘುವಿನ ಅಸಭ್ಯ ನಡವಳಿಕೆ ದಿನೇ ದಿನೇ ಹೆಚ್ಚಾಗುತ್ತಾ ಬಂತು. ಮಗನು ಏಕೆ ಹೀಗೆ ಮಾಡುತ್ತಿದ್ದಾನೆಂದು ಸಲಹೆ ಕೇಳಲು ಮಗನನ್ನು ತಾಯಿ ಕರೆತಂದಿದ್ದರು.

ರಘುವಿನ ಕುಟುಂಬದ ಪರಿಸರದ ಕುರಿತು ಕೇಳಿದೆ. ಅದಕ್ಕೆ ತಾಯಿ ರಮಾ, ''ಅದೇ



ಒಂದು ದೊಡ್ಡ ಸಮಸ್ಯೆ ಸಾರ್'' ಎಂದರು. ಕುಡುಕ ತಂದೆ ಪಾನಮತ್ತರಾಗಿ ಮಧ್ಯರಾತ್ರಿ ಮನೆಗೆ ಬರುತ್ತಾರೆ. ಹೆಂಡತಿ ಮಕ್ಕಳನ್ನು ಹೀನಾಮಾನವಾಗಿ ಬಯ್ಯುತ್ತಾರೆ. ಮಗನಿಗೆ ಮಧ್ಯರಾತ್ರಿಯವರೆಗೂ ಓದಿ ಪಾಠ ಒಪ್ಪಿಸಬೇಕೆಂದು ಕರ್ಕಶ ಕಂಠದಿಂದ ಕೂಗುತ್ತಾರೆ. ಒಂದು ವಿಧದಲ್ಲಿ ಮನೆ ಒಂದು ರಣರಂಗ ಎನ್ನಬಹುದು ಎಂದು ವಿವರಿಸಿದರು.

ಹತ್ತನೇ ತರಗತಿಯ ವಿದ್ಯಾರ್ಥಿನಿ ಸರೋಜಾ ಮೊದಲಿಗೆ ಚೆನ್ನಾಗಿ ಓದುತ್ತಿದ್ದವಳು, ಈಗ ಯಾಕೋ ಓದುವುದರಲ್ಲಿ ಆಸಕ್ತಿ ಕಳೆದುಕೊಂಡಿದ್ದಾಳೆ. ಅಣ್ಣ ರಾಜು ಸರೋಜಾಳಿಗಿಂತ ಹೆಚ್ಚು ಬುದ್ಧಿವಂತ. ಹಾಗಾಗಿ ತಾಯಿ ತಂದೆ ಇಬ್ಬರೂ ಅವಳಿಗೆ ಹೋಲಿಸಿ ಮಗನನ್ನು ಯಾವಾಗಲೂ ಹೊಗಳುತ್ತಿದ್ದರು. ಮಗಳಿಗೆ ''ನೀನೂ ಇದ್ದೀಯ, ಮೊದಲು ಹೆಣ್ಣು ಬೇಡ ಎಂದರೂ ಹುಟ್ಟಿದೆ. ಈಗ ನೋಡು, ನಿನ್ನನ್ನು ಯಾರೂ ಮಾತನಾಡಿಸುವುದಿಲ್ಲ, ಎಲ್ಲರೂ ನಿನ್ನ ಅಣ್ಣನನ್ನು ಹೊಗಳುತ್ತಾರೆ'' ಎಂದು ದಿನನಿತ್ಯವೂ ಹೇಳುವುದನ್ನು ಕೇಳಿ, ತಾನು ನಿರುಪಯೋಗಿ, ಯಾರಿಗೂ ಬೇಡವಾದವಳು ಎಂಬ ಭಾವನೆ ಸರೋಜಳಿಗೆ ಉಂಟಾಯಿತು. ಅದಕ್ಕೆ ಏನು ಮಾಡಬೇಕೆಂದು ನೀವೇ ಹೇಳಿ ಸಾರ್ ಎಂದರು.

ಹಿತವಾದ, ಆತ್ಮೀಯತೆಯ ಮತ್ತು ಪ್ರೋತ್ಸಾಹದಿಂದ ಕೂಡಿದ ಮನೆಯ ವಾತಾವರಣವು ಹರೆಯದವರ ಬೆಳವಣಿಗೆಗೆ ಅಡಿಗಲ್ಲು. ಹೆಜ್ಜೆ ಹೆಜ್ಜೆಗೂ ಒತ್ತಡಗಳು ಆತಂಕವನ್ನುಂಟು ಮಾಡುತ್ತವೆ. ದೇಹದಲ್ಲಾಗುವ ಬದಲಾವಣೆಗಳು, ಮಾನಸಿಕವಾಗಿ ಪುಟಿದೇಳುವ ಪ್ರಶ್ನೆಗಳು, ಸಂದೇಹಗಳು, ಇತರರೊಂದಿಗಿನ ಒಡನಾಟ ಹೀಗೆ ಹಲವು ಸವಾಲುಗಳು ಎದುರಾಗುತ್ತವೆ. ತನ್ನ ಒತ್ತಡವನ್ನು ನೀಗಲು, ಸವಾಲುಗಳನ್ನು ಎದುರಿಸಿ ಯಶಸ್ವಿಯಾಗಿ ನಿಭಾಯಿಸಲು ಆತ್ಮವಿಶ್ವಾಸ ಅವಶ್ಯ. ಇದಕ್ಕೆ ಅವಶ್ಯವಿರುವುದು ಕುಟುಂಬದಲ್ಲಿ ಪೋಷಕರ ಪ್ರೀತಿ ವಿಶ್ವಾಸದಿಂದ ಕೂಡಿದ ಮುಕ್ತ ಸಂವಹನ. ಹರೆಯದವರು ತಮ್ಮ ಸಂದೇಹಗಳನ್ನು ಇತರರೊಂದಿಗೆ ಕೇಳಿದರೆ, ಅವರು ನಗಬಹುದು, ಗೇಲಿ ಮಾಡಬಹುದು, ಅಯ್ಯೋ ಇಷ್ಟು ಸಣ್ಣದನ್ನು ಕೇಳುತ್ತಾನಲ್ಲ, ಇದು ಸಿಲ್ಲಿ ಎಂದು ಟೀಕೆ ಮಾಡಬಹುದು ಎಂದು ಭಾವಿಸಿ, ಸಂದೇಹಗಳನ್ನು ಹಂಚಿಕೊಳ್ಳಲು ಇಚ್ಚಿಸುವುದಿಲ್ಲ. ಪೋಷಕರು ಆತ್ಮೀಯತೆಯಿಂದ ಹರೆಯದವರೊಂದಿಗೆ ಕುಳಿತು, ಪ್ರೀತಿಯಿಂದ ಸಹಜವಾಗಿ ಅವರ ಸಂದೇಹಗಳ ಕುರಿತು ಕೇಳಬೇಕು. ಹರೆಯದವರ ವರ್ತನೆಯಲ್ಲಿ ಏನಾದರೂ ವ್ಯತ್ಯಾಸ ಕಂಡರೆ ಅವರನ್ನು ಕೂರಿಸಿಕೊಂಡು, ಸಮಾಧಾನದಿಂದ ತಲೆ ನೇವರಿಸುತ್ತಾ ಕೇಳಿದಾಗ, ಹರೆಯದವರು ತಮ್ಮ ಆತಂಕ, ಒತ್ತಡಗಳನ್ನು ಮತ್ತು ತಮ್ಮ ಭಾವನೆಗಳನ್ನು ಹಂಚಿಕೊಳ್ಳುತ್ತಾರೆ. ಅವರು ಹೇಳುವುದನ್ನು ಆಲಿಸಿ, ಅವರ ಮನಸ್ಸನ್ನು ಅರ್ಥ ಮಾಡಿಕೊಳ್ಳಬೇಕು. ಕಿರಿಯರ ಅನಿಸಿಕೆಗಳು ತಪ್ಪು ಎಂದು ಕಂಡುಬಂದಲ್ಲಿ ಒಳ್ಳೆಯ ಮಾತುಗಳಿಂದ ತಿದ್ದಬೇಕು.

ಹರೆಯದವರ ವರ್ತನೆಗಳನ್ನು ಪೋಷಕರು ಗಮನಿಸುವುದು ಮುಖ್ಯ. ಇದರಿಂದ ಹರೆಯದವರು ಹಲವಾರು ಅಪಾಯಗಳಿಗೆ ಒಳಗಾಗುವುದನ್ನು ತಪ್ಪಿಸಬಹುದು. ಆತ್ಮೀಯ ಗೆಳೆಯರನ್ನು ಗಳಿಸುವಂತೆ ಪ್ರೋತ್ಸಾಹಿಸಬೇಕು. ಸಾಮಾಜಿಕ ಜಾಲತಾಣಗಳು ಮತ್ತು ಮೊಬೈಲ್ ಫೋನುಗಳ ಸಾಧಕ-ಬಾಧಕಗಳನ್ನು ವಿವರಿಸಿ, ಅವುಗಳ ಕುರಿತು ನಿರಂತರವಾಗಿ ಗಮನವಿಡಬೇಕು. ಮಿತಿಮೀರಿ ಉಪಯೋಗಿಸುವುದು ಒಳ್ಳೆಯದಲ್ಲ ಎಂದು ವಿವರಿಸಿ, ಮಕ್ಕಳ ಮನಸ್ಸನ್ನು ಗೆಲ್ಲಬೇಕು.

ಹರೆಯದವರು ಸ್ವತಂತ್ರರಾಗಲು ಯೋಚಿಸುತ್ತಾರೆ. ಇದಕ್ಕಾಗಿ ಪೋಷಕರ ಅವಲಂಬನೆಯಿಂದ ಹೊರಗೆ ಬರಲು ಪ್ರಯತ್ನಿಸುತ್ತಾರೆ. ಹರೆಯದವರು ಪೋಷಕರ ಸಲಹೆಗಳನ್ನು ಪ್ರಶ್ನಿಸಲು ಪ್ರಾರಂಭಿಸುತ್ತಾರೆ. ನೀವು ಹೇಳುವುದನ್ನು ಕೇಳಲಾರೆ, ನಾನೇ ತೀರ್ಮಾನ ತೆಗೆದುಕೊಳ್ಳುತ್ತೇನೆ, ನೀವು ಸ್ವಲ್ಪ ಸುಮ್ಮನಿರಿ ಎಂದು ಒರಟಾಗಿ ಹೇಳಬಹುದು. ಇದರಿಂದ ಘರ್ಷಣೆಗಳಾಗುತ್ತವೆ. ಈ ವಿಧದ ನಡವಳಿಕೆಗಳು ಪೋಷಕರ ಮೇಲಿನ ದ್ವೇಷದಿಂದಲ್ಲ, 'ತನ್ನತನ'ವನ್ನು ಕಂಡುಕೊಂಡು ಸ್ವತಂತ್ರತೆಯನ್ನು ಸಾಧಿಸುವ ಯತ್ನ ಎಂಬುದನ್ನು ಪೋಷಕರು ಅರ್ಥ ಮಾಡಿಕೊಳ್ಳಬೇಕು. ಮಕ್ಕಳ ಅಭಿಪ್ರಾಯಗಳು ಸರಿ ಎನಿಸಿದರೆ ಅದನ್ನು ಒಪ್ಪಿಕೊಳ್ಳಬೇಕು. ಇದರಿಂದ ಹರೆಯದವರಿಗೆ ಪೋಷಕರಲ್ಲಿ ನಂಬಿಕೆ ಮತ್ತು ವಿಶ್ವಾಸಗಳು ಉಂಟಾಗುತ್ತದೆ. ಆತ್ಮೀಯತೆ ಮೂಡುತ್ತದೆ. ಅತಿಯಾದ ಕಟ್ಟುನಿಟ್ಟಿನ ಕ್ರಮಗಳಾಗಲೀ ಅಥವಾ ಅತಿಯಾದ ವಿನಯವಾಗಲೀ ಒಳ್ಳೆಯದಲ್ಲ.

ಹರೆಯದವರು ಪೋಷಕರ ನಡೆನುಡಿಗಳನ್ನು ಎಚ್ಚರದಿಂದ ಅವಲೋಕಿಸುತ್ತಿರುತ್ತಾರೆ. ಅವರು ಹೇಳುವ ಬುದ್ಧಿವಾದಗಳು, ಮಾತನಾಡುವ ಧಾಟಿ, ಅವರು ಮಾಡುವ ಟೀಕೆ ಟಿಪ್ಪಣಿಗಳನ್ನು ನೋಡುವ ಹರೆಯದವರು ಇನ್ನೊಂದು ಕಡೆ ಅವರ ನಡತೆಗಳನ್ನು ಗಮನಹರಿಸಿ ನೋಡುತ್ತಿರುತ್ತಾರೆ. ಹೇಳುವುದೆಲ್ಲಾ ಆಚಾರ, ಮಾಡುವುದೆಲ್ಲಾ ಅನಾಚಾರ ಎಂಬ ಹಾಗೆ ಪೋಷಕರು ಹೇಳುವುದೊಂದು, ಮಾಡುವುದೊಂದು ಆದರೆ, ಪೋಷಕರು ಹೇಳುವುದನ್ನು ಪಾಲಿಸುವುದಕ್ಕಿಂತ, ಅವರ ನಡತೆಯನ್ನು ಅನುಕರಿಸುತ್ತಾರೆ. ಪೋಷಕರ ನಡೆನುಡಿಗಳು ಮಕ್ಕಳಿಗೆ ಮಾದರಿಯಾಗಿರಬೇಕು. ಜೀವನದ ಮೌಲ್ಯಗಳಾದ ಸತ್ಯ, ಅಹಿಂಸೆ, ಪರೋಪಕಾರ ಮನೋಭಾವ, ಮೃದು ಮಾತುಗಳು, ಸ್ನೇಹಪರತೆ ಇವುಗಳನ್ನು ಅನುಸರಿಸುವ ಪೋಷಕರು ಮಕ್ಕಳಿಗೆ ಮಾದರಿಯಾಗುತ್ತಾರೆ.

ಹರೆಯದ ಮಕ್ಕಳ ಕುರಿತು ಪೋಷಕರು ಸದಾ ಗಮನಿಸುತ್ತಿರಬೇಕು. ಇದರಲ್ಲಿ ಮಕ್ಕಳ ಸ್ನೇಹಿತರ ಕುರಿತು ಗಮನವಿಡುವುದು ಮುಖ್ಯವಾದದ್ದು. ಮಕ್ಕಳ ಗೆಳೆಯರನ್ನು ಕರೆದು ಮಾತನಾಡಿ, ಅವರು ಎಂಥವರೆಂಬುದನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಬೇಕು. ಅವರು ಆತ್ಮೀಯರಾಗಿ ಮಕ್ಕಳ ಅಭಿವೃದ್ಧಿಗೆ ಪೂರಕವಾಗಿದ್ದಾರೆಂದೆನಿಸಿದರೆ ಒಳ್ಳೆಯದು. ಅದು ಇಲ್ಲ ಎನಿಸಿದರೆ ಹರೆಯದ ಮಕ್ಕಳೊಂದಿಗೆ ಕೂತು ತಮ್ಮ ಅನಿಸಿಕೆಗಳನ್ನು ತಿಳಿಸಿ, ಅಂತಹ ಗೆಳೆತನ ಮಾಡುವುದರಿಂದ ಆಗುವ ಸಾಧಕ ಬಾಧಕಗಳನ್ನು ಮೃದು ಮಾತುಗಳಿಂದ ವಿವರಿಸಬೇಕು. ಅದಕ್ಕೂ ಸಾಧ್ಯವಿಲ್ಲ ಎಂದರೆ ಆ ಕ್ಷಣದಲ್ಲಿ ಅವರೊಂದಿಗೆ ವಾದಕ್ಕಿಳಿಯಬಾರದು. ಸಾವಧಾನದಿಂದ ಸಮಯ ನೋಡಿ ಮಕ್ಕಳಿಗೆ ತಿಳಿ ಹೇಳಿ ಅವರ ಮನಪರಿವರ್ತನೆ ಮಾಡಬೇಕು.

ಸಾಮಾಜಿಕ ಪ್ರಜ್ಞೆ ಮತ್ತು ಜೀವನ ಕೌಶಲಗಳನ್ನು ಕಲಿಸುವ ಮೊದಲ ಶಾಲೆ ಕುಟುಂಬ. ಒಳ್ಳೆಯ ಜನರೊಂದಿಗೆ ಬೆರೆತು, ಆತ್ಮೀಯವಾಗಿ ಮಾತನಾಡಲು, ಹವ್ಯಾಸಗಳನ್ನು ಬೆಳೆಸಿಕೊಳ್ಳಲು ಪ್ರೋತ್ಸಾಹಿಸಬೇಕು.

ಹಿತವಾದ ಕೌಟುಂಬಿಕ ವಾತಾವರಣ, ಪ್ರೀತಿಯ ಪೋಷಕ-ಹರೆಯದವರ ಸಂಬಂಧ ಮತ್ತು ಮುಕ್ತ ಸಂವಹನ ಎಷ್ಟು ಮಹತ್ವದ್ದು ಎಂಬುದು ಮೇಲಿನ ಅಂಶಗಳಿಂದ ಓದುಗರಿಗೆ ಅರ್ಥವಾಗಿರಲು ಸಾಕು.

'ಒಲೆ' ಹತ್ತಿ ಉರಿದೊಡೆ...

ವಾರದ ವರಸೆ
• ಸಂದೇಶ್ ನಾಯ್ಕ್ ಹಕ್ಲಾಡಿ
naiksh2@gmail.com



'ಈಗ ಯಾವ ಡೈಲಾಗ್ ಹೆಚ್ಚು ಜನರನ್ನು ತನ್ನತ್ತ ಸೆಳೆಯಬಹುದು?' ಎಂದು ಯಾರಾದರೂ ಕೇಳಿದರೆ, ಅದಕ್ಕೆ ಉತ್ತರವಾಗಿ ಈ ಕೆಳಗಿನ ಡೈಲಾಗ್‌ಗಳನ್ನು ಹೆಸರಿಸಬಹುದು. ''ಅವನೊಳಗೆ ಒಂದು ಕಿಚ್ಚಿದೆ ಸರ್'', ''ಅಯ್ಯೋ ಅವನ ಮಾತುಗಳೋ ಬೆಂಕಿಯುಂಡೆ!'', ''ನೆನಪಿರಲಿ, ಬೆಂಕಿಯ ಜೊತೆಗೆ ಸರಸಬೇಡ''. ಬೆಂಕಿ, ಜ್ವಾಲೆ, ಕಿಚ್ಚು, ಅಗ್ನಿ, ಕೆಂಡ, ಉರಿ ಇತ್ಯಾದಿ ಪದಗಳು ಎಲ್ಲಾದರೂ ಕೇಳಿಸಿದರೆ, ಒಮ್ಮೆಗೆ ಕಿವಿ ನೆಟ್ಟಗಾಗಲು ಕಾರಣವೂ ಇದೆ. ಅದುವೇ ಸದ್ಯದ ಯುದ್ಧೋನ್ಮಾದದ ಪರಿಸ್ಥಿತಿಯಿಂದಾಗಿ ಉಂಟಾಗಿರುವ 'ಗ್ಯಾಸ್ ಟ್ರಬಲ್'. ತನ್ಮೂಲಕ ಹೊಟ್ಟೆಗಷ್ಟೇ ಸೀಮಿತವಾಗಿದ್ದ ಗ್ಯಾಸ್ ಟ್ರಬಲ್ ಸದ್ಯ ತಟ್ಟೆಗೂ ವಕ್ಕರಿಸಿದೆ. ಹೊಟ್ಟೆಯ ಗ್ಯಾಸ್ ಟ್ರಬಲ್ ಆಗಿದ್ದರೆ ಕೆಲವು ಗುಳಿಗೆ, ಸಿರಪ್‌ನಿಂದ ನಿಯಂತ್ರಣಕ್ಕೆ ತರಬಹುದಿತ್ತು. ಆದರೆ ಗ್ಯಾಸ್ ಟ್ರಬಲ್‌ಗೆ ಕಡಿವಾಣ ಹಾಕುವುದು ಕಷ್ಟಸಾಧ್ಯವೇ ಸೈ.

ಈ ಎಲ್ಲಾ ಬೆಳವಣಿಗೆಗಳನ್ನು ಸಮಗ್ರವಾಗಿ ಅವಲೋಕಿಸುತ್ತಿದ್ದರೆ ಸುಟ್ಟು ಭಸ್ಮ ಮಾಡುವ ಬೆಂಕಿಗಿಂತಲೂ ಬೇಯಿಸುವ, ಬಿಸಿಯೇರಿಸುವ, ಕಾವೋಕ್ಕಿಸುವ ನಿಯಂತ್ರಿತ ಬೆಂಕಿಗೆ ಬೇಡಿಕೆ ಭಲೇ ಹೆಚ್ಚಾಗಿದೆ. ಇದನ್ನು ಒದಗಿಸುತ್ತಿದ್ದ ಗ್ಯಾಸ್ ಒಲೆಗಳು ಸಿಲಿಂಡರ್ ಇಂದು ಖಾಲಿ ಆದೀತೋ ನಾಳೆಯೋ, ಖಾಲಿಯಾದರೆ ಮತ್ತೆ ಎಂದು ಸಿಕ್ಕೀತೋ, ಬುಕ್ಕಿಂಗ್ ಆದೀತೋ ಇಲ್ಲವೋ ಎಂಬ 'ಡರ್' (ಭಯ)ನಲ್ಲಿ ನಲುಗುತ್ತಿವೆ. ಸುಮ್ಮನೆ ಅಡುಗೆ ಮನೆಯ ಕೌಂಟರ್‌ಟಾಪ್ ಒಳಗಡೆಯೋ, ಹೊರಗಡೆಯ ಪ್ರತ್ಯೇಕ ಜಗಲೀಹದ ಅಂಕಣದೊಳಗೋ, ಇನ್ನೆಲ್ಲೋ ಮರೆಯಲ್ಲಿ ಮೌನವಾಗಿ ಕೂತಿರುತ್ತಿದ್ದ ಈ ಕೆಂಬಣ್ಣದ ಹಮ್ಮೀರನಿಗೆ ಈಗ ಎಲ್ಲೆಲ್ಲೂ ಡಿಮ್ಯಾಂಡೋ ಡಿಮ್ಯಾಂಡ್! ಚಿನ್ನ, ಭೂಮಿ, ನಗದು ಸಾಕಷ್ಟು ಪ್ರಮಾಣದಲ್ಲಿ ಇರುವವರತ್ತ ಹುಬ್ಬೇರಿಸುವಂತೆ ನೋಡುತ್ತಿದ್ದ ಜನರು ಸದ್ಯ ಈಗ, ಗ್ಯಾಸ್ ಸಿಲಿಂಡರ್ ಸ್ಟಾಕ್ ಇಟ್ಟುಕೊಂಡವರತ್ತ ನೋಡುವಂತಾಗಿದೆ. 'ಸಿಲಿಂಡರ್ ಇದ್ದರೆ ಎಲ್ಲಿಂದಾದರೂ ನಮಗೊಂದು ಹೇಗೋ ಹೊಂದಿಸಿ ಕೊಡಿಸಿರಯ್ಯಾ?' ಎಂಬ ಭಿನ್ನಪಗಳನ್ನು ಮುಂದೆ ಮಾಡುವವರ ಸಂಖ್ಯೆಯಂತೂ ದಿನೇ ದಿನೇ ಹೆಚ್ಚುತ್ತಲೇ ಇದೆ. ಅದರ ಬಣ್ಣವೇನೋ ಕೆಂಪು ಹೌದು. ಹಾಗೆಯೇ ಕೆಂಪೆಂದರೆ ಡೇಂಜರ್‌ನ್ನು ಸಂಕೇತಿಸುವುದೂ ನಿಜವೇ. ಆದರೆ ಆ ಡೇಂಜರ್ ಅದರ ಕೊರತೆಯ ರೂಪದಲ್ಲಿ ಹೀಗೆ ಎರಗುತ್ತದೆ ಎಂದು ಬಹುಶಃ ಯಾರೂ ಭಾವಿಸಿಯೇ ಇರಲಿಕ್ಕಿಲ್ಲ.



ಗ್ಯಾಸ್ ಒಲೆಯ ಹಾಗೂ ಅದರ ಕರುಳುಬಳ್ಳಿಯ ಸಂಬಂಧಿಯಂತಿರುವ ಸಿಲಿಂಡರ್ ಬಗ್ಗೆ ಹೀಗೆಲ್ಲ ಬಗೆ ಬಗೆಯ ಅಭಿಪ್ರಾಯಗಳನ್ನು ಹೊರಹೊಮ್ಮಿಸುತ್ತಾ, ಜನರು ಒಂದೇ ಸಮನೆ ಪರಿತಪಿಸುತ್ತಿರುವಾಗ, ಅಲ್ಲೊಂದು ಇಲ್ಲೊಂದು ಕಂಡುಬರುವ 'ಸೌದೆ ಒಲೆ'ಗಳು ಅಂದು ತಮ್ಮನ್ನು ಮರೆತು, ಈ ಗ್ಯಾಸ್ ಒಲೆಯನ್ನು ಮೆರೆಸಿದ್ದ ಇದೇ ಜನರನ್ನು ನೆನೆದು ಒಳಗೊಳಗೇ ಕುಹಕದ ನಗೆಯಾಡುತ್ತಿರಬಹುದು. ಬೇಕು ಬೇಕೆಂದ ರೀತಿಯಲ್ಲಿ ಬೆಂಕಿಯನ್ನು ಮೊಗೆ ಮೊಗೆದು ಪಾತ್ರೆಯ ತಳಕ್ಕೆ ಒಡ್ಡುತ್ತಿದ್ದ ಈ ಒಲೆಗಳೋ ಅದಕ್ಕೆ ಪ್ರತಿಯಾಗಿ ಬಯಸುತ್ತಿದ್ದುದು ಇಂಥ ದುಬಾರಿ ಸಿಲಿಂಡರ್‌ಗಳನ್ನಲ್ಲ, ಬದಲಾಗಿ ಉಚಿತವಾಗಿ ಇಲ್ಲವೇ ಅತ್ಯಂತ ಕಡಿಮೆ ಬೆಲೆಗೆ ದೊರಕುವ ಸೌದೆ ಉರ್ಫ್ ಕಟ್ಟಿಗೆಯನ್ನು. ಹಾಗೂ ಒಂದಷ್ಟು ಉಫ್... ಉಫ್... ಎಂದು ಊದುವ ಅಡುಗೆಯವರ ಉಸಿರನ್ನು ಅಷ್ಟೇ. ಈಗ ಮತ್ತೆ ಪುನಃ ಒಲೆಗಳಿಗೆ ಒಳ್ಳೆ ಕಾಲಬಂದಿದ್ದು, ಅವುಗಳೋ ಖುಷಿಯ ಲಹರಿಯಲ್ಲಿ 'ಕಾಲ ಮತ್ತೊಮ್ಮೆ ನಮಗಾಗಿ ಬಂದಿದೆ....' ಎಂದು ಹಾಡುತ್ತಲೂ ಇರಬಹುದು. ಇನ್ನು ಯಾರಾದರೂ ತಮ್ಮ ಪ್ರಿಯತಮೆಗೆ 'ಒಲವಿನ ಉಡುಗೊರೆ ಕೊಡಲೇ..?' ಎಂದು ರೊಮ್ಯಾಂಟಿಕ್ ಆಗಿ ಕೇಳಿದರೆ ಒಲವಿನ ಉಡುಗೊರೆಯಾಗಿ ಏನನ್ನಾದರೂ ಕೊಡುವುದಿದ್ದರೆ ಒಲೆಯನ್ನೇ (ಸೌದೆ) ಕೊಟ್ಟರೆ ಒಳ್ಳೆಯದಿತ್ತು ಎಂದೇ ಹೇಳಬಹುದು. ಅಷ್ಟರಮಟ್ಟಿಗೆ ಜನರು ಒಲೆಯೆಡೆಗೆ ತಮ್ಮ ಒಲವನ್ನು ವ್ಯಕ್ತಪಡಿಸುತ್ತಿದ್ದಾರೆ.

ಇಷ್ಟು ವರುಷಗಳು ಉರುಳಿದ ನಂತರ ಒಲೆಗಳ ಬದುಕು ಒಂಥರ ಪ್ರಜ್ವಲಮಯವಾಗಿದೆ ಎನ್ನುವುದನ್ನು ಅದರಲ್ಲಿ ಧಗಧಗಿಸಿ ಉರಿಯುತ್ತಿರುವ ಜ್ವಾಲೆಯನ್ನು ನೋಡಿಯೇ ಹೇಳಬಹುದು. ಹಾಗೆ ನೋಡಿದರೆ ಹಳ್ಳಿಗಳಲ್ಲಿ ಈಗಲೂ ಒಂದಿಲ್ಲೊಂದು ಮನೆಯಲ್ಲಿ ಒಲೆ ಇದ್ದೇ ಇರುತ್ತದೆ ಹಾಗೂ ಅದರಲ್ಲಿ ಉರಿ ಆಗಾಗ ಹೊತ್ತಿಕೊಳ್ಳುತ್ತಲೇ ಇರುತ್ತದೆ ಕೂಡಾ. ಆದರೆ ಸಿಟಿಗಳಲ್ಲೂ ಈ ಒಲೆಗಳು ಅಲ್ಲಲ್ಲಿ ತಲೆಯೆತ್ತುವಂತಾಗಿದ್ದು ಈ ಗ್ಯಾಸ್ ಟ್ರಬಲ್‌ನ ಕಾರಣದಿಂದ. ಗ್ಯಾಸ್‌ನ ಒಳಗಣ ಕಿಚ್ಚನ್ನು, ಇಂಡಕ್ಷನ್ ಒಳಗಣ ಕಿಚ್ಚನ್ನೆಲ್ಲಾ ಕಂಡು ಬಳಸಿ ಗೊತ್ತಿರುವ ಜನರು ಎಲ್ಲೋ ಮರದೊಳಗಣವೂ ಕಿಚ್ಚು ಇದ್ದೀತು ಎನ್ನುವುದನ್ನೇ ಮರೆತಿದ್ದರು, ಮತ್ತು ಈಗ ಇವರೆಲ್ಲಾ ಮರಳಿ ಮರದ ಒಳಗಣ ಕಿಚ್ಚನ್ನು ನೆಚ್ಚಿಕೊಳ್ಳುವತ್ತ ಹೆಜ್ಜೆ ಇಡುವಂತಾಗಿದೆ. ಮರ ಅಂದರೆ ಇಲ್ಲಿ ಸೌದೆ ಎಂದರ್ಥ. ಯುದ್ಧದಿಂದ ಸೌದಿ ದೇಶವೂ ಬಳಲುತ್ತಿದೆ. ಆದರೆ ಇಷ್ಟು ದೂರದಲ್ಲಿರುವ ನಮ್ಮ ದೇಶದ ಜನರೂ ಬಳಲುವಂತಾಗಿದೆ, ಅದು ಸೌದೆಯ ಕಾರಣಕ್ಕಾಗಿ. ಒಲೆಯ ಒಡಲೊಳಗೆ ಒಳ್ಳೆಯ ಜ್ವಾಲೆಯ ಅಲೆಯನ್ನು ಬೇಕಾದಷ್ಟು ಎಬ್ಬಿಸಲೋಸುಗ ಒಳ್ಳೆಯ ಸೌದೆಯನ್ನು ಹುಡುಕಿ ಬಳಲುತ್ತಿದ್ದಾರೆ. ಹಾಗೊಂದು ಸೌದೆಗೆ ಹೋಗುವ ಕಾಯಕವೆಂದೇ ಹಳ್ಳಿಯಲ್ಲಿತ್ತು. ತೀರಾ ಅವರಂತೆ ಕಾಡಿಗೆಲ್ಲ ಹೋಗಿ ಕಡಿದು ತರದೇ ಹೋದರೂ ಕೂಡಾ ಸಿಟಿಯ ಕೆಲವು ಹೋಟೆಲ್ ವ್ಯಾಪಾರಿಗಳು, ಪಿಜಿ ಮಾಲೀಕರು, ಹಾಸ್ಟೆಲ್ ನಡೆಸುವವರು ಒಳ್ಳೆಯ ಸೌದೆಯನ್ನು ಹುಡುಕಿಕೊಂಡು ಹೋಗುತ್ತಿದ್ದಾರೆ. ಸಿಕ್ಕ ಸಿಕ್ಕ ಸಣ್ಣಪುಟ್ಟ ಗಾಡಿಗಳಲ್ಲಿ ಅದನ್ನು ತುಂಬಿಸಿಕೊಂಡು ತಂದು ಬಳಸುತ್ತಿದ್ದಾರೆ.

ಈ ಬದಲಾವಣೆಯಿಂದ ಇನ್ನೊಂದು ಪ್ರಮುಖ ಅಂಶವನ್ನು ನಾವಿಲ್ಲಿ ಗಮನಿಸಬೇಕು. ಇನ್ನು ಸಿಟಿಯ ಕ್ಯಾಂಟೀನ್, ಹೋಟೆಲ್, ಪಿಜಿ, ಹಾಸ್ಟೆಲ್‌ಗಳಲ್ಲಿ ಎಲ್ಲೆಲ್ಲೂ ಹಳ್ಳಿ ಆಹಾರ. ಏಕೆಂದರೆ ನಾವೇ ಹೇಳಿಕೊಂಡು ಬಂದಿರುವುದು ಸೌದೆ ಒಲೆಯಲ್ಲಿ ತಯಾರಿಸಿದ ಅಡುಗೆ ಆರೋಗ್ಯಕ್ಕೆ ಬಹಳ ಒಳ್ಳೆಯದು ಎಂದು. ಎಲ್ಲೆಲ್ಲೂ ಗ್ಯಾಸ್ ಒಲೆ ಬಳಸಿ ಅಡುಗೆ ತಯಾರಿ ನಡೆಸುತ್ತಿದ್ದರೆ, ನಮ್ಮದು ಸೌದೆ ಒಲೆಯ ಅಡುಗೆ ಎಂದು ಹೇಳಿಕೊಂಡು ಅದನ್ನೇ ಒಂದು ಬ್ರ್ಯಾಂಡ್ ರೀತಿ ಬೆಳೆಸಿಕೊಂಡವರಿಗೋ ಇದು ಒಂದು ರೀತಿಯ ಹಿನ್ನಡೆಯೇ ಸರಿ. ಈಗಲೂ ಅವರು ನಮ್ಮದು ಸೌದೆ ಒಲೆಯ ಅಡುಗೆ ಎಂದು ಹೇಳಿಕೊಂಡು ಪ್ರಚಾರಕ್ಕೆ ಮುಂದಾದರೆ, ''ಅಯ್ಯೋ ಸಾಕಯ್ಯ ಕಂಡಿದೀವಿ. ಈಗ ಎಲ್ಲೆಲ್ಲೂ ಗ್ಯಾಸ್ ಪ್ರಾಬ್ಲಮ್ ಹಾಗಾಗಿ ಬಹುತೇಕರು ಕಟ್ಟಿಗೆ ಬಳಸಿ ಒಲೆಯಲ್ಲೇ ಅಡುಗೆ ತಯಾರಿಸುತ್ತಿರುವುದು. ಅಂಥದ್ದರಲ್ಲಿ ನಿಂದೇನಯ್ಯಾ ಸ್ಪೆಷಲ್ಲು?'' ಎಂದು ಮೂಗು ಮುರಿಯದೇ ಇರಲಾರರು. ಎಂಬಲ್ಲಿಗೆ ಆ ಬ್ರ್ಯಾಂಡ್‌ನ ಬುಡಕ್ಕೇ ಏಟು ನೀಡಿದಂತಾಗುತ್ತಿದೆ. ಇದನ್ನೆಲ್ಲಾ ಗಮನಿಸಿದರೆ 'ಒಲೆ ಹತ್ತಿ ಉರಿದೆಡೆ ನಿಲಬಹುದು; ಧರೆ ಹತ್ತಿ ಉರಿದೊಡೆ ನಿಲಲುಬಾರದು' ಎಂಬ ಶರಣರ ಮಾತು ಈ ಸನ್ನಿವೇಶಕ್ಕೂ ಪ್ರಸ್ತುತ ಎನಿಸುತ್ತದೆ. ಧರೆ ಹೊತ್ತಿದೆ ಯುದ್ಧದ ಕಾರಣಕ್ಕೆ. ಅಂದ ಮೇಲೆ ಈ ಬಗೆಯ ವಹಿವಾಟುಗಳನ್ನು ನಡೆಸುವವರು ನಿಲ್ಲುವುದಾದರೂ ಹೇಗೆ? ಅದಕ್ಕೆ ಪರ್ಯಾಯವೋ, ಪರಿಹಾರವೋ ಎಂಬಂತೆ ಈ ಒಲೆ ಹೊತ್ತಿ ಉರಿಯುವುದರಿಂದ ಅವರೆಲ್ಲ ಕೊಂಚ ಧೈರ್ಯ ಹಾಗೂ ಭರವಸೆಯಿಂದ ನಿಲ್ಲುವಂತಾಗಿದೆಯಲ್ಲ! ಒಲೆ ಹತ್ತಿ ಉರಿಯುವುದರ ಮಹತ್ವ ಈ ಮುಖೇನ ಎಲ್ಲರಿಗೂ ಮನದಟ್ಟಾಗುತ್ತಿದೆ.

ಈ ಸ್ಥಿತಿ ಇನ್ನೂ ಕೆಲವು ಸಮಯ ಮುಂದುವರಿದರೆ, ಮಹಾನಗರಗಳಲ್ಲಿ ಬೀದಿ ಬೀದಿಗಳಲ್ಲಿ ತಳ್ಳುಗಾಡಿಗಳ ಮೇಲೆ ಸೌದೆಯ ಸಣ್ಣ ಸಣ್ಣ ಕಟ್ಟುಗಳನ್ನು ಮಾಡಿಟ್ಟುಕೊಂಡು ಕರೆ ಕರೆದುಕೊಂಡು ಮಾರುತ್ತ ಬಂದರೂ ಬರಬಹುದು. ಎಲ್ಲೆಲ್ಲಿ ಗ್ಯಾಸ್ ಏಜೆನ್ಸಿ, ಪೆಟ್ರೋಲ್ ಬಂಕ್‌ಗಳಿವೆಯೋ ಅಲ್ಲೆಲ್ಲ 'ಸೌದೆ ಮಾರಾಟ ಕೇಂದ್ರ' ಎಂಬ ಹೊಸ ವಿಭಾಗ ಒಂದನ್ನು ತೆರೆದರೂ ತೆರೆಯಬಹುದು. ಇದಿಷ್ಟೇ ಅಲ್ಲದೇ ತಳ್ಳುಗಾಡಿಗಳ ಮೇಲೆ ಸಿದ್ಧ ಮಾದರಿಯ ಒಲೆಯನ್ನೇ ಇಟ್ಟು, ಚೆನ್ನಾಗಿ ಸೌದೆ ಹಾಕಿ ಉರಿಯುವಂತೆ ಮಾಡಿ, ಮನೆ ಮನೆಯ ಬೀದಿ, ಓಣಿಗಳಲ್ಲಿ ಬಂದು ''ನಮ್ಮಲ್ಲಿ ವಿಶಲ್ ಕುಕ್ಕರ್ ಹೊಡೆಸಿಕೊಡಲಾಗುವುದು, ಸಾಂಬಾರ್ ಕುದಿಸಿಕೊಡಲಾಗುವುದು, ಅನ್ನ ಮಾಡಿಕೊಡಲಾಗುವುದು'' ಎಂದೆಲ್ಲ ಕೂಗಿ ಕೂಗಿ ಕರೆಯಬಹುದು. ಇನ್ನೂ ಒಂದು ಸಾಧ್ಯತೆಯನ್ನೂ ನಾವು ಅಲ್ಲಗಳೆಯುವಂತಿಲ್ಲ, ಹೊಸ ಮನೆಗಳು, ಅಪಾರ್ಟ್‌ಮೆಂಟ್‌ಗಳಲ್ಲಿ ಈ ಒಲೆ ಹಾಗೂ ಅದರ ಹೊಗೆ ಹೊರಕ್ಕೆ ಹೋಗಲು ಚಿಮಣಿ ಇತ್ಯಾದಿ ವ್ಯವಸ್ಥೆಗಳನ್ನು ತಪ್ಪದೇ ಮಾಡಬಹುದು ಮತ್ತು ಅದನ್ನು ತಮ್ಮ ಕರಪತ್ರಗಳಲ್ಲಿ, 'ಇಲ್ಲಿ ಸುಸಜ್ಜಿತ ಸೌದೆ ಒಲೆ ವ್ಯವಸ್ಥೆ ಇದೆ ಎನ್ನುವುದನ್ನೂ ಸೇರಿಸಬಹುದು. ಈ ವಸತಿ ಸಮುಚ್ಚಯಗಳ ವ್ಲಾಗ್ ಮಾಡಿ ಎಲ್ಲರಿಗೂ ತೋರಿಸುವವರು, ಆ ಒಲೆಯನ್ನು ಪರಿ ಪರಿಯಾಗಿ ಝೂಮ್ ಮಾಡಿ ವೀಡಿಯೋದಲ್ಲಿ ಸೆರೆಹಿಡಿದು ತೋರಿಸಬಹುದು. ಇರಲಿ ಒಲೆಗಳು ಎಂಥಾ ಒಳ್ಳೆಯ ಕಾಲ ಬಂತಲ್ಲವಾ ಎಂದು ಹುಬ್ಬೇರಿಸಲಡ್ಡಿಯಿಲ್ಲ.

ಓವರ್‌ಡೋಸ್: ಹೀಗೆ ಇನ್ನೂ ಒಂದಷ್ಟು ದಿನ ಕಾಸ್ ನೀಡಿದರೂ ಕ್ಲಪ್ತ ಸಮಯಕ್ಕೆ ಗ್ಯಾಸ್ ಸಿಲಿಂಡರ್ ಸಿಗದೇ ಹೋದರೆ ಆಗ 'ಗ್ಯಾಸ್ ಇದ್ದೋನೇ ಬಾಸ್'.

ಕಿರುಸುದ್ದಿ

50 ಲಕ್ಷ ಮೌಲ್ಯದ ಸಿಗರೇಟ್ ಅಕ್ರಮ ಸಾಗಣೆ: ಬಂಧನ

• **ದೇವನಹಳ್ಳಿ:** ಹಾಂಕಾಂಗ್, ಕೌಲಾಲಂಪುರ್, ಸಿಂಗಾಪುರ್ ನಿಂದ ಬೆಂಗಳೂರಿಗೆ ಬರುತ್ತಿದ್ದ ಐವತ್ತು ಲಕ್ಷ ಮೌಲ್ಯದ ಎರಡು ಲಕ್ಷ ಅಕ್ರಮ ಸಿಗರೇಟ್ ಗಳನ್ನು ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಪೊಲೀಸರು ವಶಕ್ಕೆ ಪಡೆದುಕೊಂಡಿದ್ದಾರೆ. ತಂದೆ ಮತ್ತು ಮಗ ಅಕ್ರಮ ಸಿಗರೇಟ್ ಸಾಗಾಣಿಕೆ ದಂಧೆಯಲ್ಲಿ ತೊಡಗಿದ್ದರು. ಬೆಂಗಳೂರು ಮೂಲದ ತಂದೆ ಅಬ್ದುಲ್ ಬಶೀದ್, ಮಗ ಮೊಹಮ್ಮದ್ ಆಶೀಕ್ ಸೇರಿ ಮಹಮ್ಮದ್ ಅನ್ವರ್, ಮಹಮ್ಮದ್ ಅನ್ಸಾರಿ, ಗುಲಾಮ್ ಹುಸೇನ್ ಖಾನ್ ಎಂಬುವವರನ್ನು ಬಂಧಿಸಲಾಗಿದೆ. ವಿಮಾನ ನಿಲ್ದಾಣ ಠಾಣೆ ಪೊಲೀಸರು, 20 ಕಾರ್ಟನ್ ಸಿಗರೇಟ್ ಬಾಕ್ಸ್ ವಶಕ್ಕೆ ಪಡೆದುಕೊಳ್ಳಲಾಗಿದೆ. ಒಂದು ಕಾರ್ಟನ್ ನಲ್ಲಿ ಹತ್ತು ಸಾವಿರದಂತೆ ಎರಡು ನಕಲಿ ಸಿಗರೇಟ್ ಬೆಂಗಳೂರಿಗೆ ತಂದಿದ್ದರು. ಕಾಂಬೋಡಿಯಾದಲ್ಲಿ 10 ಸಾವಿರ ಸಿಗರೇಟ್ ಗೆ 25 ಸಾವಿರ ಕೊಟ್ಟು, ಖರೀದಿ ಮಾಡುತ್ತಿದ್ದರು. ಬೆಂಗಳೂರಿನಲ್ಲಿ 22 ರಿಂದ 24 ರೂ .ಬೆಲೆಯ ಅಸಲಿ ಸಿಗರೇಟ್‌ಗೆ, ಎರಡೂವರೆ ರೂಪಾಯಿ ಬೆಲೆಯಲ್ಲಿ ನಕಲಿ ಸಿಗರೇಟ್ ಖರೀದಿ ಮಾಡುತ್ತಿದ್ದರು. ಎರಡೂವರೆ ರೂಪಾಯಿಗೆ ಖರೀದಿ ಮಾಡುತ್ತಿದ್ದ ನಕಲಿ ಸಿಗರೇಟ್‌ನ್ನು ಬೆಂಗಳೂರಿನಲ್ಲಿ 16 ರೂಪಾಯಿಗೆ ಬೆಲೆಗೆ ಮಾರಾಟ ಮಾಡುತ್ತಿದ್ದರು. ಅನ್ವೇಶ್ ಐಪಿಆರ್ ಸರ್ವೀಸ್ ಸಂಸ್ಥೆ, ನಕಲಿ ಸಿಗರೇಟ್ ಜಾಲದ ಬಗ್ಗೆ ವಿಮಾನ ನಿಲ್ದಾಣ ಪೊಲೀಸರಿಗೆ ದೂರು ನೀಡಿತ್ತು. ಖಚಿತ ಮಾಹಿತಿಯ ಮೇರೆಗೆ ವಿಮಾನ ನಿಲ್ದಾಣದಲ್ಲಿ, ಐದು ಮಂದಿಯನ್ನು ವಶಕ್ಕೆ ಪಡೆದಾಗ ನಕಲಿ ಸಿಗರೇಟ್ ಸ್ಮಗ್ಲಿಂಗ್ ಮಾಡಿರೋದು ಬೆಳಕಿಗೆ ಬಂದಿದೆ. ಐಟಿಸಿ ಹಾಗೂ ಎಸ್ಸೆ ಸಂಸ್ಥೆಯ ಸಿಗರೇಟನ್ನು ನಕಲು ಮಾಡಿದ್ದರು. ವಿಮಾನ ನಿಲ್ದಾಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೃಷಿ ಹೊಂಡಕ್ಕೆ ಬಿದ್ದು ಇಬ್ಬರು ಯುವಕರ ಸಾವು

• **ನೆಲಮಂಗಲ:** ಕೃಷಿ ಹೊಂಡದಲ್ಲಿ ಈಜಾಡಲು ಹೋಗಿದ್ದ ಇಬ್ಬರು ಯುವಕರು ನೀರಿನಲ್ಲಿ ಮುಳುಗಿ ಮೃತಪಾಗಿರುವ ಘಟನೆ ನೆಲಮಂಗಲ ಗ್ರಾಮಾಂತರ ಪೊಲೀಸ್ ಠಾಣೆ ವ್ಯಾಪ್ತಿ ಮಹದೇವಪುರ ಗ್ರಾಮದಲ್ಲಿ ನಡೆದಿದೆ. ನರಸೇಗೌಡ (22), ಸುರೇಶ್(21) ಮೃತ ದುರ್ದೈವಿಗಳು, ಇವರು ಮಹದೇವಪುರದ ಭೂಸಂದ್ರ ಗ್ರಾಮದಲ್ಲಿ ವಾಸವಾಗಿದ್ದು ,ನರಸೇಗೌಡ ಗ್ರಾಮಪಂಚಾಯಿತಿಯಲ್ಲಿ ತಾತ್ಕಾಲಿಕ ವಾಟರ್‌ಮ್ಯಾನ್ ಆಗಿ ಕೆಲಸ ಮಾಡುತ್ತಿದ್ದರೆ, ಗೌರಿಬಿದನೂರು ಹಿಂದೂಪುರದ ಸುರೇಶ್ ಟ್ರ್ಯಾಕ್ಟರ್ ಚಾಲಕ ವೃತ್ತಿಯನ್ನು ಮಾಡುತ್ತಿದ್ದನು. ಶನಿವಾರ ಕೆಲಸ ಮುಗಿಸಿ ಮಹದೇವಪುರ ಭೂಸಂದ್ರ ಗಡಿಯಲ್ಲಿರುವ 16ಅಡಿಗೂ ಹೆಚ್ಚಿನ ಆಳದ ಕೃಷಿ ಹೊಂಡದಲ್ಲಿ ನಾಲ್ಕು ಯುವಕರು ಈಜಾಡಲು ಹೋಗಿದ್ದಾರೆ. ಒಬ್ಬ ಯುವಕ ನೀರು ಕುಡಿದು ಕಾಪಾಡಿ ಎಂದಾಗ ಮೂರು ಯುವಕರು ಹೊಂಡಕ್ಕೆ ಹಾರಿದ್ದಾರೆ. ಆತನನ್ನು ಕಾಪಾಡಲು ಹೋದ ಮತ್ತೊಬ್ಬನು ಆತನ ಜತೆ ನೀರು ಕುಡಿದು ಮೃತಪಾಗಿದ್ದು, ಉಳಿದ ಇಬ್ಬರು ಅದೃಷ್ಟವಶಾತ್ ಪಾರಾಗಿದ್ದಾರೆ. ಗ್ರಾಮಸ್ಥರು ಆಗಮಿಸಿ ಕೃಷಿ ಹೊಂಡದಿಂದ ಯುವಕರನ್ನು ಮೇಲೆತ್ತಿ ಆಸ್ಪತ್ರೆಗೆ ದಾಖಲಿಸಿದ್ದು ಮೃತಪಾಗಿದ್ದಾರೆ ಎಂದು ಖಚಿತವಾದ ನಂತರ ನೆಲಮಂಗಲ ಸಾರ್ವಜನಿಕ ಆಸ್ಪತ್ರೆ ಶವಾಗಾರದಲ್ಲಿ ಮರಣೋತ್ತರ ಪರೀಕ್ಷೆ ನಡೆಸಲಾಯಿತು. ನರಸೇಗೌಡನನ್ನು ಭೂಸಂದ್ರದಲ್ಲಿ, ಸುರೇಶ್ ಮೃತದೇಹವನ್ನು ಗೌರಿಬಿದನೂರು ಹಿಂದೂಪುರದಲ್ಲಿ ಅಂತ್ಯಕ್ರಿಯೆ ಮಾಡಲಾಯಿತು. ಕೃಷಿಹೊಂಡಕ್ಕೆ ಯುವಕರು ಬಿದ್ದು ಮೃತಪಾಗಿರುವ ಘಟನೆ ತಿಳಿಯುತ್ತಿದ್ದಂತೆ ನೆಲಮಂಗಲ ಗ್ರಾಮಾಂತರ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದು ದೂರು ದಾಖಲು ಮಾಡಿಕೊಂಡಿದ್ದಾರೆ.ಕೃಷಿ ಹೊಂಡಕ್ಕೆ ಬಿದ್ದು ಇಬ್ಬರು ಯುವಕರು ಮೃತಪಾಗಿದ್ದರು ಸಹ ಜಿಲ್ಲಾಧಿಕಾರಿ,ತಹಸೀಲ್ದಾರ್ ಹಾಗೂ ಕೃಷಿ ಮೇಲಾಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿಲ್ಲ ಎಂಬುದಾಗಿ ಸಾರ್ವಜನಿಕರು ಬೇಸರ ವ್ಯಕ್ತಪಡಿಸಿದ್ದಾರೆ.





ವ್ಯಕ್ತಿ ನಾಪತ್ತೆ: ದೂರು ದಾಖಲು

• **ರಾಮನಗರ:** ತಾಲ್ಲೂಕಿನ ಕಸಬಾ ಹೋಬಳಿಯ ಬೂರಗಮನರದೊಡ್ಡಿಯ ನಿವಾಸಿ ದಿಲೀಪ್ (35) ಕಾಣೆಯಾಗಿದ್ದಾರೆ ಎಂದು ಪೊಲೀಸ್ ಠಾಣೆಗೆ ದೂರು ದಾಖಲಾಗಿದೆ. ವ್ಯಕ್ತಿಯಚಹರೆಯಯಾದ 5.8 ಅಡಿ ಎತ್ತರ, ಗೋಧಿ ಮೈಬಣ್ಣ, ಎಡಗೈ ಮೇಲೆ ಅಚ್ಚೆ ಗುರುತು ಮತ್ತು ಹಳೆ ಗಾಯದ ಗುರುತು ಇರುತ್ತದೆ. ಇವರು ರಾಮನಗರ ಟೌನಿನ ರಾಯರದೊಡ್ಡಿ ಸರ್ಕಲ್‌ನಲ್ಲಿ ಮೊಬೈಲ್ ಸರ್ವಿಸ್ ಅಂಗಡಿ ಇಟ್ಟುಕೊಂಡಿರುತ್ತಾರೆ. ಇವರು ಕಾಣೆಯಾಗುವಾಗ ಹಸಿರು ಬಣ್ಣದ ತುಂಬು ತೋಳಿನ ಶರ್ಟ್ ಹಾಗೂ ನೀಲಿ ಬಣ್ಣದ ಜೀನ್ಸ್ ಪ್ಯಾಂಟ್ ಧರಿಸಿರುತ್ತಾರೆ. ಇವರು ಕಂಡು ಬಂದರೆ ಆರಕ್ಷಕ ಉಪ ನಿರೀಕ್ಷಕರು, ರಾಮನಗರ (ಗ್ರಾ) ಪೊಲೀಸ್ ಠಾಣೆ, ರಾಮನಗರ, ಬೆಂಗಳೂರು ದಕ್ಷಿಣ ಜಿಲ್ಲೆ, ಇವರನ್ನು ಸಂಪರ್ಕಿಸುವಂತೆ ಕೋರಲಾಗಿದೆ.

ದೊಡ್ಡಬಳ್ಳಾಪುರದಲ್ಲಿ ಹೆಲಿಕಾಪ್ಟರ್‌ನಿಂದ ಪುಷ್ಪವೃಷ್ಟಿ | ಶ್ರೀರಾಮ ನಾಮದಲ್ಲಿ ಸಹಸ್ರಾರು ಜನ

ಶ್ರೀರಾಮ ಬೃಹತ್ ಶೋಭಾಯಾತ್ರೆ

• **ದೊಡ್ಡಬಳ್ಳಾಪುರ:** ಶ್ರೀ ರಾಮನವಮಿ ಅಂಗವಾಗಿ ವಿಶ್ವ ಹಿಂದೂ ಪರಿಷತ್ ಬಜರಂಗ ದಳ ವತಿಯಿಂದ ನಗರದಲ್ಲಿ ಕಳೆದ ಮೂರು ದಿನಗಳ ಕಾಲ ನಡೆಯುತ್ತಿರುವ ಶ್ರೀ ರಾಮೋತ್ಸವ ಹಾಗೂ ಬೃಹತ್ ಶ್ರೀ ರಾಮ ಶೋಭಾಯಾತ್ರೆಯಲ್ಲಿ ಸಹಸ್ರಾರು ಜನ ಪಾಲ್ಗೊಂಡು ಶ್ರೀರಾಮ ಜಪದಲ್ಲಿ ಮಿಂದರು.

ಭಾನುವಾರ ನಡೆದ ಶ್ರೀ ರಾಮ ಶುಭ ರಾತ್ರಿಯಲ್ಲಿ ಶ್ರೀರಾಮ, ಅಂಜನೇಯ, ಡಾ.ಬಿ.ಆರ್ .ಅಂಬೇಡ್ಕರ್, ಇಮ್ಮಡಿ ಪುಲಕೇಶಿ, ಶಿವಾಜಿ, ಶಿವ ಮೂರ್ತಿಯನ್ನು ನಗರದ ಪ್ರಮುಖ ರಸ್ತೆ, ವೃತ್ತ ಬೀದಿಯಲ್ಲಿ ಅದ್ದೂರಿಯಾಗಿ ಮೆರವಣಿಗೆ ನಡೆಸಲಾಯಿತು.

ಭಗತ್ ಸಿಂಗ್ ಕ್ರೀಡಾಂಗಣದಿಂದ ಆರಂಭವಾದ ಮೆರವಣಿಗೆಯ ಮೂರ್ತಿಗಳು ತಾಲೂಕು ಕಚೇರಿ ವೃತ್ತ, ಸ್ವಾಮಿ ವಿವೇಕಾನಂದ ಸರ್ಕಲ್, ಬಸ್ ನಿಲ್ದಾಣ ಸಿದ್ದಲಿಂಗಯ್ಯ ವೃತ್ತ, ಕೊಂಗಾಡಿಯಪ್ಪ ರಸ್ತೆಯಲ್ಲಿ ಸಾವಿರಾರು ಹಿಂದೂ ಕಾರ್ಯಕರ್ತರು ಜೈ ಶ್ರೀರಾಮ್ ಭಾರತ ಮಾತಾಕಿ ಜೈ ಘೋಷಣೆಯನ್ನು ಕೂಗುತ್ತಾ ಮೆರವಣಿಗೆ ನಡೆಸಲಾಯಿತು. ಶ್ರೀರಾಮ ಶೋಭಾಯಾತ್ರೆಯಲ್ಲಿ ಸಹಸ್ರಾರು ಜನ ಪಾಲ್ಗೊಂಡು ರಾಮ ನಾಮಸ್ಮರಿಸಿದರು. ಇದೇ ಮೊದಲ ಬಾರಿಗೆ ವಿಶೇಷವಾಗಿ ನಗರದ ಹೃದಯ ಭಾಗ ಹಳೇ ಬಸ್ ನಿಲ್ದಾಣದಲ್ಲಿ ಶ್ರೀರಾಮ ಶೋಭಾಯಾತ್ರೆಯಲ್ಲಿ, ಹೆಲಿಕಾಪ್ಟರ್ ಮೂಲಕ ಪುಷ್ಪಾರ್ಚನೆ ನಡೆಸಲಾಯಿತು. ಈ ಸುಸಂದರ್ಭವನ್ನು ಜನ ಕಣ್ತುಂಬಿಕೊಂಡರು.





ಸಂಜೆ ಭಗತ್ ಸಿಂಗ್ ಕ್ರೀಡಾಂಗಣದಲ್ಲಿ ರಾವಣನ ದಹನ ಕಾರ್ಯಕ್ರಮ ನಡೆಸಲಾಯಿತು. ಶಾಸಕ ಧೀರಜ್ ಮುನಿರಾಜ್, ವಿಶ್ವ ಹಿಂದೂ ಪರಿಷತ್ ಬಜರಂಗ ದಳದ ಪ್ರಮುಖರು, ಆಯೋಜಕರು, ಹಿಂದೂ ಮುಖಂಡರು ಸೇರಿದಂತೆ ಇತರರು ಉಪಸ್ಥಿತರಿದ್ದರು. ಶ್ರೀರಾಮ ಶೋಭಾಯಾತ್ರೆಯಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ತಡೆಯಲು ಸೂಕ್ತ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿತ್ತು.

ವಾಗಟ ರಾಮೇಶ್ವರ ಮೆರವಣಿಗೆ



» ವಾಗಟ ರಾಮೇಶ್ವರ ಸ್ವಾಮಿ ದೊಡ್ಡ ದೇವರ ಜಾತ್ರೆ

• **ತಾವರೆಕೆರೆ:** ಸಾವಿರಾರು ವರ್ಷದ ಇತಿಹಾಸವಿರುವ ವಾಗಟರಾಮೇಶ್ವರ ಸ್ವಾಮಿ ತಾವರೆಕೆರೆ ರಾಮೇಶ್ವರ, ಸಿದ್ದೇಶ್ವರ, ಬಾಣಮಾಕನಹಳ್ಳಿ, ವದಲಿ ರಾಮೇಶ್ವರ, ಬಿದರಹಳ್ಳಿಬೆತ್ತೇಶ್ವರರ ಜಾತ್ರೋತ್ಸವ ನಡೆಯಿತು.

ಪ್ರತಿ 11 ವರ್ಷಕ್ಕೊಮ್ಮೆ 3 ದಿನಗಳ ಕಾಲ ದೊಡ್ಡದೇವರಜಾತ್ರೆ ನಡೆಸಲಾಗುತ್ತಿದೆ. ಪ್ರಥಮ ದಿನ ಕೂಟ 2ನೇ ದಿನ ಹೋಳಿಪೂಜೆ , 3ನೇ ದೀಪಾರಾಧನೆ ಮಾಡಲಾಗುತ್ತಿದೆ. ಕಾಲಾಟ, ಡೊಳ್ಳುಕುಣಿತ, ವೀರ ಗಾಸೆ, ಗೊರವರಕುಣಿತ ಮಂಗಳವಾದ್ಯ , ತೆಂಗಿನಕಾಯಿ ಪವಾಡದೊಂದಿಗೆ ವಾಟಗ ಗ್ರಾಮದ ರಾಜಬೀದಿಯಲ್ಲಿ ಮೆರವಣಿಗೆ ಮಾಡಿ ವಿಶೇಷ ಪೂಜೆ ಸಲ್ಲಿಸಲಾಗಿದೆ. ಆರು ದೇವರ ಪದಾಧಿಕಾರಿಗಳು, ಕಂಬಿ ಯಜಮಾನರಿದ್ದರು. ವಾಗಟ ರಾಮೇಶ್ವರ ದೇಗುಲ ಸಮಿತಿ ಅಧ್ಯಕ್ಷ ಬಿ.ಎಸ್. ರಾಮು ಮಾತನಾಡಿ, ಹಿರಿಯರ ಆಚರಣೆ ಮುಂದು ವರೆಸುವುದು ನಮ್ಮ ಆದ್ಯಕರ್ತವ್ಯವಾಗಿ ನಮ್ಮ ಕುಲದೇವರ ಆರಾಧನೆ 11 ವರ್ಷಕ್ಕೊಮ್ಮೆ ನಡೆಸಲಾಗುತ್ತಿದೆ. 5 ಕಂಬದೀಪಗಳೊಂದಿಗೆ ಬಂಡಿಗೋತ್ರದ ವಕ್ಕಲಿನವರು ಪೂಜಿಸುತ್ತಿದ್ದೇವೆಂದರು. ವಾಗಟ ರಾಮೇಶ್ವರದೇವಾಲಯ ಸಮಿತಿ ಉಪಾಧ್ಯಕ್ಷ ಬಿಬಿಎಂಪಿ ಅಂಜಿನಪ್ಪ ಮಾತನಾಡಿ, ಕಾಲಾಟ ಡೊಳ್ಳುಕುಣಿತ, ವೀರಗಾಸೆ, ಪಟದಕುಣಿತ, ತೆಂಗಿನಕಾಯಿ ಪವಾಡ, ಮಂಗಳವಾದ್ಯಗಳೊಂದಿಗೆ ಮೆರವಣಿಗೆ ಮಾಡಿ 12 ಸಾವಿರಕ್ಕೂ ಹೆಚ್ಚು ಭಕ್ತಾದಿಗಳಿಗೆ ಅನ್ನದಾನ ಮಾಡುವ ಮೂಲಕ ಜಾತಿಧರ್ಮ ಬೇಧವಿಲ್ಲದೆ ಜಾತ್ರೆ ನಡೆಸುತ್ತಿದ್ದೇವೆಂದು ಹೇಳಿದರು.

ವಾಗಟ ರಾಮೇಶ್ವರದೇವಾಲಯ ಸಮಿತಿ ಕಾರ್ಯದರ್ಶಿ ಕರಿನಾಗಪ್ಪ ಮಾತನಾಡಿ, ದಿನಗಳ ಕಾಲ ನಡೆಯುವ ಜಾತ್ರೆಯಲ್ಲಿ ಪ್ರಥಮ ದಿನ ಕೂಟವ 2ನೇ ದಿನ ಹೋಳಿಪೂಜೆ, 3ನೇ ದಿನ ದೀಪಾರಾಧನೆ, ತಲೆಯಮೇಲೆ ದೀಪ ಪಡೆಯುವ ಮುಖಾಂತರ ಅಂತ್ಯಗೊಳ್ಳುತ್ತದೆಂದರು.

ರಾಯಲ್ ಓಕ್ ಫರ್ನಿಚರ್ ಮಳಿಗೆ ಆರಂಭ

• **ದೊಡ್ಡಬಳ್ಳಾಪುರ:** ನಗರದ ಗೌರಿಬಿದನೂರು ರಸ್ತೆಯಲ್ಲಿ ಭಾರತದ ಅಗ್ರ ಪೀಠೋಪಕರಣ ಬ್ರ್ಯಾಂಡ್ ಆಗಿರುವ ರಾಯಲ್ ಓಕ್ ಫರ್ನಿಚರ್ ನ ನೂತನ ಮಳಿಗೆಗೆ ರಾಯಲ್ ಓಕ್ ಇನ್‌ಕಾರ್ಪೋರೇಷನ್ ಪ್ರೈವೇಟ್ ಲಿಮಿಟೆಡ್‌ನ ಅಧ್ಯಕ್ಷ ವಿಜಯ್ ಸುಬ್ರಹ್ಮಣಿಯಂ, ವ್ಯವಸ್ಥಾಪಕ ನಿರ್ದೇಶಕ ಮಥನ್ ಸುಬ್ರಹ್ಮಣಿಯಂ ಮತ್ತು ಫ್ರಾಂಚೈಸಿ ಪಾಲುದಾರ ದೀಪಕ್ ಶಿವಕುಮಾರ್ ಸೇರಿದಂತೆ ಗಣ್ಯರ ಸಮ್ಮುಖದಲ್ಲಿ ಚಾಲನೆ ನೀಡಲಾಯಿತು.

ವಿಜಯ್ ಸುಬ್ರಮಣಿ ಮಾತನಾಡಿ, 12000 ಚದರ ಅಡಿ ವಿಸ್ತೀರ್ಣದಲ್ಲಿರುವ ಈ ಮಳಿಗೆಯು ಸ್ಥಳೀಯ ಗ್ರಾಹಕರಿಗೆ ವಾಸದ ಕೋಣೆಗಳು, ಮಲಗುವ ಕೋಣೆಗಳಿಂದ ಹಿಡಿದು ಗೃಹಾಲಂಕಾರಕ್ಕೆ ಅಗತ್ಯವಾದ ಅಂತಾರಾಷ್ಟ್ರೀಯ ಗುಣಮಟ್ಟದ ವ್ಯಾಪಕ ಶ್ರೇಣಿಯ ಪೀಠೋಪಕರಣವನ್ನು ಕೈಗೆಟುಕುವ ಬೆಲೆಯಲ್ಲಿ ಒದಗಿಸಲಿದೆಂದರು.

ಗ್ರಾಮೀಣ ಭಾಗದ ಗ್ರಾಹಕರನ್ನು ತಲುಪುವ ಸಂಸ್ಥೆಯ ಧ್ಯೇಯದ ಪ್ರತೀಕವಾಗಿ ಈ ಮಳಿಗೆ ಸಿದ್ದಗೊಂಡಿದೆ. ಈ ಮೂಲಕ ಕರ್ನಾಟಕದಲ್ಲಿ ನಮ್ಮ ರೀಟೇಲ್ ಅಸ್ತಿತ್ವವನ್ನು ಇನ್ನಷ್ಟು ಬಲವರ್ಧನೆಗೊಳಿಸಿದ್ದೇವೆಂದು ತಿಳಿಸಿದರು.ಈ ಹೆಜ್ಜೆ ಸ್ಥಳೀಯ ಗ್ರಾಹಕರಿಗೆ ಅಂತಾರಾಷ್ಟ್ರೀಯ ಗುಣಮಟ್ಟದ ಪೀಠೋಪಕರಣವನ್ನು ಕೈಗೆಟುಕುವ ಬೆಲೆಯಲ್ಲಿ ಒದಗಿಸುವ ಜತೆಗೆ, ಸ್ಥಳೀಯರಿಗೆ ಉದ್ಯೋಗಾವಕಾಶವನ್ನು ನೀಡಲಿದೆಂದು ಹೇಳಿದರು.



ಕುಡಿದ ಮತ್ತಿನಲ್ಲಿ ಕಾರು ಚಾಲನೆ: ಸಾವು

• **ಬೆಂಗಳೂರು:** ನಗರದ ಹೈಗ್ರೌಂಡ್ಸ್ ಸಂಚಾರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಕುಡಿದ ಮತ್ತಿನಲ್ಲಿ ರಸ್ತೆ ವಿರುದ್ಧ ದಿಕ್ಕಿನಲ್ಲಿ ಕಾರು ಚಾಲನೆ ಮಾಡಿ ದ್ವಿಚಕ್ರ ವಾಹನಕ್ಕೆ ಡಿಕ್ಕಿಯಾದ ಪರಿಣಾಮ ಇಬ್ಬರು ಸ್ಥಳದಲ್ಲೇ ಮೃತರಾಗಿದ್ದಾರೆ.

ಸದರ್‌ಡೌನ್ ನಿವಾಸಿ ಜುಬೇರ್ ಅಹಮ್ಮದ್ (42), ಅಬ್ದುಲ್ ಮುನೀರ್ ಪಾಷಾ (16) ಮೃತರು. ಆರೋಪಿ ಕೊಡಗು ಜಿಲ್ಲೆಯ ಕಾರು ಚಾಲಕ ಎ.ಸಿ.ಅಯ್ಯಪ್ಪ (29) ಎಂಬಾತನನ್ನು ಬಂಧಿಸಿ, ಕಾರನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಅಯ್ಯಪ್ಪ ಕಾಫಿ ಬ್ಯುಸಿನೆಸ್‌ಗಾಗಿ ಕೊಡಗಿನಿಂದ ನಗರಕ್ಕೆ ಶನಿವಾರ ಆಗಮಿಸಿದ್ದ, ಈ ವೇಳೆ ತಡರಾತ್ರಿ 2 ಗಂಟೆ ಸುಮಾರಿಗೆ ನಗರದ ವಕ್ಫ್‌ಬೋರ್ಡ್ ಕಚೇರಿ ಹತ್ತಿರ ಏಕಮಾರ್ಗವಾಗಿ ಕಾರು ಚಾಲನೆ ಮಾಡಿಕೊಂಡು ಬಂದಿದ್ದಾನೆ. ತಡರಾತ್ರಿ ಕೆಲಸ ಮುಗಿಸಿಕೊಂಡು ಮನೆಗೆ ಹೋಗುತ್ತಿದ್ದ ಜುಬೇರ್ ಹಾಗೂ ಆತನ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದ ಅಬ್ದುಲ್ ಮುನೀರ್ ಪಾಷಾ ದ್ವಿಚಕ್ರ ವಾಹನಕ್ಕೆ ಅಯ್ಯಪ್ಪನ ಕಾರು ಡಿಕ್ಕಿಯಾಗಿದೆ. ಈ ವೇಳೆ ತೀವ್ರ ಗಾಯಗೊಂಡ ಇಬ್ಬರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಮಾಹಿತಿ ತಿಳಿದು ಸ್ಥಳಕ್ಕೆ ಆಗಮಿಸಿದ ಹೈಗ್ರೌಂಡ್ಸ್ ಸಂಚಾರ ಠಾಣೆ ಪೊಲೀಸರು ಪರಿಶೀಲನೆ ನಡೆಸಿ, ಮೃತ ದೇಹಗಳನ್ನು ಸ್ಥಳೀಯ ಆಸ್ಪತ್ರೆಗೆ ದಾಖಲಿಸಿದ್ದಾರೆ. ಅಪಘಾತ ಎಸಗಿದ್ದ ಕಾರು ಚಾಲಕನನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿದಾಗ ಮದ್ಯಪಾನ ಮಾಡಿರುವುದು ದೃಢಪಟ್ಟಿದೆ. ಆರೋಪಿ ವಿರುದ್ಧ ಮದ್ಯಪಾನ ಮಾಡಿ ಜೀವಹಾನಿ ಉಂಟುಮಾಡಿದ ಆರೋಪದ ಅಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಬೈಕ್ ಸವಾರನ ಮೇಲೆ ಕರಡಿ ದಾಳಿ: ಸೆರೆ ಹಿಡಿದ ಅರಣ್ಯ ಇಲಾಖೆ



• **ಚನ್ನಪಟ್ಟಣ:** ತಾಲೂಕಿನ ಪ್ರಾದೇಶಿಕ ಅರಣ್ಯ ವಲಯ ವ್ಯಾಪ್ತಿಯ ಸಿಂಗರಾಜಪುರ, ಕೋಡಂಬಹಳ್ಳಿ ಮಾರ್ಗದ ಕಣಿವೆದೊಡ್ಡಿ ದಂಡಿನ ಮಾರಮ್ಮನ ದೇವಸ್ಥಾನದ ಬಳಿ ಶನಿವಾರ ಬೆಳಗ್ಗೆ ಸುಮಾರು 6ಗಂಟೆ ಸಮಯದಲ್ಲಿ ಹೆಣ್ಣು ಕರಡಿಯೊಂದು ಬೈಕ್ ಸವಾರರ ಮೇಲೆ ದಾಳಿ ನಡೆಸಿ ಆತಂಕ ಸೃಷ್ಟಿಸಿದ ಘಟನೆ ನಡೆದಿದೆ.

ಸುಮಾರು 40 ವರ್ಷ ಪ್ರಾಯದ ಹೆಣ್ಣು ಕರಡಿ ರಸ್ತೆಯಲ್ಲಿ ಸಂಚರಿಸುತ್ತಿದ್ದ ಬೈಕ್ ಮೇಲೆ ಏಕಾಏಕಿ ದಾಳಿ ಮಾಡಿದೆ. ಈ ಸಂದರ್ಭದಲ್ಲಿ ಬೈಕ್ ಸವಾರರು ಪ್ರಾಣಭಯದಿಂದ ವಾಹನ ಬಿಟ್ಟು ಕೂಗುತ್ತಾ ಓಡಿ ಪಾರಾಗಿದ್ದಾರೆ. ಆದರೆ, ಕರಡಿ ಸ್ಥಳದಿಂದ ಕದಲದೆ ಬೈಕ್ ಅನ್ನು ಜಖಂ ಗೊಂಡಿದೆ. ನಂತರ ಮತ್ತೊಂದು ಬೈಕ್‌ಗೂ ಅಡ್ಡಗಟ್ಟಿ ಹಾನಿ ಉಂಟುಮಾಡಿದೆ.

ಘಟನೆಯ ಮಾಹಿತಿ ತಕ್ಷಣ ಅರಣ್ಯ ಇಲಾಖೆಗೆ ತಲುಪಿದ ಹಿನ್ನೆಲೆಯಲ್ಲಿ, ಚನ್ನಪಟ್ಟಣ ಹಾಗೂ ಸಾತನೂರು ವಲಯದ ಅರಣ್ಯಾಧಿಕಾರಿಗಳು ಮತ್ತು ಸಿಬ್ಬಂದಿ ತುರ್ತಾಗಿ ಸ್ಥಳಕ್ಕೆ ಧಾವಿಸಿದರು. ಸ್ಥಳಕ್ಕೆ ಆಗಮಿಸುವಷ್ಟರಲ್ಲಿ, ಕರಡಿ ಅಲ್ಲಿಯೇ ತಂಗಿ ಜನರ ಮೇಲೆ ಬೀಳುವ ಸಾಧ್ಯತೆ ಹೆಚ್ಚಾಗಿದ್ದರಿಂದ ಸಾರ್ವಜನಿಕರ ಸುರಕ್ಷತೆ ಹಾಗೂ ವನ್ಯಜೀವಿಯ ರಕ್ಷಣೆ ಎರಡನ್ನೂ ಮನದಟ್ಟು ಮಾಡಿಕೊಂಡು ಕಾರ್ಯಾಚರಣೆ ಕೈಗೊಳ್ಳಲಾಯಿತು.

ಅರಣ್ಯ ಸಿಬ್ಬಂದಿ ಚಾಕಚಕ್ಯದಿಂದ ಬಲೆ ಹಾಕಿ ಕರಡಿಯನ್ನು ಸೆರೆ ಹಿಡಿದು ಬೋನಿನಲ್ಲಿ ಇರಿಸಿದರು. ಬಳಿಕ ಮೇಲಾಧಿಕಾರಿಗಳಿಗೆ ಮಾಹಿತಿ ನೀಡಲಾಯಿತು. ಸ್ಥಳಕ್ಕೆ ರಾಮನಗರ ಪ್ರಾದೇಶಿಕ ವಿಭಾಗದ ಉಪ ಅರಣ್ಯ ಸಮೀಕ್ಷಾಧಿಕಾರಿ ರಾಮಕೃಷ್ಣಪ್ಪ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳಾದ ಪುಟ್ಟಮ್ಮ, ಚೈತ್ರಾಶ್ರೀ, ಶ್ರೀನಿವಾಸ್, ಕನಕಪುರ ವಲಯದ ಅರಣ್ಯಾಧಿಕಾರಿ ರವಿ, ರಾಮನಗರ ವಲಯದ ಅರಣ್ಯಾಧಿಕಾರಿ ಮನ್ಸೂರ್, ಚನ್ನಪಟ್ಟಣ ವಲಯದ ಅರಣ್ಯಾಧಿಕಾರಿ ಮಲ್ಲೇಶ್ ಸೇರಿದಂತೆ ಸಿಬ್ಬಂದಿ ಕಾರ್ಯಾಚರಣೆಯಲ್ಲಿ ಭಾಗವಹಿಸಿದರು. ವನ್ಯಜೀವಿ ಪರಿಪಾಲಕರ ಅನುಮತಿ ಪಡೆದು ಕರಡಿ ಬನ್ನೇರುಘಟ್ಟ ಜೈವಿಕ ಉದ್ಯಾನವನಕ್ಕೆ ಸ್ಥಳಾಂತರಿಸಲು ತೀರ್ಮಾನಿಸಲಾಯಿತು. ಸ್ಥಳೀಯ ಪಶುವೈದ್ಯಾಧಿಕಾರಿ ಗಿರೀಶ್, ಉದ್ಯಾನವನದ ಪಶುವೈದ್ಯಾಧಿಕಾರಿ ಡಾ. ಕಿರಣ್ ಅವರಿಂದ ಕರಡಿಗೆ ಚಿಕಿತ್ಸೆ ನೀಡಿ ಸಾಗಿಸಲಾಯಿತು.

ಮಹಿಳಾ ಸಬಲೀಕರಣಕ್ಕೆ ಗ್ಯಾರಂಟಿ ಕಾರಣ

• **ಆನೇಕಲ್:** ಮಹಿಳೆಯರು ಆರೋಗ್ಯವಾಗಿದ್ದಾಗ ಮಾತ್ರ ಶೈಕ್ಷಣಿಕ, ಆರ್ಥಿಕವಾಗಿ ಸಬಲರಾಗಲು ಸಾಧ್ಯ. ಹಾಗಾಗಿ ಎಲ್ಲ ಮಹಿಳೆಯರು ತಮ್ಮ ಆರೋಗ್ಯದ ಕಡೆ ಹೆಚ್ಚಿನ ಗಮನ ಹರಿಸಬೇಕು ಎಂದು ಕಾಂಗ್ರೆಸ್ ಮಹಿಳಾ ಘಟಕದ ರಾಜ್ಯಾಧ್ಯಕ್ಷೆ ಸೌಮ್ಯ ರೆಡ್ಡಿ ಮಹಿಳೆಯರಿಗೆ ಕಿವಿಮಾತು ಹೇಳಿದರು.

ತಾಲೂಕಿನ ಸರ್ಜಾಪುರದ ಅಂಬೇಡ್ಕರ್ ಆಟದ ಮೈದಾನದಲ್ಲಿ ವುಮೆನ್ಸ್ ಸೋಲ್ ಸ್ಪಿರಿಟ್ ತಂಡದು ನಡೆದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿ, ರಾಜ್ಯ ಸರ್ಕಾರ ಗ್ಯಾರಂಟಿ ಯೋಜನೆಗಳ ಮೂಲಕ ಮಹಿಳಾ ಸಬಲೀಕರಣಕ್ಕೆ ಹೆಚ್ಚಿನ ಅವಕಾಶ ಕಲ್ಪಿಸಿದೆಂದರು. ರಾಜ್ಯದ 1.24 ಕೋಟಿ ಮಹಿಳೆಯರಿಗೆ ಪ್ರತಿ ತಿಂಗಳು ಗೃಹಲಕ್ಷ್ಮಿ ಯೋಜನೆ ಮೂಲಕ 2 ಸಾವಿರ ಹಣವನ್ನು ನೀಡಲಾಗುತ್ತಿದೆ. ಶಕ್ತಿ ಯೋಜನೆ ಮೂಲಕ ರಾಜ್ಯದ ಎಲ್ಲಾ ಸಾರಿಗೆ ಬಸ್ ಗಳಲ್ಲಿ ಉಚಿತ ಪ್ರಯಾಣವನ್ನು ಮಾಡಲು ಅವಕಾಶ ಕಲ್ಪಿಸಿದೆಂದರು. ಮಹಿಳೆಯರು ಸ್ವಾವಲಂಬಿ ಜೀವನ ನಡೆಸಲು ಸರ್ಕಾರ ಕೈಜೋಡಿಸಿದೆ ಎಂದರು. ಗ್ರಾಮೀಣ ಭಾಗದಲ್ಲಿ ಹಮ್ಮಿಕೊಂಡಿದ್ದ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಸ್ಥಳೀಯ ಮಹಿಳೆಯರುಉತ್ಸಾಹದಿಂದ ಪಾಲ್ಗೊಂಡು ವಿವಿಧ ರೀತಿಯ ಕ್ರೀಡೆಗಳಲ್ಲಿ ಭಾಗವಹಿಸಿ ಬಹುಮಾನವನ್ನು ಪಡೆದುಕೊಂಡಿದ್ದಾರೆ. ಅದರಲ್ಲೂ ಪ್ರಮುಖವಾಗಿ ಫ್ಯಾಶನ್ ಶೋ , ಸೀರೆ ವಾಕಥಾನ್ , ಮಹಿಳೆಯರ ಬೈಕ್ ರೇಸ್ ಸೇರಿದಂತೆ ಹಲವು ಸ್ಪರ್ಧೆಗಳು ಗಮನ ಸೆಳೆದಿವೆ. ಎಲ್ಲಾ ಯಶಸ್ವಿ ಪುರುಷರ ಬೆನ್ನ ಹಿಂದೆ ಮಹಿಳೆಯರ ಶ್ರಮ ಅಡಗಿದೆ ಎಂಬುದನ್ನ ಪ್ರತಿಯೊಬ್ಬರು ಅರಿತುಕೊಳ್ಳಬೇಕಿದೆ ಎಂದರು.

ವಿಮೆನ್ ಸೋಲ್ ಸ್ಪಿರಿಟ್ ಮುಖ್ಯಸ್ಥೆ ಮಮತಾ ಶಂಭಯ್ಯ ಮಾತನಾಡಿ,ಸರ್ಜಾಪುರ ದಲ್ಲಿ ಅದ್ದೂರಿಯಾಗಿ ಮಹಿಳಾ ದಿನಾಚರಣೆಯನ್ನು ಆಯೋಜನೆ ಮಾಡಲಾಗಿದೆಂದರು. ಗ್ರಾಪಂ ಮಾಜಿ ಅಧ್ಯಕ್ಷ ಶಂಭಯ್ಯ ಸದ್ದಾಂ ಸರ್ಜಾಪುರ ಭಾಗದಲ್ಲಿ ಇದೆ ಮೊದಲ ಬಾರಿಗೆ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಅದ್ದೂರಿಯಾಗಿ ಆಯೋಜನೆ ಮಾಡಲಾಗಿದ್ದೆಂದರು. ಮಹಿಳೆಯರಿಗಾಗಿ ಫ್ಯಾಶನ್ ಶೋ, ಬೈಕ್ ರೇಸ್, ಸ್ಯಾರಿ ವಾಕಥಾನ್ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಿಸಲಾಗಿದೆ. ಬಿಗ್ ಬಾಸ್ ಖ್ಯಾತಿ ಗಿಲ್ಲಿ ನಟ ಸರಸ್ವತಿ ಬಿ.ಶಿವಣ್ಣ, ಹುಸ್ಕೂರು ಮದ್ದೂರಪ್ಪ, ಎ.ಸತೀಶ್ ಕುಮಾರ್, ಉಲ್ಲಾಸ್ ಬಿ.ಶಿವಣ್ಣ, ಮಮತಾರಮೇಶ್, ಶ್ರೀಉದೇವಿ ಮದ್ದೂರಪ್ಪ, ರತ್ನಮ್ಮ ಶ್ರೀರಾಮುಲು, ಸುಜಾತಾನಾಗರಾಜು, ಡಾ.ರಾಧಿಕಾ ದೇವಿ, ಪೂಜಾ ಚಂದ್ರ, ನಜೀಬ್ ಹುನ್ನೀಸ, ಗಾಯಿತ್ರಿ, ಚಂದ್ರಕಲಾ, ಸೌಮ್ಯಹರೀಶ್, ದುರ್ಗಾದೇವಿ, ಸುಶೀಲಮ್ಮ, ನಾಗವೇಣಿ, ಹೇಮಲತಾ, ಮಮತಾ ಮಂಜುನಾಥ್, ರೇಷ್ಮ ಪ್ರಶಾಂತ್, ಸರಸ್ವತಿ ಜನಾರ್ದನ್, ಅಂಬುಜಮ್ಮ, ಗೀತಾ ಲಕ್ಷ್ಮೀ , ಯುವ ಮುಖಂಡ ಮನೋಹರ್ ಹಾಗೂ ಮತ್ತಿತ್ತರರು ಹಾಜರಿದ್ದರು.



2100 ಎಕರೆ ಭೂಸ್ವಾಧೀನಕ್ಕೆ ಹೋರಾಟ ಸಮಿತಿ ವಿರೋಧ

ನಾಳೆ ತಾಲೂಕು ಕಚೇರಿಗೆ ಟ್ರ್ಯಾಕ್ಟರ್ ಚಲೋ

• **ದೊಡ್ಡಬಳ್ಳಾಪುರ:** ದೊಡ್ಡಬೆಳವಂಗಲ ಭೂ ಸ್ವಾಧೀನ ವಿರೋಧಿ ಹೋರಾಟ ಸಮಿತಿಯಿಂದ ಮಾ.31ರಂದು ತಾಲೂಕು ಕಚೇರಿಗೆ ಟ್ರ್ಯಾಕ್ಟರ್ ಚಲೋವನ್ನು ಹಮ್ಮಿಕೊಳ್ಳಲಾಗಿದೆ ಎಂದು ತಾಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ಶಶಿಧರ್ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ದೊಡ್ಡಬಳ್ಳಾಪುರ ತಾಲೂಕಿನ ದೊಡ್ಡಬೆಳವಂಗಲ, ಚಿಕ್ಕಬೆಳವಂಗಲ, ರಾಂಪುರ. ನಾರನಹಳ್ಳಿ, ಸೋಣೇನಹಳ್ಳಿ ಗ್ರಾಮಗಳ ವ್ಯಾಪ್ತಿಯ ಸುಮಾರು 2100 ಎಕರೆ ಭೂಮಿಯನ್ನು ಕೆಐಎಡಿಬಿ ಸ್ವಾಧೀನಪಡಿಸಿಕೊಳ್ಳಲು ಮುಂದಾಗಿದೆಂದರು. ಇದಕ್ಕೆ ನಮ್ಮ ವಿರೋಧವಿದೆ. ಈಗಾಗಲೇ ಸಾಕಷ್ಟು ಹೋರಾಟಗಳನ್ನು ಮಾಡಿದ್ದೇವೆ. ಮುಂದುವರಿದು ಮಾ.31ರಂದು ಮಂಗಳವಾರ ಚಿಕ್ಕಬೆಳವಂಗಲದಿಂದ ತಾಲೂಕು ಕಚೇರಿಗೆ ಟ್ರ್ಯಾಕ್ಟರ್ ಚಲೋವನ್ನು ಹಮ್ಮಿಕೊಳ್ಳಲಾಗಿದೆ. ಸುಮಾರು 100 ಟ್ರ್ಯಾಕ್ಟರ್ ಗಳು ಬರಲಿವೆ. ಈ ಟ್ರ್ಯಾಕ್ಟರ್ ಛಲೋದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ರೈತರು ಆಗಮಿಸಬೇಕು ಎಂದರು. ಸರ್ಕಾರ ಫಲವತ್ತಾದ ಭೂಮಿ ಸ್ವಾಧೀನಕ್ಕೆ ಮುಂದಾಗಿದೆ. ನಮ್ಮ ಜಮೀನನ್ನು ಯಾವುದೇ ಕಾರಣಕ್ಕೂ ಕೊಡುವುದಿಲ್ಲ, ನಾವು ನಮ್ಮ ಭೂಮಿಯಲ್ಲಿ ಅಡಿಕೆ, ತೆಂಗು, ಸೀಬೆ, ದ್ರಾಕ್ಷಿ, ರಾಗಿ ಸೇರಿದಂತೆ ಇತರೆ ಬೆಳೆಗಳನ್ನು ಬೆಳೆಯುತ್ತಿದ್ದೇವೆ. ಇಂತಹ ಭೂಮಿಯನ್ನು ನಮ್ಮಿಂದಿ ಕಸಿದುಕೊಳ್ಳಲು ಸರ್ಕಾರ ಮುಂದಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.ರೈತ ದೇಶದ ಬೆನ್ನೆಲುಬು, ಎಲ್ಲಾ ಸರ್ಕಾರ ರೈತರಿಂದ ಭೂಮಿಯನ್ನು ಬಲವಂತವಾಗಿ ಕಬಳಿಸಿ ರೈತರ ಬೆನ್ನು ಮುರಿಯುವ ಕೆಲಸ ಮಾಡುತ್ತಿವೆ. ನಮ್ಮ ಭೂಮಿ ನಮ್ಮ ಹಕ್ಕು, ನಮ್ಮ ಪರಿಸರ ಸಮತೋಲನವಾಗಿರಬೇಕು ಎಂದರು.



ಈಗಾಗಲೇ ಶಾಸಕ ಧೀರಜ್ ಮುನಿರಾಜ್, ಮಾಜಿ ಶಾಸಕ ಟಿ.ವೆಂಕಟರಮಣಯ್ಯ, ಜೆಡಿಎಸ್ ಮುಖಂಡ ಬಿ.ಮುನೇಗೌಡ ಸೇರಿದಂತೆ ಚನ್ನರಾಯಪಟ್ಟಣ ರೈತ ಹೋರಾಟಗಾರು, ವಿವಿಧಸಂಘಟನೆಗಳ ಪ್ರಮುಖರು ಹೋರಾಟಕ್ಕೆ ಬೆಂಬಲ ನೀಡಿದ್ದಾರೆ ಎಂದರು.

ನಂತರ ರೈತ ಕೇಶವ ಕುಮಾರ್ ಮಾತನಾಡಿ, ಸರ್ಕಾರವು ರೈತರಿಗೆ ಹಿಂಸೆ ನೀಡಿ ಬಲವಂತವಾಗಿ ಭೂಮಿ ಕಬಳಿಕೆ ಮಾಡಲು ಮುಂದಾಗಿದೆ.. ಬೇರೆ ದೇಶಗಳ ಕಂಪನಿಗಳಿಗೋಸ್ಕರ ನಮ್ಮ ಫಲವತ್ತಾದ ಜಮೀನು ಕಬಳಿಕೆ ಮಾಡಲಾಗುತ್ತಿದೆ. ನಮ್ಮ ಊಟದ ತಟ್ಟೆಯನ್ನು ಸರ್ಕಾರ ಕಿತ್ತುಕೊಳ್ಳುತ್ತಿದೆ. ಎಲ್ಲಾ ಸಹ ಬಲವಂತವಾಗಿ ಭೂಮಿ ಕಸಿದುಕೊಳ್ಳಬಾರದು ಎಂದರು. ಸುನೀಲ್ ಕುಮಾರ್, ತಿಮ್ಮೇಗೌಡ, ಪ್ರಭಾ, ರಾಮಕೃಷ್ಣಯ್ಯ, ಮನು, ಕೆಂಪೇಗೌಡ ಇದ್ದರು.

ಶ್ರೀ ಅಗ್ನಿ ಬನ್ನಿರಾಯಸ್ವಾಮಿ ಜಯಂತಿ: ಭಾವಚಿತ್ರಕ್ಕೆ ಪುಷ್ಪನಮನ

ಧರ್ಮ ರಕ್ಷಣೆಗೆ ಎಲ್ಲರೂ ಬದ್ಧರಾಗಲಿ

• **ರಾಮನಗರ:** ಶ್ರೀ ಅಗ್ನಿ ಬನ್ನಿರಾಯಸ್ವಾಮಿ ಶಕ್ತಿ, ಧರ್ಮ, ಸತ್ಯಕ್ಕೆ ಪ್ರಸಿದ್ಧಿಯಾದ ಮಹಾಪುರುಷ ಎಂದು ಶಾಸಕ ಎಚ್. ಎ. ಇಕ್ಬಾಲ್ ಹುಸೇನ್ ತಿಳಿಸಿದರು.

ಇಲ್ಲಿನ ಡಾ. ಬಿ. ಆರ್.ಅಂಬೇಡ್ಕರ್ ಭವನದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ನಗರಸಭೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಆಯೋಜಿಸಲಾಗಿದ್ದ ಶ್ರೀ ಅಗ್ನಿ ಬನ್ನಿರಾಯಸ್ವಾಮಿ ಜಯಂತಿಯನ್ನು ಉದ್ಘಾಟಿಸಿ ಅವರು ಮಾತನಾಡಿ, ಶ್ರೀ ಅಗ್ನಿ ಬನ್ನಿರಾಯಸ್ವಾಮಿ ಅವರು ಪಾಲಿಸಿದ ಸತ್ಯ, ಧರ್ಮ, ಅವರು ತೋರಿದ ಶೌರ್ಯ ಅಗಾಧವಾಗಿದೆಂದರು.

ಪುರಾಣಗಳಲ್ಲಿ ದೇವಾನುದೇವತೆಯರನ್ನೇ ರಕ್ಷಣೆ ಮಾಡಿದ ವಂಶ ಅಗ್ನಿ ಬನ್ನಿರಾಯಸ್ವಾಮಿ ಅವರದ್ದು ಎನ್ನಲಾಗುತ್ತದೆ, ರಕ್ಷಣೆ ಮಾಡುವಂತ ಶಕ್ತಿ ತಿಗಳರ ಸಮುದಾಯದವರ ರಕ್ತದಲ್ಲೇ ಇದೆ ಎಂದು ತಿಳಿಸಿದರು. ಸಮುದಾಯದವರೆಲ್ಲರೂ ಒಗ್ಗಟ್ಟಾಗಿರಬೇಕು. ಒಗ್ಗಟ್ಟು ಎಲ್ಲರ ಶಕ್ತಿ ಹಾಗೂ ಏಳಿಗೆಗೆ ಸಾಧ್ಯವಾಗುತ್ತದೆ. ಮುಂಬರುವ ಜಯಂತಿಯನ್ನು ರಾಮನಗರದಲ್ಲಿ ನಿರ್ಮಾಣವಾಗಲಿರುವ ಸಮುದಾಯ ಭವನದಲ್ಲಿ ಆಚರಿಸಲಾಗುವುದು ಎಂದರು.ಜಾನಪದ ಲೋಕದ ಕ್ಯೂರೇಟರ್ ಡಾ. ರವಿ ಯು.ಎಂ. ಮಾತನಾಡಿ, ವಿಶ್ವ ವಿಖ್ಯಾತವಾಗಿರುವ ಇಂದಿನ ಬೆಂಗಳೂರು ಸುಂದರವಾಗಿ ಕಾಣಲು ತಿಗಳರ ಸಮುದಾಯದ ಕಾಣಿಕೆ ಅಪಾರ, ಹೂ, ತರಕಾರಿ ಬೆಳೆದು ಮಾರುವ ಸಮುದಾಯ. ಭೂಮಿ, ಸ್ತ್ರೀ ಹಾಗೂ ಗೋವುಗಳನ್ನು ರಕ್ಷಿಸುತ್ತಿದ್ದರು ಎಂದರು. ರಾಜರಾಜ ಚೋಳ ಹಾಗೂ ತಲಕಾಡಿನ ಗಂಗರ ಕಾಲದಲ್ಲಿ ಸೈನಿಕರಾಗಿ ಸೇವೆ ಸಲ್ಲಿಸುತ್ತಿದ್ದ ಈ ಸಮುದಾಯದವರು ಶ್ರಮ ಸಂಸ್ಕೃತಿಯಿಂದ ಬಂದವರು ಇವರ ಬಗ್ಗೆ ತಮಿಳುನಾಡಿನ ಕಂಚಿ ಶಾಸನ ಬೆಳಕು ಚೆಲ್ಲುತ್ತದೆ, ಶಾಸನದಲ್ಲಿ ಶ್ರೀ ಅಗ್ನಿಬನ್ನಿರಾಯಸ್ವಾಮಿಯ ವಂಶ ಅವರ ಪೂರ್ವಜರ ಮೂಲ ಮತ್ತು ಗೋತ್ರ ಸಮೇತ ತಿಳಿಸಿಕೊಡುತ್ತದೆ ಎಂದರು. ನಗರಸಭೆ ಉಪಾಧ್ಯಕ್ಷೆ ಗಿರಿಜಮ್ಮಗುರುವೇಗೌಡ, ಸಮುದಾಯದ ಮುಖಂಡ ಗುರುವೇಗೌಡ, ತಿಗಳರ ಕ್ಷೇಮಾಭಿವೃದ್ಧಿ ಸಂಘದ ಗೌರವಾಧ್ಯಕ್ಷ ಶಿವಣ್ಣ, ಪ್ರಕಾಶ್, ನಾಗರಾಜು, ಶ್ರೀನಿವಾಸ್, ಗುರುವಯ್ಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಕೆ. ಸತೀಶ್ ಹಾಗೂ ಇತರರು ಇದ್ದರು.



ಕಿರುಸುದ್ದಿ

ನಿಖಿಲ್ ಭೇಟಿ ಮಾಡಿದ ನೂತನ ಪದಾಧಿಕಾರಿಗಳು



• **ದೇವನಹಳ್ಳಿ:** ಇಲ್ಲಿನ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕ ನಿಸರ್ಗ ನಾರಾಯಣಸ್ವಾಮಿ ಅವರ ನೇತೃತ್ವದಲ್ಲಿ, ಜೆಡಿಎಸ್ ನೂತನ ಪದಾಧಿಕಾರಿಗಳು ಯುವ ಜನತಾದಳದ ರಾಜ್ಯಾಧ್ಯಕ್ಷರಾದ ನಿಖಿಲ್ ಕುಮಾರಸ್ವಾಮಿ ಅವರನ್ನು ಭೇಟಿ ಮಾಡಿ ಅಭಿನಂದಿಸಿದರು.

ಬೆಂಗಳೂರಿನ ಜೆ.ಪಿ. ನಗರದ ನಿವಾಸದಲ್ಲಿ, ನೂತನ ಪದಾಧಿಕಾರಿಗಳು ನಿಖಿಲ್ ಕುಮಾರಸ್ವಾಮಿ ಮಾತನಾಡಿ, ನೂತನವಾಗಿ ಆಯ್ಕೆಯಾದ ದೇವನಹಳ್ಳಿ ಕ್ಷೇತ್ರದ ಜೆಡಿಎಸ್ ಪದಾಧಿಕಾರಿಗಳಿಗೆ ಶುಭ ಕೋರಿದರು.

ದೇವನಹಳ್ಳಿ ಕ್ಷೇತ್ರದ ಹಿಂದಿನ ಎಲ್ಲಾ ಮುಖಂಡರು, ಕಾರ್ಯಕರ್ತರನ್ನು ಗಣನೆಗೆ ತೆಗೆದುಕೊಂಡು ಒಗ್ಗಟ್ಟಿನಿಂದ ಕೆಲಸ ಮಾಡಿ ಯಾವುದೇ ಭಿನ್ನಾಭಿಪ್ರಾಯ ಬಾರದ ಹಾಗೆ ಬಗೆ ಹರಿಸಿಕೊಂಡು ಹಿರಿಯರನ್ನು ಕಡೆಗಣಿಸದೆ ಒಗ್ಗಟ್ಟಿನಿಂದ ಪಕ್ಷ ಸಂಘಟನೆ ಮಾಡಬೇಕೆಂದರು. ಮಾಜಿ ಶಾಸಕ ನಿಸರ್ಗ ನಾರಾಯಣಸ್ವಾಮಿ, ಜಿ. ಎ.ರವೀಂದ್ರ, ಮಹೇಶ್, ಎಸ್. ನಾಗೇಶ್, ರಾಮಾಂಜನೇಯ ದಾಸ್, ಸಂಪಗಪ್ಪ, ಗಂಗಾಧರ್, ನಾರಾಯಣಸ್ವಾಮಿ, ಮನೋಹರ್, ಬಸವರಾಜು ಸೇರಿದಂತೆ ಹಲವರಿದ್ದರು.

ಜಗಜೀವನ್‌ರಾಂ ಜಯಂತಿ

ಹೊಳೆನರಸೀಪುರ: ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಹಾಗೂ ಬಾಬು ಜಗಜೀವನ್‌ರಾಮ್ ಅವರ ಜಯಂತಿಯನ್ನು ಕೇವಲ ಒಂದು ವರ್ಗಕ್ಕೆ ಸೀಮಿತಗೊಳಿಸದೆ, ಎಲ್ಲಾ ಸಮುದಾಯದ ಜನರು ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಅರ್ಥಪೂರ್ಣವಾಗಿ ಆಚರಿಸಬೇಕು ಎಂದು ಪಟ್ಟಣದ ನಾಗರಿಕರು ಮತ್ತು ಮುಖಂಡರು ಸಲಹೆ ನೀಡಿದರು. ಪಟ್ಟಣದ ತಾಲೂಕು ಕಚೇರಿ ಸಭಾಂಗಣದಲ್ಲಿ ಸೋಮವಾರ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ವತಿಯಿಂದ ಆಯೋಜಿಸಲಾಗಿದ್ದ ಪೂರ್ವಭಾವಿ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಯಿತು.

ಅಧ್ಯಕ್ಷತೆ ವಹಿಸಿ ಮಾತನಾಡಿದ ತಹಸೀಲ್ದಾರ್ ವೈ.ಎಂ. ರೇಣುಕುಮಾರ್ ಅವರು, ರಾಷ್ಟ್ರೀಯ ನಾಯಕರ ಜಯಂತಿಗಳು ನಾಡಿನ ಹಬ್ಬಗಳಿದ್ದಂತೆ. ಸಾರ್ವಜನಿಕರ ಸಲಹೆಗಳನ್ನು ಕ್ರೋಢೀಕರಿಸಿ ಕಾರ್ಯಕ್ರಮದ ರೂಪುರೇಷೆ ಸಿದ್ಧಪಡಿಸಲಾಗುವುದು ಎಂದು ಮನವಿ ಮಾಡಿದರು.

ಸಭೆಯಲ್ಲಿದ್ದ ವಿವಿಧ ಮುಖಂಡರು ಮಾತನಾಡಿ, ಅಂಬೇಡ್ಕರ್ ಅವರು ಜಗತ್ತು ಕಂಡ ಮಹಾನ್ ಮೇಧಾವಿ. ಅವರ ವಿಚಾರಧಾರೆಗಳು ಎಲ್ಲರಿಗೂ ತಲುಪಬೇಕು. ಹಾಗಾಗಿ ತಾಲೂಕು ಆಡಳಿತವು

ಎಲ್ಲಾ ವರ್ಗದ ಜನರನ್ನು ಒಳಗೊಳ್ಳುವಂತಹ ಕಾರ್ಯಕ್ರಮಗಳನ್ನು ರೂಪಿಸಬೇಕು ಎಂದು ಒತ್ತಾಯಿಸಿದರು. ಪುರಸಭೆ ಮುಖ್ಯ ಅಧಿಕಾರಿ, ಇ.ಬಿ. ಮುನಿರಾಜು, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಕೃಷ್ಣಮೂರ್ತಿ, ಎಇಇ ಮಹೇಂದ್ರ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸಿ. ಸುರೇಶ್, ವಲಯ ಅರಣ್ಯಾಧಿಕಾರಿ , ಉಪನೋಂದಣಾಧಿಕಾರಿ ರಾಕೇಶ್, ಕೃಷಿ ಅಧಿಕಾರಿ ಕೆ.ಎಚ್. ಸಪ್ನ, ಮೀನುಗಾರಿಕಾ ಇಲಾಖೆಯ ಸುಮ, ನಗರ ಠಾಣೆ ಪಿಎಸ್‌ಐ ಅಭಿಜಿತ್, ಮುಖಂಡರುಗಳಾದ,ಎಚ್.ವೈ. ಚಂದ್ರಶೇಖರ್, ಎಚ್.ಟಿ. ಲಕ್ಷ್ಮಣ್, ಸಿ.ಆರ್. ಮಂಜುನಾಥ್, ಜವರೇಶ್, ಶೃತಿ, ಕುಮಾರಸ್ವಾಮಿ, ಸುಪ್ರೀತ್ ಪಾಸ್ವಾನ್, ಗೋವಿಂದರಾಜು ಸೇರಿದಂತೆ ಹಲವು ಸಮಾಜ ಸೇವಕರು ಭಾಗವಹಿಸಿದ್ದರು.

ಹರಾಜಾಗದೆ ಉಳಿದ ಸ್ವತ್ತು ಪಾಲಿಕೆ ವಶ

• **ಬೆಂಗಳೂರು:** ಆಸ್ತಿ ತೆರಿಗೆ ಪಾವತಿಸದ ಸ್ವತ್ತುಗಳಿಗೆ ಅವಕಾಶ ನೀಡಿದರೂ ಪಾವತಿಸದ ಸ್ವತ್ತುಗಳನ್ನು ಹರಾಜು ಪ್ರಕ್ರಿಯೆಗೆ ಒಳಪಡಿಸಲಾಗಿತ್ತು. ಹರಾಜಿನಲ್ಲಿಯೂ ಮಾರಾಟವಾಗದೆ ಉಳಿದ ಸ್ವತ್ತುಗಳನ್ನು ಪಾಲಿಕೆ ವಶಕ್ಕೆ ಪಡೆಯಲಾಗುದೆಂದು ಬೆಂಗಳೂರು ಪಶ್ಚಿಮ, ದಕ್ಷಿಣ, ಪೂರ್ವ ನಗರ ಪಾಲಿಕೆ ಆಯುಕ್ತರು ತಿಳಿಸಿದ್ದಾರೆ.

ಪಶ್ಚಿಮ ನಗರ ಪಾಲಿಕೆ: ಹರಾಜಿನಲ್ಲಿ ಮಾರಾಟವಾಗದೆ ಉಳಿದ ಒಟ್ಟು 55 ಸ್ವತ್ತುಗಳನ್ನು ಸರ್ಕಾರದ ಮಾರ್ಗಸೂಚಿ ದರಕ್ಕೆ ನಗರ ಪಾಲಿಕೆ ಖರೀದಿಸಲು ಆದೇಶ ಹೊರಡಿಸಲಾಗಿದೆ.

ದಕ್ಷಿಣ ನಗರ ಪಾಲಿಕೆ: ಹರಾಜಿನಲ್ಲಿ ಮಾರಾಟವಾಗದೆ ಉಳಿದ ಒಟ್ಟು 52 ಸ್ವತ್ತುಗಳನ್ನು ಪಾಲಿಕೆ ವಶಕ್ಕೆ ಪಡೆಯುವ ಕುರಿತು ಆದೇಶಗಳನ್ನು ಹೊರಡಿಸಲಾಗಿದೆ.

ಪೂರ್ವ ನಗರ ಪಾಲಿಕೆ: ಬಾಕಿ ಆಸ್ತಿ ತೆರಿಗೆಯನ್ನು ಪಾವತಿಸದ ಹಾಗೂ ಹರಾಜಿನಲ್ಲೂ ಮಾರಾಟವಾಗದ 51 ಆಸ್ತಿ ಪಾಲಿಕೆ ಸುಪರ್ದಿಗೆ ಪಡೆಯಲು ಆದೇಶ ಹೊರಡಿಸಲಾಗಿದೆ.

ಹವಾಮಾನ ವೈಪರೀತ್ಯದಿಂದ ಗೂಡಿನಲ್ಲಿ ಇಳುವರಿ ಕುಸಿತ | ಗಗನಕ್ಕೇರಿದ ರೇಷ್ಮೆ ಚಾಕಿಯ ಬೆಲೆ

ರೇಷ್ಮೆಗೂಡಿನ ಆವಕ ಇಳಿಕೆ, ಬೆಲೆ ಹೆಚ್ಚಳ

▸ ಎಸ್. ರುದ್ರೇಶ್ವರ



ದಿಗಂತ ವಿಶೇಷ

• **ರಾಮನಗರ:** ಅನಿರೀಕ್ಷಿತವಾಗಿ ದ್ವಿತಳಿ ಚಾಕಿಯ ಬೆಲೆ ಏರಿಕೆ ರೇಷ್ಮೆ ಬೆಳೆಗಾರರನ್ನು ಸಂಕಷ್ಟಕ್ಕೆ ದೂಡಿದೆ. ವಾತಾವರಣ ವೈಪರೀತ್ಯದ ಕಾರಣದಿಂದಾಗಿ ರೇಷ್ಮೆ ಬಿತ್ತನೆ ಗೂಡಿನ ಇಳುವರಿ ಕುಂಠಿತವಾದ ಪರಿಣಾಮ ಚಾಕಿ ಬೆಲೆ ಗಗನಮುಖಿಯಾಗಿದೆ. ರೈತರು ತೊಂದರೆಗೆ ಒಳಗಾಗಿದ್ದಾರೆ. 5,000-5,500 ರೂ.ವರೆಗೆ ಇದ್ದ 100 ಮೊಟ್ಟೆಯ ದ್ವಿತಳಿ ಚಾಕಿ ದರ ಏಕಾಏಕಿ 12 ಸಾವಿರ ರೂ.ಗೆ ತಲುಪಿದ ಪರಿಣಾಮ ರೈತರು ರೇಷ್ಮೆ ಗೂಡಿನ ಬೆಲೆ ಏರಿಕೆ ಖುಷಿಯನ್ನು ಅನುಭವಿಸಲು ಸಾಧ್ಯವಾಗದಂತೆ ಆಗಿದೆ.

ದ್ವಿತಳಿ ರೇಷ್ಮೆ ಮೊಟ್ಟೆ ಉತ್ಪಾದನೆಗೆ ಹೆಣ್ಣು ಚಿಟ್ಟೆಗಳನ್ನು ಒದಗಿಸುವ ಮೈಸೂರು ತಳಿಯ ಹಳದಿ ರೇಷ್ಮೆ ಗೂಡಿನ ಉತ್ಪಾದನೆ ಮತ್ತು ಗಂಡು ಚಿಟ್ಟೆ ಒದಗಿಸುವ ಸಿಎಸ್‌ಆರ್ 2 ತಳಿ ಗೂಡು ಉತ್ಪಾದನೆ ಆಗಬೇಕು. ಬೆಂಗಳೂರು ದಕ್ಷಿಣ ಜಿಲ್ಲೆಯ ಮಾಗಡಿ ಮತ್ತು ತುಮಕೂರು ಜಿಲ್ಲೆಯ ಕುಣಿಗಲ್ ತಾಲೂಕು ಹಳದಿ ಬಿತ್ತನೆ ಗೂಡುಗಳನ್ನು ಬೆಳೆಯುವ ಪ್ರದೇಶವಾಗಿದ್ದರೆ, ಹಾಸನ ಜಿಲ್ಲೆ, ಮಂಡ್ಯದ ಕೆ.ಆರ್.ಪೇಟೆ, ತುಮಕೂರು ಜಿಲ್ಲೆಯ ತುರುವೇಕೆರೆ, ಚಿಕ್ಕನಾಯಕನಹಳ್ಳಿ, ತಿಪಟೂರು, ಬೆಂಗಳೂರು ನಗರ ಜಿಲ್ಲೆಯ ಆನೇಕಲ್ಲಿನಲ್ಲಿ ಸಿಎಸ್‌ಆರ್2 ಬಿತ್ತನೆಗೂಡು ಬೆಳೆಯಲಾಗುತ್ತದೆ. ಬೇಸಿಗೆಯ ಕಾರಣದಿಂದಾಗಿ ಉತ್ಪಾದನೆ ಕುಂಠಿತವಾಗಿ, ಆವಕ ಕಡಿಮೆ ಆದ ಕಾರಣ ಬಿತ್ತನೆ ಗೂಡುಗಳ ಬೆಲೆ ಏಕಾಏಕಿ ಹೆಚ್ಚಳವಾಗಿದೆ.

ಸಾಮಾನ್ಯವಾಗಿ 1.40 ಲಕ್ಷ ಮೊಟ್ಟೆಗಳ ಉತ್ಪಾದನೆ ಆಗುವ ಜಾಗದಲ್ಲಿ ಸುಮಾರು 80 ಸಾವಿರದಷ್ಟು ಮೊಟ್ಟೆ ಉತ್ಪಾದನೆಯೇ ಕುಸಿತ ಕಂಡಿದೆ. ಇದಕ್ಕೆ 4050 ಸಾವಿರ ಕೆಜಿ ಗೂಡಿನ ಕೊರತೆಯೂ ಕಾರಣ ಎನ್ನಲಾಗುತ್ತಿದೆ. ಇದರಿಂದಾಗಿ ಪ್ರತಿ ಕೆಜಿ ಬಿತ್ತನೆ ಗೂಡಿನ ಬೆಲೆ? ಸುಮಾರು 5 ಸಾವಿರ ರೂ. ದಾಟಿದೆ. ಇದರಿಂದಾಗಿ ಚಾಕಿ ಕೇಂದ್ರಗಳಿಗೆ ಬೇಕಾದ ಮೊಟ್ಟೆಗಳನ್ನು ಪೂರೈಕೆ ಮಾಡಲು ಸಾಧ್ಯವಾಗದೇ ಚಾಕಿ ಬೆಲೆ ಏರಿಕೆ ಆಗಿದೆ ಎನ್ನಲಾಗುತ್ತಿದೆ.

ಕುಂಠಿತಕ್ಕೆ ಕಾರಣಗಳು: ಬಿತ್ತನೆಗೂಡಿನ ಆವಕ ಕಡಿಮೆ ಆಗಲು ಈ ವರ್ಷ ದಾಖಲಾದ ಚಳಿ. ಕಳೆದ 40 ವರ್ಷಗಳ ಹಿಂದಿನ ದಾಖಲೆಯನ್ನು ಸರಿಗಟ್ಟಿದೆ. ಈ ಬಾರಿ 14 ಡಿಗ್ರಿ ಸೆಂಟಿಗ್ರೇಡ್ ಚಳಿ ದಾಖಲಾಗಿದ್ದರಿಂದ ಹಿಪ್ಪು ನೇರಳೆ ಸೊಪ್ಪು ಬೆಳವಣಿಗೆಯೂ ಕುಂಠಿತವಾಗಿದೆ. ಇದರ ಜತೆಗೆ ಈ ಬಾರಿ ಮಾವು ಉತ್ತಮವಾಗಿ ಹೂವು ಕಚ್ಚಿದ್ದರ ಪರಿಣಾಮ, ಮಾವು ಬೆಳೆಯನ್ನು ಉಳಿಸಿಕೊಳ್ಳಲು ಔಷಧ ಸಿಂಪಡಿಸಿ ರೇಷ್ಮೆ ಬೆಳೆಯಲು ಹಿಂದೇಟು ಹಾಕಿದ ಕಾರಣಕ್ಕೆ ಎನ್ನುವುದು ರೇಷ್ಮೆ ಇಲಾಖೆ ಅಧಿಕಾರಿಗಳ ಅಭಿಪ್ರಾಯ.

ಚಾಕಿ ಬೆಲೆ 100ಕ್ಕೆ 12 ಸಾವಿರ ರೂ. ತಲುಪಿರುವುದು ನಿಜ. ಆದರೆ, ಈಗ ಎಲ್ಲವೂ ಹಳಿಗೆ ಬರುತ್ತಿದೆ ಎನ್ನುವುದು ರೇಷ್ಮೆ ಇಲಾಖೆ ಅಧಿಕಾರಿಗಳ ಹೇಳಿಕೆ. ಶೇ.50ಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಬಿತ್ತನೆ ರೇಷ್ಮೆ ಬೆಳೆಯಲು ಹಿಂದೇಟು ಹಾಕಿದ ಕಾರಣಕ್ಕೆ ಆವಕ ಕುಸಿದಿತ್ತು. ಆದರೆ ಮತ್ತೆ ರೈತರ ಮನವೊಲಿಸಿ, ಬೆಳೆಯಲು ಪ್ರೋತ್ಸಾಹ ನೀಡಿದ ಕಾರಣಕ್ಕೆ ರೈತರು ಹಿಂದಿನಂತೆ ರೇಷ್ಮೆ ಬೆಳೆಯಲು ಮುಂದಾಗಿದ್ದಾರೆ. ಇದರಿಂದಾಗಿ ಕೊರತೆ ಕಡಿಮೆ ಆಗಿದೆ. ಈಗಾಗಲೇ 1.26 ಲಕ್ಷ ಮೊಟ್ಟೆಗಳ ಉತ್ಪಾದನೆಯಾಗಿದೆ. ಇದು ಹಂತ ಹಂತವಾಗಿ ಹೆಚ್ಚಳವಾಗುತ್ತದೆ, ರೈತರು ಆತಂಕ ಪಡುವ ಅಗತ್ಯವಿಲ್ಲ ಎನ್ನುತ್ತಾರೆ ಅಧಿಕಾರಿಗಳು.

ಒಂದೆಡೆ ಬಿತ್ತನೆ ಗೂಡು ಉತ್ಪಾದನೆ ಕುಸಿತವಾಗಿದ್ದರೂ, ಇತ್ತ ಮಾರುಕಟ್ಟೆ ಬಳಕೆಗೆ ಬೇಕಿರುವ ರೇಷ್ಮೆ ಬೆಳೆಯುವ ರೈತರು ಸೋಲೇ ಬೇರೆ. ಕಳೆದ ಹಲವಾರು ವರ್ಷಗಳಿಂದಲೂ ಥ್ರಿಪ್ಸ್, ಎಲೆ ಸುರುಳಿ ರೋಗದಿಂದ ಹಿಪ್ಪು ನೇರಳೆ ಸೊಪ್ಪು ಸರಿಯಾಗಿ ಬೆಳೆಯದೇ ಹೆಚ್ಚಿನ ಬೆಳೆ ಬೆಳೆಯಲು ಸಾಧ್ಯವಾಗುತ್ತಿರಲಿಲ್ಲ, ಆದರೆ ಈ ಬಾರಿ ಉತ್ತಮ ಸೊಪ್ಪು ಬಂದಿದೆ. ಚಾಕಿ ಖರೀದಿಸಿ ಹೆಚ್ಚಿನ ಉತ್ಪಾದನೆ ಮಾಡಲು ಹೋದರೆ ಏಕಾಏಕಿ ಚಾಕಿ ಬೆಲೆ 12 ಸಾವಿರ ರೂ. ದಾಟಿದೆ, ಇದರಿಂದ ರೈತರು ರೇಷ್ಮೆ ಬೆಳೆಯುವುದಕ್ಕಿಂತ ಸುಮ್ಮನಿದ್ದರೆ ಒಳಿತು ಎನ್ನುವ ಮಾತು ಆಡುತ್ತಿದ್ದಾರೆ.

ಚಾಕಿ ಬೆಲೆ ಇಳಿಕೆ ಸಾಧ್ಯತೆ

ಹವಾಮಾನ ವೈಪರೀತ್ಯ ಮತ್ತು ವಿವಿಧ ಕಾರಣಗಳಿಂದ ಬಿತ್ತನೆ ಗೂಡಿನ ಉತ್ಪಾದನೆಯಲ್ಲಿ ಕುಂಠಿತವಾಗಿತ್ತು. ಇದರಿಂದಾಗಿ ಚಾಕಿ ಬೆಲೆ ಏರಿಕೆ ಆಗಿದೆ. ಈಗ ಎಲ್ಲವೂ ಹಳಿಗೆ ಬರುತ್ತಿದ್ದು, ಚಾಕಿ ಬೆಲೆಯೂ ಇಳಿಕೆ ಆಗಲಿದೆಂದು ರೇಷ್ಮೆ ಬಿತ್ತನೆ ವಲಯ ಜಂಟಿ ನಿರ್ದೇಶಕ ರಾಚಪ್ಪ ತಿಳಿಸಿದರು.

ಇಲಾಖೆ ಸಮಸ್ಯೆ ಪರಿಹರಿಸಲಿ

ಈ ಬಾರಿ ಉತ್ತಮ ಹಿಪ್ಪು ನೇರಳೆ ಸೊಪ್ಪು ಇದೆ. ಆದರೆ ದ್ವಿತಳಿ ಚಾಕಿ ಬೆಲೆ 12 ಸಾವಿರ ರೂ. ಬಂದಿರುವ ಕಾರಣ ರೇಷ್ಮೆ ಬೆಳೆಯದೇ ಸುಮ್ಮನಾಗಬೇಕಾದ ಅನಿವಾರ್ಯತೆ ನಿರ್ಮಾಣವಾಗಿದೆ. ಇಲಾಖೆ ಕೂಡಲೇ ಗಮನ ಹರಿಸಿ ಸಮಸ್ಯೆ ಪರಿಹರಿಸಬೇಕು ಎಂದು ಹುಣಸೆದೊಡ್ಡಿಯ ರೇಷ್ಮೆ ಬೆಳೆಗಾರ ಯೋಗೇಶ್ ಮನವಿ ಮಾಡಿದರು.

ಒಂದು ಗಂಡು, ಎರಡು ಹೆಣ್ಣು

ದ್ವಿತಳಿ ಮೊಟ್ಟೆ ಉತ್ಪಾದನೆಗೆ ಬಳಸುವ ಮೈಸೂರು ತಳಿ ಎರಡು ಹೆಣ್ಣು ಚಿಟ್ಟೆಗಳಿಗೆ, ಸಿಎಸ್‌ಆರ್ 2 ತಳಿಯ ಒಂದು ಗಂಡು ಚಿಟ್ಟೆಯನ್ನು ಬಳಸಲಾಗುತ್ತದೆ. ಇದರಿಂದಾಗಿ ಮೈಸೂರು ತಳಿಯ ಹಳದಿ ರೇಷ್ಮೆ ಬಿತ್ತನೆ ಗೂಡಿನ ಉತ್ಪಾದನೆ ಪ್ರಮಾಣ ಸಿಎಸ್ ಆರ್2ರ ತಳಿಯ ಗೂಡಿಗಿಂತ ಒಂದುಪಟ್ಟು ಹೆಚ್ಚು ಇರಲೇಬೇಕು. ನಂತರ 2:1ರ ಅನುಪಾತದಲ್ಲಿ ಚಿಟ್ಟೆಗಳ ಮಿಲನ ನಂತರ ಪಡೆಯುವ ಮೊಟ್ಟೆಗಳನ್ನು ಚಾಕಿ ಕೇಂದ್ರಗಳಿಗೆ ನೀಡಲಾಗುತ್ತದೆ. ಇಲ್ಲಿ 10 ದಿನಗಳ ಕಾಲ ಸಾಕಿ, ಎರಡನೇ ಜ್ವರದಿಂದ ರೈತರಿಗೆ ಮಾರಾಟ ಮಾಡಲಾಗುತ್ತದೆ.

ಶಾಸಕ ಬಾಲಕೃಷ್ಣರ ಭ್ರಷ್ಟಾಚಾರ: ದಾಖಲೆ ಸಹಿತ ಚರ್ಚೆಗೆ ಮಾಜಿ ಶಾಸಕ ಆಹ್ವಾನ

ಸುಮ್ಮನೆ ಆರೋಪಿಸುವ ವ್ಯಕ್ತಿ ನಾನಲ್ಲ



• **ಮಾಗಡಿ:** ತಾಲೂಕಿನಲ್ಲಿ ನಡೆಯುತ್ತಿರುವ ಭ್ರಷ್ಟಾಚಾರಗಳ ವಿರುದ್ಧ ನಾನು ದಾಖಲೆ ಸಮೇತವಾಗಿಯೇ ಆರೋಪ ಮಾಡಿದ್ದೇನೆ ನಾನು ರಾಜಕೀಯಕ್ಕೆ ಬಂದ ನಂತರ ಶಾಸಕ ಎಚ್.ಸಿ.ಬಾಲಕೃಷ್ಣ ಹಾಗೂ ಅವರ ಸಹೋದರ ಎಚ್.ಎನ್. ಅಶೋಕ್ ವಿರುದ್ಧ ಮಾಡಿರುವ ಆರೋಪಗಳಿಗೆ ದಾಖಲೆ ಸಮೇತ ಉತ್ತರ ಕೊಡಲು ಸಿದ್ಧ ಬಹಿರಂಗ ಚರ್ಚೆಗೆ ದಿನಾಂಕ ನಿಗದಿ ಮಾಡಲಿ ಎಂದು ಮಾಜಿ ಶಾಸಕ ಎ.ಮಂಜುನಾಥ್ ಶಾಸಕರಿಗೆ ಸವಾಲು ಹಾಕಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ತಾಲೂಕಿನಲ್ಲಿ ಹೇಳುವವರು ಕೇಳುವವರು ಇಲ್ಲದಂತೆ ಆಗಿದ್ದಾರೆ. ಇವರು ಮಾಡಿದೇ ಸರಿ ಎಂದು ವಿರೋಧ ಪಕ್ಷದವರು ಸುಮ್ಮನೆ ಕೂತಿರಬೇಕು. ತಾಲೂಕಿನಲ್ಲಿ ನಡೆಯುತ್ತಿರುವ ಕಾಮಗಾರಿಗಳು ಇವರ ಸಹೋದರರೇ ಕಾಮಗಾರಿ ಮಾಡುತ್ತಿದ್ದಾರೆ ಈ ಬಗ್ಗೆ ಪ್ರಶ್ನೆ ಮಾಡಿದರೆ, ಅಭಿವೃದ್ಧಿ ವಿರೋಧಿಗಳೆಂದು ಪಟ್ಟ ಕಟ್ಟುತ್ತಾರೆಂದರು.

ನಾನು ಮಾಡಿರುವ ಎಲ್ಲಾ ಆರೋಪಗಳಿಗೂ ದಾಖಲೆ ಸಮೇತ ಉತ್ತರ ನೀಡಲು ಸಿದ್ಧನಿದ್ದೇನೆ. ತಾಲೂಕಿನ ಚಕ್ರಬಾವಿ ವಿಎಸ್‌ಎಸ್ ಎನ್ ಕಚೇರಿಯಲ್ಲಿ ಬಹಿರಂಗ ಚರ್ಚೆಗೆ ಬರಲಿ ನಾನು ದಾಖಲೆ ಬಿಡುಗಡೆ ಮಾಡುತ್ತೇನೆ! ಸುಖ ಸುಮ್ಮನೆ ಬಿಡಿಸಿಸಿ ಬ್ಯಾಂಕ್ ಎಚ್.ಎನ್. ಅಶೋಕ್ ಅವರು ನನ್ನ ವಿರುದ್ಧ ಟೀಕೆ ಮಾಡುತ್ತಿದ್ದಾರೆಂದರು.

ನಾನು ಇವರಿಗೆ ಉತ್ತರ ಕೊಡಬೇಕಾಗಿಲ್ಲ, ಶಾಸಕರು ಬೇಕಾದರೆ ಪ್ರಶ್ನೆ ಮಾಡಲಿ ಅವರಿಗೆ ಉತ್ತರ ಕೊಡುತ್ತೇನೆ ಲೂಟಿ ಮಾಡಿರುವ ಅಶೋಕ್ ರವರ ಬಂಡವಾಳವನ್ನು ಹೊರ ತೆಗೆಯುವ ಕೆಲಸವನ್ನು ಮಾಡುತ್ತೇನೆ ಈಗ ಅಧಿಕಾರದಲ್ಲಿ ಇದ್ದೇನೆ ಎಂದು ದರ್ಪ ತೋರುತ್ತಿಎ. ಅಧಿಕಾರ ಶಾಶ್ವತವಲ್ಲ, ನಮಗೂ ಕೂಡ ಅಧಿಕಾರ ಬರಲಿದ್ದೇವೆ. ಆಗ ಇವರ ಬಂಡವಾಳವನ್ನು ದಾಖಲೆ ಸಮೇತ ನೀಡುತ್ತೇನೆ ಎಂದು ಟೀಕಿಸಿದರು.

ಕೆರೆಯ ನವೀಕರಣದಲ್ಲೂ ಲೂಟಿ: ಪಟ್ಟಣದ ಗೌರಮ್ಮನ ಕೆರೆಯ ಮಣ್ಣನ್ನು ತಲಾ 5 ಸಾವಿರ ರೂ.ನಂತೆ ಮಾರಿ ಹಣ ಶಾಸಕರ ಹಿಂಬಾಲಕರು ಮಾಡಿಕೊಳ್ಳುತ್ತಿದ್ದಾರೆ. ಅಂದಾಜು 16 ಕೋಟಿ ರೂ. ವೆಚ್ಚದ ಕಾಮಗಾರಿ ಮಾಡಲಾಗುತ್ತಿದ್ದು ಈಗಾಗಲೇ 5ರಿಂದ 6 ಕೋಟಿ ರೂ. ಬಿಲ್ ಮಾಡಲಾಗಿದೆ. ಮಣ್ಣಿನಲ್ಲೂ ಕೂಡ ಹಣ ಮಾಡಲು ಹೊರಟ್ಟಿದ್ದಾರೆ ನಾಚಿಕೆಯಾಗಬೇಕೆಂದು ದೂರಿದರು.

ಅಭಿವೃದ್ಧಿ ಹೆಸರಲ್ಲಿ ಹಣ ದುರ್ಬಳಕೆ: ಮಾಗಡಿ ಕೋಟೆಯ ಅಭಿವೃದ್ಧಿಗೆ 103 ಕೋಟಿ ರೂ. ಅಂದಾಜು ಪಟ್ಟಿ ಮಾಡಲಾಗಿದೆ. ಇದು ಕೇವಲ ಹಣ ಹೊಡೆಯುವ ತಂತ್ರವಾಗಿದೆ. ಕೋಟೆಗೆ ಇಷ್ಟು ದೊಡ್ಡ ಮೊತ್ತದ ಅಗತ್ಯ ವಿಲ್ಲ, ಆ ಹಣವನ್ನು ಕೆರೆಯನ್ನು ತುಂಬಿಸಲು ಬಳಸಬಹುದಿತ್ತು. ನಾನು ಕೋಟೆಯ ಅಭಿವೃದ್ಧಿಗೆ ವಿರೋಧಿ ಅಲ್ಲ, ಇಷ್ಟು ದೊಡ್ಡಗೆ ಬಳಸುವ ಅವಶ್ಯಕತೆ ಇರಲಿಲ್ಲ. ಇವರ ಮನೆಯ ಖಜಾನೆ ತುಂಬಿಸಲು ಕಾಮಗಾರಿ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ಶಾಸಕ ಬಾಲಕೃಷ್ಣರವರು 2018 ಚುನಾವಣೆಯಲ್ಲಿ 52,000 ಮತಗಳಿಂದ ಸೋತಿದ್ದಾರೆ ನಾನು ಎರಡು ಬಾರಿ 13 ಸಾವಿರ ಮತ್ತು 11 ಸಾವಿರ ಮತಗಳಿಂದ ಸೋತಿದ್ದೇನೆ ಮುಂದಿನ 2028ರ ಚುನಾವಣೆಯಲ್ಲಿ ಕ್ಷೇತ್ರದ ಜನತೆ ನನ್ನ ಪರವಾಗಿ ನಿಲ್ಲುತ್ತಾರೆ ನಾನು ಒಂದು ವೇಳೆ 25,000 ಮತಗಳಿಂದ ಸೋತರೆ ರಾಜಕೀಯ ನಿವೃತ್ತಿ ಪಡೆಯುತ್ತೇನೆಂದರು.

2028 ರಲ್ಲಿ ಶಾಸಕ ಬಾಲಕೃಷ್ಣ ಅವರಿಗೆ ತಕ್ಕ ಉತ್ತರ ಕ್ಷೇತ್ರದ ಜನತೆ ನೀಡಲಿದ್ದಾರೆ. ಜಾಲತಾಣದಲ್ಲಿ ಇವರ ಹಿಂಬಾಲಕರು ಹಾಕುತ್ತಿರುವ ಪೋಸ್ಟರ್ ನೋಡುತ್ತಿದ್ದೇನೆ. ಚುನಾವಣೆ ಸಂದರ್ಭದಲ್ಲಿ ಮತದಾರರು ಹಾಕುವ ಮತಗಳೇ ನಿರ್ಣಾಯಕ ಜಾಲತಾಣದಲ್ಲಿ ಇವರು ಸೃಷ್ಟಿಸುವ ಸಂಖ್ಯೆಗಳು ಇವರ ಖುಷಿಗಾಗಿ ಎಂದು ಮಾಜಿ ಶಾಸಕರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಹೋಬಳಿಮಟ್ಟದ ಯುವ ಕಾಂಗ್ರೆಸ್ ಕ್ರಿಕೆಟ್ ಪಂದ್ಯಾವಳಿ

• **ದೇವನಹಳ್ಳಿ:** ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ಕ್ಷೇತ್ರದ ಹಲವೆಡೆ ಹೋಬಳಿ ಮಟ್ಟದ ಕೆಎಚ್‌ಎಂ ಯುವ ಕಾಂಗ್ರೆಸ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಪಂದ್ಯಾವಳಿ ಹಮ್ಮಿಕೊಳ್ಳಲಾಗಿದೆ. ನಾಕೌಟ್ ಪಂದ್ಯಗಳು ಆರಂಭವಾಗಿವೆ. ಏ.4 ಮತ್ತು 5ರಂದು ಫೈನಲ್ ಪಂದ್ಯ ಗಳು ನಡೆಯಲಿವೆ.

ಈ ಹಿನ್ನೆಲೆಯಲ್ಲಿ ಬೆಂಗಳೂರು ಗ್ರಾಮಾಂತರ ಉಸ್ತುವಾರಿ ಸಚಿವರು ಹಾಗೂ ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಕೆಎಚ್ ಮುನಿಯಪ್ಪ ಬ್ಯಾಟಿಂಗ್ ಮಾಡುವ ಮೂಲಕ ಪಂದ್ಯಾವಳಿ ಗಳಿಗೆ ಚಾಲನೆ ನೀಡಿದ ಬಳಿಕ ಮಾತನಾಡಿ, ಇಂದಿನ ಯುವಕರು ಮೊಬೈಲ್ ನೋಡುವುದರಲ್ಲಿ ಹೆಚ್ಚು ಆಸಕ್ತಿ ವಹಿಸುವರು. ಅದನ್ನು ಬಿಟ್ಟು ಕ್ರೀಡೆಗಳಲ್ಲಿ ಪಾಲ್ಗೊಂಡರೆ ನಿಮ್ಮ ಆರೋಗ್ಯ ಕಾಪಾಡಿ ಕೊಳ್ಳಲು ಸಹಕಾರಿಯಾಗಲಿದೆ ಎಂದು ತಿಳಿಸಿದರು.

ದೇವನಹಳ್ಳಿ ತಾಲೂಕಿನ ಕುಂದಾಣ ಹೋಬಳಿ, ಚನ್ನರಾಯಪಟ್ಟಣ ಹೋಬಳಿ, ದೇವನಹಳ್ಳಿಕಸಬಾ ಹೋಬಳಿ ಗಳಲ್ಲಿ ಕೆ ಹೆಚ್ ಎಮ್ ಯುವ ಕಾಂಗ್ರೆಸ್ ಪ್ರೀಮಿಯರ್ ಲೀಗ್ ಪಂದ್ಯಗಳನ್ನು ಆಯೋಜಿಸಲಾಗಿದೆಂದರು.

ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಅಧ್ಯಕ್ಷ ಎ. ಶಾಂತಕುಮಾರ್, ನಿರ್ದೇಶಕ ಸಿ.ಪ್ರಸನ್ನ ಕುಮಾರ್, ದೇವನಹಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೆ.ಸಿ.ಮಂಜುನಾಥ್. ವಿಜಯಪುರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ದಿನ್ನೂರು ವೆಂಕಟೇಶ್, ಗ್ಯಾರಂಟಿ ಅನುಷ್ಠಾನದ ತಾಲೂಕು ಅಧ್ಯಕ್ಷ ಸಿ. ಜಗನ್ನಾಥ್ , ದೇವನಹಳ್ಳಿ ವಿಧಾನಸಭಾ ಕ್ಷೇತ್ರ ಯೂತ್ ಅಧ್ಯಕ್ಷ ಸಾಗರ್, ಯುವ ಅಧ್ಯಕ್ಷ ಪೃಥ್ವಿ ನರ್ಸೀಜ್, ದೊಡ್ಡಚೀಮನಹಳ್ಳಿ ನಿಖಿಲ್, ಕುಂದಾಣ ಹೋಬಳಿ ಅಧ್ಯಕ್ಷ ಸುಬ್ಬೇಗೌಡ, ಯುವ ಕಾಂಗ್ರೆಸ್ ಮುಖಂಡರು, ಬ್ಲಾಕ್ ಕಾಂಗ್ರೆಸ್ ಪದಾಧಿಕಾರಿಗಳು, ಮುಖಂಡ ರು ಸೇರಿದಂತೆ ಹಲವರಿದ್ದರು.



ಯಶವಂತಪುರದಲ್ಲಿ ಜಿಲ್ಲಾ ಮಹಿಳಾ ಕವಿಗೋಷ್ಠಿಗೆ ಚಾಲನೆ

ಕವಿಗೋಷ್ಠಿ ಸಾಹಿತ್ಯ ರಚನೆಗೆ ಉತ್ತೇಜನ



• **ಕೆಂಗೇರಿ:** ಕವಿಗೋಷ್ಠಿ ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಉತ್ತೇಜಿಸುತ್ತದೆ ಎಂದು ಶಿಕ್ಷಣ ತಜ್ಞೆ ಡಾ. ಗೀತಾ ರಾಮಾನುಜಂ ಹೇಳಿದರು.

ಕೆಂಗೇರಿಉಪನಗರದಕಾಳಿಕಾಂಬದೇವಸ್ಥಾನದಲ್ಲಿಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ, ಯಶವಂತಪುರ ವಿಧಾನಸಭಾ ಕ್ಷೇತ್ರದ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಆಯೋಜಿಸಿದ್ದ ಜಿಲ್ಲಾ ಮಹಿಳಾ ಕವಿಗೋಷ್ಠಿಯನ್ನು ಅವರು ಉದ್ಘಾಟಿಸಿದ ಅವರು. ಕನ್ನಡ ಸಾಹಿತ್ಯ ಪರಿಷತ್ ಕನ್ನಡ ಹಿರಿಮೆಯನ್ನು ಪಸರಿಸಲು ಮಹಿಳೆಯರಿಗೆ ಪ್ರೋತ್ಸಾಹ ನೀಡುತ್ತಿರುವುದು ಶ್ಲಾಘನೀಯ. ತಂದೆ ತಾಯಂದಿರು ಹೆಣ್ಣು ಮಕ್ಕಳಿಗೆ ಸ್ವೇಚ್ಛಾಚಾರವನ್ನು ಕಲಿಸಬೇಡಿ, ಶಿಕ್ಷಕರು ರಾಜಕಾರಣಿಗಳಾಗಬೇಡಿ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡಿ, ನಿಮ್ಮ ಬೆನ್ನನ್ನು ನೀವೆ ತಟ್ಟಿಕೊಳ್ಳಬೇಡಿ ಎಂದು ಕಿವಿಮಾತು ಹೇಳಿದರು.

ಯಶವಂತಪುರ ಕ್ಷೇತ್ರದ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಎಚ್.ಎಸ್.ಸುಧೀಂದ್ರ ಕುಮಾರ್ ಮಾತನಾಡಿ, ಕನ್ನಡ ನಾಡಿನಲ್ಲಿ ಕನ್ನಡಿಗರೇ ಸಾರ್ವಭೌಮ, ಕನ್ನಡಿಗರು ಆರೋಗ್ಯವಾಗಿ ಇರಬೇಕಾದರೆ ಕನ್ನಡ ಭಾಷೆ ನಾಡು ನುಡಿ, ಸಾಹಿತ್ಯ, ಕಲೆ ಮತ್ತು ಸಂಸ್ಕೃತಿಗೆ ಹೆಚ್ಚು ಆದ್ಯತೆ ನೀಡಿದಾಗ ಮಾತ್ರ ಕನ್ನಡ ಉಳಿಯಲು ಸಾಧ್ಯ ಎಂದು ತಿಳಿಸಿದರು.

ಬೆಂಗಳೂರು ನಗರ ಜಿಲ್ಲಾ ಕಸಾಪ ಅಧ್ಯಕ್ಷ ಎಂ. ಪ್ರಕಾಶ್ ಮೂರ್ತಿ ಮಾತನಾಡಿ, ಮಹಿಳೆಯರಿಗೆ ಉತ್ತಮ ವೇದಿಕೆ ಕಲ್ಪಿಸುವ ನಿಟ್ಟಿನಲ್ಲಿ ಸಮಾಜದ ಸಾಮರಸ್ಯ ಹಾಗೂ ಸದೃಢತೆಗೆ ಮಹಿಳೆಯರ ಪಾತ್ರ ಪ್ರಮುಖ ಪಾತ್ರ ವಹಿಸುತ್ತದೆ ಎಂದರು.

ಇದೇ ಸಂದರ್ಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಮಹಿಳೆಯರಿಗೆ ಸನ್ಮಾನಿಸಿ ಗೌರವಿಸಲಾಯಿತು. ಲೇಖಕಿ ಬಿ.ಎಸ್ .ಪಾರಿಜಾತ, ಧರ್ಮಸ್ಥಳ ಮಂಜುನಾಥ ಆಯುರ್ವೇದ ವೈದ್ಯಕೀಯ ಕಾಲೇಜಿನ ಸಹಾಯಕ ಪ್ರಾಧ್ಯಾಪಕಿ ಡಾ. ಪ್ರತಿಭಾಭಟ್, ನಿಮ್ಸ್ ಕಾಲೇಜಿನ ಪ್ರಾಂಶುಪಾಲೆ ಸುಕನ್ಯಾ ಹೆಗಡೆ, ಯಶೋಧ, ರಾಮಚಂದ್ರ, ಇಂದಿರಾ ಶರಣ ಸೇರಿದಂತೆ ಇತರರಿದ್ದರು.

ಮರೆಯಲಾಗದ ಮಹನೀಯರು ಸರಣಿ-3 ಕಾರ್ಯಕ್ರಮ

ಸಂಗೀತದಷ್ಟೇ ಸಾಹಿತ್ಯವೂ ಮುಖ್ಯ



• **ಬೆಂಗಳೂರು:** ಸಂಗೀತದಷ್ಟೇ ಸಾಹಿತ್ಯಕ್ಕೂ ಪ್ರಾಮುಖ್ಯತೆಯಿದ್ದು, ಕವಿಗೀತೆಗಳನ್ನು ಹಾಡುವುದರಿಂದ ಜನರಲ್ಲಿ ಸಾಹಿತ್ಯಾಸಕ್ತಿ ಮೂಡುತ್ತದೆ ಎಂದು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಚಂದ್ರಶೇಖರಯ್ಯ ಅಭಿಪ್ರಾಯಪಟ್ಟರು.

ಕರ್ನಾಟಕ ಸುಗಮ ಸಂಗೀತ ಪರಿಷತ್ತು ನಗರದ ಕಹಳೆ ಬಂಡೆಯಲ್ಲಿ (ಬ್ಯೂಗಲ್ ರಾಕ್) ಆಯೋಜಿಸಿದ್ದ ಮರೆಯಲಾಗದ ಮಹನೀಯರು ಸರಣಿ-3 ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಇತರ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕದಲ್ಲಿ ಕವಿಯ ಗೀತೆಗಳನ್ನು ಹಾಡುವ ಸಂಪ್ರದಾಯ ಹೆಚ್ಚಾಗಿರುವುದು ಸ್ವಾಗತಾರ್ಹ. ಸಂಗೀತದಷ್ಟೇ ಸಾಹಿತ್ಯಕ್ಕೂ ಪ್ರಾಮುಖ್ಯತೆಯಿದ್ದು, ಕವಿಗೀತೆಗಳನ್ನು ಹಾಡುವುದರಿಂದ ಜನರಲ್ಲಿ ಸಾಹಿತ್ಯಾಸಕ್ತಿ ಮೂಡುತ್ತದೆ. ಕರ್ನಾಟಕ ಸುಗಮ ಸಂಗೀತ ಪರಿಷತ್ತು ನಡೆಸುವ ಈ ರೀತಿಯ ಕಾರ್ಯಕ್ರಮಗಳು ಸಾಹಿತ್ಯದ ಕುರಿತ ಅರಿವನ್ನು ಹೆಚ್ಚಿಸುವುದರೊಂದಿಗೆ ಮನಸ್ಸಿಗೆ ಮುದ ನೀಡುತ್ತದೆ ಎಂದರು.

ದಲಿತ ಕವಿ ಎಂದು ಕರೆಯಬಾರದು: ಕವಿ ವೈ.ಕೆ. ಮುದ್ದುಕೃಷ್ಣ ಮಾತನಾಡಿ, ಕವಿ ಸಿದ್ದಲಿಂಗಯ್ಯ ಅವರು ಕವನಗಳ ಮೂಲಕ ಕನ್ನಡ ಸಾಹಿತ್ಯ ಲೋಕಕ್ಕೆ ಸಾಕಷ್ಟು ಕೊಡುಗೆ ನೀಡಿದ್ದಾರೆ. ಕವನಗಳಲ್ಲಿ ಯಾವುವೂ ದಲಿತ ಅಥವಾ ಬಲಿತ ಎಂದು ಇರುವುದಿಲ್ಲ, ಸಿದ್ದಲಿಂಗಯ್ಯ ಅವರನ್ನು ದಲಿತ ಕವಿ ಎಂದು ಯಾರೂ ಕರೆಯಬಾರದು. ಅವರನ್ನು ಕವಿ ಸಿದ್ದಲಿಂಗಯ್ಯ ಎಂದೇ ಕರೆಯಬೇಕು ಎಂದು ಸೂಚಿಸಿದರು.

ಕಾರ್ಯಕ್ರಮದಲ್ಲಿ ರಾಷ್ಟ್ರಕವಿ ಡಾ. ಜಿ.ಎಸ್.ಶಿವರುದ್ರಪ್ಪ, ಪ್ರೊ. ಎಂ.ಗೋಪಾಲಕೃಷ್ಣ ಅಡಿಗ, ಕೆ.ಎಸ್. ನಿಸಾರ್ ಅಹಮದ್, ಪ್ರೊ. ಸಿದ್ದಲಿಂಗಯ್ಯ, ಡಾ. ಜಿ.ಎಸ್. ಸಿದ್ದಲಿಂಗಯ್ಯ, ಡಾ. ದೊಡ್ಡರಂಗೇಗೌಡ ಅವರಿಗೆ ನುಡಿ ನಮನ ಸಲ್ಲಿಸಲಾಯಿತು.

ದಕ್ಷಿಣ ನಗರ ಪಾಲಿಕೆ ಮುಂದಾಳತ್ವದಲ್ಲಿ ಆಯೋಜನೆ: ನಾಗರಿಕರು ಭಾಗಿ

ಬೀದಿನಾಯಿ ಮರಿಗಳ ದತ್ತು ಶಿಬಿರ



• **ಬೆಂಗಳೂರು:** ದಕ್ಷಿಣ ನಗರ ಪಾಲಿಕೆಯ ಮುಂದಾಳತ್ವದಲ್ಲಿ, ಜಯನಗರದ ಶಾಲಿನಿ ಮೈದಾನದಲ್ಲಿ ಬೀದಿ ನಾಯಿ ಮರಿಗಳ ದತ್ತು ಶಿಬಿರವನ್ನು ಆಯೋಜಿಸಿ,10 ಬೀದಿ ನಾಯಿ ಮರಿಗಳಿಗೆ ಪ್ರೀತಿಯ ಮನೆಯನ್ನು ಒದಗಿಸಲಾಯಿತು.

ಬೀದಿ ನಾಯಿಗಳ ನಿರ್ವಹಣೆಗೆ ಮಾನವೀಯ ಮತ್ತು ದೀರ್ಘಕಾಲೀನ ಪರಿಹಾರಗಳನ್ನು ಉತ್ತೇಜಿಸುವ ಗುರಿ ಈ ಕಾರ್ಯಕ್ರಮದ ಉದ್ದೇಶವಾಗಿದೆ ಎಂದು ಪಾಲಿಕೆ ತಿಳಿಸಿದೆ. ರಕ್ಷಣೆ ಅಗತ್ಯವಿರುವ ಬೀದಿ ನಾಯಿಗಳಿಗೆ ಸುರಕ್ಷಿತ ಮತ್ತು ಭದ್ರ ಮನೆಗಳನ್ನು ಒದಗಿಸುವ ಮೂಲಕ ಬೀದಿ ನಾಯಿಗಳ ಸಂಖ್ಯೆಯನ್ನು ಕ್ರಮೇಣ ಕಡಿಮೆ ಮಾಡಲು ಸಹಾಯ ಮಾಡುವುದು. ನಾಯಿ ತೊಂದರೆ ಕುರಿತ ಸಾರ್ವಜನಿಕ ಅಭಿಪ್ರಾಯವನ್ನು ಸುಧಾರಿಸುವುದು ಹಾಗೂ ಮಾನವೀಯ ವಿಧಾನಗಳ ಮೂಲಕ ಸಮಸ್ಯೆಗಳಿಗೆ ಪರಿಹಾರ ನೀಡಲಾಗುವುದು. ಜವಾಬ್ದಾರಿಯುತ ದತ್ತು ಪ್ರಕ್ರಿಯೆಯ ಮೂಲಕ, ರಸ್ತೆಗಳಲ್ಲಿರುವ ನಾಯಿಗಳಿಗೆ ಆರೈಕೆ, ಸುರಕ್ಷತೆ ಮತ್ತು ದೀರ್ಘಕಾಲೀನ ಸ್ಥಿರತೆ ದೊರೆಯುತ್ತದೆ. ಇದೇ ಸಮಯದಲ್ಲಿ, ಬೀದಿಗಳಲ್ಲಿ ನಾಯಿಗಳ ಸಂಖ್ಯೆಯು ನಿಧಾನವಾಗಿ ಕಡಿಮೆಯಾಗುವಂತೆ ಸಹಕಾರಿಯಾಗುತ್ತದೆ ಎಂದು ಪಾಲಿಕೆ ಅಭಿಪ್ರಾಯ ವ್ಯಕ್ತಪಡಿಸಿದೆ.

ಜನರಿಂದ ದೊರೆತ ಉತ್ತಮ ಪ್ರತಿಕ್ರಿಯೆಯಿಂದ ಪ್ರೇರಿತಗೊಂಡು, ಬೆಂಗಳೂರು ದಕ್ಷಿಣ ನಗರ ಪಾಲಿಕೆಯು ಇಂತಹ ದತ್ತು ಶಿಬಿರಗಳನ್ನು ತ್ರೈಮಾಸಿಕವಾಗಿ ನಡೆಸುವ ಯೋಜನೆ ಹೊಂದಿದೆ. ಇದು ಮಾನವೀಯ ಪ್ರಾಣಿ ನಿರ್ವಹಣೆ ಮತ್ತು ಸಮುದಾಯ ಕಲ್ಯಾಣದತ್ತ ತನ್ನ ಬದ್ಧತೆಯನ್ನು ಮತ್ತಷ್ಟು ಬಲಪಡಿಸುತ್ತದೆ.

ಈ ಉಪಕ್ರಮವು ಸಮುದಾಯಗಳು ಮತ್ತು ಪ್ರಾಣಿಗಳ ನಡುವೆ ಸಮತೋಲನದ ಸಹಜ ಸಹಬಾಳ್ವೆಯನ್ನು ನಿರ್ಮಿಸುವ ಒಕ್ಕೂಟದ ಪ್ರಯತ್ನವನ್ನು ಪ್ರತಿಬಿಂಬಿಸುತ್ತದೆ, ದತ್ತು ಒಂದು ಮುಖ್ಯ ಸಾಧನವಾಗಿ ಕಾರ್ಯನಿರ್ವಹಿಸುತ್ತದೆ ಎಂದು ದಕ್ಷಿಣ ನಗರ ಪಾಲಿಕೆಯ ಆಯುಕ್ತ ಕೆ.ಎನ್.ರಮೇಶ್ ತಿಳಿಸಿದ್ದಾರೆ.

ಕಾರ್ಯಕ್ರಮದಲ್ಲಿ, ದಕ್ಷಿಣ ನಗರ ಪಾಲಿಕೆ ಪಶುಸಂಗೋಪನಾ ಇಲಾಖೆಯ ಮುಖ್ಯ ಪಶುವೈದ್ಯಾಧಿಕಾರಿ ಡಾ. ಶ್ರೀನಾಥ್ ಸುಪರ್‌ಟೇಲ್ಸ್, ಕೇರ್, ವಾಟರ್ ಫಾರ್ ವಾಯ್ಸ್‌ಲೆಸ್ ಮತ್ತು ಫಿಯಾಪೋ ಸಂಸ್ಥೆಗಳ ಸದಸ್ಯರು ಉಪಸ್ಥಿತರಿದ್ದರು.

ಕ್ರಿಕೆಟ್ ಪಂದ್ಯಾವಳಿ: 20ಕ್ಕೂ ಹೆಚ್ಚು ಮೊಬೈಲ್ ಕಳವು

• **ಬೆಂಗಳೂರು:** ಆರ್‌ಸಿಬಿ ಮತ್ತು ಎಸ್‌ಆರ್‌ಎಚ್ ನಡುವೆ ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ಶನಿವಾರ ನಡೆದ ಪಂದ್ಯಾವಳಿ ಸಮಯದಲ್ಲಿ ಕಳ್ಳರು, ಸುಮಾರು 20 ಕ್ಕೂ ಹೆಚ್ಚು ಮೊಬೈಲ್‌ಗಳನ್ನು ಕದ್ದು ಪರಾರಿಯಾಗಿದ್ದಾರೆ. ಈ ಸಂಬಂಧ ಕಬ್ಬನ್ ಪಾರ್ಕ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪಂದ್ಯ ಮುಗಿದು ಹೊರಗೆ ಬರುವಾಗ ಜನಸಂದಣಿಯಲ್ಲಿ ಕಳ್ಳರು ಬೆಲೆಬಾಳುವ ಮೊಬೈಲ್‌ಗಳು ಹಾಗೂ ಪರ್ಸ್‌ಗಳನ್ನು ಕದ್ದಿದ್ದಾರೆ. ಮೊಬೈಲ್ ಕಳೆದುಕೊಂಡ ಕೆಲವರು ಕಬ್ಬನ್ ಪಾರ್ಕ್ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದಾರೆ. ಇನ್ನೂ ಕೆಲವರು ಇ-ಲಾಸ್ಟ್ ಮೂಲಕ ದೂರು ಸಲ್ಲಿಸಿದ್ದಾರೆ.

ಗೇಟ್ ನಂ 1, 2 ಮತ್ತು 3ರಲ್ಲಿಯೇ ಅತಿ ಹೆಚ್ಚು ಮೊಬೈಲ್ ಸೇರಿ ಇತರೆ ವಸ್ತುಗಳು ಕಳ್ಳತನವಾಗಿದೆ. ಠಾಣೆಯಲ್ಲಿ 8 ಮಂದಿ ದೂರು ಸಲ್ಲಿಸಿದ್ದು, ಇ-ಲಾಸ್ಟ್‌ನಲ್ಲಿ 12 ಕ್ಕೂ ಹೆಚ್ಚು ದೂರು ಸಲ್ಲಿಕೆಯಾಗಿದೆ. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು, ಸ್ಥಳೀಯವಾಗಿ ಅಳವಡಿಸಿದ್ದ ಸಿಸಿಟಿವಿ ಕ್ಯಾಮೆರಾ ದೃಶ್ಯಗಳನ್ನು ಆಧರಿಸಿ ಮುಂದಿನ ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿಸಿದ್ದಾರೆ.

ಪೊಲೀಸರಿಗೆ ಮೆಚ್ಚುಗೆ ಸೂಚನೆ: ಐಪಿಎಲ್ ಪಂದ್ಯದ ವೇಳೆ ಯಾವುದೇ ಗೊಂದಲಕ್ಕೆ ಅವಕಾಶ ನೀಡದ ನಗರ ಪೊಲೀಸರಿಗೆ ಸಾರ್ವಜನಿಕರು ಸಾಮಾಜಿಕ ಜಾಲತಾಣಗಳ ಮೂಲಕ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಈ ಬಾರಿ ಪೊಲೀಸರು ಯಾವುದೇ ಅಹಿತಕರ ಘಟನೆ ನಡೆಯದಂತೆ ಮುನ್ನೆಚ್ಚರಿಕೆ ಕ್ರಮ ಕೈಗೊಂಡಿದ್ದು, ಕ್ರೀಡಾಂಗಣದ ಸುತ್ತಮುತ್ತ ಸುಮಾರು 2 ಸಾವಿರಕ್ಕೂ ಹೆಚ್ಚು ಪೊಲೀಸರನ್ನು ನಿಯೋಜಿಸಿ ಬಿಗಿ ಭದ್ರತೆ ಕೈಗೊಂಡಿದ್ದರು. ಹೀಗಾಗಿ ಪೊಲೀಸರ ಭದ್ರತಾ ಕ್ರಮಕ್ಕೆ ಸಾರ್ವಜನಿಕರು ಸಾಮಾಜಿಕ ಜಾಲತಾಣದಲ್ಲಿ ಪೊಲೀಸರಿಗೆ ಮೆಚ್ಚುಗೆ ಸೂಚಿಸಿದ್ದಾರೆ.

ಸ್ವಚ್ಛತಾ ಅಭಿಯಾನಕ್ಕೆ ಚಾಲನೆ



• **ಬೆಂಗಳೂರು:** ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಸ್ವಚ್ಛತೆ ಕಾಪಾಡುವುದು ಹಾಗೂ ತ್ಯಾಜ್ಯಮುಕ್ತ ನಗರಪಾಲಿಕೆ ರೂಪಿಸಲು ಹಾಗೂ ಸ್ವಚ್ಛ ಸರ್ವೇಕ್ಷಣ 2025-26ರ ಶ್ರೇಯಾಂಕ ಪಟ್ಟಿಯಲ್ಲಿ ರಾಷ್ಟ್ರ ಮಟ್ಟದಲ್ಲಿ ಉತ್ತಮ ಸ್ಥಾನ ಗಳಿಸಬೇಕಾಗಿದೆ. ಬೆಂಗಳೂರು ಕೇಂದ್ರ ನಗರ ಪಾಲಿಕೆಯಿಂದ ಭಾನುವಾರ ವಿಶೇಷ ಸ್ವಚ್ಛತಾ ಅಭಿಯಾನ ಹಮ್ಮಿಕೊಳ್ಳಲಾಯಿತು.

ಈಗಾಗಲೇ ರೂಪಿಸಲಾಗಿರುವ ಕಾರ್ಯಯೋಜನೆಯ 2ನೇ ಭಾಗವಾಗಿ ಬೆಂಗಳೂರು ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಸ್ವಚ್ಛ ಸರ್ವೇಕ್ಷಣ 2025-26ರ ವಿಶೇಷ ಸ್ವಚ್ಛತಾ ಅಭಿಯಾನದ ಅಂಗವಾಗಿ 38 ಉದ್ಯಾನವನ ಹಾಗೂ 11 ಆಟದ ಮೈದಾನಗಳ ಸ್ವಚ್ಛತೆ ಮಾಡಲಾಗಿದೆ ಎಂದು ಪಾಲಿಕೆ ತಿಳಿಸಿದೆ.

ನಾಗರಿಕರು, ವಯೋವೃದ್ಧರು, ಮಕ್ಕಳು, ಮಹಿಳೆಯರ ವಾಯುವಿಹಾರಕ್ಕೆ, ನಡಿಗೆಗೆ ಹಾಗೂ ವಿಶ್ರಾಂತಿಗಾಗಿ ನೈರ್ಮಲ್ಯಕರ ಸ್ಥಳವಾಗಿ ಮಾರ್ಪಡಿಸಲು ಪಾರ್ಕ್‌ಗಳ ಸ್ವಚ್ಛತೆ, ಮಕ್ಕಳು, ಕ್ರೀಡಾರ್ಥಿಗಳ ಆಟೋಟಕ್ಕೆ ಅನುಕೂಲಕರ ಹಾಗೂ ನೈರ್ಮಲ್ಯ ವಾತಾವರಣ ಸಲುವಾಗಿ ಮೈದಾನಗಳ ಶುಚಿಗೊಳಿಸಲಾಗಿದೆ ಎಂದು ಪಾಲಿಕೆ ಹೇಳಿದೆ.

ಕಿರುಸುದ್ದಿ

ರಾಮೇಶ್ವರ ಮಲ್ಲಿಕಾರ್ಜುನ ಸ್ವಾಮಿ ಧೂಳಾರ್ಚನೆ

• **ನ್ಯಾಮತಿ:** ನ್ಯಾಮತಿ ತಾಲೂಕಿನ ರಾಮೇಶ್ವರ ಗ್ರಾಮದ ಮಲ್ಲಿಕಾರ್ಜುನಸ್ವಾಮಿಯ ಧೂಳಾರ್ಚನೆ ಶನಿವಾರ ನೂರಾರು ಭಕ್ತ ಸಮೂಹದ ನಡುವೆ ಸಂಭ್ರಮದಿಂದ ನಡೆಯಿತು. ಅರ್ಚಕರು ಮರಳಿನಕುಂಡವನ್ನು ಸಿದ್ಧಗೊಳಿಸಿ ಪೂಜಾವಿಧಿಗಳು ಮತ್ತು ನೈವೇದ್ಯೆಯನ್ನು ಸಮರ್ಪಣೆ ಮಾಡಿದರು. ದೇವರ ಪಲ್ಲಕ್ಕಿ ಹೊತ್ತವರು ಭಗವಂತನನಾಮಸ್ಮರಣೆ ಮಾಡುತ್ತ ಮರಳಿನ ರಾಶಿಯನ್ನು ಹಾಯ್ದರು. ಶನಿವಾರ ಬೆಳಗಿನಜಾವ ಸುಮಂಗಲಿಯರಿಂದ ಗಂಗೆಪೂಜೆ, ಮಲ್ಲಿಕಾರ್ಜುನಸ್ವಾಮಿಯ ಶಿಲಾಮೂರ್ತಿಗಳಿಗೆ ಹಾಗೂ ಉತ್ಸವಮೂರ್ತಿಗೆ ರುದ್ರಾಭಿಷೇಕ, ಬಿಲ್ವಾರ್ಚನೆ ನಡೆಯಿತು. ನೂರಾರು ಪುರುಷರು, ಮಹಿಳೆಯರು ಮಕ್ಕಳನ್ನು ಹೊತ್ತು ಮರಳಿನ ರಾಶಿಯನ್ನು ಹಾಯ್ದರು. ಧೂಳಾರ್ಚನೆಗೆ ಮಂಗಲವಾದ್ಯ, ವೀರಗಾಸೆ ಕುಣಿತ ಸಾಂಸ್ಕೃತಿಕ ವಾದ್ಯ ಮೇಳಗಳು ಮೆರಗು ನೀಡಿದವು.

ನ್ಯಾಮತಿಯಲ್ಲಿ ಬಿರುಗಾಳಿ ಸಹಿತ ಭಾರೀ ಮಳೆ

• **ನ್ಯಾಮತಿ:** ನ್ಯಾಮತಿಯಲ್ಲಿ ಶನಿವಾರ ಭಾರಿ ಬಿರುಗಾಳಿ ಸಮೇತ ಅರ್ಭಟದ ಮಳೆ ಸುರಿಯಿತು. ಸಂಜೆ 5 ಘಂಟೆಯಿಂದ ರಾತ್ರಿ 10 ಗಂಟೆಯವರೆಗೆ ಗುಡುಗು, ಮಿಂಚು, ಸಿಡಿಲಿನಿಂದ ಕೂಡಿದ ಭಾರಿ ಮಳೆ ಬಂದು ಮರ ಮತ್ತು ವಿದ್ಯುತ್ ಕಂಬಗಳು ಬಿದ್ದಿವೆ. ಮನೆ, ಅಂಗಡಿಗಳ ತಗಡುಗಳು ಹಾರಿಹೋಗಿದ್ದು ಕೆಲವು ಗಂಟೆಗಳ ಕಾಲ ವಿದ್ಯುತ್ ಕಡಿತವಾಗಿತ್ತು. ಜೋಳದ ಬೆಳೆ ಸೇರಿದಂತೆ ಮೇವಿನ ಸೊಪ್ಪೆ ಹಾಳಾಗಿದೆ. ಅಡಕೆ ಬೆಳೆದ ರೈತರಿಗೆ ಈ ಮಳೆ ಸಂತಸ ನೀಡಿದೆ.

ಏ. 1, 2ಕ್ಕೆ ದಾವಣಗೆರೆ ದಕ್ಷಿಣದಲ್ಲಿ ಅಂಚೆ ಮತದಾನ

• **ದಾವಣಗೆರೆ:** ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆ ಹಿನ್ನೆಲೆಯಲ್ಲಿ 85 ವರ್ಷ ಹಾಗೂ ಮೇಲ್ಪಟ್ಟ ಮತ್ತು ವಿಶೇಷ ವಿಕಲಚೇತನರ ಮನೆ ಬಾಗಿಲಿಗೆ ತೆರಳಿ ಅಂಚೆ ಮತಪತ್ರಗಳ ಮೂಲಕ ಮತದಾನ ಮಾಡುವ ಪ್ರಕ್ರಿಯೆ ಏಪ್ರಿಲ್ 1, 2ರಂದು ಬೆಳಗ್ಗೆ 7 ಗಂಟೆಯಿಂದ ಸಂಜೆ 6ರವರೆಗೆ ನಡೆಯಲಿದೆ. ಈಗಾಗಲೇ ಅಂಚೆ ಮತದಾನ ಮಾಡಲು ಅರ್ಜಿ ಸಲ್ಲಿಸಿರುವ ಎಲ್ಲಾ ಮತದಾರರು ತಮ್ಮ ಮನೆಯ ಮತಕ್ಷೇತ್ರದಲ್ಲಿ ಇದ್ದು, ಈ ಕಾರ್ಯಕ್ಕೆ ನಿಯೋಜನೆಗೊಂಡಿರುವ ಅಧಿಕಾರಿಗಳಿಗೆ ಸಹಕಾರ ನೀಡಿ ಮತದಾನ ಮಾಡುವಂತೆ ಕ್ಷೇತ್ರದ ಚುನಾವಣಾಧಿಕಾರಿ ಹಾಗೂ ಉಪ ವಿಭಾಗಾಧಿಕಾರಿ ಸಂತೋಷ್ ಕುಮಾರ್ ತಿಳಿಸಿದ್ದಾರೆ.

ಬಿಸಿಲಿನ ತಾಪಕ್ಕೆ ಮನೆಯಿಂದ ಹೊರಬಾರದ ಜನ| ತಂಪು ಪದಾರ್ಥಕ್ಕೆ ಮೊರೆ

ದಾಹ ತಣಿಸುವ ತಾಟನಿಂಗು

▸ ತಾವರೆಕೆರೆ ಟಿ.ನಾಗರಾಜ್

ತಾವರೆಕೆರೆ: ಬಿಸಿಲಿನ ತಾಪಕ್ಕೆ ಮನೆ ಬಿಟ್ಟು ಹೊರಗೆ ಬರಲು ಜನತೆ ಹಿಂಜರಿಯುತ್ತಿದ್ದಾರೆ. ಅನಿವಾರ್ಯ ಕಾರಣದಿಂದ ತ್ವರಿತ ಕಾರ್ಯ ನಿಮಿತ್ತ ಪ್ರಯಾಣ ಮಾಡಿದರೆ ಬಿಸಿಲಿನ ಬೇಗೆ ತಾಳಲಾರದೆ ತಂಪಾದ ನೀರು, ತಂಪುಪಾನೀಯವನ್ನು ಎಷ್ಟೇಸೇವಿಸಿದರೂ ಬಾಯಾರಿಕೆ ತಡೆಯಲಾಗುತ್ತಿಲ್ಲ.



ಆದ್ದರಿಂದ ಜನತೆ ವಿವಿಧ ಕಸರತ್ತು ಮಾಡುತ್ತಿದ್ದಾರೆ. ಇದರಿಂದ ತಾಟನಿಂಗು ವ್ಯಾಪಾರ ಬಲು ಜೋರು ಬಿಸಿಲಿನ ತಾಪಕ್ಕೆ ಮುಗಿಬಿದ್ದ ಜನತೆ ಬಾಯಾರಿಕೆ ನೀಗಿಸಿ ಕೊಳ್ಳಲು ಜನತೆ ವಿವಿಧ ರೀತಿಯ ತಂಪು ಪಾನೀಯಗಳ ಜತೆಗೆ ತಾಟನಿಂಗುಗೆ ಮೊರೆ ಹೋಗಿದ್ದಾರೆ. ಇದರಿಂದ ಎಲ್ಲಿಲ್ಲದ ಬೇಡಿಕೆ ಕಂಡು ಬರುತ್ತಿದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಪಟ್ಟಣ ಪ್ರದೇಶ ಹಾಗೂ ಗ್ರಾಮಾಂತರ ಜನತೆ ಬಿಸಿಲು ಬೇಗೆ ತಣಿಸಲು ತಾಟನಿಂಗು ಒಂದು ತಂಪು ಪದಾರ್ಥ.

ತಾಟನಿಂಗಿನಿಂದ ದೇಹದ ಉಷ್ಣತೆಯನ್ನು ಗಣನೀಯವಾಗಿ ನಿಯಂತ್ರಿಸುವುದು. ಆದಕಾರಣ ಬೇಸಿಗೆಯಲ್ಲಿ ಹೆಚ್ಚು ಬೇಡಿಕೆ ಇರುವ ಕಾರಣ ತಾಟನಿಂಗು, ಎಳನೀರು ವ್ಯಾಪರಕ್ಕೆ ಸೆಡ್ಡು ಹೊಡೆಯುತ್ತದೆ. ಎಳನೀರು ದರಕ್ಕೆ ಹೋಲಿಸಿದರೆ ಗ್ರಾಹಕರಿಗೆ ತಾಟನಿಂಗು ಕಡಿಮೆ ದರಕ್ಕೆ ಸಿಗುತ್ತದೆ.

ಇದನ್ನು ಹೇರಳವಾಗಿ ತಮಿಳುನಾಡಿನ ಹೊಸೂರು, ಸೇಲಂ, ಧರ್ಮಪುರಿ, ಕೃಷ್ಣಗಿರಿ ಮುಂತಾದ ಭಾಗದಲ್ಲಿ ಬೆಳೆಯುವರು. ಅಲ್ಲಿಂದ ಬೆಂಗಳೂರು ಮಾರುಕಟ್ಟೆಗೆ ತಂದು ಲೋಡುಗಟ್ಟಲೆ ಮಾರಾಟ ಮಾಡುವರು. ಇಲ್ಲಿಂದ ರಾಜ್ಯದ ವಿವಿಧ ಭಾಗದಲ್ಲಿ ವ್ಯಾಪರಸ್ಥರು ಖರೀದಿಸಿ ತೆಗೆದುಕೊಂಡು ಹೋಗಿ ನಗರ, ಗ್ರಾಮೀಣ ಪ್ರದೇಶದಲ್ಲಿ ತಳ್ಳುವ ಗಾಡಿಯಲ್ಲಿ ಮಾರಾಟ ಮಾಡುವುರ. ಗ್ರಾಹಕರಿಗೆ ಒಂದು ಕಾಯಿಗೆ 50ರಿಂದ 60ರೂ.ರಂತೆ ಮಾರಾಟ ಮಾಡುವರು. ಈ ಕಾಯಿಯಲ್ಲಿ ಒಂದರಲ್ಲಿ ಮೂರು ಹಣ್ಣುಗಳಿರುತ್ತವೆ.

ಹೆಚ್ಚು ಬೇಡಿಕೆ

ಬಹಳ ವರ್ಷಗಳಿಂದ ತಾಟನಿಂಗು ವ್ಯಾಪರ ಮಾಡುತ್ತಿದ್ದೇನೆ. ಆದರೆ, ಈ ವರ್ಷದಲ್ಲಿ ಬಿಸಿಲಿನ ತಾಪ ಹೆಚ್ಚಾಗಿ ತಾಟನಿಂಗು ಖರೀದಿಸಲು ಜನ ಮುಗಿ ಬೀಳುತ್ತಿದ್ದಾರೆ.ಆದರೆ, ಹೊರರಾಜ್ಯದಿಂದ ಬರುವ ಈ ಹಣ್ಣಿಗೆಈ ಭಾರಿ ಬೇಡಿಕೆ ಇದೆ. ವ್ಯಾಪಾರ ಬಲು ಜೋರಾಗಿ ನಡೆಯುತ್ತಿದೆ. ಆದರೆ, ಈ ಭಾರಿ ಸ್ಥಳದಲ್ಲಿಯೇ ದರ ಹೆಚ್ಚಾಗಿದ್ದರೂ ಸಹ ನಾವು ದುಬಾರಿ ಬೆಲೆಕೊಟ್ಟು ತಂದು ಗ್ರಾಹಕರಿಗೆ ಕೈಗೆಟುಕುವ ರೀತಿಯಲ್ಲಿ ಮಾರಾಟ ಮಾಡುತ್ತಿದ್ದೇವೆಂದು ವ್ಯಾಪಾರಿ ಮುರುಗೇಶ್ ಹೇಳುವರು.

ಇದರಲ್ಲಿ ಆರೋಗ್ಯದ ಗುಣವನ್ನು ಹೊಂದಿದ್ದು ಎಳನೀರಿನಷ್ಟೆ ತಾಟನಿಂಗಿಗೆ ಆರೋಗ್ಯದ ಶಕ್ತಿಯನ್ನ ಹೊಂದಿರುತ್ತದೆ. ಇದು ಸಾಕಷ್ಟು ಪ್ರಮಾಣದ ಶರ್ಕರ,

ಆರೋಗ್ಯಕ್ಕೆ ಒಳ್ಳೆಯದು

ನೈಸರ್ಗಿಕವಾದ ತಾಟನಿಂಗು ಸೇವನೆ ಒಳ್ಳೆಯದು. ಇದರಿಂದ ಜನರು ಆರೋಗ್ಯದಿಂದಿರುತ್ತಾರೆ. ಇಂತಹ ಪ್ರಾಕೃತಿಕ ಫಲಗಳ ಸೇವನೆಗೆ ಜನ ಮುಗಿಬೀಳುತ್ತಾರೆ ಗ್ರಾಹಕಕಿರಣ್ ಹೇಳುವರು.

ಕಬ್ಬಿಣ, ವಿಟಮಿನ್ ಸಿ, ರಂಜಕ ಹೊಂದಿದೆ. ಕೃತಕ ತಂಪು ಪಾನೀಯಗಳ ಬಗ್ಗೆ ಜನರಲ್ಲಿ ಹೆಚ್ಚು ಅಸಕ್ತಿ ಮೂಡಿಸುತ್ತದೆ. ವರ್ಷಕ್ಕೊಮ್ಮೆ ಸಿಗುವ ಈ ಕಾಯಿ ತಿನ್ನಲು ಗ್ರಾಹಕರು ಕಾದಿರುವರು.

ಪ್ರತಿ ವರ್ಷ ಬೇಸಿಗೆ ಕಾಲದಲ್ಲಿ ಸಾಧಾರಣ ಬಿಸಿಲು ಇರುತ್ತಿತ್ತು. ಆದರೆ, ಈ ವರ್ಷ ಬಿಸಿಲಿನ ಜತೆಗೆ ಬಿಸಿ ಗಾಳಿ ಹೆಚ್ಚಾಗಿ ಬೀಸುತ್ತಿದೆ. ಬಾಯಾರಿಕೆ ತಣಿಸಲು ತಂಪು ಪಾನೀಯಗಳ ಮೊರೆ ಹೋಗುತ್ತೇವೆ. ಆದರೆ, ಬಣ್ಣದ ರಾಸಾಯನಿಕ ಪದಾರ್ಥ ಇದರಲ್ಲಿ ಮಿಶ್ರಿತವಾಗಿ ಆರೋಗ್ಯಕ್ಕೆ ಹಾನಿಕರವಾಗಿರುತ್ತವೆ.

ಗುರಿಯತ್ತ ಗಮನಹರಿಸಿ



• **ದಾವಣಗೆರೆ:** ಪ್ರಸ್ತುತ ಉನ್ನತ ನ್ಯಾಯಾಲಯದಲ್ಲಿ ಮಹಿಳಾ ನ್ಯಾಯಾಧೀಶರ ಸಂಖ್ಯೆ ಕಡಿಮೆ ಇದ್ದರೂ, ಇತ್ತೀಚಿನ ದಿನಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಕಾನೂನು ಪದವಿ ಪಡೆದು ಸಿವಿಲ್ ನ್ಯಾಯಾಧೀಶರ ಹುದ್ದೆಗಳಿಗೆ ಆಯ್ಕೆಯಾಗುತ್ತಿರುವುದು ಉತ್ತಮ ಬೆಳವಣಿಗೆ ಎಂದು ರಾಜ್ಯ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿ ಹಾಗೂ ದಾವಣಗೆರೆ ಜಿಲ್ಲಾ ಆಡಳಿತಾತ್ಮಕ ನ್ಯಾಯಮೂರ್ತಿ ರವಿ ವಿ.ಹೊಸಮನಿ ಮೆಚ್ಚುಗೆ ವ್ಯಕ್ತಪಡಿಸಿದರು.

ನಗರದವಕೀಲರಸಾಂಸ್ಕೃತಿಕಭವನದಲ್ಲಿ ಶನಿವಾರ ಜಿಲ್ಲಾ ವಕೀಲರ ಸಂಘದಿಂದ ಹಮ್ಮಿಕೊಂಡಿದ್ದ ಅಂತಾ ರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಮಹಿಳೆಯರು ವೃತ್ತಿಜೀವನದಲ್ಲಿ ಬೆಳೆಯುತ್ತಿರುವಾಗ ಮದುವೆ, ಕೌಟುಂಬಿಕ ಒತ್ತಡಗಳು ಎದುರಾಗುವುದು ಸಹಜ. ಇಂತಹ ಸಂದರ್ಭಗಳಲ್ಲಿ ಧೃತಿಗೆಡದೆ ತಮ್ಮ ಗುರಿಯತ್ತ ಗಮನ ಹರಿಸಬೇಕು ಎಂದರು.

> ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಮಹಿಳೆಯರು ಉದ್ಯೋಗಕ್ಕೆ ಹೋಗುವುದು ಅನಿವಾರ್ಯವಾಗಿದೆ. ಅಲ್ಲದೆ, ಮಕ್ಕಳಲ್ಲಿ ಓದಿನ ಒತ್ತಡ ಮತ್ತು ಆತಂಕದ ಸಮಸ್ಯೆಗಳು ಹೆಚ್ಚಾಗುತ್ತಿರುವುದರ ಕಳವಳಕಾರಿ.
> ■ ಡಿ.ಕೆ.ವೇಲಾ, ನ್ಯಾಯಾಧೀಶೆ

ಡಾ.ಸುಮನ್ ಮಾತನಾಡಿ, ವಿಶೇಷ ಮಕ್ಕಳ ಆರೈಕೆಗಾಗಿ ಪೋಷಕರು ಸಾವಿರಾರು ರಾತ್ರಿಗಳನ್ನು ನಿದ್ರೆಯಿಲ್ಲದೆ ಕಳೆಯುತ್ತಾರೆ. ಅಂತಹ ಕುಟುಂಬಗಳಿಗೆ ಸಮಾಜವು ಸಹಾನುಭೂತಿ ಹಾಗೂ ಪ್ರೋತ್ಸಾಹ ನೀಡಬೇಕು ಎಂದರು.

ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶೆ ಡಿ.ಕೆ.ವೇಲಾ, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಟಿ.ಆರ್. ಗುರುಬಸವರಾಜ್, ಕಾನೂನು ಗೌರವ ಪ್ರಧಾನಕಾರ್ಯದರ್ಶಿ ಎನ್.ವಿ.ಭವಾನಿ, ಮಂಜುಳಾ, ವಿಜಯಮಾಲಾ ಉಪಸ್ಥಿತರಿದ್ದರು.

ಮಲೆಬೆನ್ನೂರಿನಲ್ಲಿ ಹನುಮಂತ ದೇವರ ರಥೋತ್ಸವ

• **ಮಲೆಬೆನ್ನೂರು:** ಸಮೀಪದ ಹರಳಹಳ್ಳಿಯ ಹನುಮಂತ ದೇವರ ರಥೋತ್ಸವ ಶನಿವಾರ ಬ್ರಾಹ್ಮಿ ಮುಹೂರ್ತದಲ್ಲಿ ನೆರವೇರಿತು. ಮಂಗಳವಾದ್ಯಗಳೊಂದಿಗೆ ಆನೆ ಉತ್ಸವ ನಡೆಯಿತು.

ಉತ್ಸವ ಮೂರ್ತಿ ಗ್ರಾಮ ಪ್ರದಕ್ಷಿಣೆ, ಹರಸೇವೆ, ಅಷ್ಟ ದಿಕ್ಕುಗಳಿಗೆ ಬಲಿದಾನದ ನಂತರ ಉತ್ಸವಮೂರ್ತಿ ರಥಾರೋಹಣವಾಯಿತು.

ಭಕ್ತ ಸಮೂಹ ಆಂಜನೇಯ ವರದ ಗೋವಿಂದ ಎಂಬ ಘೋಷದೊಂದಿಗೆ ರಥ ಎಳೆದರು. ಡೊಳ್ಳು, ನಾಸಿಕ್ ಡೋಲು, ಸಮಾಳ, ಚಕ್ರವಾದ್ಯ, ಹಲಗೆ ಮೇಳ, ಭಜಂತ್ರಿ, ತಮಟೆ ಹಾಗೂ ಭಜನಾತಂಡಗಳು ಉತ್ಸವಕ್ಕೆ ಕಳೆ ತಂದಿದ್ದವು. ದೇವಾಲಯವನ್ನು ವಿದ್ಯುತ್ ದೀಪಗಳಿಂದ ಹಾಗೂ ರಥವನ್ನು ಹೂ, ಧ್ವಜ ಪತಾಕೆಗಳಿಂದ ಅಲಂಕರಿಸಲಾಗಿತ್ತು.

ಮುಳ್ಳು ಗದ್ದುಗೆ ಉತ್ಸವ: ಗೋಧೂಳಿ ಸಮಯದಲ್ಲಿ ಮುಳ್ಳುಗದ್ದುಗೆ ಉತ್ಸವದಲ್ಲಿ ಭಕ್ತರು ಕಾರೆಮುಳ್ಳು ತುಳಿದು ಭಕ್ತಿ ಸಮರ್ಪಿಸಿದರು. ಪೂಜಾವಿಧಿಗಳ ನಂತರ ಹನುಮಂತ ದೇವರ ಉತ್ಸವಮೂರ್ತಿ, ಹರಕೆ ಹೊತ್ತು ಭೂತದ ಹಲಗೆ ಹಿಡಿದವರು ಮೊದಲು ಮುಳ್ಳಿನ ಮೇಲೆ ಆವೇಶ ಭರಿತರಾಗಿ ಸಾಗಿ ಬಂದರು. ಹರಕೆ ಹೊತ್ತವರು ಒಬ್ಬೊಬ್ಬರಾಗಿ ಸಾಲಾಗಿ ರಾಮ ರಾಮ ಗೋವಿಂದ ಎನ್ನುತ್ತಾ ಮುಳ್ಳಿನ ಮೇಲೆ ಆವೇಶ ಭರಿತರಾಗಿ ಕೂಗುತ್ತಾ ನಡೆದು ಬಂದರು. ಭಕ್ತರು ದೇವಾಲಯದಲ್ಲಿ ಹರಸೇವೆ, ಮುಡಿ ಅರ್ಪಣೆ ಹಾಗೂಬಾಯಿಬೀಗದ ಹರಕೆ ಸಮರ್ಪಿಸಿದರು.



IN THE COURT OF THE PRL SENIOR CIVIL JUDGE AND JMFC AT ANEKAL
O.S. No. 989/2023
BETWEEN : SRI V.T. RAJU ...PLAINTIFFS
AND : D14. SRI. M. MUNIYAPPA S/o Dodda abbaiah Aged about 80 years Residing at : Jakkasandra Village, Begur Hobli, Bangalore South Taluk, Bangalore District. ...DEFENDANT
SUIT SUMMONS / NOTICE TO DEFENDANT No.14 UNDER ORDER 5 RULE 20 OF C.P.C.
Whereas the plaintiff has instituted a suit against the Defendants for the relief of Partition and Declaration and for other reliefs in respect of the Sy No.7/2, measuring 0-29.08 guntas and Sy.No.7/3 Measuring 0-06.08 guntas and Sy No 32/2 measuring 1 Acre 32 Guntas, all properties are situated at : Choodenahalli Village, Kasaba Hobli, Anekal Taluk, Bangalore District, in the above case. Hence you are hereby notice to appear in this Hon'ble Court in person or by an Advocate duly instructed on **24/07/2026 at 11.00 A.M.** to answer the claim. Take notice that in default of your appearance on the day above mentioned, the suit will be heard and determined in your absence.
Given under my hand and seal of the Court this is the 25th Day of March 2026.
By Order of the Court
Sd/- Chief Ministerial Officer
Senior Civil Judge & JMFC Court, Anekal
Advocate for Plaintiff.
SRI. H. SUBRAMANYA. M, B.A. LL.B., Advocate,
Office at : No.3, Behind Raghavendra Bhavan, Next to PLD Bank, Attibele Road, Anekal Town, Bangalore District -562106

CHANGE OF NAME
I, AMAR S S/o Sri.Shankar, aged about 34 years, residing at No.22, 8th B main, 4th Cross, BTM I Stage, NIMHANS, HSCB Layout, Bengaluru - 560029, have changed my name from **AMAR S** to **AMAR S RAO,** vide affidavit dated 28/3/2026 sworn to before Puttaramaiah Advocate and Notary Bangalore.

CHANGE OF NAME
I, SHASHIKUMAR G S/o Gopal, aged about 36 years, residing at Boovanahalli Village, Doddasanne, Bengaluru Rural District, Karnataka-562110, have changed my name from **SHASHIKUMAR** to **SHASHIKUMAR G** and my Father Correct name is **GOPAL,** vide affidavit dated 28/3/2026 sworn to before R S Vijay Advocate and Notary Bangalore.

CHANGE OF NAME
I, **Raisa Kouser,** W/o. Matheen Pasha, aged about 27 years, residing at No. 62.B, Hunasanahalli Main Road, Yarab Nagar, Mohalla, Opp. Marriam School, Ramanagara-562159, Bengaluru South District, Karnataka State, India, do hereby declare that I have changed my name from **RAISA KOUSER MOHAMMED ISMAIL** to **Raisa Kouser,** vide affidavit dated 28.03.2026, sworn to before T.V. Indira, Advocate & Notary Public, Govt. of India, Bengaluru.

CHANGE OF NAME
I, **CHAITRA DEVATHA,** aged about 50 years, W/o. Pratap L Devatha, No. 52 G11, Sri Vatsav Prasiddi Bikasipura Main Road, Yelachenahalli, Bengaluru-560111, do hereby declare that I have changed my name from **CHAITRA T R (CHAITRA TUNGA RAMANANDA)** to **CHAITRA DEVATHA,** vide affidavit dated 28.03.2026, sworn to before K.V. Mani, Advocate & Notary, Govt. of India, Bengaluru.

CHANGE OF NAME
I, **VISHWAJIT UMESH TANDEL,** S/o. Umesh Anant Tandel, No. 876/1F, Jaynagar, Khursawada Kajubag, Karwar, Uttara Kannada-581301, do hereby declare that I have changed my name from **VISHWAJIT** to **VISHWAJIT UMESH TANDEL,,** vide affidavit dated 28.03.2026, sworn to before K.V. Mani, Advocate & Notary, Govt. of India, Bengaluru.

CHANGE OF NAME
I, **Rida Ul Haya,** D/o. Mohammed Ismail Pasha, aged about 25 years, residing at No. 19/1/98, Mahaboob Nagar, Ramanagar-562159, Bengaluru South District, Karnataka, State, India, do hereby declare that I have changed my name from **Rida Ul Haya Mohammed Ismail** to **Rida Ul Haya,** vide affidavit dated 28.03.2026, sworn to before T.V. Indira, Advocate & Notary Public, Govt. of India, Bengaluru.

:: ಓದುಗರ ಗಮನಕ್ಕೆ ::
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

PUBLIC NOTICE
Notice is hereby given to the general public that my client is intending to purchase the immovable property more fully described in the Schedule hereunder from its present owner(s).
All persons having any right, title, interest, claim, lien, charge, mortgage, inheritance, lease, tenancy, easement or any other encumbrance whatsoever over the Schedule Property are hereby required to notify the same in writing along with documentary proof to the undersigned within 15 (Fifteen) days from the date of publication of this notice.
If no objections/claims are received within the stipulated period, it shall be presumed that the property is free from all encumbrances and claims, and the proposed transaction shall be completed accordingly. Any claims received thereafter shall not be entertained.
SCHEDULE PROPERTY
ALL THAT PIECE AND PARCEL OF the agricultural land bearing Sy.No.49 measuring 8 Acres and measuring 2 Acre 34 Guntas and measuring 2 Acre 26 Guntas, situated at Ellanahalli Village, Begur Hobli, Bangalore South Taluk, Bangalore.
Place : Bangalore Date : 28.03.2026
Advocate / Authorized Signatory
(SMT. MAMATHA)
No.201, HSR Layout, 2nd Sector, Bangalore.
Contact Details : 9187316155

IN THE COURT OF THE DEPUTY COMISSIONER AT KOLAR.
RAP. No.: 277/2025.
Between:
Appellants : Nanditha. M & another.
And
Respondents : Rajappa & others.
NOTICE TO RESPONDENTS NO.1 TO 3 AND 6
1. **Rajappa @ Rajanna** S/o Chikkanna. A/a 46 years. 2. **Ravi** S/o Chikkanna. A/a 35 years. 3. **Smt. Kavitha** D/o Chikkanna. A/a 35 years. Both are R/o S. Madivala village, Athibele Hobli, Anekal Taluk, Bangalore Rural District. 6. **Ravichandra** S/o Narayanappa. A/a 45 years, R/o Pura village, Lakkur Hobli, Malur Taluk.
Whereas the Appellant have filed the above appeal to set-siding order of MR No:T6 performance of the respondent and you are hereby summoned to appear before the Hon'ble deputy comissioner at Kolar **on : 07.04.2026** at 3.00 PM, either in person or by pleader to answer the question to the same failing which the suit will be heard and determined as exparte.
SCHEDULE PROPERTY.
1. Land bearing Survey No.139/5, measuring 30 guntas and Sy no:53/1 measuring 17 guntas situated at Pura village, Lakkur Hobli Malur Taluk, Give under my hand and seal of court on this the day of 10.03.2026.
By order of the court
THE DEPUTY COMISSIONER Kolar District.
Kolar, Date: 10.03.2026.

IN THE COURT OF ASSISTANT COMMISSIONER, TUMAKURU SUB-DIVISION, TUMAKURU.
RA (T) : 781/2020.
Appellant : K.G.Rajanna.
V/s
Respondents : The Tahsildar, Tumakuru Taluk and others.
PAPER PUBLICATIOIN
To, R-2 : **G.Boregowda** S/o Late Gangappa, Aged about 76 years. **R-3 : Gangadharaiah** S/o Late Gangappa, Aged about 64 years. **R-4 : G.Gangadharaiah** S/o Late Gangaboraiah, Aged about 50 years. **R-5 : Veeregowda @ Eregowda,** S/o Late Gangaboraiah, Aged about 48 years. **R-6 : Siddegowda** S/o Late Gangaboraiah Aged about 44 years. **R-7 : Shivakumar** S/o Late Gangaboraiah, Aged about 44 years. **R-12 : Jayamma** D/o Late Gangaboraiah, W/o Ningaiah, aged about 52 years, R/o Kankuppe Village, Hebbur Hobli, Tumakuru Taluk. **R-13 : Renukamma** D/o Late Gangaboraiah, W/o Gangaiah, aged about 46 years, R/o Chikkagollahalli Village, Hebbur Hobli, Tumakuru Taluk. **R-14 : Rathnamma** D/o Late Gangaboraiah, W/o Thimmegowda, Aged about 40 years, R/o Lalapura Village, Thippasandra Hobli, Magadi Taluk., Ramanagara District. **R-15 : Bhgyamma** D/o Late Kenchaboraiah, W/o Rajanna, aged about 55 years, R/o Kamalapura village, Hebbur Hobli, Tumakuru Taluk. **R-16 : Mahadevaiah** S/o Late Kenchaboraiah, Aged about 53 years. **R-17 : Siddegowda** S/o Late Kenchabraiah Agd about 51 years. **R-18 : Ammaiah** D/o Late Kenchaboraiah, W/o Nagaraju, Aged about 49 years, R/o C.S.Pura Village and Hobli, Gubbi Taluk., Tumakurt District. **R-19 : Nagaraja** S/o Late Kenchaboraiah, Aged about 47 years. **R-20 : Gangappa** S/o Nanjundaiah, Aged about 55 years.
The respondents No. 2 to 7 and 17 to 20 are R/o Kanakuppe Village, Hebbur Hobli, Tumakuru Taluk.
NOTICE
The appellant preferred the appeal against the respondents in RA(T)781/2020 before the Hon'ble Assistant Commissioner, Tumakuru for set-aside the MR order passed by the respondent No.1 in MR 31/1995-96, 7/1998-99, 10/1998-99, 5/1997-98, MR H14/2013-14 dated: 13/12/2013 pertaining to land bearing Sy. No. 2/2/ totally measuring 0-32.00 guntas and MR 5/1997-98 pertaning to land bearing Sy. No. 2/13 mesuring 0-24.00 guntas, situated at Kanakuppe Village, Hebbur Hobli, Tumakuru Taluk. That you are respondent No. 2 to 7 and 12 to 20 in the above case. Hence your appearance is required in person or through pleader **on : 09/04/2026** at 3.00 pm before the Hon'ble Assistant Commissioner, Tumakuru to defend the case and in default of your appearance on the day specified, the case will be heard by placing you ex-parte.
Given under my hand the seal of the court this day of 27.03.2026.
HON'BLE ASSISTANT COMMISSIONER, AT TUMAKURU.
Advocate for Petitioner.: **Thimmaiah M.** BA, LLB, Advocate, T.G. Associates, Shop No.22, 1st floor, Karibasaveshwara Complex, Horapete Main Road, Horapete, Tumakuru-572101 Mob: 9972338880.

IN THE COURT OF THE CITY CIVIL JUDGE AT BENGALURU (CCH -65)
O.S. No. 1549/2022
BETWEEN : **Sri. G. Jagadish Kumar** S/o Ganesh Aged about 35 years R/at No. 106, 10th Main, 4th Block, 6th "A" Cross, HBR Layout, Hennur Village, Bengaluru -560 043
PLAINTIFF
AND : Sri Shakthivel and others DEFENDANTS
SUMMONS / NOTICE TO DEFENDANT NO 2 AND 3
2. Smt. Uma Rani. W/o Shakthivel Aged about 45 years R/at No. 27/1, Slaughter House Road, 'F' Street, Shivajinagar, Bengaluru -560 051
3. Sri. P. Karthik Father name not known Aged about 35 years R/at No. 1/1A, Durgadevinagar, 5th Cross, Tondaiarpet, Chennai -600081
Whereas the plaintiff have filed the money recovery suit against the defendants for recovery of Rs. 10,29,000/- along with interest at 24% per annum from the date of the suit till realization. Hence you are hereby summoned to appear before this Hon'ble Court, either in person or through the pleader on the **19th day of June 2026 at 11.00 A.M.** to answer the same, failing which the matter will be heard ex-parte.
Given under my hand and seal of the Court on this the 16th day of March 2026.
By Order of the Court
Sd/- Senior Sheristedar
City Civil Court, Bengaluru
ADVOCATE FOR PLAINTIFF
Sri. Vickramaditan Advocate
Office at No. 5, Sundaramurthy Road, Cox Town, Bengaluru -560 005

Techfino Capital Private Limited
TCPL TECHFINO CAPITAL PVT LTD
1st Floor Smartworks DSR Technocube, Varthur Road, Thubarahalli, Bangalore - 560037. Web: www.techfino.in
CIN : U65999KA2018PTC114532

ಭದ್ರತಾ ಹಿತಾಸಕ್ತಿ ಜಾರಿಗೆ ಸಂಬಂಧಿಸಿದ ನಿಯಮಗಳು, 2002 - ಅನುಬಂಧ ಪಿಕ (ನಿಯಮ 8(1) ಪ್ರಕಾರ)

ಯಾಕಂದರೆ, M/s. Techfino Capital Private Limited ಸಂಸ್ಥೆಯ ಅಧಿಕೃತ ಅಧಿಕಾರಿ ಆಗಿರುವ ನಾನು, ಭದ್ರತಾ ಹಿತಾಸಕ್ತಿ (ಜಾರಿ) ಕಾಯ್ದೆ, 2002 (54/2002) ಅಡಿಯಲ್ಲಿ, ಕಲಂ 13(2) ಹಾಗೂ ನಿಯಮ 3ರಡಿ ನೀಡಲಾದ ಅಧಿಕಾರವನ್ನು ಬಳಸಿ, 10/01/2026 ರಂದು ಬೇಡಿಕೆಸೂಚನೆಯನ್ನು ಹೊರಡಿಸಿ ಕೆಳಗಿನ ಸಾಲಗಾರರಿಗೆ ಸೂಚಿಸಿದ್ದೆನು 1.ಶ್ರೀಮತಿ ಜೆ.ಎನ್. ಶಂಧವಿ (ಪತಿ: ಲೇಟ್ ಕೆ.ಪಿ. ವಿಜಯಕುಮಾರ್), 2.ಶ್ರೀ ಕೆ.ಪಿ. ಮಂಜುನಾಥ್ , 3.ಶ್ರೀಮತಿ ಸೌಭಾಗ್ಯ ಸಾಲ ಖಾತೆ ಸಂಖ್ಯೆ:MYS001-000000241ಮೇಲ್ಕಂಡವರು ರೂ. 23,14,407.43/- (ರೂಪಾಯಿ ಇಪ್ಪತ್ತೂರು ಲಕ್ಷ ಹದಿನಾಲ್ಕು ಸಾವಿರ ನಾಲ್ಕು ನೂರು ಏಳು ಮತ್ತು ನಲವತ್ತೂರು ಪೈಸೆ ಮಾತ್ರ) ಮೊತ್ತವನ್ನು ಸೂಚನೆ ಪಡೆದ ದಿನಾಂಕದಿಂದ 60 ದಿನಗಳೊಳಗೆ ಪಾವತಿಸಲು ಕೋರಲಾಗಿತ್ತು.
ಆದರೆ, ಸಾಲಗಾರರು ಆ ಮೊತ್ತವನ್ನು ಪಾವತಿಸಲು ವಿಫಲವಾದ ಹಿನ್ನೆಲೆಯಲ್ಲಿ, ಈ ಮೂಲಕ ಸಾಲಗಾರರಿಗೆ ಮತ್ತು ಸಾರ್ವಜನಿಕರಿಗೆ ತಿಳಿಸಲಾಗುವುದು ಏನೆಂದರೆ, ಕಲಂ 13(4) ಹಾಗೂ ನಿಯಮ 8ರಡಿ ನೀಡಲಾದ ಅಧಿಕಾರದ ಆಧಾರದ ಮೇಲೆ, 20 ಮಾರ್ಚ್ 2026ರಂದು ಕೆಳಗಿನ ವಿವರಿಸಲಾದ ಆಸ್ತಿಯನ್ನು ನಾನು ಸ್ವಾಧೀನಕ್ಕೆ ತೆಗೆದುಕೊಂಡಿದ್ದೇನೆ.
ಸಾಲಗಾರರು ಮತ್ತು ಸಾರ್ವಜನಿಕರು ಈ ಆಸ್ತಿಯೊಂದಿಗೆ ಯಾವುದೇ ವ್ಯವಹಾರ ಮಾಡಬಾರದು ಎಂದು ಎಚ್ಚರಿಸಲಾಗುತ್ತದೆ. ಈ ಆಸ್ತಿಯೊಂದಿಗೆ ನಡೆಯುವ ಯಾವುದೇ ವ್ಯವಹಾರಗಳು M/s. Techfino Capital Private Limited ಸಂಸ್ಥೆಯ ರೂ. 23,14,407.43/- ಹಾಗೂ ಅದರ ಬಡ್ಡಿ ಮೊತ್ತದ ಹಕ್ಕಿಗೆ ಒಳಪಟ್ಟಿರುತ್ತವೆ.
ಸಾಲಗಾರರ ಗಮನಕ್ಕೆ ತರಲಾಗುವುದು ಏನೆಂದರೆ, ಕಾಯ್ದೆಯ ಕಲಂ 13(8) ಪ್ರಕಾರ, ಭದ್ರತಾ ಆಸ್ತಿಯನ್ನು ಮರಳಿ ಪಡೆಯಲು ಲಭ್ಯವಿರುವ ಅವಧಿ ಕುರಿತು ಅವರು ಗಮನ ಹರಿಸಬೇಕು.
ಆಸ್ತಿಯ ವಿವರಣೆ
ಮಂಡ್ಯ ಜಿಲ್ಲೆ, ಕೃಷ್ಣರಾಜಪೇಟೆ ತಾಲೂಕು, ಕಿರಗಂದೂರು ಹೋಬಳಿ, ಬಿ.ಹೊಸೂರು ಗ್ರಾಮ ಪಂಚಾಯತ್ ವ್ಯಾಪ್ತಿಯ ಕೆ.ಗೌಡಗೆರೆ ಗ್ರಾಮದ ಜೆ.ಕೆಬ್ಬಹಳ್ಳಿ ಪ್ರದೇಶದಲ್ಲಿ ಇರುವ, ಪಿಐಡಿ ಸಂಖ್ಯೆ 152100404700420071 ಹೊಂದಿರುವ, ಆಸ್ತಿ ಸಂಖ್ಯೆ a366/366, ಒಟ್ಟು 249.72 ಚದರ ಮೀಟರ್ ವಿಸ್ತೀರ್ಣದ ಜಮೀನು, ಇದರ ಗಡಿಗಳು ಹೀಗಿವೆ,
ಪೂರ್ವ : ಉಳಿದ ಸ್ವಂತ ಜಾಗ ಮತ್ತು ರಸ್ತೆ, ಪಶ್ಚಿಮ : ಸ್ವಂತ ಜಾಗ,
ಉತ್ತರ : ಸ್ವಂತ ಜಾಗ, ದಕ್ಷಿಣ : ಸ್ವಂತ ಜಾ
ದಿನಾಂಕ : 20/03/2026 M/s. Techfino Capital Private Limited
ಸ್ಥಳ : ಬೆಂಗಳೂರು ಅಧಿಕೃತ ಅಧಿಕಾರಿ

IN THE COURT OF THE II ADDL. SENIOR CIVIL JUDGE , BENGALURU RURAL. AT BENGALURU
G & W.C. No. 19 / 2026
BETWEEN: SMT. MEENAKSHI GUPTA W/o Mr. Santosh Kumar D/o Mr. Jagdish Chandra Gupta, Aged about 49 years, Residing at: 14103, Prestige Lakeside Habitat, Gunjur, Bengaluru-560087. Presently R/at **SMT. MEENAKSHI GUPTA,** W/o Mr. Santosh Kumar D/o Mr. Jagdish Chandra Gupta, Aged about 49 years, R/at: 2026, tower-2, Prestige lakeside Habitat, Gunjur, Bangalore-560087. ... PETITIONER
AND: **MR. SANTOSH KUMAR,** S/o Late Mr. Gulabchand Gupta Aged about 49 years, Residing at: 14103, Prestige Lakeside Habitat, Gunjur, Bengaluru-560087 ... **RESPONDENT**
PUBLIC NOTICE
Whereas, the Petitioner above named has filed the above Petition under section 7 and 25 of Guardians and Wards Act 1980 prays to permit the Petitioner as Natural guardian of the minor children "Master Aditya Gupta" who is born on 09.03.2011 until he attain majority and to restrain the Respondent or anyone on his behalf from disturbing the peaceful custody of the Petitioner over the minor children.
The Hon'ble Court has fixed the date on **29-04-2026** at 11:00 AM for hearing the above said petition, hence, any interested person/s are hereby called upon to appear to before the Hon'ble Court on the said day and file their objection if any, in person or through pleader duly instructed, failing which the matter will be heard and determined as Exparte.
Given under my hand and seal of this court on 28-03-2026
By order of the court, Chief Ministerial office, Senior Civil Judge Court, Bangalore Rural District.
HARSHITHA SHAH,
KISHAN DUTT KALASKAR, Advocates
No.74, 1st Floor, 6th Cross, Malleswaram, Bangalore-560 003. Mob: 9987344589

DRAFT PAPER PUBLICATION
IN THE COURT OF DISTRICT & SESIONS JUDGE, AT DODDABALLAPUR, BANGALORE RURAL.
P and S C : 10008/2026.
BETWEEN : 1. Sri GIRISHA K S/O KARIYAPPA, Aged About 41 Years, Shravanur, Dodcabelavangala Hobli, Doddaballapur Taluk. 2. Sri.KARIYAPPA S/o Gangappa, Aged About 67 Years, Shravanur, Doddabelavangala Hobli, Doddaballapur Taluk. ...PETITIONERS
AND:
NILL. RESPONDENT
PUBLIC NOTICE
In the matter of the last Will and Testament dated 15.10.1997 executed by late Smt. Narasamma, wife of late Lakshmaiah, who died **on 15.02.2002,** ordinarily residing at Shravanur, and in respect of the petition schedule properties situated at Shravanur Village, Doddaballapur Taluk, Doddabelavangala Hobli.
Notice is hereby given that Petitioner No.1 and Petitioner No.2 have filed the above Probate / Letters of Administration petition under Section 276 of the Indian Succession Act, 1925, seeking grant of Probate Letters of Administration with Will annexed.
Interested parties are hereby warned to appear in this court, in, person/persons or by pleader duly instructed on the day of **date 06.06.2026** 11'o clock to show cause against the petitioner, failing wherein the appearance will be heard and declared as ex-parte.
SCHEDULE
SCHEDULE "A" PROPERTY
All the piece and parcel of the Agriculture property bearing Sy No.89 to an Extent of 25 guntas situated in shravanur village, Doddaballapur Taluk, Bangalore Rural District. East : Reaming property of Sy No.89. West : Government Sites. North : Properties of Gangaiah and Neelakanataiah. South : Government Road.
SCHEDULE "B" PROPERTY
All the piece and parcel of the House Property bearing in Sy No.89 situated in shravanur village situated in village, Doddaballapur Taluk, Bangalore Rural District. East : Schedule "A" property bequeathed to Girisha (Petitioner No.1), West : Janatha sites, North : Properties of Gangaiah and Neelakanataiah, South :Government Road.
Given under my hand seal of the court on this the 27th day of March 2026.
By Order of the Court
Asst Registar,
IVth Addl District and Sessions Court
Doddaballapur, Bangalore Rural.
Advocate for Petitioners :

ಕಿರುಸುದ್ದಿ

ಇಬ್ಬರು ಗಾಂಜಾ ವ್ಯಸನಿಗಳ ಬಂಧನ

• **ಹುಣಸೂರು:** ಎರಡು ಪ್ರತ್ಯೇಕ ಸ್ಥಳಗಳಲ್ಲಿ ಗಾಂಜಾ ಸೇವನೆ ಮಾಡುತ್ತಿದ್ದ ಇಬ್ಬರು ಯುವಕರನ್ನು ನಗರ ಠಾಣೆ ಪೊಲೀಸರು ಬಂಧಿಸಿ ನ್ಯಾಯಾಂಗ ಬಂಧನಕ್ಕೊಪ್ಪಿಸಿದ್ದಾರೆ. ಹುಣಸೂರು-ರತ್ನಪುರಿ ರಸ್ತೆಯ ಸಲೀಂ ಪ್ಯಾಲೆಸ್ ಎದುರಿನ ಟೀ ಅಂಗಡಿ ಬಳಿ ಹಾಗೂ ಶಬ್ಬೀರ್‌ನಗರದ ರಜಾಕ್ ಮೊಹಲ್ಲಾದ ಶಾದಿ ಮಹಲ್ ಬಳಿಯಲ್ಲಿ ಯುವಕರು ಗಾಂಜಾ ಸೇವಿಸುತ್ತಿರುವ ಬಗ್ಗೆ ಬಂದ ಖಚಿತ ಮಾಹಿತಿ ಮೇರೆಗೆ ಡಿವೈಎಸ್‌ಪಿ ರವಿ ಮತ್ತು ಇನ್ಸ್ಪೆಕ್ಟರ್ ಸಂತೋಷ್ ಕಶ್ಯಪ್ ಮಾರ್ಗದರ್ಶನದಲ್ಲಿ ಎಸ್.ಐ.ತಾಜುದ್ದೀನ್ ಟಿ.ಎಂ.ನೇತೃತ್ವದ ತಂಡ ದಿಡೀರ್ ಕಾರ್ಯಾಚರಣೆ ನಡೆಸಿ ಇಬ್ಬರು ಯುವಕರನ್ನು ವಶಕ್ಕೆ ಪಡೆದು, ಪ್ರಕರಣ ದಾಖಲಿಸಿ ನ್ಯಾಯಾಂಗ ಬಂಧನಕ್ಕೊಪ್ಪಿಸಲಾಗಿದೆ ಎಂದು ಡಿವೈಎಸ್‌ಪಿ ರವಿ ತಿಳಿಸಿದ್ದಾರೆ. ಕಾರ್ಯಾಚರಣೆಯಲ್ಲಿ ಮುಖ್ಯಪೇದೆಗಳಾದ ಎಚ್.ಎನ್.ಅರುಣ್, ಮಂಜುನಾಥ್, ಪೇದೆ ಇರ್ಫಾನ್ ಮತ್ತಿತರರಿದ್ದರು.

ಅಪಘಾತ: ವ್ಯಕ್ತಿ ಸಾವು

• **ಮಳವಳ್ಳಿ:** ತಾಲೂಕಿನ ನೆಲಮಾಕನಹಳ್ಳಿ ಗೇಟ್ ಬೈಕ್‌ಗೆ ಗೂಡ್ಸ್ ವಾಹನ ಡಿಕ್ಕಿಯಾಗಿ ಬೈಕ್ ಸವಾರ ಮದ್ದೂರು ತಾಲ್ಲೂಕಿನ ಅಣ್ಣೂರು ಗ್ರಾಮದ ನಾರಾಯಣ(48) ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ. ತಮ್ಮ ಬೈಕ್ ನಲ್ಲಿ ನಾರಾಯಣ ಕಾರ್ಯನಿಮಿತ್ತ ತೆರಳುತ್ತಿದ್ದ ವೇಳೆ ಗೂಡ್ ವಾಹನ ಡಿಕ್ಕಿ ಹೊಡೆದಿದೆ. ಘಟನೆಯಲ್ಲಿ ಗಂಭೀರವಾಗಿ ಗಾಯಗೊಂಡಿದ್ದ ನಾರಾಯಣ ಸ್ಥಳದಲ್ಲಿಯೇ ಸಾವನ್ನಪ್ಪಿದ್ದಾರೆ. ಘಟನಾ ಸ್ಥಳಕ್ಕೆ ಗ್ರಾಮಾಂತರ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದರು. ಈ ಸಂಬಂಧ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಾಲ ಬಾಧೆ: ರೈತ ಆತ್ಮಹತ್ಯೆ

• **ಮೈಸೂರು:** ಸಾಲ ಬಾಧೆಯಿಂದ ರೈತರೊಬ್ಬರು ಕೀಟ ನಾಶಕ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಜಿಲ್ಲೆಯ ಪಿರಿಯಾಪಟ್ಟಣ ತಾಲ್ಲೂಕಿನ ಸತ್ಯಗಾಲ ಎ ಕಾಲೊನಿ ಗ್ರಾಮದಲ್ಲಿ ಜರುಗಿದೆ. ಗ್ರಾಮದ ನಿವಾಸಿ ಸಂಪಂಗಿ (60) ಆತ್ಮಹತ್ಯೆ ಮಾಡಿಕೊಂಡವರು. ಜಂಟಿ ಖಾತೆಯಲ್ಲಿದ್ದ 5 ಎಕರೆ ಜಮೀನಿನಲ್ಲಿ ಇವರು ತಂಬಾಕು ಹಾಗೂ ಜೋಳ ಬೆಳೆಯುತ್ತಿದ್ದರು. ಇದಕ್ಕಾಗಿ ಮಹಿಳಾ ಸಂಘದಲ್ಲಿ 2 ಲಕ್ಷ ರೂ. ಮನೆ ಮೇಲೆ 7 ಲಕ್ಷ ರೂ. ಹಾಗೂ 4 ಲಕ್ಷ ರೂ.ಗಳಿಗೂ ಹೆಚ್ಚು ಕೈ ಸಾಲ ಮಾಡಿದ್ದರು. ಪ್ರತಿ ವರ್ಷ ಬೆಳೆ ಸರಿಯಾಗಿ ಬಾರದೆ ಸಾಲ ಹೆಚ್ಚಾಗಿತ್ತು. ಈ ವರ್ಷ ತಂಬಾಕು ಬೆಲೆ ಕಡಿಮೆಯಾಗಿ ಮನನೊಂದು ಜಮೀನಿನ ಬಳಿ ಕೀಟನಾಶಕ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ್ದರು. ಅಸ್ವಸ್ಥಗೊಂಡಿದ್ದ ಅವರನ್ನು ಪಿರಿಯಾಪಟ್ಟಣದ ಖಾಸಗಿ ಆಸ್ಪತ್ರೆಗೆ ದಾಖಲಿಸಿ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಕೆ.ಆರ್.ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ, ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ ಎಂದು ಮೃತರ ಪತ್ನಿ ತಿಮ್ಮಕ್ಕ ಪಿರಿಯಾಪಟ್ಟಣ ಠಾಣೆಯಲ್ಲಿ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ. ಘಟನೆ ಸಂಬಂಧ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಕಸಾಯಿಖಾನೆಗೆ ಸಾಗಿಸುತ್ತಿದ್ದ 15 ಕರುಗಳ ರಕ್ಷಣೆ

• **ಮೈಸೂರು:** ಅಕ್ರಮವಾಗಿ ಕಸಾಯಿ ಖಾನೆಗೆ ರಾಸುಗಳನ್ನು ಸಾಗಿಸುತ್ತಿದ್ದ ಆರೋಪಿಯೊಬ್ಬನನ್ನು ದಕ್ಷಿಣ ಗ್ರಾಮಾಂತರ ಠಾಣೆ ಪೊಲೀಸರು ಬಂಧಿಸಿದ್ದು, 15 ಕರುಗಳನ್ನು ರಕ್ಷಿಸಿದ್ದಾರೆ. ಮೈಸೂರಿನ ಗೌಸಿಯಾನಗರದ ನಿವಾಸಿ ಜಮೀರ್ ಬಂಧಿತ ಆರೋಪಿ. ಕರುಗಳನ್ನು ಆಟೋದಲ್ಲಿ ಅಕ್ರಮವಾಗಿ ಕಸಾಯಿ ಖಾನೆಗೆ ಸಾಗಿಸುತ್ತಿದ್ದಾರೆ ಎಂದು ಸಾರ್ವಜನಿಕರು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಈ ಸಂಬಂಧ ಪೊಲೀಸರ ತಂಡ ಮೈಸೂರು ತಾಲ್ಲೂಕಿನ ಹೊಸಹುಂಡಿ ಗ್ರಾಮದ ಬಳಿ ಕಾರ್ಯಾಚರಣೆ ನಡೆಸಿ ಗೂಡ್ಸ್ ಆಟೋವನ್ನು ತಡೆದು ನಿಲ್ಲಿಸಿದ್ದಾರೆ. ಆಟೋವನ್ನು ಪರಿಶೀಲಿಸಿದ ವೇಳೆ ಸುಮಾರು 15 ಕರುಗಳನ್ನು ಸಾಗಿಸುತ್ತಿದ್ದುದು ಕಂಡುಬಂದಿದೆ. ಕರುಗಳನ್ನು ನಂಜನಗೂಡು ಸಂತೆಯಲ್ಲಿ ಖರೀದಿಸಿದ್ದು, ಕಸಾಯಿಖಾನೆಗೆ ಕೊಂಡೊಯ್ಯುತ್ತಿದ್ದುದಾಗಿ ಆರೋಪಿ ವಿಚಾರಣೆ ವೇಳೆ ಪೊಲೀಸರಿಗೆ ತಿಳಿಸಿದ್ದಾನೆ. ಈ ಸಂಬಂಧ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಡ್ರಗ್ಸ್ ದಂಧೆ ನಡೆಸುತ್ತಿದ್ದ ಇಬ್ಬರ ಬಂಧನ

• **ಮೈಸೂರು:** ಡ್ರಗ್ ದಂಧೆ ನಡೆಸುತ್ತಿದ್ದ ಇಬ್ಬರು ದುಷ್ಕರ್ಮಿಗಳನ್ನು ಇಲವಾಲ ಗ್ರಾಮಾಂತರ ಠಾಣೆಯ ಪೊಲೀಸರು ಬಂಧಿಸಿದ್ದು, ಒಟ್ಟು ಸುಮಾರು 48 ಕೆಜಿ ಮಾದಕ ವಸ್ತುಗಳನ್ನು ಜಪ್ತಿ ಮಾಡಿದ್ದಾರೆ. ಮೈಸೂರು ನಗರದ ಮಹಮ್ಮದ್ ಶರೀಫ್ (30) ಮತ್ತು ಇಬ್ರಾಹಿಂ ಖಾನ್(42) ಬಂಧಿತರು. ಲಭಿಸಿದ ಖಚಿತ ಮಾಹಿತಿಯ ಮೇಲೆ ಕಾರ್ಯಾಚರಣೆ ನಡೆಸಿದ ಪೊಲೀಸರು ಆರೋಪಿಗಳನ್ನು ಬಂಧಿಸಿ, ಅವರಿಂದ ಸುಮಾರು 7.35 ಕೆಜಿ ಮೆಫೆಡ್ರೋನ್, 41 ಕೆಜಿ ಡ್ರಗ್ ಪ್ರಿಕರ್ಸರ್ ಹಾಗೂ ಇತರೆ ಸಾಮಗ್ರಿಗಳನ್ನು ವಶಪಡಿಸಿಕೊಂಡಿದ್ದಾರೆ. ಸುಮಾರು 48 ಕೆಜಿ ಮಾದಕ ವಸ್ತುಗಳನ್ನು ಜಪ್ತಿ ಮಾಡಿದ್ದಾರೆ.

ಮಳೆಯನ್ನೂ ಲೆಕ್ಕಿಸದೆ ಮೇಲುಕೋಟೆಯಲ್ಲಿ ವೈರಮುಡಿ, ರಾಜಮುಡಿ ದರ್ಶನ ಪಡೆದ ಭಕ್ತಸಾಗರ

ಚಲುವನಾರಾಯಣಸ್ವಾಮಿ ವೈಭವ

▶ ಸೌಮ್ಯ ಸಂತಾನಂ ಮೇಲುಕೋಟೆ

• **ಮೇಲುಕೋಟೆ:** ಚಲುವನಾರಾಯಣಸ್ವಾಮಿಗೆ ಭಾನುವಾರ ಅರುಣೋದಯದ ವೇಳೆ 4 ಗಂಟೆಗೆ ರಾಜಮುಡಿ ಕಿರೀಟಧರಿಸಿ ವೈಭವದಿಂದ ಉತ್ಸವ ನೆರವೇರಿಸಲಾಯಿತು.

ಮಳೆಯ ನಡುವೆಯೂ ಸಹಸ್ರಾರು ಸಂಖ್ಯೆಯಲ್ಲಿ ಭಕ್ತರು ಕಾದು ರಾಜಮುಡಿಯ ದರ್ಶನ ಪಡೆದರು. ದೇವಾಲಯದ ಮುಂಭಾಗ ನಾಲ್ಕೂ ಕಡೆಗಳಲ್ಲಿ ಕಿಕ್ಕಿರಿದು ತುಂಬಿದ್ದ ಭಕ್ತರಿಗೆ ಸಾವಕಾಶವಾಗಿ ರಾಜಮುಡಿ ಉತ್ಸವದ ದರ್ಶನವನ್ನು ಮಾಡಿಸಿ ದೇವಾಲಯದ ಒಳಭಾಗ ಪಡಿಯೇತ್ತ ನೆರವೇರಿಸಿ ವೈರಮುಡಿ ಉತ್ಸವದ ಧಾರ್ಮಿಕ ಕೈಂಕರ್ಯಗಳನ್ನು ಸಮಾಪ್ತಿಗೊಳಿಸಲಾಯಿತು.

ಚಲುವನಾರಾಯಣಸ್ವಾಮಿಯನ್ನು ಅಲಂಕರಿಸಿದ್ದ ವೈರಮುಡಿ ಕಿರೀಟವನ್ನು ಭಾನುವಾರವಾಗಿದ್ದರೂ ಸಹ ಪೊಲೀಸ್ ಭದ್ರತೆಯೊಂದಿಗೆ ಮಂಡ್ಯ ಜಿಲ್ಲಾ ಖಜಾನೆಗೆ ಕಳುಹಿಸಿಕೊಡಲಾಯಿತು. ವೈರಮುಡಿ ಬ್ರಹ್ಮೋತ್ಸವದ 5ನೇ ತಿರುನಾಳ್ ದಿನವಾದ ಭಾನುವಾರವೂ ಲಕ್ಷಾಂತರ ಭಕ್ತರು ಚಲುವನಾರಾಯಣಸ್ವಾಮಿಯ ದರ್ಶನ ಪಡೆದರು. ಸಂಜೆ ಪ್ರಹ್ಲಾದಪರಿಪಾಲನೋತ್ಸವ ನಂತರ ಗರುಡವಾಹನೋತ್ಸವ ನೆರವೇರಿತು.

ವೈರಮುಡಿ ಉತ್ಸವದ ಮಹಾಮಂಗಳಾರತಿಯ ವೇಳೆ ಪ್ರತಿವರ್ಷವೂ ಉಂಟಾಗುತ್ತಿದ್ದ ನೂಕಾಟ ತಳ್ಳಾಟವನ್ನು ಮಂಡ್ಯ ಜಿಲ್ಲಾಧಿಕಾರಿ ಡಾ. ಕುಮಾರ ಮತ್ತು ಪೊಲೀಸ್ ವರಿಷ್ಠಾಧಿಕಾರಿ ಡಾ. ಶೋಭಾರಾಣಿ ಖುದ್ದು ಹಾಜರಿದ್ದು ಸಮರ್ಪಕವಾಗಿ ನಿಯಂತ್ರಿಸಿದ ಕಾರಣ ಯಾವುದೇ ಗೊಂದಲ ಉಂಟಾಗಲಿಲ್ಲ. ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವನಾರಾಯಣಸ್ವಾಮಿ ದಂಪತಿ ಹಾಗೂ ಶಾಸಕರು ಗಣ್ಯರು ಸುಗಮವಾಗಿ ದರ್ಶನಮಾಡುವುವಂತಾಯಿತು. ಜಿಲ್ಲಾಧಿಕಾರಿಗಳ ಕೈಗೊಂಡ ಶಿಸ್ತುಬದ್ಧವ್ಯವಸ್ಥೆಗೆ ಸ್ವತಃ ಸಚಿವರು ಮೆಚ್ಚುಗೆ ವ್ಯಕ್ತಪಡಿಸಿ ಇದೇ ಮಾದರಿ ಮುಂದಿನ ವೈರಮುಡಿಗಳಲ್ಲೂ ಇರಲಿ ಎಂದು ಸೂಚಿಸಿದರು.



ಇತಿಹಾಸ ಸೃಷ್ಟಿಸಿದ ಮಳೆ

ವೈರಮುಡಿ ಉತ್ಸವದ ವೇಳೆ ಪದೇ ಪದೇ ಮಳೆ ಬಂದು ಭಕ್ತರ ದರ್ಶನಕ್ಕೆ ಅಡ್ಡಿಯಾದ ಘಟನೆ ಎಂಟು ದಶಕಗಳಲ್ಲೇ ನಡೆದಿಲ್ಲ ಎಂದು ದೇವಾಲಯದ ಸೇವೆಯಲ್ಲಿ ತೊಡಗಿದ್ದ ಹಿರಿಯ ಕೈಂಕರ್ಯಪರರು ಮಾಹಿತಿ ಹಂಚಿಕೊಂಡರು. ವೈರಮುಡಿ ಉತ್ಸವ ವೇಳೆ ಆಗಾಗ ಬರುತ್ತಿದ್ದ ಮಳೆಯನ್ನೂ ಲೆಕ್ಕಿಸದೆ ಲಕ್ಷಾಂತರ ಸಂಖ್ಯೆಯಲ್ಲಿ ಉತ್ಸವ ಬೀದಿಗಳಲ್ಲಿ ಕಿಕ್ಕಿರಿದು ತುಂಬಿದ ಲಕ್ಷಾಂತರ ಭಕ್ತರು. ಮಳೆಯಲ್ಲೇ ನೆನೆದಿದ್ದರೂ ಸ್ವಲ್ಪವೂ ವಿಚಲಿತರಾಗದೆ ಕಾದು ನಿಂತು ವೈರಮುಡಿ ದರ್ಶನ ಪಡೆದರು. ಮಧ್ಯೆ ಮಧ್ಯೆ ಮಳೆ ಬರುತ್ತಿದ್ದರೂ ಭಕ್ತರಿಗೆ ನಿರಾಸೆಯಾಗಬಾರದು ಎಂದು ಮಂಡ್ಯ ಜಿಲ್ಲಾಧಿಕಾರಿ ಡಾ ಕುಮಾರ ಸಾಧ್ಯವಾದಷ್ಟು ಮಟ್ಟಿಗೆ ಮಳೆಯಿಂದ ದೇವರನ್ನು ರಕ್ಷಣೆಮಾಡಿ ನಿಧಾನವಾಗೇ ಉತ್ಸವ ನಡೆಸುವಂತೆ ಪಾರುಪತ್ತೇಗಾರರು ಹಾಗೂ ಉಪವಿಭಾಗಾಧಿಕಾರಿಗಳಿಗೆ ಸೂಚನೆ ನೀಡಿದ್ದರು.

3 ಗಂಟೆವರೆಗೂ ಸಂಚಾರ ದಟ್ಟಣೆ

ಮೇಲುಕೋಟೆಯಿಂದ ಜಕ್ಕನಹಳ್ಳಿಯವರೆಗೆ 7ರಿಂದ 8 ಕಿಮೀವರೆಗೆ ರಾತ್ರಿ 1 ಗಂಟೆಯಿಂದ 3 ಗಂಟೆಯವರೆಗೆ ಟ್ರಾಫಿಕ್ ಜಾಮ್ ಉಂಟಾಗಿತ್ತು. ಪೊಲೀಸರು ವ್ಯವಸ್ಥೆ ಮಾಡಿದ 36 ಕಡೆಯ ಪಾರ್ಕಿಂಗ್ ಸ್ಥಳವೆಲ್ಲ ಭಕ್ತರ ವಾಹನಗಳಿಂದ ತುಂಬಿಹೋಗಿತ್ತು. ಟ್ರಾಫಿಕ್ ನಿಯಂತ್ರಿಸಲು ಪೊಲೀಸರು ಹರಸಾಹಸಪಟ್ಟರು



ದೈತಮ್ಮದೇವಿ ಮೆರವಣಿಗೆ



• **ನಾಗಮಂಗಲ:** ತಾಲೂಕಿನಗಂಡುನಿಂಗಿಕೊಪ್ಪಲು ಗ್ರಾಮದಲ್ಲಿ ಭಾನುವಾರ ಆಯೋಜಿಸಿದ್ದ ಶ್ರೀ ದೈತಮ್ಮದೇವಿ ಉತ್ಸವ ಮೂರ್ತಿ ಮೆರವಣಿಗೆಯಲ್ಲಿ ಕೃಷಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ ಅವರು ಪಾಲ್ಗೊಂಡು ದೇವಿಗೆ ಭಕ್ತಿನಮನ ಸಲ್ಲಿಸಿ ಆಶೀರ್ವಾದ ಪಡೆದುಕೊಂಡರು.

ಗ್ರಾಮದಲ್ಲಿ ಭಾನುವಾರ ಮಧ್ಯಾಹ್ನ ನಡೆಯುತ್ತಿದ್ದ ಶ್ರೀ ದೈತಮ್ಮದೇವಿ ಉತ್ಸವ ಮೂರ್ತಿ ಮೆರವಣಿಗೆ ವೇಳೆ ಭೇಟಿಕೊಟ್ಟ ಸಚಿವರು, ದೇವಿಯ ಉತ್ಸವ ಮೂರ್ತಿಗೆ ಹೆಗಲು ಕೊಟ್ಟು ಕೆಲದೂರ ಮೆರವಣಿಗೆಯಲ್ಲಿ ಸಾಗುವ ಮೂಲಕ ತಮ್ಮ ಭಕ್ತಿಭಾವ ಸಮರ್ಪಿಸಿದರು.

ನಂತರ ಮಾತನಾಡಿದ ಸಚಿವರು, ಗ್ರಾಮೀಣ ಪ್ರದೇಶದ ಜನರು ಇಂದಿಗೂ ಕೂಡ ನಮ್ಮ ಪೂರ್ವಿಕರು ನಡೆಸುತ್ತಿದ್ದ ಹಬ್ಬ ಹರಿದಿನ ದೇವರ ಕಾರ್ಯಗಳನ್ನು ಬಹಳ ವಿಜೃಂಭಣೆಯಿಂದ ನಡೆಸುವ ಮೂಲಕ ಗ್ರಾಮೀಣ ಸೊಗಡಿನ ಸಂಸ್ಕೃತಿ ಪರಂಪರೆಯನ್ನು ಮುಂದಿನ ಪೀಳಿಗೆಗೆ ಉಳಿಸಿ ಪರಿಚಯಿಸುವ ಕೆಲಸ ಮಾಡುತ್ತಿರುವುದು ಅತ್ಯಂತ ಶ್ಲಾಘನೀಯ ಎಂದರು.

ಈ ಬಾರಿ ಉತ್ತಮ ಮಳೆ ಬೆಳೆಯಾಗಿ ರೈತರ ಬದುಕು ಹಸನಾಗಲಿ. ಜನ ಜಾನುವಾರುಗಳ ಕುಡಿಯುವ ನೀರಿಗೆ ಸಮಸ್ಯೆ ಬಾರದಿರಲಿ. ನಾಡಿನ ಎಲ್ಲ ಜನರು ಆರೋಗ್ಯವಂತರಾಗಿ ಶಾಂತಿ ನೆಮ್ಮದಿಯ ಜೀವನ ನಡೆಸುವಂತಾಗಲಿ ಎಂದು ದೇವಿಯನ್ನು ಪ್ರಾರ್ಥಿಸಿರುವುದಾಗಿ ತಿಳಿಸಿದರು. ಈ ವೇಳೆ ಗ್ರಾಮದ ಮುಖಂಡರು ಹಾಗೂ ಬೆಂಗಳೂರು ನಿವಾಸಿಗಳು ಇದ್ದರು.

ಬನ್ನಿಮರದ ಆದಿಪರಾಶಕ್ತಿ ಅಮ್ಮನ ಜಾತ್ರೆ

• **ಮದ್ದೂರು:** ತಾಲೂಕಿನ ಚಾಮರದೊಡ್ಡಿ ಗ್ರಾಮದ ಶ್ರೀ ಬನ್ನಿಮರದ ಆದಿಪರಾಶಕ್ತಿ ಅಮ್ಮನವರ 95ನೇ ವರ್ಷದ ಜಾತ್ರಾ ಮಹೋತ್ಸವ ವಿಜೃಂಭಣೆಯಿಂದ ನೆರವೇರಲಿವೆ.

ಮಾ. 31ರ ಮಂಗಳವಾರ ಬೆಳಗ್ಗೆ ಆದಿಪರಾಶಕ್ತಿ ಅಮ್ಮನವರ ದೇವಾಲಯದಲ್ಲಿ ವಿವಿಧ ಪೂಜಾ ವಿಧಿವಿಧಾನಗಳೊಟ್ಟಿಗೆ ಆರಂಭಗೊಂಡು ಹೋಮ ಹವನ ನೆರವೇರಿದ ಬಳಿಕ ಅಮ್ಮನವರಿಗೆ ಅಭಿಷೇಕ, ಅಲಂಕಾರ, ಮಹಾಮಂಗಳಾರತಿ, ತೀರ್ಥಪ್ರಸಾದ ಜರುಗಲಿದೆ.

ಮಂಗಳವಾರ ರಾತ್ರಿ 9 ಗಂಟೆಗೆ ಗ್ರಾಮ ದೇವತೆಗಳಾದ ಮಲೆ ಮಹದೇಶ್ವರ ಹುಲಿವಾಹನೋತ್ಸವ, ಅಮ್ಮನವರ ಸಿಂಹವಾಹನ, ಮಂಟೇಸ್ವಾಮಿ ಕಂಡಾಯ ಇನ್ನಿತರ ದೇವರುಗಳ ಮೆರವಣಿಗೆ ಸಮೇತ ಮೀಸಲು ನೀರು ತಂದು ವೆಂಕಟೇಶ್ವರ ಸ್ವಾಮಿಯ ಪೂಜೆಯ ನಂತರ ಅಡುಗೆ ಮಾಡಲು ಪ್ರಾರಂಭಿಸಲಾಗುವುದು.

ಬುಧವಾರ ಬೆಳಗಿನ ಜಾವ 4 ಗಂಟೆಗೆ ಅಮ್ಮನವರ ಗಿಂಡಿ ಉತ್ಸವ ಮತ್ತು ಗ್ರಾಮ ದೇವತೆಗಳ ಪೂಜಾ ಮೆರವಣಿಗೆ, ಬಾಯಿಬೀಗ ನೆರವೇರಿದ ಬಳಿಕ ಬೆಳಗ್ಗೆ 8 ಗಂಟೆಗೆ ಭಕ್ತಾದಿಗಳಿಗೆ ಅನ್ನ ಸಂತರ್ಪಣೆ ಕಾರ್ಯಕ್ರಮವನ್ನು ಆಯೋಜಿಸಲಾಗಿದ್ದು ಅದೇ ರಾತ್ರಿ 11 ಗಂಟೆಗೆ ಅಮ್ಮನವರಿಗೆ ಸೋಗಲು ಕೊಡುವುದು, ಮುಡಿ, ಹರಕೆ ಹವನಗಳನ್ನು ಸಲ್ಲಿಸುವುದು ಇನ್ನಿತರ ಪೂಜಾ ಕೈಂಕರ್ಯಗಳು ನೆರವೇರಲಿವೆ.



ರಕ್ತದಾನ ಶಿಬಿರಕ್ಕೆ ಪಿಡಿಒ ಚಾಲನೆ

• **ಮದ್ದೂರು:** ಕರ್ನಾಟಕ ರತ್ನ ದಿ. ಪುನೀತ್‌ರಾಜ್ ಕುಮಾರ್ ಅವರು ಕನ್ನಡ ಚಿತ್ರರಂಗದ ಜನಪ್ರಿಯ ನಟ, ಗಾಯಕ ಮತ್ತು ನಿರ್ಮಾಪಕರಾಗುವ ಜತೆಗೆ ಹಲವಾರು ಸಮಾಜಮುಖಿ ಸೇವಾ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುವ ಮೂಲಕ ಇಂದಿಗೂ ಜನಮಾನಸದಲ್ಲಿ ಅಚ್ಚಳಿಯದೆ ಉಳಿದಿದ್ದಾರೆಂದು ಪಿಡಿಒ ಮಧುಸೂದನ್ ತಿಳಿಸಿದರು.

ತಾಲೂಕಿನ ಹೊಸಕೆರೆ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಆವರಣದಲ್ಲಿ ಗ್ರಾಮಾಭಿವೃದ್ಧಿ ಸಂಘ, ಅಪ್ಪು ಅಭಿಮಾನಿಗಳ ಬಳಗ, ರೋಟರಿ ಕ್ಲಬ್, ಶ್ರೀ ಪಟ್ಟಲದಮ್ಮ ಸೇವಾ ಟ್ರಸ್ಟ್, ವಿನಾಯಕ ಗೆಳೆಯರ ಬಳಗ, ಸಂಸ್ಕೃತಿ ಅಲಯನ್ಸ್, ನಾಡಪ್ರಭು ಕೆಂಪೇಗೌಡ ಕ್ರೀಡಾ ಮತ್ತು ಸಾಂಸ್ಕೃತಿ ಸಂಘ ಹಾಗೂ ಡಾ. ಬಿ.ಆರ್.ಅಂಬೇಡ್ಕರ್ ಸೇವಾ ಚಾರಿಟಬಲ್ ಟ್ರಸ್ಟ್ ಇನ್ನಿತರ ಸಂಘ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ, ಪುನೀತ್ ರಾಜ್‌ಕುಮಾರ್ ಅವರ ಹುಟ್ಟುಹಬ್ಬದ ಅಂಗವಾಗಿ ಆಯೋಜಿಸಿದ್ದ ಬೃಹತ್ ಸ್ವಯಂ ಪ್ರೇರಿತ ರಕ್ತದಾನ ಶಿಬಿರಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಪುನೀತ್‌ರಾಜ್‌ಕುಮಾರ್ ಬಾಲನಟನಾಗಿ ಹಲವಾರು ರಾಷ್ಟ್ರಪ್ರಶಸ್ತಿಗಳನ್ನು ಪಡೆದಿರುವ ಜತೆಗೆ ಸುಮಾರು 28ಕ್ಕೂ ಹೆಚ್ಚು ಸೂಪರ್‌ಹಿಟ್ ಚಿತ್ರಗಳನ್ನು ನೀಡಿದ್ದು ಶಕ್ತಿಧಾಮದಂತಹ ಸಮಾಜಮುಖಿ ಸೇವೆಗಳ ಮೂಲಕ ಅವರು ಅಪ್ರತಿಮ ಸಾಧನೆ ಮಾಡಿದ್ದು ಮರಣೋತ್ತರವಾಗಿ ಕರ್ನಾಟಕ ರತ್ನ ಗೌರವಕ್ಕೆ ಪಾತ್ರರಾಗಿದ್ದಾರೆಂದು ತಿಳಿಸಿದರು.



ರಕ್ತದಾನ ಶಿಬಿರ: ಮಂಡ್ಯ ಮಿಮ್ಸ್ ರಕ್ತನಿಧಿ ಕೇಂದ್ರ ಮತ್ತು ಇನ್ನಿತರ ಸಂಘ ಸಂಸ್ಥೆಗಳ ಸಹಯೋಗದಲ್ಲಿ ಆಯೋಜಿಸಿದ್ದ ಸ್ವಯಂಪ್ರೇರಿತ ರಕ್ತದಾನ ಶಿಬಿರದಲ್ಲಿ ಸುಮಾರು 200ಕ್ಕೂ ಹೆಚ್ಚು ಶಿಬಿರಾರ್ಥಿಗಳು ಪಾಲ್ಗೊಂಡು ರಕ್ತದಾನ ಮಾಡಿದ್ದು ವಿಶೇಷವಾಗಿತ್ತು.

ಸುಮಾರು 51 ಕೆ.ಜಿ. ಕೇಕ್ ಕತ್ತರಿಸಿ ಪುನೀತ್‌ರಾಜ್ ಕುಮಾರ್ ರವರ ಹುಟ್ಟುಹಬ್ಬವನ್ನು ವಿಶೇಷವಾಗಿ ಆಚರಿಸಿದರಲ್ಲದೆ ನೆರೆದಿದ್ದ ಅಭಿಮಾನಿಗಳಿಗೆ ಅನ್ನಸಂತರ್ಪಣೆ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಭೂಮಾಪಕರ ಬೇಡಿಕೆ ಈಡೇರಿಸುವಂತೆ ಒತ್ತಾಯ

• **ಪಿರಿಯಾಪಟ್ಟಣ:** ಪರವಾನಗಿ ಭೂಮಾಪಕರ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಪರವಾನಗಿ ಭೂಮಾಪಕರ ಸಂಘದಿಂದ ಸಚಿವ ಕೆ. ವೆಂಕಟೇಶ್ ರವರಿಗೆ ಮನವಿ ಸಲ್ಲಿಸಿದರು.

ಸಂಘದ ಜಿಲ್ಲಾಧ್ಯಕ್ಷ ಮಹದೇವೇಗೌಡ ಮಾತನಾಡಿ ಪರವಾನಗಿ ಭೂಮಾಪಕರಾದ ನಾವು 23 ವರ್ಷಗಳಿಂದ ರೈತರು ಮತ್ತು ಸರ್ಕಾರದ ಕೆಲಸಗಳನ್ನು ನಿರ್ವಹಿಸುತ್ತಾ ಬಂದಿದ್ದು, ಈಗ ವಯೋಮಿತಿ ಮೀರಿದ್ದರಿಂದ ಭೂಮಾಪಕರ ಕೆಲಸವನ್ನು ಬಿಟ್ಟು, ಬೇರೆ ಕೆಲಸವನ್ನು ನಿರ್ವಹಿಸಲು ಸಾಧ್ಯವಾಗದ ಪರಿಸ್ಥಿತಿಗೆ ಇಂದು ತಲುಪಿದ್ದೇವೆ ಆದ್ದರಿಂದ ನಮ್ಮ ಸೇವೆಯನ್ನ ಪರಿಗಣಿಸಿ, ಸರ್ಕಾರಿ ಭೂಮಾಪಕರ ಹುದ್ದೆಯಲ್ಲಿ ವಿಲೀನಗೊಳಿಸಬೇಕೆಂದು ನಾವುಗಳು ಹಲವಾರು ಬಾರಿ ಮನವಿ ಮಾಡಿಕೊಂಡಿರುತ್ತೇವೆ ಹಾಗೂ ಜೊತೆಗೆ ಇಲಾಖೆಯಲ್ಲಿ ಕೆಲವೊಂದು ಕಠಿಣ ನಿಯಮಗಳ ತಿದ್ದುಪಡಿಯಿಂದ ಈಗ ನಾವು ಕೆಲಸ ನಿರ್ವಹಿಸಲು ಸಾಧ್ಯವಾಗದಂತಹ ಪರಿಸ್ಥಿತಿಗೆ ಬಂದು ತಲುಪಿದ್ದೇವೆ ಇದನ್ನು ತಕ್ಷಣ ಸರಳೀಕರಣಗೊಳಿಸಬೇಕೆಂದು ಮನವಿ ಮಾಡಿದರು.

ಪರವಾನಗಿ ಭೂಮಾಪಕರು ಇಂದು ಸರ್ಕಾರಿ ಭೂಮಾಪಕರು ನಿರ್ವಹಿಸುವ ಎಲ್ಲಾ ತರಹದ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತಿದ್ದು ಯಾವುದೇ ಜೀವನ ಭದ್ರತೆಯಿಲ್ಲದೆ, ಸೇವಾ ಆಧಾರವಿಲ್ಲದೆ ಕನಿಷ್ಠ ಸೇವಾಶುಲ್ಕವನ್ನು ಪಡೆದು, ಜೀವನ ನಡೆಸುತ್ತಿದ್ದೇವೆ. ಆದ್ದರಿಂದ ಇಲಾಖೆ ಮತ್ತು ಸರ್ಕಾರ ನಿಗಧಿ ಮಾಡಿರುವ ಸೇವಾ ಶುಲ್ಕ ಅವೈಜ್ಞಾನಿಕವಾಗಿದ್ದು, ನಮ್ಮ ಸ್ಥಿತಿ ಜೀತದಾಳುಗಳ ಪರಿಸ್ಥಿತಿಗಿಂತ ಕನಿಷ್ಠವಾಗಿರುವುದರಿಂದ ನಾವು ಕೆಲಸ ನಿರ್ವಹಿಸಲು ಮತ್ತು ಜೀವನ ನಡೆಸಲು ಆಗದೇ ಇರುವಂತಹ ಪರಿಸ್ಥಿತಿಗೆ ಬಂದು ತಲುಪಿದ್ದೇವೆ ಎಂದು ಅಳಲು ತೋಡಿಕೊಂಡರು.

ಸರಳವಾಗಿ ಕೆಲಸ ನಿರ್ವಹಿಸಲು ಮತ್ತು ರೈತರ ಕೆಲಸಗಳನ್ನು ಸರಾಗವಾಗಿ ವಿಲೇವಾರಿ ಮಾಡಿಕೊಡಲು ಅನುಕೂಲವಾಗುವಂತೆ ಸರಳೀಕರಣ ಮಾಡಿಕೊಡಬೇಕೆಂದು ತಮ್ಮಲ್ಲಿ ಮನವಿ ಮಾಡಿದರು.

ತಾಲ್ಲೂಕು ಅಧ್ಯಕ್ಷ ಬಿ. ಆರ್.ಮಂಜು , ಉಪಾಧ್ಯಕ್ಷ ಎಚ್. ಎಂ.ಮಂಜುನಾಥ್, ಪ್ರಧಾನ ಕಾರ್ಯದರ್ಶಿ ಬಿ. ಕೆ.ಪ್ರಜ್ವಲ್ , ಖಜಾಂಚಿ ಅರುಣ್ ಕುಮಾರ್, ಸಲಹೆಗಾರರಾದ ಸಂಜಯ್ ಕುಮಾರ್ ಮತ್ತು ಪದಾಧಿಕಾರಿಗಳಾದ ಮಹೇಂದ್ರ , ರವಿ , ರಮೇಶ್, ಸುನೀಲ್, ರವಿ , ಸತೀಶ್, ಮಂಜು ನಾಯಕ ಹಾಜರಿದ್ದರು.

ಬಿಜೆಪಿ ಪ್ರಶಿಕ್ಷಣವರ್ಗದ ಕಾರ್ಯಕ್ರಮ

• **ಮೈಸೂರು:** ನಗರದ ಇಲವಾಲದ ಬಳಿ ಇರುವ ಬ್ರಹ್ಮಕುಮಾರಿ ಸಂಸ್ಥೆಯಲ್ಲಿ, ಚಾಮರಾಜ ವಿಧಾನಸಭಾ ಕ್ಷೇತ್ರದ ಬಿಜೆಪಿ ಮುಖಂಡರು, ಕಾರ್ಯಕರ್ತರಿಗೆ ಪ್ರಶಿಕ್ಷಣವರ್ಗದ ಕಾರ್ಯಕ್ರಮ ನಡೆಯಿತು. ವಿವಿಧ ಮೋರ್ಚಾಗಳ ಪದಾಧಿಕಾರಿಗಳು ಮಹಿಳಾ ಮೋರ್ಚಾದ ಪದಾಧಿಕಾರಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಈ ವೇಳೆ ಮಾತನಾಡಿದ ಬಿಜೆಪಿ ಮುಖಂಡರು ಹಾಗೂ ಚಿತ್ರ ನಟರಾದ ಎಸ್ ಜಯಪ್ರಕಾಶ್ (ಜೆಪಿ) ಚುನಾವಣೆ ಕೊನೆ ಕ್ಷಣದಲ್ಲಿ ಬೇರೆ ಪಕ್ಷದಲ್ಲಿ ತಿರಸ್ಕೃತಗೊಂಡ ಪ್ರಭಾವಿಗಳಲ್ಲದವರಿಗೆ ಯಾವುದೇ ಯಾವುದೇ ಚುನಾವಣೆಗೆ ಸ್ಪರ್ಧಿಸಲು ಟಿಕೆಟ್ ನೀಡಬಾರದು. ಪಕ್ಷಕ್ಕಾಗಿ ನಿಷ್ಠೆ, ಪ್ರಾಮಾಣಿಕತೆಯಿಂದ, ತನು, ಮನ, ಧನವನ್ನು ಅರ್ಪಿಸಿಕೊಂಡು ದುಡಿದವರಿಗೆ ಟಿಕೆಟ್ ನೀಡಬೇಕು. ನಿಷ್ಠಾವಂತ ಕಾರ್ಯಕರ್ತರಿಗೆ ಮನ್ನಣೆ ನೀಡಬೇಕೆಂದು ಮನವಿ ಮಾಡಿದರು. ಈ ವೇಳೆ ಪಕ್ಷದ ಮುಖಂಡರುಗಳು ಹಾಜರಿದ್ದರು.



ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಪಿ.ಎಂ. ನರೇಂದ್ರಸ್ವಾಮಿ ಗುದ್ದಲಿಪೂಜೆ

ಸಂಪರ್ಕ ಕಲ್ಪಿಸುವ ರಸ್ತೆ ಅಭಿವೃದ್ಧಿಗೆ ಕ್ರಮ

• **ಮಳವಳ್ಳಿ:** ಸಾಮಾಜಿಕ ಜಾಲತಾಣದಲ್ಲಿ ಅಭಿವೃದ್ಧಿ ಕಾಮಗಾರಿಯ ಬಗ್ಗೆ ತಪ್ಪು ಮಾಹಿತಿ ನೀಡುತ್ತಿರುವವ್ಯಕ್ತಿಯ ವಿರುದ್ಧ ಕಾನೂನು ಕ್ರಮ ಜರುಗಿಸಲಾಗುವುದೆಂದು ಶಾಸಕ ಪಿ.ಎಂ ನರೇಂದ್ರಸ್ವಾಮಿ ತಿಳಿಸಿದರು.

ತಾಲೂಕಿನ ಬಿಜಿಪೋಳೆ ಗ್ರಾಮದಲ್ಲಿ ರಸ್ತೆ,ಚರಂಡಿ ನಿರ್ಮಾಣದ ಕಾಮಗಾರಿಗೆ ಗುದ್ದಲಿಪೂಜೆ ನೆರವೇರಿಸಿ ಮಾತನಾಡಿದ ಅವರು, ಮಾಧ್ಯಮದ ಜವಾಬ್ದಾರಿ ಇಲ್ಲದ ವ್ಯಕ್ತಿಯೊಬ್ಬ ಅನಾಧಿಕೃತ ಯುಟ್ಯೂಬ್ ಚಾನೇಲ್‌ನಲ್ಲಿ ಬಾಯಿಗೆ ಬಂದಂತೆ ಮಾತನಾಡಿರುವುದು ತನ್ನ ಗಮನಕ್ಕೆ ಬಂದಿದೆ. ದೇಶದ ಕಾನೂನು ಎನ್ನುವುದನ್ನು ತೋರಿಸಬೇಕಾಗುತ್ತದೆ. ಉದ್ಘಟನೆಕ್ಕೆ ಶೀಘ್ರದಲ್ಲಿ ಇತಿಶ್ರೀ ಹಾಡಲಾಗುವುದು ಎಂದರು. ತಾಲ್ಲೂಕಿನ ಬಿಜಿಪುರ ಹೋಬಳಿಯ ಸುಮಾರು 32 ಗ್ರಾಮಗಳಲ್ಲಿ 4.90 ಕೋಟಿ ವೆಚ್ಚದ ರಸ್ತೆ ಮತ್ತು ಚರಂಡಿ ಕಾಮಗಾರಿಗೆ ಶಂಕುಸ್ಥಾಪನೆ ನೆರವೇರಿಸುವುದರ ಜತೆಗೆ 1.25 ಕೋಟಿ ಅನುದಾನದಲ್ಲಿ 35 ಗ್ರಾಮಗಳಲ್ಲಿ ಇರುವ ವಿವಿಧ ದೇವಸ್ಥಾನಗಳ ಜೀರ್ಣೋದ್ಧಾರ ಕಾಮಗಾರಿಗೆ ಚಾಲನೆ ನೀಡಲಾಗಿದೆ ಎಂದು ಹೇಳಿದರು.

ತಾಲ್ಲೂಕಿನ ಮಲ್ಲಿನಾಥಪುರ, ಕ್ಯಾತನಹಳ್ಳಿ,ರಾವಣಿ, ಕುಂದೂರು, ತೆಂಕಹಳ್ಳಿ, ತಿಗಡಹಳ್ಳಿ, ಕೋಣನಕೊಪ್ಪಲು, ಕಂಚುಗಹಳ್ಳಿ,ದಾಸನದೊಡ್ಡಿ, ಪಂಡಿತಹಳ್ಳಿ, ಬಾಚನಹಳ್ಳಿ, ಚೊಟ್ಟನಹಳ್ಳಿ, ಚಂದಹಳ್ಳಿ, ನೆಟ್ಕಲ್, ಮಂಚನಹಳ್ಳಿ, ಹೊಸಹಳ್ಳಿ, ಬಿಟಿಕೊಪ್ಪಲ್ಲು,ಬೆಳಕವಾಡಿ, ಜವನಗಹಳ್ಳಿ, ಕಿರಗಸೂರು, ಕಗ್ಗಲೀಪುರ, ಹೊನಗಹಳ್ಳಿ, ಒಕ್ಕರಹಳ್ಳಿ, ಹಾಸುವಳ್ಳಿ, ಬಿಜಿಪುರ, ಉಪ್ಪಾರು, ಬನೋರಹುಂಡಿ, ಕಣಕಳ್ಳಿ, ಕಲ್ಯಾಣಿಕೊಪ್ಪಲು, ಹಾಲಗಪ್ಪಕೊಪ್ಪಲು, ಸೋಮನಹಳ್ಳಿ ಗ್ರಾಮಗಳಲ್ಲಿ ರಸ್ತೆ, ಚರಂಡಿ ನಿರ್ಮಾಣ ಕಾಮಗಾರಿ ಹಾಗೂ ದೇವಸ್ಥಾನ ಜೀರ್ಣೋದ್ಧಾರಕ್ಕೆ ಶಾಸಕ ಪಿ.ಎಂ ನರೇಂದ್ರಸ್ವಾಮಿ ಚಾಲನೆ ನೀಡಿದರು.

ಇದೇ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿ.ಪಿರಾಜು, ಮನ್ ಮುಲ್‌ನಿರ್ದೇಶಕರಾದ ಆರ್.ಎನ್ ವಿಶ್ವಾಸ್, ಕೃಷ್ಣೇಗೌಡ, ಟಿಎಪಿಸಿಎಂಎಸ್ ನಿರ್ದೇಶಕ ಕೆ.ಜೆ ದೇವರಾಜು, ಮುಖಂಡರಾದ ಅಂಬರೀಷ್, ಪುಟ್ಟಸ್ವಾಮಿ, ರವೀಂದ್ರಕುಮಾರ್, ಮಹೇಶ್, ಚಂದ್ರಹಾಸ್, ಕುಮಾರ್, ನಾಗರಾಜು, ಸುಬ್ಬಾರಾಜು, ವೇದಮೂರ್ತಿ, ಕುಮಾರಸ್ವಾಮಿ, ಎಚ್.ಕೆ ಕೃಷ್ಣಮೂರ್ತಿ, ಎಂ.ಪಿ ಶಿವಕುಮಾರ್, ಶಶಿರಾಜ್ ಸೇರಿದಂತೆ ಇತರರು ಇದ್ದರು.



ಮಾರುಕಟ್ಟೆಯಲ್ಲಿ ಬೇಡಿಕೆ ಇರುವ ವಿಷಯಗಳನ್ನು ಬೋಧಿಸಿದ ಶಾಸಕ

ಶೇ.50ಕ್ಕಿಂತ ಹೆಚ್ಚು ಜನರಿಗೆ ಕೆಲಸ ಸಿಗುತ್ತಿಲ್ಲ

• **ಪಾಂಡವಪುರ:** ಬಜೆಟ್‌ನಲ್ಲಿ ಶಿಕ್ಷಣ ಇಲಾಖೆಯಲ್ಲಿ ಸುಮಾರು 19000 ಕೋಟಿ ರೂ.ಗಳನ್ನು ಅನುದಾನಿತ ಶಾಲೆಗಳಿಗೆ ನಿಗದಿಪಡಿಸಲಾಗಿದೆ. ಇದು ಖುಷಿಯ ಸಂಗತಿ. ಆದರೆ ಇದಕ್ಕೆ ಯಾವುದೇ ನಿಯಮಗಳನ್ನು ರೂಪಿಸಿಲ್ಲ, ಸಿಬ್ಬಂದಿ ಕೆಲಸ ನಿರ್ವಹಿಸುತ್ತಿದ್ದಾರೆ ಎಂದರೆ ನೇರವಾಗಿ ಅವರಿಗೆ ವೇತನ ನೀಡುತ್ತಿದ್ದೇವೆ. ಆದರೆ ಅವರಿಗೆ ಯಾವುದೇ ಜವಾಬ್ದಾರಿಯನ್ನು ಕೊಡುತ್ತಿಲ್ಲ, ಮಕ್ಕಳ ನೋಂದಣಿ ಹೆಚ್ಚಿಸುವುದು, ಶಾಲೆಗಳ ಅಭಿವೃದ್ಧಿ ಇತ್ಯಾದಿ ವಿಷಯಕ್ಕೆ ಅವರನ್ನು ಹೊಣೆಗಾರರನ್ನಾಗಿ ಮಾಡುತ್ತಿಲ್ಲ, ಇದನ್ನು ಮಾಡಿದರೆ ಖಾಸಗಿ ಶಾಲೆಗಳಿಂದ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಿಗೆ ಮಕ್ಕಳು ಸೇರುವ ಸಂಖ್ಯೆ ಹೆಚ್ಚುತ್ತದೆ ಎಂದು ಮೇಲುಕೋಟೆ ಶಾಸಕ ದರ್ಶನ್ ಪುಟ್ಟಣ್ಣಯ್ಯ ಹೇಳಿದರು. ನಿರುದ್ಯೋಗ ದತ್ತಾಂಶದ ಪ್ರಕಾರ, ಇಂಜಿನಿಯರಿಂಗ್ ಪದವೀಧರರ ಪೈಕಿ ಶೇ.50ಕ್ಕಿಂತ ಹೆಚ್ಚು ಜನರಿಗೆ ಕೆಲಸ ಸಿಗುತ್ತಿಲ್ಲ, ಇನ್ನೊಂದೆಡೆ ಐಟಿಐ ಮಾಡಿದವರಿಗೆ ಹೆಚ್ಚಿನ ಕೆಲಸಗಳು ಸಿಗುತ್ತಿವೆ. ಇದನ್ನು ಆಧರಿಸಿ ಹೊಂದಾಣಿಕೆಯನ್ನು ಮಾಡಿದರೆ ಅನುಕೂಲವಾಗುತ್ತದೆ ಎಂದರು.



ಕೃಷಿ ಮತ್ತು ತೋಟಗಾರಿಕೆ ಇಲಾಖೆಗಳಿಗೆ ಸಂಬಂಧಿಸಿದಂತೆ ರೈತ ಉತ್ಪಾದನಾ ಸಂಘಗಳಿಗೆ ಕಳೆದ ಬಜೆಟ್ ಗೆ ಹೋಲಿಸಿದರೆ 20 ಕೋಟಿ ರೂ. ನಿಗದಿಗೊಳಿಸಲಾಗಿತ್ತು. ಈ ಬಜೆಟ್ ನಲ್ಲಿ 1 ರೂ. ಕೂಡ ಇಟ್ಟಿಲ್ಲ, ರಾಜ್ಯದಲ್ಲಿರುವ 10,000ಕ್ಕಿಂತ ಹೆಚ್ಚಿನ ಎಫ್‌ಪಿಒಗಳಿಗೆ ಹೆಚ್ಚಿನ ಅನುದಾನವನ್ನು ಕೊಡಬೇಕು ಎಂದು ಮೇಲುಕೋಟೆ ಶಾಸಕ ದರ್ಶನ್ ಪುಟ್ಟಣ್ಣಯ್ಯ ಒತ್ತಾಯಿಸಿದರು.

2026-27ರ ಬಜೆಟ್ ಅಧಿವೇಶನದಲ್ಲಿ ಮಾತನಾಡಿದ ಅವರು, ತೋಟಗಾರಿಕೆ ಇಲಾಖೆಯ 1 ಅಂಕಿಅಂಶದ ಪ್ರಕಾರ, ರೈತರು ತಾವು ಬೆಳೆದ ಪದಾರ್ಥಗಳನ್ನು 30-60 ದಿನಗಳ ಕಾಲ ಇಟ್ಟುಕೊಳ್ಳುವ ವ್ಯವಸ್ಥೆ ಮಾಡಿಕೊಂಡರೆ ಶೇ.20,40ಕ್ಕಿಂತ ಹೆಚ್ಚು ಆದಾಯ ಬರುತ್ತದೆ. ಇದಕ್ಕೆ ನಾವು ಕೋಲ್ಡ್ ಚೈನ್ ಇನ್ವೆಸ್ಟ್ ಪ್ರೋಗ್ರಾಂ ಅನ್ನು ಹೊಸದಾಗಿ ಲಾಂಚ್ ಮಾಡಿ 200 ಕೋಟಿ ನಿಗದಿಮಾಡಬೇಕು ಎಂದು ಮನವಿ ಮಾಡಿದರು.

ಮಣ್ಣಿನ ಫಲವತ್ತತೆ ಹೆಚ್ಚಿಸಲು ಬೇಕು ಅನುದಾನ

ದೇಶದಲ್ಲಿ ಇರುವ ಪ್ರಮುಖ ಸಮಸ್ಯೆ ಮಣ್ಣಿನ ಸವಕಳಿ. ಮಣ್ಣಿನ ಸವಕಳಿ ತಡೆಗೆ ಇದ್ದಂತಹ ಹಣದ ಅನುದಾನದ ಪ್ರಮಾಣವನ್ನು ಕೂಡ ಕಡಿತ ಮಾಡಲಾಗಿದೆ. ಮಣ್ಣಿನ ಫಲವತ್ತತೆಯನ್ನು ಕಳೆದುಕೊಳ್ಳುತ್ತಿದ್ದೇವೆ. ಇದನ್ನು ತಡೆಗಟ್ಟಲು ಅನುದಾನದ ಪ್ರಮಾಣವನ್ನು ಹೆಚ್ಚಿಸಬೇಕು ಎಂದು ಒತ್ತಾಯಿಸಿದರು.

ವಿಧಾನಪರಿಷತ್ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಬಣ್ಣನೆ

ಪ್ರಧಾನಿ ಮೋದಿ ದೇಶದ ಪಾಲಿನ ಧುರಂಧರ್



• ಬೆಂಗಳೂರು: ದೇಶದ ಅಭಿವೃದ್ಧಿ, ಆಡಳಿತ ವೈಖರಿ, ವಿದೇಶಾಂಗ ನೀತಿ ಹೀಗೆ ಎಲ್ಲಾ ಆಯಾಮದಲ್ಲೂ ಮೋದಿ ದೇಶದ ಪಾಲಿನ ಧುರಂಧರ್ ಎಂದು ವಿಧಾನ ಪರಿಷತ್ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಹೇಳಿದರು.

ಬ್ಯಾಟರಾಯನಪುರದಲ್ಲಿ ನಡೆದ ವಿಜಯ ಸಂಕಲ್ಪ ಕಾರ್ಯಕರ್ತರ ಸಭೆ ಹಾಗೂ ಬಿಜೆಪಿ ಸೇರ್ಪಡೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಅಮೆರಿಕ-ಇಸ್ರೇಲ್ ಮತ್ತು ಇರಾನ್ ಮಧ್ಯೆ ನಡೆಯುತ್ತಿರುವ ಯುದ್ಧದಿಂದಾಗಿ ಜಗತ್ತಿನ ಬಹುತೇಕ ರಾಷ್ಟ್ರಗಳು ಇಂಧನ ಕೊರತೆ ಎದುರಿಸುತ್ತಿವೆಂದರು.

ಇಂತಹ ಸಂಕಷ್ಟದ ಸಮಯದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಇರಾನ್‌ನೊಂದಿಗೆ ಅತ್ಯಂತ ಬುದ್ಧಿವಂತಿಕೆಯಿಂದ ಮಾತುಕತೆ ನಡೆಸಿ ದೇಶದಲ್ಲಿ ಇಂಧನ ಕೊರತೆ ಆಗದಂತೆ ನೋಡಿಕೊಂಡಿದ್ದಾರೆ. ಇದು ಅವರ ತಾಕತ್ತು ಮತ್ತು ದೇಶದ ಜನತೆಯ ಭವಿಷ್ಯದ ಬಗ್ಗೆ ಅವರಿಗಿರುವ ಅಪರಿಮಿತ ಕಾಳಜಿಯ ದ್ಯೋತಕವಾಗಿದೆ ಎಂದು ಅಭಿಪ್ರಾಯಪಟ್ಟರು.

ಬ್ಯಾಟರಾಯನಪುರ ಕ್ಷೇತ್ರದಲ್ಲಿ ಕಾಂಗ್ರೆಸ್ ಗೆಲ್ಲುತ್ತಿದೆ ಎನ್ನುವುದಕ್ಕಿಂತ ಬಿಜೆಪಿಯವರ ಒಳ ಜಗಳದಿಂದಾಗಿ ಗೆಲ್ಲುತ್ತಿದೆ ಎಂಬುದು ವಾಸ್ತವಿಕ ಸಂಗತಿಯಾಗಿದೆ. ಮುಂದೆ ಈ ರೀತಿಯ ಬೆಳವಣಿಗೆಗಳಿಗೆ ಕಡಿವಾಣ ಹಾಕಿ, ಒಗ್ಗಟ್ಟು ಪ್ರದರ್ಶಿಸಿ ಬ್ಯಾಟ ರಾಯನಪುರ ಕ್ಷೇತ್ರದಲ್ಲಿ ಕಮಲ ಅರಳಿಸಬೇಕು ಎಂದು ಕಾರ್ಯಕರ್ತರಿಗೆ ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಯುವ ಮುಖಂಡ ಪುನೀತ್ ಸೇರಿದಂತೆ ಅಮೃತಹಳ್ಳಿ, ಕೋಗಿಲು ಮತ್ತು ಕೆಂಪಾಪುರ ವಾರ್ಡ್‌ಗಳ ನೂರಾರು ಮಂದಿ ಕಾಂಗ್ರೆಸ್ ತೊರೆದು ಬಿಜೆಪಿ ಪಕ್ಷ ಸೇರ್ಪಡೆಯಾದರು.

ಕಾಂಗ್ರೆಸ್ ಸರ್ಕಾರ ತೊಲಗಿಸಲು ಕಾಯುತ್ತಿದ್ದಾರೆ

ರಾಜ್ಯ ಕಾಂಗ್ರೆಸ್ ಸರ್ಕಾರದ ದುರಾಡಳಿತ, ಅಭಿವೃದ್ಧಿ ಶೂನ್ಯ, ಜನವಿರೋಧಿ ನೀತಿಯಿಂದ ರಾಜ್ಯದ ಜನತೆ ಕಾಂಗ್ರೆಸ್ ಸರ್ಕಾರವನ್ನು ತೊಲಗಿಸಲು ಕಾಯುತ್ತಿದ್ದಾರೆ. ವಿಶೇಷವಾಗಿ ಕಂದಾಯ ಇಲಾಖೆಯಲ್ಲಿ ಬಾಯಿ ಮಾತಿನ ಸುಧಾರಣೆಗಳು ಆಗುತ್ತಿವೆ ಹೊರತು ಇನ್ಯಾವ ವಿಶೇಷತೆಗಳು ಇಲ್ಲ, ಇಲಾಖೆಯಲ್ಲಿ ಹಿಂದೆಂದಿಗಿಂತಲೂ ಹೆಚ್ಚು ಭ್ರಷ್ಟಾಚಾರ ತಾಂಡವವಾಡುತ್ತಿದೆ. ವರ್ಗಾವಣೆ ದಂಧೆ ಪರಿಮಿತಿ ಇಲ್ಲದೆ ನಡೆಯುತ್ತಿದೆ ಎಂದು ಬಿಜೆಪಿ ರಾಜ್ಯ ಕಾರ್ಯದರ್ಶಿ ಎಚ್.ಸಿ.ತಮ್ಮೇಶಗೌಡ ತಿಳಿಸಿದರು.

ಬ್ಯಾಟರಾಯನಪುರ ಕ್ಷೇತ್ರದಲ್ಲಿ ಬಿಜೆಪಿಯಿಂದ ವಿವಿಧ ಬಿಜೆಪಿ, ನಾನು ಮೋದಿ ಎಂಬ ಅಭಿಯಾನದಲ್ಲಿ ರಾಜ್ಯ ಕಾಂಗ್ರೆಸ್ ಸರ್ಕಾರದ ವೈಫಲ್ಯತೆಗಳ ಕುರಿತು ಜನ ಜಾಗೃತಿ ಮೂಡಿಸುವ ಮತ್ತು ಮೋದಿಯವರ ಅಭಿವೃದ್ಧಿ ಕಾರ್ಯಗಳನ್ನು ಜನತೆಗೆ ತಿಳಿಸುವ ಬೃಹತ್ ಕಾರ್ಯಕ್ರಮ ನಡೆಸಲಾಗುತ್ತಿದೆ ಎಂದವರು ಹೇಳಿದರು.

ಅನಿರೀಕ್ಷಿತ ಮಳೆ



ಭಾನುವಾರ ಸಂಜೆ ನಗರದಲ್ಲಿ ಸುರಿದ ಮಳೆಯಿಂದ ಕೊಂಚ ತಣ್ಣನೆಯ ವಾತಾವರಣ ನಿರ್ಮಾಣವಾಯಿತು. ಅನಿರೀಕ್ಷಿತ ಮಳೆಯಿಂದಾಗಿ ದ್ವಿಚಕ್ರ ವಾಹನ ಸವಾರರು, ಪಾದಚಾರಿಗಳು ಸಂಕಷ್ಟಕ್ಕೆ ಸಿಲುಕಿದರು.

ಕಿರುಸುದ್ದಿ

ನೇರಳೆ ಬಣ್ಣ ಮಾರ್ಗದಲ್ಲಿ ಮೆಟ್ರೊ ತಾತ್ಕಾಲಿಕ ಸ್ಥಗಿತ

• ಬೆಂಗಳೂರು: ನಮ್ಮ ಮೆಟ್ರೊ ನೇರಳೆ ಬಣ್ಣದ ಮಾರ್ಗದಲ್ಲಿ ಭಾನುವಾರ ನಿರ್ವಹಣೆ ಕಾಮಗಾರಿ ಕೈಗೊಂಡ ಹಿನ್ನೆಲೆಯಲ್ಲಿ, ಕೆಲ ಕಾಲ ರೈಲು ಸೇವೆ ಸ್ಥಗಿತಗೊಳಿಸಲಾಗಿತ್ತು.



ನೇರಳೆ ಬಣ್ಣದ ಗರುಡಾಚಾರ್‌ಪಾಳ್ಯ ಮೆಟ್ರೊ ನಿಲ್ದಾಣ ಮತ್ತು ಎಂಜಿ ರಸ್ತೆ ಮೆಟ್ರೊ ನಿಲ್ದಾಣದ ನಡುವೆ ನಿರ್ವಹಣಾ ಕಾರ್ಯ ಕೈಗೊಳ್ಳಲಾಗಿತ್ತು. ಇದರಿಂದ ಬೆಳಗ್ಗೆ 7ರಿಂದ 7.45 ರವರೆಗೆ ರೈಲು ಸೇವೆಗಳನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿತ್ತು. ಇದರ ಪರಿಣಾಮ ಪ್ರಯಾಣಿಕರು ಪರದಾಡುವಂತಾಯಿತು.

ಕೌಟುಂಬಿಕ ನೆಮ್ಮದಿಗೆ ಮಹಿಳೆ ಕಾರಣ



• ದಾಸರಹಳ್ಳಿ: ಮನೆಯಲ್ಲಿ ನೆಮ್ಮದಿಯಾಗಿ ಇರಲು ಮಹಿಳೆ ಕಾರಣ ಎಂದು ಖ್ಯಾತ ಹಾಸ್ಯವಾಗ್ಮಿ ಕಲಾವಿದೆ ಸುಧಾ ಬರಗೂರು ತಿಳಿಸಿದರು. ದಾಸರಹಳ್ಳಿಯಲ್ಲಿ ಅದ್ಯಾ ಫೌಂಡೇಷನ್ ವತಿಯಿಂದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿ, ಮಾನವ ಜನ್ಮ ತಾಳಿದಾಗಿಂದ ಮಗುವಿನ ಆರೈಕೆ ಜೊತೆಗೆ ಕುಟುಂಬದ ನಿರ್ವಹಣೆ ಮಾಡುವುದು ಒಂದು ಹೆಣ್ಣು. ಯಾರು ಎಷ್ಟೇ ಸಂಪಾದನೆ ಮಾಡಿದರೂ ಆ ಮನೆಯ ಮಗಳೋ, ಅಮ್ಮನೋ, ಹೆಂಡತಿಯೋ ಇದ್ದು ಎಲ್ಲಾ ಆಗು ಹೋಗುಗಳನ್ನು ನೋಡಿಕೊಳ್ಳುವ ಜವಾಬ್ದಾರಿ ಹೆಣ್ಣಿಗಿದೆ ಎಂದರು. ದಾಸರಹಳ್ಳಿ ಮಾಜಿ ಶಾಸಕ ಆರ್. ಮಂಜುನಾಥ್ ಏರ್ಪಡಿಸಿದ್ದ ಈ ಕಾರ್ಯಕ್ರಮದಲ್ಲಿ ಮಹಿಳಾ ಸಾಧಕಿ ಐಎಎಸ್ ಅಧಿಕಾರಿ ಮಮತಾ ಹಾಗೂ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ಮಹಿಳೆಯರು ಭಾಗವಹಿಸಿದ್ದರು. ಸ್ಥಳೀಯ ಮುಖಂಡ ಕೆ.ನಾಗಭೂಷಣ, ಕೆ.ಸಿ. ವೆಂಕಟೇಶ್, ಬಿ.ಎನ್. ಜಗದೀಶ್, ಎ.ಬಿ.ಬಿ. ಮಂಜುನಾಥ್, ಲಗ್ಗೆರೆ ಕೃಷ್ಣಮೂರ್ತಿ ಮತ್ತಿತರರಿದ್ದರು.

ದ್ವಿಭಾಷಾ ನೀತಿ ಜಾರಿಗೆ ಆಗ್ರಹ

• ಬೆಂಗಳೂರು: ಪ್ರಜಾತಾಂತ್ರಿಕ ಸಮಾಲೋಚನೆಯ ಮೂಲಕ ದ್ವಿಭಾಷಾ ನೀತಿ ಜಾರಿಗೆ ತರುವಂತೆ ಎಐಡಿಎಸ್ಒ ಕರ್ನಾಟಕ ರಾಜ್ಯ ಸಮಿತಿ ಆಗ್ರಹಿಸಿದೆ. ಇತ್ತೀಚೆಗೆ ಕರ್ನಾಟಕ ಸರ್ಕಾರ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ತೃತೀಯ ಭಾಷೆಗೆ ಅಂಕವನ್ನು ತೆಗೆದು, ಗ್ರೇಡಿಂಗ್ ಪದ್ಧತಿಯನ್ನು ಜಾರಿಗೆ ತಂದಿದೆ. ಈ ಮೂಲಕ, ತೃತೀಯ ಭಾಷೆಯನ್ನು ಕಡ್ಡಾಯ ಹೇರ್ಗಡೆ ಹೊರಗಿರಿಸಿ, ಎಸ್ಎಸ್‌ಎಲ್‌ಸಿ ಒಟ್ಟಾರೆ ಅಂಕವನ್ನು 525ಕ್ಕೆ ಇಳಿಸಿದೆ. ಹಿಂದಿ ಭಾಷೆಯನ್ನು ಗುರಿಯಾಗಿರಿಸಿ, ತೃತೀಯ ಭಾಷೆಯ ಹೊರೆ ಕಡಿಮೆ ಗೊಳಿಸಿರುವುದು ಮುಂದೆ ದ್ವಿಭಾಷಾ ನೀತಿಯನ್ನು ರಾಜ್ಯದಲ್ಲಿ ಜಾರಿಗೆ ತರುವತ್ತ ಪ್ರಮುಖ ಹೆಜ್ಜೆಯಾಗಿದೆ. ಭಾಷಾ ತಜ್ಞರು, ಶಿಕ್ಷಣ ತಜ್ಞರು ಹಲವು ವರ್ಷಗಳಿಂದ ದ್ವಿಭಾಷಾ ನೀತಿಗಾಗಿ ಆಗ್ರಹಿಸುತ್ತಿದ್ದಾರೆ. ಈ ಸಂಪೂರ್ಣ ಪ್ರಕ್ರಿಯೆ ಪರೀಕ್ಷೆಯ ಮಧ್ಯ ಭಾಗದಲ್ಲಿ ಯಾವುದೇ ರೀತಿಯ ಸಮಾಲೋಚನೆ ನಡೆಸದೆ ಅಪ್ರಜಾತಾಂತ್ರಿಕವಾಗಿ ಘೋಷಿಸಿರುವುದು ಖಂಡನೀಯ ಎಂದರು.

ಜಿಬಿಎ ವ್ಯಾಪ್ತಿಯ ಐದು ನಗರ ಪಾಲಿಕೆಗಳಿಂದ 20,216 ಕೋಟಿ ರೂ. ಬಜೆಟ್ ಮಂಡನೆ

ಸವಾಲಿನ ನಡುವೆ ಆದಾಯ ಸಂಗ್ರಹ ಗುರಿ

• ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ) ರಚನೆಯಾಗಿ ಐದು ಸ್ವತಂತ್ರ ನಗರ ಪಾಲಿಕೆಗಳನ್ನಾಗಿ ವಿಭಜಿಸಿದ ನಂತರ ಪಂಚಪಾಲಿಕೆಗಳು ತಮ್ಮ ಚೊಚ್ಚಲ ಆಯವ್ಯಯ ಮಂಡಿಸಿವೆ. ಆದಾಯ ಕ್ರೋಢೀಕರಣದ ಸವಾಲಿನ ನಡುವೆಯೂ ಆದಾಯ ಸಂಗ್ರಹದ ಗುರಿ ತಲುಪಲಿದ್ದೇವೆ ಎಂಬ ನಂಬಿಕೆಯೊಂದಿಗೆ ಐದು ನಗರಪಾಲಿಕೆಗಳಿಂದ ಒಟ್ಟು 20,216 ಕೋಟಿ ರೂ. ಗಾತ್ರದ ಬಜೆಟ್ ಮಂಡನೆಯಾಗಿದೆ.



ಘೋಷಿಸಿದ ಯೋಜನೆಗಳ ಅನುಷ್ಠಾನಕ್ಕೆ ತರುವುದು, ನಿರೀಕ್ಷಿಸಿದ ಆದಾಯ ಗುರಿ ತಲುಪುವುದು ಸವಾಲಿನ ಕೆಲಸವಾಗಿದ್ದು, ಆದಾಯ ಸಂಗ್ರಹಣೆಯಲ್ಲಿ ವಿಫಲವಾದರೆ ಯೋಜನೆಗಳು ಕುಂಠಿತಗೊಳ್ಳಬಹುದು ಎಂಬುದು ತಜ್ಞರ ಅಭಿಪ್ರಾಯವಾಗಿದೆ.

ಪಶ್ಚಿಮ ಪಾಲಿಕೆಯದು ದೊಡ್ಡಗಾತ್ರದ ಬಜೆಟ್: ನಗರದ ಸಮಗ್ರ ಅಭಿವೃದ್ಧಿಯ ದೃಷ್ಟಿಕೋನದೊಂದಿಗೆ ಬಜೆಟ್ ಮಂಡಿಸಲಾಗಿದೆ ಎಂದು ಐದು ಪಾಲಿಕೆಗಳು ಹೇಳಿದ್ದು, ಐದು ಪಾಲಿಕೆಯಿಂದ ಒಟ್ಟು 20,216.46 ಕೋಟಿ ರೂ.ಗಳ ಬಜೆಟ್ ಮಂಡಿಸಲಾಗಿದೆ. ಐದು ಪಾಲಿಕೆಯಿಂದ 20,218.24 ಕೋಟಿ ರೂ. ಆದಾಯ ನಿರೀಕ್ಷಿಸಲಾಗಿದೆ. ಐದು ಪಾಲಿಕೆಗಳಲ್ಲಿ ಪಶ್ಚಿಮ ನಗರ ಪಾಲಿಕೆ ದೊಡ್ಡ ಗಾತ್ರದ ಬಜೆಟ್ ಪ್ರಸ್ತುತ ಪಡಿಸಿದೆ. ಮೊತ್ತ 4732.73 ಕೋಟಿ ರೂ.ಗಳಾಗಿವೆ. ಕೇಂದ್ರ ಪಾಲಿಕೆ ಅತೀ ಕಡಿಮೆ ಗಾತ್ರದ ಬಜೆಟ್ ಮಂಡನೆ ಮಾಡಿದ್ದು, ಮೊತ್ತ 3,427 ರೂ.ಗಳಾಗಿವೆ.

ಕೇಂದ್ರ ಪಾಲಿಕೆ: ಬೆಂಗಳೂರು ಕೇಂದ್ರ ನಗರ ಪಾಲಿಕೆಯು ತುಸು ಗುಣಮಟ್ಟದ ಬಜೆಟ್ ಮಂಡನೆ ಮಾಡಿದೆ. ಎಳಕ್ಕೂ ಹೆಚ್ಚು ಹೊಸ ಯೋಜನೆಗಳನ್ನು ಹಾಗೂ ಕೆಲವು ಪೈಲಟ್ ಯೋಜನೆಗಳನ್ನು ಪರಿಚಯಿಸಿದೆ.

ಪಶ್ಚಿಮ ಪಾಲಿಕೆ: ವಸತಿ ಪ್ರದೇಶಗಳೇ ಹೆಚ್ಚಿರುವ ಪಶ್ಚಿಮ ಪಾಲಿಕೆಯಲ್ಲಿ ಆದಾಯದ ಸಂಗ್ರಹದ ಗುರಿ ತಲುಪುವುದೇ ಹರಸಾಹಸ. ಆದರೂ ಅಚ್ಚರಿ ಎಂಬಂತೆ ಅತೀ ದೊಡ್ಡ ಗಾತ್ರದ ಬಜೆಟ್ ಮಂಡಿಸಿದ್ದು, ಚರ್ಚೆಗೆ ಗ್ರಾಸವಾಗಿದೆ.

ಉತ್ತರ ಪಾಲಿಕೆ: ಮೂಲಭೂತ ಸೌಕರ್ಯಗಳನ್ನು ಒದಗಿಸಲು ಆದ್ಯತೆ ನೀಡಿರುವ ಉತ್ತರ ಪಾಲಿಕೆ ಬಜೆಟ್‌ನ ಶೇ.61.77ರಷ್ಟು ಹಣವನ್ನು ಸಾರ್ವಜನಿಕ ಅಭಿವೃದ್ಧಿ ಕಾಮಗಾರಿಗೆ ಮೀಸಲಿಡುವ ಮೂಲಕ ಜನಪರ ಆಯವ್ಯಯ ನೀಡಿದೆ.

ದಕ್ಷಿಣ ಪಾಲಿಕೆ: ಸಹಜ ಬಜೆಟ್ ಮಂಡಿಸಿರುವ ದಕ್ಷಿಣ ಪಾಲಿಕೆ, ಬೃಹತ್ ಯೋಜನೆಗಳನ್ನು ನಿರ್ವಹಿಸುವ ಬಿ-ಸ್ಮೈಲ್‌ಗೆ 625.4 ಕೋಟಿ ಅನುದಾನ ನೀಡಿರುವುದು ವಿಶೇಷವಾಗಿದೆ. ಬೇರೆ ಯಾವುದೇ ಪಾಲಿಕೆಗಳು ಬಿ-ಸ್ಮೈಲ್‌ಗೆ ಅನುದಾನ ಮೀಸಲಿಟ್ಟಿಲ್ಲ.

ಪೂರ್ವ ಪಾಲಿಕೆ: ಪ್ರಮುಖ ಐಟಿ ಹಬ್ ಪ್ರದೇಶವಾದ ಪೂರ್ವ ಪಾಲಿಕೆಯಲ್ಲಿ ಆದಾಯ ತಂದು ಕೊಡುವ ಪಾಲಿಕೆಯು ಆಗಿದೆ. ಆದರೆ ಹಳೆ ಯೋಜನೆಯನ್ನೇ ಪೂರ್ಣಗೊಳಿಸುವ ಪ್ರಸ್ತಾವನೆಯೊಂದಿಗೆ, ಕೊರತೆ ಬಜೆಟ್ ಮಂಡಿಸಿದೆ.

> ಜನ ಪ್ರತಿನಿಧಿಗಳು ಇಲ್ಲದ ಕಾರಣ ನೋಡಲ್ ಅಧಿಕಾರಿಗಳನ್ನು ನೇಮಿಸಿ, ಸಾರ್ವಜನಿಕರ ಅಭಿಪ್ರಾಯದಂತೆ ಬಜೆಟ್ ಹಣವನ್ನು ವಿನಿಯೋಗಿಸಬೇಕು.
> ■ ರಿತ್ವಾಂಜಸ್ ರಾಘವನ್, ಬಿಎಸ್‌ಪಿ ಯುವ ವಿಭಾಗದ ಅಧ್ಯಕ್ಷ

ಪಾಲಿಕೆವಾರು ಬಜೆಟ್ ವಿವರ (ಕೋಟಿ ರೂ.ಗಳಲ್ಲಿ)		
ನಗರ ಪಾಲಿಕೆ ಹೆಸರು	ವೆಚ್ಚದ ವಿವರ	ಆದಾಯದ ನಿರೀಕ್ಷೆ
ಕೇಂದ್ರ	3,426.61	3427.00
ಪಶ್ಚಿಮ	4,732.72	4732.81
ಉತ್ತರ	4,341.20	4344.00
ಪೂರ್ವ	3,889.98	3888.41
ದಕ್ಷಿಣ	3,825.95	3826.43
ಒಟ್ಟು	20,216.46	20,218.65

ಆದಾಯಕ್ಕೆ ಖಾತಾ , ಮುನಿಸಿಪಲ್ ಬಾಂಡ್ ಮೊರೆ

ಐದು ಪಾಲಿಕೆಗಳು ಮುನಿಸಿಪಲ್ ಬಾಂಡ್ ಮತ್ತು ಬಿ ಖಾತಾದಿಂದ ಎ ಖಾತಾ ಪರಿವರ್ತನೆಯಿಂದ ಆದಾಯ ಗಳಿಸುವ ಪ್ರಸ್ತಾವನೆಯನ್ನು ಮಾಡಿವೆ. ಆದರೆ, ಬಿ ಖಾತಾದಿಂದ ಎ ಖಾತಾ ಪರಿವರ್ತನೆಗೆ ಜನರು ನಿರಸ ಪ್ರಕ್ರಿಯೆ ತೋರುತ್ತಿದೆ. ಮುನಿಸಿಪಲ್ ಬಾಂಡ್ ಸಂಬಂಧಿಸಿದಂತೆ ಕಾನೂನು ಪ್ರಕಾರ ವಿತರಿಸಲು ಸಮಯ ಬೇಕಾಗುತ್ತದೆ ಎಂಬುದು ತಜ್ಞರ ಅಭಿಪ್ರಾಯ. ಆದ್ದರಿಂದ ಈ ಆರ್ಥಿಕ ವರ್ಷಕ್ಕೆ ಮುನ್ಸಿಪಲ್ ಬಾಂಡ್ ವಿತರಣೆ ಮಾಡುವುದು ಕಷ್ಟ ಎಂಬ ಅಭಿಪ್ರಾಯವಾಗಿದೆ.



ವಾರ್ಡ್‌ಗಳ ಖರ್ಚು-ವೆಚ್ಚದ ಮಾಹಿತಿ ಸಿಗಲಿ

• ಬೆಂಗಳೂರು: ಬೆಂಗಳೂರಿನ ಆಡಳಿತಾತ್ಮಕ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಐದು ಪ್ರತ್ಯೇಕ ಮಹಾನಗರ ಪಾಲಿಕೆಗಳ ಚೊಚ್ಚಲ ಬಜೆಟ್ ಮಂಡನೆಯಾಗಿದೆ. ಆದರೆ ನಗರದ ಆಡಳಿತದಲ್ಲಿ ಆಮೂಲಾಗ್ರ ಪಾರದರ್ಶಕತೆ ಬೇಕಿದೆ. ನಾಗರಿಕರಿಗೆ ವಾರ್ಡ್ ಮಟ್ಟದ ಖರ್ಚು-ವೆಚ್ಚಗಳ ಬಗ್ಗೆ ರಿಯಲ್ ಟೈಮ್ ಮಾಹಿತಿ ಸಿಗಬೇಕು ಎಂದು ಜನಾಗ್ರಹ ಸಂಸ್ಥೆ ಆಗ್ರಹಿಸಿದೆ.

ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ಅಡಿಯಲ್ಲಿ ರೂಪುಗೊಂಡಿರುವ ಪಾಲಿಕೆಗಳು ಒಟ್ಟು 20,216 ಕೋಟಿ ಮೊತ್ತದ ಮುಂಗಡಪತ್ರವನ್ನು ಸಾರ್ವಜನಿಕವಾಗಿ ಮಂಡಿಸಿವೆ. ಕಳೆದ ವರ್ಷದ ಏಕೀಕೃತ ಬಜೆಟ್‌ಗೆ ಹೋಲಿಸಿದರೆ ಈ ಬಾರಿ ಕೇವಲ ಶೇ. 1ರಷ್ಟು ಮಾತ್ರ ಏರಿಕೆಯಾಗಿದೆ ಎಂದು ಜನಾಗ್ರಹ ಸಂಸ್ಥೆ ವಿಶ್ಲೇಷಿಸಿದೆ.

ನಾಗರಿಕ ಸ್ನೇಹಿ ಉಪಕ್ರಮಗಳು ಉತ್ತಮ ಕ್ರಮ: ಆಡಳಿತದಲ್ಲಿ ಪಾರದರ್ಶಕತೆ ತರಲು ಹಲವು ಹೊಸ ಕ್ರಮಗಳನ್ನು ಘೋಷಿಸಿರುವುದು ಆಶಾದಾಯಕವಾಗಿದೆ. ಪೂರ್ವ ಪಾಲಿಕೆಯು ವಾರ್ಡ್ ಮಟ್ಟದ ಯೋಜನಾ ಪ್ರಗತಿ ತಿಳಿಯಲು ಪಾಲಿಕೆಯ ಸಾರ್ವಜನಿಕ ಡ್ಯಾಶ್ ಬೋರ್ಡ್ ಸಿದ್ಧಪಡಿಸಲಿದೆ.

ಉತ್ತರ ಪಾಲಿಕೆಯಲ್ಲಿ ದೂರುಗಳ ತಕ್ಷಣದ ಪರಿಹಾರಕ್ಕೆ ಫ್ರೈಡೇ ಫೋನ್-ಇನ್ ಕಾರ್ಯಕ್ರಮ ಮತ್ತು ಇ-ಖಾತಾ ಸಾಫ್ಟ್‌ವೇರ್ ಅಳವಡಿಕೆ, ಪಶ್ಚಿಮ ಪಾಲಿಕೆಯಲ್ಲಿ ಆಸ್ತಿಗಳ ಜಿಐಎಸ್ ಟ್ಯಾಗಿಂಗ್, ಕೇಂದ್ರ ಮತ್ತು ಉತ್ತರ ಪಾಲಿಕೆಯಿಂದ 24/7 ನಿಯಂತ್ರಣ ಕೊಠಡಿಗಳ ಸ್ಥಾಪನೆಯು ಉತ್ತಮ ಕ್ರಮವಾಗಿದೆ ಎಂದು ಜನಾಗ್ರಹ ಸಂಸ್ಥೆ ತಿಳಿಸಿದೆ.

JANAAGRAHA
ಜನಾಗ್ರಹ

> ನಗರದ ಆಡಳಿತದಲ್ಲಿ ಆಮೂಲಾಗ್ರ ಪಾರದರ್ಶಕತೆ ಬೇಕಿದೆ. ನಾಗರಿಕರಿಗೆ ವಾರ್ಡ್ ಮಟ್ಟದ ಖರ್ಚು-ವೆಚ್ಚಗಳ ಬಗ್ಗೆ ರಿಯಲ್ ಟೈಮ್ ಮಾಹಿತಿ ಸಿಗಬೇಕು.
> ■ ಶ್ರೀಕಾಂತ್ ವಿಶ್ವನಾಥನ್, ಜನಾಗ್ರಹ ಸಂಸ್ಥೆಯ ಸಿಇಒ

ನಾಳೆ ಸಂಯಮ ಪ್ರಶಸ್ತಿ ಪ್ರದಾನ

• ಬೆಂಗಳೂರು: ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ ವತಿಯಿಂದ 2023, 2024 ಹಾಗೂ 2025ನೇ ಸಾಲಿನ ಸಂಯಮ ಪ್ರಶಸ್ತಿ ಪ್ರದಾನ ಸಮಾರಂಭವು ಮಾ. 31ರಂದು ಬೆಳಗ್ಗೆ 11 ಗಂಟೆಗೆ ಗಾಂಧೀ ಭವನದಲ್ಲಿರುವ ಮಹಾದೇವ ದೇಸಾಯಿ ಸಭಾಂಗಣದಲ್ಲಿ ನಡೆಯಲಿದೆ.

ಸಂಯಮ ಪ್ರಶಸ್ತಿಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರದಾನ ಮಾಡಲಿದ್ದು, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಕಾರ್ಯಕ್ರಮದಲ್ಲಿ ಉಪಸ್ಥಿತರಿರಲಿದ್ದಾರೆ. ಮುಖ್ಯ ಅತಿಥಿಗಳಾಗಿ ಸಚಿವರಾದ ಎಚ್.ಕೆ.ಪಾಟೀಲ, ಪ್ರಿಯಾಂಕ್ ಖರ್ಗೆ, ಶರಣಬಸಪ್ಪಗೌಡ ದರ್ಶನಾಪುರ, ಶರಣಪ್ರಕಾಶ್ ಆರ್. ಪಾಟೀಲ್ ಹಾಗೂ ಎನ್.ಎಸ್. ಭೋಸರಾಜ್, ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್ ಹಾಗೂ ಸಂಸದ ಪಿ.ಸಿ. ಮೋಹನ್ ಭಾಗವಹಿಸಲಿದ್ದಾರೆ. ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ ಅಧ್ಯಕ್ಷ ಶರಣಪ್ಪ ಸಲಾದಪುರ ಪ್ರಾಸ್ತಾವಿಕವಾಗಿ ಮಾತನಾಡಲಿದ್ದು, ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಸಕರಾದ ರಿಜ್ವಾನ್ ಅರ್ಷದ್ ಅವರು ವಹಿಸಲಿದ್ದಾರೆ.

ಮುಖ್ಯಮಂತ್ರಿಗಳ ಕಾರ್ಯದರ್ಶಿಗಳು ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸರ್ಕಾರದ ಕಾರ್ಯದರ್ಶಿ ಬಿ.ಬಿ.ಕಾವೇರಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಆಯುಕ್ತ ಹೇಮಂತ್ ನಿಂಬಾಳ್ಕರ್ ಉಪಸ್ಥಿತರಿರಲಿದ್ದಾರೆ.

ಸಂಯಮ ಪ್ರಶಸ್ತಿ ಪುರಸ್ಕೃತರು: ಕರ್ನಾಟಕ ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಡಿ.ಆರ್. ಪಾಟೀಲ 2023ನೇ ಸಾಲಿನ ಪ್ರಶಸ್ತಿ ಪಡೆಯುವರು. ಕರ್ನಾಟಕ ರಾಜ್ಯ ನೀತಿ ಮತ್ತು ಯೋಜನಾ ಆಯೋಗದ ಉಪಾಧ್ಯಕ್ಷ ಬಿ.ಆರ್. ಪಾಟೀಲ್ 2024ನೇ ಸಾಲಿನ ಮತ್ತು ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಅಧ್ಯಕ್ಷ ಡಾ. ವೂಡೇ ಪಿ. ಕೃಷ್ಣ 2025ನೇ ಸಾಲಿನ ಪ್ರಶಸ್ತಿ ಪಡೆಯುತ್ತಾರೆ.

ಬಿಜೆಎಸ್ ಸೇವಾರತ್ನ ಪುರಸ್ಕಾರ: ಡಾ.ನಿರ್ಮಲಾನಂದನಾಥ ಸ್ವಾಮೀಜಿ ಮೆಚ್ಚುಗೆ

ಒಕ್ಕಲಿಗ ಯುವ ಬ್ರಿಗೇಡ್ ಸೇವೆ ಶ್ಲಾಘನೀಯ

• ಬೆಂಗಳೂರು: ಒಕ್ಕಲಿಗ ಯುವ ಬ್ರಿಗೇಡ್ ತನ್ನ ಸೇವಾ ಕಾರ್ಯವನ್ನು ಕೇವಲ ತಾಯಿ ನಾಡಿಗೆ ಸೀಮಿತ ಗೊಳಿಸದೆ, ಪ್ರಪಂಚದಾದ್ಯಂತ ವಿಸ್ತರಿಸಿದ ಕೀರ್ತಿ ಒಕ್ಕಲಿಗ ಯುವ ಬ್ರಿಗೇಡಿನ ಸಂಸ್ಥಾಪಕ ಅಧ್ಯಕ್ಷ ನಂಜೇಗೌಡ-ನಂಜುಂಡ ಅವರಿಗೆ ಸಲ್ಲುತ್ತದೆ ಎಂದು ಆದಿಚುಂಚನಗಿರಿ ಸಂಸ್ಥಾನದ ಪೀಠಾಧ್ಯಕ್ಷ ಡಾ. ನಿರ್ಮಲಾನಂದನಾಥ ಸ್ವಾಮೀಜಿ ಹೇಳಿದರು.

ಒಕ್ಕಲಿಗ ಯುವ ಬ್ರಿಗೇಡ್ ಮತ್ತು ಮೆಲ್ಬೋರ್ನ್ ಕನ್ನಡ ಸಂಘವು ಜಂಟಿಯಾಗಿ ಆಸ್ಟ್ರೇಲಿಯಾದ ಮೆಲ್ಬೋರ್ನ್ ನಗರದಲ್ಲಿ ಹಮ್ಮಿಕೊಂಡಿದ್ದ ವಿಶ್ವ ಕನ್ನಡಿಗರ ವೈಭವ, ಬಿಜೆಎಸ್ ಸೇವಾರತ್ನ ಪುರಸ್ಕಾರ ಸಮಾರಂಭದಲ್ಲಿ ಅವರು ಮಾತನಾಡಿದರು.

ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಮಾತನಾಡಿ, ಮೆಲ್ಬೋರ್ನ್ ಕನ್ನಡ ಸಂಘ ಮತ್ತು ಒಕ್ಕಲಿಗ ಯುವ ಬ್ರಿಗೇಡ್ ಹಮ್ಮಿಕೊಂಡಿರುವ ವಿಶ್ವ ಕನ್ನಡಿಗರ ವೈಭವ ಕಾರ್ಯಕ್ರಮವು ಕನ್ನಡಿಗರಿಗೆ ದೊಡ್ಡ ಮೈಲಿಗಲ್ಲು ಎಂದು ಹೇಳಿದರು.



ವಿಕ್ಟೋರಿಯನ್ ಸಂಸತ್ತಿನ ಸದಸ್ಯೆ ಕ್ಯಾಸ್ಸಂಡ್ರ ಫರ್ನಾಂಡೋ ಮಾತನಾಡಿ, ಒಕ್ಕಲಿಗ ಯುವ ಬ್ರಿಗೇಡ್ ಸಂಸ್ಥೆಯು ಸಮಾಜಮುಖಿ ಕಾರ್ಯಕ್ರಮಗಳನ್ನು ಮಾಡುತ್ತಿರುವುದು ಶ್ಲಾಘನೀಯವಾದ ಸಂಗತಿ ಯಾಗಿದೆ ಮತ್ತು ಮೆಲ್ಬೋರ್ನ್ ಕನ್ನಡ ಸಂಘದ ಕೆಲಸಗಳಿಗೆ ಸಹಕಾರ ನೀಡುವುದಾಗಿ ಭರವಸೆ ನೀಡಿದರು. ಮೆಲ್ಬೋರ್ನ್ ಸಂಸದೆ ಈಡನ್ ಫಾಸ್ಟರ್ ಮಾತನಾಡಿ, ಮಾನವೀಯ ಮೌಲ್ಯಗಳ ಕೆಲಸ ಮಾಡುತ್ತಿರುವ ಒಕ್ಕಲಿಗ ಯುವ ಬ್ರಿಗೇಡ್ ಮತ್ತು ಸಮುದಾಯ ಸೇವೆ ಮಾಡುತ್ತಿರುವ ಮೆಲ್ಬೋರ್ನ್ ಕನ್ನಡ ಸಂಘದ ಕಾರ್ಯ ಅಭಿನಂದನೀಯ ಎಂದರು. ಈ ವೇಳೆ ಉದ್ಯಮಿ ಸೀಕಲ್ ರಾಮಚಂದ್ರ ಗೌಡ ಅವರಿಗೆ ಮಣ್ಣಿನ ಮಗ ಪ್ರಶಸ್ತಿ ಮತ್ತು ಡಾ.ರಾಜು ಗೌಡ ಅವರಿಗೆ ಬಿಜೆಎಸ್ ಸೇವಾ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ವಿಕ್ಟೋರಿಯಾ ಸಂಸದ ಜಾನ್ ಮುಳ್ಳುಹಾಯ್, ಮೇಯರ್ ಸೋಪಿನಾಥ್, ಮೆಲ್ಬೋರ್ನ್ ಭಾರತೀಯ ರಾಯಭಾರಿ ಅನೀಶ್ ರಂಜನ್, ಒಕ್ಕಲಿಗ ಯುವ ಬ್ರಿಗೇಡಿನ ಸಂಸ್ಥಾಪಕ ಅಧ್ಯಕ್ಷ ನಂಜೇಗೌಡ ನಂಜುಂಡ, ಮೆಲ್ಬೋರ್ನ್ ಕನ್ನಡ ಸಂಘದ ಅಧ್ಯಕ್ಷ ಶ್ರೀನಿವಾಸ್ ಶರ್ಮ ಕಾರ್ಯಕ್ರಮದಲ್ಲಿದ್ದರು.

ಅಧಿಕಾರಿಗಳಿಗೆ ಸಚಿವ ರಾಮಲಿಂಗಾರೆಡ್ಡಿ ಸೂಚನೆ

ಕರಗೋತ್ಸವ ಅಚ್ಚುಕಟ್ಟಾಗಿ ನಡೆಯಲಿ

• ಬೆಂಗಳೂರು: ಐತಿಹಾಸಿಕ ಶ್ರೀ ಧರ್ಮರಾಯಸ್ವಾಮಿ ದೇವಾಲಯದಲ್ಲಿ ಆರಂಭವಾಗಿರುವ ಕರಗ ಉತ್ಸವ ವನ್ನು ಅಚ್ಚುಕಟ್ಟಾಗಿ ನಡೆಸಲು ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಶನಿವಾರ ದೇವಾಲಯಕ್ಕೆ ಭೇಟಿ ನೀಡಿ ಸಿದ್ಧತೆಗಳ ಪರಿಶೀಲನೆ ನಡೆಸಿ, ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಬಳಿಕ ಸುದ್ದಿಗೋಷ್ಠಿ ನಡೆಸಿದ ಅವರು, ಏ.1ರಂದು ಕರಗದ ದಿನ ಲಕ್ಷಾಂತರ ಮಂದಿ ಆಗಮಿಸುವ ಹಿನ್ನೆಲೆಯಲ್ಲಿ ಅಗತ್ಯ ಮೊಬೈಲ್ ಟಾಯ್ಲೆಟ್, ಕುಡಿಯುವ ನೀರಿನ ವ್ಯವಸ್ಥೆ ಕರಗ ಸಾಗುವ ಹಾದಿಯುದ್ದಕ್ಕೂ ವಿದ್ಯುದ್ದೀಪಗಳಲ್ಲಿ ಯಾವುದೇ ತೊಂದರೆಯಾಗದಂತೆ ನಿಗಾವಹಿಸುವುದು, ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸುವುದು, ಸ್ವಚ್ಛತೆಗೆ ಅಗತ್ಯ ಸಿಬ್ಬಂದಿಯನ್ನು ನಿಯೋಜಿಸಲು ಸೂಚಿಸಲಾಗಿದೆ ಎಂದರು.

ಪ್ರತಿ ದಿನ ದೇವಾಲಯದಲ್ಲಿ ಹಿಂದಿನಿಂದಲೂ ನಡೆಸಿಕೊಂಡು ಬಂದಿರುವ ಸಂಪ್ರದಾಯಗಳಿಗೆ ಅನುಗುಣವಾಗಿ ಕರಗ ಮಹೋತ್ಸವ ನಡೆಯಲಿದೆ. ಕರಗದ ವೇಳೆ ಸೂಕ್ತ ಭದ್ರತೆಯನ್ನು ಒದಗಿಸಲು ಪೊಲೀಸ್ ಇಲಾಖೆ ನೆರವಾಗಲಿದೆ. ಹೂವು ಮತ್ತು ಹೂವಿನ ಹಾರ, ದೇವಾಲಯದ ಆವರಣದಲ್ಲಿ ಹೂವಿನ ಅಲಂಕಾರ ಮಾಡಲು ಇ-ಪ್ರಕ್ಯೂರ್‌ಮೆಂಟ್ ಮುಖಾಂತರ ಇ-ಟೆಂಡರ್ ಕರೆಯಲಾಗಿದೆ ಎಂದರು.

ಏ.1ರಂದು ನಡೆಯುವ ಕರಗ ಶಕ್ತ್ಯೋತ್ಸವ ಮತ್ತು ಮಹಾರಥೋತ್ಸವದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಸೇರಿದಂತೆ ಹಲವರು ಪಾಲ್ಗೊಳ್ಳಲಿದ್ದಾರೆ ಎಂದರು.

ಕರಗಕ್ಕೆ ದೇವಾಲಯದ ಒಳಾಂಗಣದ ಎಲ್ಲಾ ಕೆಲಸ ಕಾರ್ಯಗಳನ್ನು ಮುಜರಾಯಿ ಇಲಾಖೆಯಿಂದ ನಿರ್ವಹಿಸಲಾಗುತ್ತಿದ್ದು, ಇದಕ್ಕಾಗಿ ಸುಮಾರು 70-80 ಲಕ್ಷ ರೂ. ಆಗಲಿದೆಂದು ಅಂದಾಜಿಸಲಾಗಿದೆ. ಹೊರಭಾಗದ ಕೆಲಸಗಳನ್ನು ಜಿಬಿಎ ವಹಿಸಿಕೊಂಡಿದ್ದು, ಮೈಸೂರು ದಸರಾ ಮಾದರಿಯಲ್ಲಿ ವಿದ್ಯುದ್ದೀಪಗಳನ್ನು ಅಳವಡಿಸುವುದು ಸೇರಿದಂತೆ ನಾನಾ ಕೆಲಸಗಳಿಗಾಗಿ ಸುಮಾರು ಒಂದು ಕೋಟಿ ರೂ. ಆಗಬಹುದಾಗಿದೆಂದು ಅಂದಾಜಿಸಲಾಗಿದೆ ಎಂದು ತಿಳಿಸಿದರು.

ಸಾಮೆ ಐಸ್‌ಕ್ರೀಮ್, ಜೇನುತುಪ್ಪದ ಚಾಕೋಲೇಟ್ ಆಕರ್ಷಣೆ। ಗಿರ್ ತಳಿಯ ಗಿಣ್ಣಿಗೆ ಹೆಚ್ಚು ಬೇಡಿಕೆ

ಜಿಕೆವಿಕೆಯಲ್ಲಿ ಯುಗಾದಿ ರೈತ ಸಂತೆ

• ಬೆಂಗಳೂರು: ನಗರದ ಜಿಕೆವಿಕೆ ಆವರಣದಲ್ಲಿ ಆಯೋಜಿಸಲಾಗಿದ್ದ ಯುಗಾದಿ ವಿಶೇಷ ರೈತ ಸಂತೆಯಲ್ಲಿ ಸಾಮೆ ಐಸ್‌ಕ್ರೀಮ್, ಜೇನು ತುಪ್ಪದ ಚಾಕಲೇಟ್, ಗಿರ್ ತಳಿಯ ಗಿಣ್ಣು ಸೇರಿದಂತೆ ಇತರೆ ಉತ್ಪನ್ನಗಳು ಗ್ರಾಹಕರನ್ನು ಆಕರ್ಷಿಸಿದವು.



ಪೌಷ್ಟಿಕಾಂಶಗಳಲ್ಲಿ ಸಮೃದ್ಧವಾಗಿರುವ ಅಣಬೆಯು ಆರೋಗ್ಯಕರ ಆಹಾರವಾಗಿ ದಿನದಿಂದ ದಿನಕ್ಕೆ ಜನಪ್ರಿಯವಾಗುತ್ತಿದೆ. ಈ ಅಣಬೆಯಿಂದ ತಯಾರಿಸಿದ ವೈವಿಧ್ಯಮಯ ಸೂಪ್ ಪೌಡರ್, ಹಪ್ಪಳ, ಉಪ್ಪಿನಕಾಯಿ ಈ ಬಾರಿ ರೈತ ಸಂತೆಯ ಆಕರ್ಷಣೆಯಾಗಿತ್ತು. ಜಿಕೆವಿಕೆ ವಿದ್ಯಾರ್ಥಿಗಳೇ ತಯಾರಿಸಿದ ಜೇನು ತುಪ್ಪದ ಚಾಕಲೇಟ್‌ಗಳು ಗ್ರಾಹಕರ ಮನಸ್ಸೆಳೆಯಿತು. ಇದರ ಜೊತೆ ಸಿರಿಧಾನ್ಯಗಳಲ್ಲೇ ಉತ್ಕೃಷ್ಟವಾದ ಸಾಮೆಯಿಂದ ತಯಾರಿಸಿದ ಐಸ್ ಕ್ರೀಮ್ ಬೇಸಿಗೆಯ ಬಿಸಿಲನ್ನು ತಣಿಸುವಲ್ಲಿ ಯಶಸ್ವಿಯಾಯಿತು. ಇತ್ತೀಚೆಗೆ ನಗರ ಪ್ರದೇಶಗಳಲ್ಲಿ ಹಸುವಿನ ಗಿಣ್ಣು ಅಪರೂಪವಾಗಿದ್ದು ಈ ಸಂತೆಯಲ್ಲಿ ಗಿರ್ ತಳಿಯ ಗಿಣ್ಣು ಎಲ್ಲರನ್ನೂ ತನ್ನತ್ತ ಸೆಳೆಯುವಲ್ಲಿ ಯಶಸ್ವಿಯಾಯಿತು.

ದಿನದಿಂದ ದಿನಕ್ಕೆ ಜನಪ್ರಿಯವಾಗುತ್ತಿರುವ ಜಿಕೆವಿಕೆ ಸಂತೆಗೆ ಪಕ್ಕದ ರಾಜ್ಯವಾದ ಕೇರಳದ ವಯನಾಡು ಕೃಷಿ ವಿದ್ಯಾರ್ಥಿ ಉದ್ದಿಮೆದಾರರು ತಾವೇ ತಂದು ಮಾರಾಟಮಾಡಿದ ಕಾಡು ಜೇನುತುಪ್ಪ, ತೆಂಗಿನ ಎಣ್ಣೆ, ಎಳ್ಳು ಎಣ್ಣೆ, ಹೇರ್ ಆಯಿಲ್ ಸಂತೆಯ ಆಕರ್ಷಣೆಯ ಕೇಂದ್ರವಾಗಿತ್ತು. ರೈತರು ಬೆಳೆದ ತಾಜಾ ಹಲಸು, ಸಪೋಟ ಇತ್ಯಾದಿ ಹಣ್ಣುಗಳಿಂದ ರೈತ ಸಂತೆಯಲ್ಲಿ ವಿವಿಧ ಋತುಕಾಲಿನ ಹಣ್ಣುಗಳು ನೇರವಾಗಿ ಲಭ್ಯವಿದ್ದವು. ಜಿಕೆವಿಕೆ ವಿದ್ಯಾರ್ಥಿಗಳೇ ಬೆಳೆದ ಹೂವುಗಳಿಗೆ ಹೆಚ್ಚಿನ ಬೇಡಿಕೆ ಇತ್ತು ಹಾಗೂ ಅಲಂಕಾರಿಕ ಮೀನು ಮರಿಗಳಿಗೆ ಹೆಚ್ಚಿನ ಬೇಡಿಕೆ ಕಂಡುಬಂದಿದ್ದು, ಬಣ್ಣ ಬಣ್ಣದ ಮೀನುಮರಿಗಳನ್ನು ಗ್ರಾಹಕರು ಖರೀದಿಸಿದರು.

ಸಿರಿಧಾನ್ಯಗಳ ಮೌಲ್ಯವರ್ಧಿತ ಉತ್ಪನ್ನಗಳು, ಸಾವಯವ ಉತ್ಪನ್ನಗಳು, ತೋಟಗಾರಿಕೆ, ಸುಗಂಧ ಮತ್ತು ಔಷಧೀಯ ಸಸ್ಯಗಳು, ಅಲಂಕಾರಿಕ ಗಿಡಗಳು, ಜೈವಿಕ ಗೊಬ್ಬರಗಳು, ಕೃಷಿ ಯಂತ್ರೋಪಕರಣಗಳು, ಎರೆಹುಳು ಗೊಬ್ಬರ, ಸಸ್ಯ ಸಂರಕ್ಷಣೆ: ಜೈವಿಕ ಕೀಟ ನಾಶಕಗಳು, ಕರಕುಶಲ ವಸ್ತುಗಳು, ವಾಣಿಜ್ಯೀಕರಣ ಉತ್ಪನ್ನಗಳು, ಪಶು ಸಂಗೋಪನೆ, ಕೃಷಿ ಪ್ರಕಟಣೆಗಳು, ವಿಶ್ವವಿದ್ಯಾನಿಲಯದ ಬಗ್ಗೆ ಮಾಹಿತಿ, ಎತ್ತಿನ ಬಂಡಿ ಸವಾರಿ ಇನ್ನು ಮುಂತಾದ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟದ ವ್ಯವಸ್ಥೆ ಮಾಡಲಾಗಿತ್ತು.

ಇಂದು ನಗರದಲ್ಲಿ...

- ಕರಗ ಉತ್ಸವ ನಿಮಿತ್ತ ಕರಗದ ಕುಂಟೆ ಬಳಿ ಪೂಜೆ, ಸ್ಥಳ: ಕಬ್ಬನ್ ಉದ್ಯಾನವನ, ಮಧ್ಯಾಹ್ನ 12.30
- ಕುಣಲ ಕಲಾವೃಂದದಿಂದ ಶಿವ ಮಹಿಮೆ ಪೌರಾಣಿಕ ನಾಟಕ ಪ್ರದರ್ಶನ, ಸ್ಥಳ: ನಯನ ಬಯಲು ರಂಗಮಂದಿರ, ಸಂಜೆ 4
- ಭಗವಾನ್ ಶ್ರೀ ಮಹಾವೀರ ಜಯಂತಿ ಕಾರ್ಯಕ್ರಮ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಸಂಜೆ 6 ಗಂಟೆಗೆ
- ವಿದ್ವಾನ್ ಕಲ್ಲಾಪುರ ಪವಮಾನಾಚಾರ್ಯರಿಂದ ಹರಿದಾಸರು ಕಂಡ ಶ್ರೀ ರಾಮಚಂದ್ರ ಕುರಿತಾಗಿ ಉಪನ್ಯಾಸ, ಸ್ಥಳ: ರಾಗೀಗುಡ್ಡ ಪ್ರಸನ್ನ ಆಂಜನೇಯ ಸ್ವಾಮಿ ದೇವಸ್ಥಾನ, ಜಯನಗರ, ಸಂಜೆ 6.30

ಆರೆಂಜ್ ಕ್ಯಾಪ್
ಇಶಾನ್ ಕಿಶನ್
80 ರನ್

ಪರ್ಪಲ್ ಕ್ಯಾಪ್
ಜೇಕಬ್ ಡಫಿ
3 ವಿಕೆಟ್

2ನೇ ಪಂದ್ಯದಲ್ಲಿ ಕೆಕೆಆರ್ 220/4 | ಮುಂಬೈಗೆ ಶಾರ್ದೂಲ್ ಆಸರೆ | ರಘುವಂಶಿ ಅರ್ಧ ಶತಕ

ಮಿಂಚಿದ ರಹಾನೆ: ಮುಂಬೈಗೆ ಕಠಿಣ ಗುರಿ

• **ಮುಂಬೈ:** ಅಜಿಂಕ್ಯಾ ರಹಾನೆ, ಫಿನ್ ಅಲೆನ್ ಮತ್ತು ಅಂಗ್ರಿಶ್ ರಘುವಂಶಿ ಅವರ ಸ್ಫೋಟಕ ಬ್ಯಾಟಿಂಗ್‌ಗೆ ರಿಂಕು ಸಿಂಗ್ ಅವರ ಫಿನಿಶಿಂಗ್ ಟಚ್ ಸಿಕ್ಕ ನಂತರ ಶಾರ್ದೂಲ್ ಠಾಕೂರ್ ಅವರ ಮಾರಕ ದಾಳಿ ಹೊರತಾಗ್ಯೂ ಮುಂಬೈ ವಿರುದ್ಧದ ಐಪಿಎಲ್ ಪಂದ್ಯದಲ್ಲಿ ಕೋಲ್ಕತ್ತಾ ದೊಡ್ಡ ಸ್ಕೋರ್ ಕಲೆಹಾಕಿದೆ.

ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯ ಎರಡನೇ ಪಂದ್ಯದಲ್ಲಿ ಮುಂಬೈ ಹಾಗೂ ಕೆಕೆಆರ್ ತಂಡಗಳು ಮುಖಾಮುಖಿಯಾಗಿವೆ. ಈ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಕೆಕೆಆರ್ 4 ವಿಕೆಟ್ ನಷ್ಟಕ್ಕೆ ಬರೋಬ್ಬರಿ 220 ರನ್ ಗಳಿಸಿದೆ. ರಹಾನೆ 40 ಬಾಲ್‌ಗಳಲ್ಲಿ 5 ಸಿಕ್ಸರ್ ಹಾಗೂ 3 ಬೌಂಡರಿಗಳೊಂದಿಗೆ 67 ರನ್ ಗಳಿಸಿ ಬೆಸ್ಟ್ ಸ್ಕೋರರ್ ಆದರು. ಅಲೆನ್ ಸ್ಫೋಟಕ ಆರಂಭ ಒದಗಿಸಿದರು. ರಘುವಂಶಿ ಸ್ಫೋಟಕ ಬ್ಯಾಟಿಂಗ್ ಮಾಡಿ ಸ್ಕೋರ್ ಹಿಗ್ಗಿಸಿದರು. ರಿಂಕು ಅತ್ಯುತ್ತಮ ಫಿನಿಶಿಂಗ್ ನೀಡಿದರು. ಮುಂಬೈ ಪರ ಶಾರ್ದೂಲ್ ಠಾಕೂರ್ 3 ವಿಕೆಟ್ ಕಿತ್ತು ಮಿಂಚಿದರು.



ಕೆಕೆಆರ್‌ಗೆ ಸ್ಫೋಟಕ ಆರಂಭ

ಟಾಸ್ ಸೋತು ಬ್ಯಾಟಿಂಗ್‌ಗಿಳಿದ ಕೆಕೆಆರ್‌ಗೆ ಭರ್ಜರಿ ಆರಂಭ ದೊರೆಯಿತು. ಅನಿರೀಕ್ಷಿತ ವಾಗಿ ನರೈನ್ ಬದಲಿಗೆ ನಾಯಕ ಅಜಿಂಕ್ಯಾ ರಹಾನೆ ಮತ್ತು ಸ್ಫೋಟಕ ಬ್ಯಾಟರ್ ಫಿನ್ ಅಲೆನ್ ಕಣಕ್ಕಿಳಿದರು. ಯಥಾಸ್ಥಿತಿ ಆರಂಭಿಕ ಓವರ್‌ನಲ್ಲಿ ಅಲೆನ್ ದಂಡಿಸಲಾರಂಭಿಸಿದರು. ಸೆಟ್ ಆಗಬೇಕಾದ ಸಮಯವೂ ತೆಗೆದುಕೊಳ್ಳದ ರಹಾನೆ ಕೂಡ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಮುಂಬೈಗೆ ಆರಂಭಿಕ ಒತ್ತಡ ಹೇರಿದರು. ಇಬ್ಬರ ಆಟಕ್ಕೆ ಮುಂಬೈ ತತ್ತರಿಸಿ ಹೋದಂತೆ 5.2 ಓವರ್ ವೇಳೆ 69ಕ್ಕೇರಿತ್ತು. ಅಲೆನ್ ಕ್ಯಾಚ್ ಆದರು. ರಹಾನೆ ಸ್ಫೋಟಕ ಬ್ಯಾಟಿಂಗ್ ಮುಂದುವರಿಸಿದರು. ಮೂರನೇ ಕ್ರಮಾಂಕದಲ್ಲಿ ಬ್ಯಾಟಿಂಗ್‌ಗೆ ಬಂದ ಈ ಬಾರಿಯ ಅತ್ಯಂತ ದುಬಾರಿ ಆಟಗಾರ ಕ್ಯಾಮರೂನ್ ಗ್ರೀನ್ ಕೂಡ ರಹಾನೆ ಆಟಕ್ಕೆ ಹೊಂದಿಕೊಂಡರು. ಮೊದಲಿನಿಂದಲೂ ಸ್ಫೋಟಕ ಬ್ಯಾಟಿಂಗ್ ಮಾಡುವ ಉದ್ದೇಶದಿಂದ ಬಂದ ಗ್ರೀನ್ ಬಾನೆತ್ತರದ ಸಿಕ್ಸರ್ ಮತ್ತು ಬೌಂಡರಿ ಬಾರಿಸುವಷ್ಟರಲ್ಲಿ ಸುಸ್ತಾದರು. ಪವರ್‌ಪ್ಲೇನಲ್ಲಿ 78 ರನ್ ಗಳಿಸಿದ್ದ ಕೆಕೆಆರ್, ರಹಾನೆ ಅರ್ಧಶತಕಕ್ಕೆ ತತ್ತರಿಸಿದಂತಾಯಿತು. ಮಧ್ಯಮ ಕ್ರಮಾಂಕದಲ್ಲಿ ಅಂಗ್ರಿಶ್ ರಘುವಂಶಿ ಸ್ಫೋಟಕ ಅರ್ಧಶತಕ ಬಾರಿಸಿದರು. ಸ್ಲಾಗ್ ಓವರ್‌ಗಳ ವರೆಗೆ ವಿಕೆಟ್ ಕಾಯ್ದುಕೊಂಡ ಅವರು, ದಂಡಿಸುವ ಕೆಲಸಕ್ಕೆ ಮುಂದಾದರು. ಆಡಿದ 29 ಬಾಲ್‌ಗಳಲ್ಲಿ 51 ರನ್‌ಗಳಿಸಿ ವಿಕೆಟ್ ಒಪ್ಪಿಸಿದರು. ಇತ್ತ ಬೇಕಾಗಿದ್ದ ಫಿನಿಶಿಂಗ್ ಟಚ್ ನೀಡುವಲ್ಲಿ ರಿಂಕು ಸಿಂಗ್ ಯಶ ಕಂಡರು. ಹೆಚ್ಚಿನ ಸಮಯ ಸಿಂಗಲ್‌ಗಳಿಗೆ ಕೊಡದ ಅವರು 21 ಬಾಲ್‌ಗಳಲ್ಲಿ ಅಜೇಯ 33 ರನ್ ಗಳಿಸಿ ಮಿಂಚಿದರು.

ಶಾರ್ದೂಲ್ ಸ್ಟ್ರೈಕ್



ಮುಂಬೈಗೆ ಬೇಕಾದಾಗಲೆಲ್ಲಾ ಶಾರ್ದೂಲ್ ಠಾಕೂರ್ ವಿಕೆಟ್ ತಂದುಕೊಟ್ಟರು. ಪವರ್‌ಪ್ಲೇನ 6ನೇ ಓವರ್ ಮಾಡಲು ಬಂದ ಅವರು, ಸ್ಫೋಟಕ ಬ್ಯಾಟಿಂಗ್ ಮಾಡುತ್ತಿದ್ದ ಅಲೆನ್ ಅವರಿಗೆ ಪೆವಿಲಿಯನ್ ಹಾದಿ ತೋರಿಸಿದರು. 9ನೇ ಓವರ್ ಮಾಡಲು ಬಂದಾಗ ಗ್ರೀನ್ ವಿಕೆಟ್ ಪಡೆದರು. 14ನೇ ಓವರ್‌ನಲ್ಲಿ ಅರ್ಧಶತಕ ಪೂರೈಸಿಕೊಂಡು ಭರ್ಜರಿ ಬ್ಯಾಟಿಂಗ್ ಮಾಡುತ್ತಿದ್ದ ರಹಾನೆ ವಿಕೆಟ್ ಪಡೆದು ಆಪತ್ಬಾಂಧವರಾಗಿ ಕಾಣಿಸಿಕೊಂಡರು.

300 ಪಂದ್ಯಗಳನ್ನಾಡಿದ ಮುಂಬೈ

ಮುಂಬೈ ಇಂಡಿಯನ್ಸ್ ತಂಡವು ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯ ಇತಿಹಾಸದಲ್ಲಿ 300 ಪಂದ್ಯಗಳನ್ನಾಡಿದ ಏಕೈಕ ತಂಡ ಅನ್ನಿಸಿಕೊಂಡಿತು. ಕೋಲ್ಕತ್ತಾ ನೈಟ್ ರೈಡರ್ಸ್ ವಿರುದ್ಧದ ಎರಡನೇ ಪಂದ್ಯದ ಮೂಲಕ 2026ರ ಅಭಿಯಾನ ಆರಂಭಿಸಿರುವ ಮುಂಬೈ, ಐಪಿಎಲ್ ಇತಿಹಾಸದ 300ನೇ ಪಂದ್ಯವಾಡಿತು. 2008ರಿಂದ ಇಲ್ಲಿಯವರೆಗೂ ತಂಡ ಪ್ರತಿಯೊಂದು ಆವೃತ್ತಿಯಲ್ಲಿ ಪ್ರಮುಖ ಆಟವಾಡಿದೆ. ಇದಲ್ಲದೆ ಹಲವು ಬಾರಿ ಪ್ಲೇಆಫ್ ಆಡಿದೆ. ಐದು ಬಾರಿ ಚಾಂಪಿಯನ್ ಪಟ್ಟ ಅಲಂಕರಿಸಿದೆ. ಈ ಎಲ್ಲಾ ಪಂದ್ಯಗಳನ್ನು ಕೂಡಿಸಿ ಲೆಕ್ಕಿಸಿದರೆ ಮುಂಬೈ 300 ಪಂದ್ಯಗಳನ್ನು ಪೂರೈಸಿದೆ.

ಕಿರುಸುದ್ದಿ

ಆರ್ಮ್ ರೆಸ್ಲಿಂಗ್: ರಾಷ್ಟ್ರಮಟ್ಟಕ್ಕೆ ಪ್ರತಿಭೆಗಳ ಆಯ್ಕೆ



• **ಬೆಂಗಳೂರು:** ಕರ್ನಾಟಕ ಆರ್ಮ್ ರೆಸ್ಲಿಂಗ್ ಸಂಸ್ಥೆ (ಕೆಎಸ್ಎಎ) ಭಾನುವಾರದಂದು ಕೋರಮಂಗಲದ ನೆಕ್ಸಸ್ ಮಾಲ್‌ನಲ್ಲಿ 'ಕರ್ನಾಟಕ ರಾಜ್ಯ ಆರ್ಮ್ ರೆಸ್ಲಿಂಗ್ ಚಾಂಪಿಯನ್‌ಶಿಪ್' ಆಯೋಜಿಸಿತು. ರಾಜ್ಯದ ವಿವಿಧ ಭಾಗಗಳಿಂದ ಆಗಮಿಸಿದ್ದ 150ಕ್ಕೂ ಹೆಚ್ಚು ಪ್ರಮುಖ ಕ್ರೀಡಾಪಟುಗಳು ಈ ಪ್ರತಿಷ್ಠಿತ ಪಂದ್ಯಾವಳಿಯಲ್ಲಿ ಶಕ್ತಿ ಪ್ರದರ್ಶಿಸಿದರು. ಈ ಕ್ರೀಡಾಕೂಟವು ಕೇವಲ ರಾಜ್ಯಮಟ್ಟದ ಗೆಲುವಿಗಾಗಿ ಮಾತ್ರವಲ್ಲದೆ, 2026ರ ಜೂನ್‌ನಲ್ಲಿ ನಡೆಯಲಿರುವ 'ಅಖಿಲ ಭಾರತ ರಾಷ್ಟ್ರೀಯ ಚಾಂಪಿಯನ್‌ಶಿಪ್'ಗೆ ಅರ್ಹತಾ ಸುತ್ತಾಗಿ ಕಾರ್ಯ ನಿರ್ವಹಿಸಿದೆ.

ಜಾಗತಿಕ ವೇದಿಕೆಗೆ ಹಾದಿ: ರಾಷ್ಟ್ರೀಯ ಮಟ್ಟದಲ್ಲಿ ಜಯಗಳಿಸುವ ಕ್ರೀಡಾಪಟುಗಳು ಅಂತರಾಷ್ಟ್ರೀಯ ಆರ್ಮ್ ರೆಸ್ಲಿಂಗ್ ಒಕ್ಕೂಟದ (ಐಎಫ್ಎ) ಆಶ್ರಯದಲ್ಲಿ ಜಪಾನ್‌ನಲ್ಲಿ ನಡೆಯಲಿರುವ 'ವಿಶ್ವ ಆರ್ಮ್ ರೆಸ್ಲಿಂಗ್ ಚಾಂಪಿಯನ್‌ಶಿಪ್ 2026'ರಲ್ಲಿ ಭಾರತವನ್ನು ಪ್ರತಿನಿಧಿಸುವ ಸುವರ್ಣಾವಕಾಶವನ್ನು ಪಡೆಯಲಿದ್ದಾರೆ. ಕಳೆದ ವರ್ಷ ಅಜೆರ್ಬೈಜಾನ್‌ನಲ್ಲಿ ನಡೆದ ವಿಶ್ವ ಚಾಂಪಿಯನ್‌ಶಿಪ್‌ನಲ್ಲಿ ಭಾರತವು 3 ಚಿನ್ನ ಮತ್ತು 2 ಕಂಚಿನ ಪದಕಗಳನ್ನು ಗೆಲ್ಲುವ ಮೂಲಕ ಐತಿಹಾಸಿಕ ಸಾಧನೆ ಮಾಡಿರುವುದು ಇಲ್ಲಿ ಗಮನಿಸಬೇಕಾಗಿದೆ.

ವೀಕ್ಷಕ ವಿವರಣೆ ವೇಳೆ ಅಶ್ವಿನ್, ಸೆಹ್ವಾಗ್ ನಡುವೆ ಗೊಂದಲ

• **ಬೆಂಗಳೂರು:** ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯ ಉದ್ಘಾಟನಾ ಪಂದ್ಯದ ವೇಳೆ ಹಿಂದಿ ವೀಕ್ಷಕ ವಿವರಕರಾದ ರವಿಚಂದ್ರನ್ ಅಶ್ವಿನ್ ಹಾಗೂ ವೀರೇಂದ್ರ ಸೆಹ್ವಾಗ್ ನಡುವೆ ವಾಗ್ವಾದ ನಡೆಯಿತು. ಹರಾಜಿಗೂ ಮುನ್ನ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯಿಂದ ನಿವೃತ್ತರಾದ ಅಶ್ವಿನ್ ಇದೇ ಮೊದಲ ಬಾರಿಗೆ ಪಂದ್ಯಾವಳಿಯಲ್ಲಿ ವೀಕ್ಷಕ ವಿವರಕರಾಗಿ ಪದಾರ್ಪಣೆ ಮಾಡಿದ್ದಾರೆ. ಹೈದರಾಬಾದ್ ಹಾಗೂ ಬೆಂಗಳೂರು ನಡುವಿನ ಪಂದ್ಯಕ್ಕೂ ಮುನ್ನ ಉಭಯ ತಂಡಗಳಲ್ಲಿ ಆಕಾಶ್ ಚೋಪ್ರಾ, ಪಂದ್ಯಕ್ಕೂ ಮುನ್ನ ಯಾರ ಮೇಲೆ ಒತ್ತಡವಿದೆ ಎಂಬ ಪ್ರಶ್ನೆಯಿಟ್ಟರು. ಅದಕ್ಕೆ ಉತ್ತರವಾಗಿ ವೀರೇಂದ್ರ ಸೆಹ್ವಾಗ್ ಜಿಒತ್ತಡ ಪೂರ್ತಿ ಅಶ್ವಿನ್ ಮೇಲಿದೆ, ಅವರು ಹೊಸದಾಗಿ ಬಂದಿದ್ದಾರೆಜಿ ಎಂದರು. ಅಶ್ವಿನ್ ನಾನೂ ಪಂದ್ಯದ ಬಗ್ಗೆ ಪ್ರೆಡಿಕ್ಷನ್ ಮಾಡಿದ್ದೇನೆ ಎಂದರು. ಅದಕ್ಕೆ ಸೆಹ್ವಾಗ್ ಪ್ರೆಡಿಕ್ಷನ್ ನೀವು ನಾಯಕರಿದ್ದಾಗಲೂ ಡ್ರೆಸ್ಸಿಂಗ್ ರೂಂನಲ್ಲಿ ಮಾಡಿರುವುದು ನೆನಪಿದೆ ಎಂದರು. ವೈಯಕ್ತಿಕವಾಗಿ ಮಾತನಾಡುತ್ತಾ ಸೆಹ್ವಾಗ್, ನಾನು ಅಶ್ವಿನ್ ಒಂದೆ ತಂಡದಲ್ಲಿದ್ದಾಗ ಅಶ್ವಿನ್ ಜಿತಂಡದಲ್ಲಿ ಆಫ್ ಸ್ಪಿನ್ನರ್ ಬಂದಿದ್ದಾರೆ ಏನು ಮಾಡಲಿ ಎಂದು ಕೇಳಿದ್ದರುಜಿ ಅದಕ್ಕೆ ನಾನು ಮೊದಲ ಬಾಲ್‌ನಿಂದಲೇ ಸ್ಪಿನ್ ಮಾಡಿ ಎಂದಿದ್ದೆ ಆದಾಗ್ಯೂ ವಿಕೆಟುಗಳು ಬೀಳಲೇ ಇಲ್ಲ ಎಂದು ಕಾಲೆಳೆದರು. ಅದಕ್ಕೆ ಉತ್ತರಿಸಿದ ಅಶ್ವಿನ್ ವಿಕೆಟ್ ಬಿದ್ದಿತ್ತು. ಅದು ಕೂಡ ಆಫ್ ಸ್ಪಿನ್ನರ್‌ಗೆ ಎಂದು ನೆನಪಿಸಿಕೊಟ್ಟರು. ಕಾಮೆಂಟ್ರಿ ವೇಳೆ ಭಾರೀ ಗೊಂದಲ ಉಂಟಾಯಿತು.

ಬಾಕ್ಸಿಂಗ್‌ಗೆ ಕೋಮ್ ವಾಪಸ್?

• **ಹೊಸದಿಲ್ಲಿ:** ಒಲಿಂಪಿಕ್ ಕಂಚು ಪದಕ ವಿಜೇತೆ ಹಾಗೂ ಆರು ಬಾರಿ ವಿಶ್ವ ಚಾಂಪಿಯನ್ ಎಂ.ಸಿ. ಮೇರಿ ಕೋಮ್ ವೃತ್ತಿಪರ ಬಾಕ್ಸಿಂಗ್‌ಗೆ ಪ್ರವೇಶಿಸುವ ಕುರಿತು ಚಿಂತನೆ ನಡೆಸುತ್ತಿರುವುದಾಗಿ ತಿಳಿಸಿದ್ದಾರೆ. 43 ವರ್ಷದ ಮೇರಿ ಕೋಮ್, 2012ರ ಲಂಡನ್ ಒಲಿಂಪಿಕ್ಸ್‌ನಲ್ಲಿ ಕಂಚು ಪದಕ ಗೆದ್ದು, ಒಲಿಂಪಿಕ್ ಪದಕ ಗೆದ್ದ ಮೊದಲ ಭಾರತೀಯ ಮಹಿಳಾ ಬಾಕ್ಸರ್ ಆಗಿದ್ದರು. ಈಗ ಅಮೆಚೂರ್ ಬಾಕ್ಸಿಂಗ್‌ನಲ್ಲಿ ವಯೋಮಿತಿ ಮೀರಿರುವ ಕಾರಣ ಹೊಸ ಅವಕಾಶಗಳತ್ತ ಗಮನ ಹರಿಸಿದ್ದಾರೆ. ನನ್ನ ಸಾಧನೆಗಳಲ್ಲಿ ಆರು ವಿಶ್ವ ಚಾಂಪಿಯನ್‌ಶಿಪ್ ಗೆಲುವು ಅತ್ಯಂತ ವಿಶೇಷ. ಈಗ ವಯೋಮಿತಿ ಕಾರಣದಿಂದ ಅಮೆಚೂರ್ ವಿಭಾಗದಲ್ಲಿ ಮುಂದುವರಿಯಲು ಸಾಧ್ಯವಿಲ್ಲ ಎಂದು ಅವರು ತಿಳಿಸಿದ್ದಾರೆ.

ಮೊದಲ ಬಾರಿಗೆ ಸಂಜು ಎದುರಿಸಲಿರುವ ಆರ್‌ಆರ್

ಚೆನ್ನೈ-ರಾಜಸ್ಥಾನ ಫೈಟ್ ಇಂದು

» ಮೊದಲ ಪಂದ್ಯಕ್ಕಿಲ್ಲ ಡೆವಾಲ್ಡ್ ಬ್ರೇವಿಸ್

• **ಗುವಾಹಟಿ:** ಮಹೇಂದ್ರ ಸಿಂಗ್ ಧೋನಿ ಇಲ್ಲದೆ ಕಣಕ್ಕಿಳಿಯುತ್ತಿರುವ ಚೆನ್ನೈ ಸೂಪರ್ ಕಿಂಗ್ಸ್ ಹಾಗೂ ನೂತನ ನಾಯಕನೊಂದಿಗೆ ಆಡುತ್ತಿರುವ ರಾಜಸ್ಥಾನ ರಾಯಲ್ಸ್ ತಂಡಗಳು ಸೋಮವಾರದ ಸೂಪರ್ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ.

ಹರಾಜಿಗೂ ಮುನ್ನ ನಡೆದ ಟ್ರೇಡಿಂಗ್‌ಗಳಲ್ಲಿ ಉಭಯ ತಂಡಗಳು ಮುಖ್ಯವಾದ ಡೀಲ್ ಮಾಡಿಕೊಂಡಿದ್ದವು. ಕಳೆದ ವರ್ಷದ ವರೆಗೂ ಚೆನ್ನೈ ತಂಡದ ಪ್ರಮುಖ ಆಟಗಾರ ಅನ್ನಿಸಿಕೊಳ್ಳುತ್ತಿದ್ದ ರವೀಂದ್ರ ಜಡೇಜಾ ಈ ಬಾರಿ ರಾಜಸ್ಥಾನ ತಂಡದಲ್ಲಿ ಆಡುತ್ತಿದ್ದಾರೆ. ಇತ್ತ ರಾಜಸ್ಥಾನ ತಂಡದ ನಾಯಕರಾಗಿದ್ದ ಸಂಜು ಸ್ಯಾಮ್ಸನ್ ಚೆನ್ನೈ ಪರ ಕಣಕ್ಕಿಳಿಯಲಿದ್ದು ಉಭಯ ತಂಡಗಳ ನಡುವಿನ ಕಾಳಗ ಕ್ರಿಕೆಟ್ ಅಭಿಮಾನಿಗಳಲ್ಲಿ ಕುತೂಹಲ ಮೂಡಿಸಿದೆ. ಟ್ರೇಡಿಂಗ್ ಪ್ರಕಾರ ಕಳೆದ ವರ್ಷ ಚೆನ್ನೈ ಸೂಪರ್ ಕಿಂಗ್ಸ್ ಪರ ಆಡುತ್ತಿದ್ದ ಸ್ಯಾಮ್ ಕರ್‍ರನ್ ಕೂಡ ರಾಜಸ್ಥಾನ ಪರ ಆಡಬೇಕಿತ್ತು. ಆದರೆ ಅವರು ಗಾಯಗೊಂಡ ನಿಟ್ಟಿನಲ್ಲಿ ಸಾಧ್ಯವಾಗುತ್ತಿಲ್ಲ. ಗುವಾಹಟಿಯಲ್ಲಿ ಪಂದ್ಯ ನಡೆಯಲಿದೆ.





ಚೆನ್ನೈಗೆ ಯುವಕರ ಬಲ

ಕಳೆದ ಆವೃತ್ತಿಯಲ್ಲಿ ಭಾರೀ ಹಿನ್ನಡೆ ಅನುಭವಿಸಿದ್ದ ಚೆನ್ನೈ ಸೂಪರ್ ಕಿಂಗ್ಸ್ ತಂಡವು ಆಗಲೇ ಕೆಲವು ಬದಲಾವಣೆಗಳನ್ನು ಮಾಡಿಕೊಂಡಿತ್ತು. ಆಯುಷ್ ಮಾತ್ರೆ ಹಾಗೂ ಉರ್ವಿಲ್ ಪಟೇಲ್ ಅಂತವರನ್ನು ಆಯ್ಕೆ ಮಾಡಿಕೊಂಡಿತ್ತು. ಈ ನಡುವೆ ಸಂಜು ಸ್ಯಾಮ್ಸನ್ ಅವರನ್ನು ಟ್ರೇಡ್ ಮಾಡಿಕೊಂಡಿದೆ. ಗಾಯಕ್ವಾಡ್ ಕೂಡ ತಂಡದ ನಾಯಕತ್ವ ನಿಭಾಯಿಸಲು ಸಜ್ಜಾಗಿದ್ದಾರೆ. ಹರಾಜಿನಲ್ಲಿ ಕಾರ್ತಿಕ್ ಶರ್ಮ, ಪ್ರಶಾಂತ್ ಅಂಥ ಯುವಕರನ್ನೇ ಆಯ್ಕೆ ಮಾಡಿಕೊಂಡಿರುವ ಚೆನ್ನೈ ಸೂಪರ್ ಕಿಂಗ್ಸ್ ಇದೀಗ ಯುವಕರನ್ನು ಹೊಂದಿರುವ ತಂಡವಾಗಿದೆ. ಬ್ಯಾಟಿಂಗ್ ವಿಭಾಗವನ್ನು ಸಂಜು, ಗಾಯಕ್ವಾಡ್, ಆಯುಷ್, ಬ್ರೇವಿಸ್, ದುಬೆ ಬಲಪಡಿಸಿದರೆ ಬೌಲಿಂಗ್ ವಿಭಾಗದಲ್ಲಿ ಖಲೀಲ್, ರಾಮಕೃಷ್ಣ, ಮ್ಯಾಥೀವ್ ಶಾರ್ಟ್, ಮಾಟ್ ಹೆನ್ರಿ, ನೂರ್ ಅಹ್ಮದ್ ಅಂಥವರಿದ್ದಾರೆ.



2019ರ ನಂತರ ಮೊದಲ ಬಾರಿಗೆ ಧೋನಿ ಇಲ್ಲ

ಸಮಸ್ತ ಕ್ರಿಕೆಟ್ ಅಭಿಮಾನಿಗಳು ಮಹೇಂದ್ರ ಸಿಂಗ್ ಧೋನಿಗಾಗಿ ಕಾಯುತ್ತಾರೆ. ಐಪಿಎಲ್ ಬಂದ ತಕ್ಷಣಕ್ಕೆ ಧೋನಿ ಅಭಿಮಾನಿಗಳಲ್ಲಿ ಮಂದಹಾಸ ಸೃಷ್ಟಿಯಾಗುತ್ತದೆ. ಆದರೆ ಈ ಬಾರಿ ಆ ಮಂದಹಾಸ ಮಂಕಾಗಿದ್ದು, ಗಾಯದ ಕಾರಣದಿಂದ ಧೋನಿ ಆರಂಭಿಕ 6 ಪಂದ್ಯಗಳನ್ನು ಆಡುತ್ತಿಲ್ಲ. ವರದಿಗಳ ಪ್ರಕಾರ ಅವರು ಚಿಕಿತ್ಸೆ ಪಡೆಯುತ್ತಿದ್ದು, ಗುವಾಹಟಿಗೆ ತಂಡದೊಂದಿಗೆ ಪ್ರಯಾಣಿಸಿಲ್ಲ. 2019ರ ಮುಂಬೈ ಹಾಗೂ ಚೆನ್ನೈ ವಿರುದ್ಧದ ಪಂದ್ಯಕ್ಕೆ ಧೋನಿ ಕೊನೆಯ ಬಾರಿ ಅಲಭ್ಯರಾಗಿದ್ದರು. ಈ ನಂತರ ಪ್ರತಿಯೊಂದು ಆವೃತ್ತಿಯಲ್ಲೂ ಧೋನಿ ಕಣಕ್ಕಿಳಿದಿದ್ದಾರೆ.

ಭರವಸೆಯಲ್ಲಿ ರಾಜಸ್ಥಾನ



ರಿಯಾನ್ ಪರಾಗ್ ಅವರ ನೇತೃತ್ವದಲ್ಲಿ ಕಣಕ್ಕಿಳಿಯುತ್ತಿರುವ ರಾಜಸ್ಥಾನ ತಂಡಕ್ಕೀಗ ಜಡೇಜಾ ಬಲವಿದೆ. ಯಶಸ್ವಿ ಜೈಸ್ವಾಲ್, ವೈಭವ್ ಸೂರ್ಯವಂಶಿ, ಹೆಟ್ಮೇರ್, ಫೆರಾರಿಯಾ, ಧ್ರುವ್ ಜುರೇಲ್ ಅಂತಹ ಬ್ಯಾಟರ್‌ಗಳಿದ್ದಾರೆ. ಆರ್ಚರ್, ತುಷಾರ್ ದೇಶಪಾಂಡೆ, ನಾಂದ್ರೆ ಬರ್ಗರ್ ಅಂತಹ ಬೌಲರ್‌ಗಳಿದ್ದು ವಿಶ್ವಾಸದಲ್ಲಿ ಕಾಣಿಸಿಕೊಂಡಿದೆ.

ಪಂದ್ಯದ ಮಾಹಿತಿ

ಯಾವಾಗ: ಸೋಮವಾರ
ಎಲ್ಲಿ: ಗುವಾಹಟಿ
ಸಮಯ: ಸಂಜೆ 7:30
ಪ್ರಸಾರ: ಸ್ಟಾರ್‌ಸ್ಪೋರ್ಟ್ಸ್, ಜಿಯೋ ಹಾಟ್‌ಸ್ಟಾರ್

ಪಿಚ್

ಗುವಾಹಟಿಯಲ್ಲಿ ಪಂದ್ಯ ನಡೆಯಲಿದೆ. ಅಲ್ಪ ಇಬ್ಬನಿ ಕಾಟ ಇದ್ದದ್ದೆ. ಬ್ಯಾಟರ್‌ಗಳಿಗೆ ಅಲ್ಪ ಲಾಭ ನೀಡಲಿದೆ, ಆದಾಗ್ಯೂ ವೇಗ ಮತ್ತು ಸ್ಪಿನ್ನರ್‌ಗಳು ಮಿಂಚಬಲ್ಲರು. ಹೆಚ್ಚಿನ ಬೌನ್ಸ್ ಇರಲಿದೆ, ಮಳೆ ಕಾಟ ಇಲ್ಲ, ಮೊದಲು ಬೌಲಿಂಗ್ ಮಾಡುವ ತಂಡಕ್ಕೆ ಲಾಭ ಸಿಗಲಿದೆ.

ದಾಖಲೆಗಳ ಸರದಾರ ಕೊಹ್ಲಿ

• **ಬೆಂಗಳೂರು:** ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿ ಶುರುವಾದಂತೆ ಆರ್‌ಸಿಬಿಯ ಪ್ರಮುಖ ಆಟಗಾರ ವಿರಾಟ್ ಕೊಹ್ಲಿ ಹೆಸರಿನಲ್ಲಾಗುವ ದಾಖಲೆಗಳು ಪ್ರಾರಂಭಗೊಂಡಿವೆ. ಚೇಸಿಂಗ್ ಮಾಸ್ಟರ್ ಎಂಬ ಹೆಸರಿಗೆ ತಕ್ಕಂತೆ ಬ್ಯಾಟಿಂಗ್ ಮಾಡಿರುವ ವಿರಾಟ್ ಕೊಹ್ಲಿ ಹೈದರಾಬಾದ್ ವಿರುದ್ಧದ ಉದ್ಘಾಟನಾ ಪಂದ್ಯದಲ್ಲಿ ಅತ್ಯುತ್ತಮ ಬ್ಯಾಟಿಂಗ್ ಮಾಡಿದರು. ಅಜೇಯ 69 ರನ್ ಗಳಿಸುವುದರೊಂದಿಗೆ ಅರ್ಧಶತಕ ಪೂರೈಸಿಕೊಂಡ ಅವರು, ವಿವಿಧ ದಾಖಲೆಗಳನ್ನು ಮಾಡಿದ್ದಾರೆ. ಚೇಸಿಂಗ್‌ನಲ್ಲಿ ಅತಿ ಹೆಚ್ಚು ರನ್, ಐಪಿಎಲ್‌ನಲ್ಲಿ ಅತಿ ಹೆಚ್ಚು ಬಾರಿ ಟಾಪ್ ಸ್ಕೋರರ್ ಆದ ದಾಖಲೆಗಳೂ ಕೊಹ್ಲಿ ಹೆಸರಿನಲ್ಲಿ ಸೇರಿಕೊಂಡಿವೆ.

ವಿವಿಧ ದಾಖಲೆ

ಮೊದಲಿಗೆ ಐಪಿಎಲ್ ಪಂದ್ಯಗಳ ವೇಳೆ ಚೇಸಿಂಗ್‌ನಲ್ಲಿ 4000 ರನ್ ಕಲೆಹಾಕಿದ ಮೊದಲ ಬ್ಯಾಟರ್ ಎಂಬ ದಾಖಲೆ ಮಾಡಿದರು. ಐಪಿಎಲ್ ಪಂದ್ಯಗಳಲ್ಲಿ ಅತಿ ಹೆಚ್ಚು ಬಾರಿ ತಂಡದ ಪರ ಅತ್ಯಧಿಕ ರನ್ ಗಳಿಸಿದ ದಾಖಲೆ ಕೂಡ ವಿರಾಟ್ ಕೊಹ್ಲಿ ಪಾಲಾಗಿದೆ. ಈ ಹಿಂದೆ ಈ ದಾಖಲೆ ಡೇವಿಡ್ ವಾರ್ನರ್ (66) ಹೆಸರಿನಲ್ಲಿತ್ತು. ಇದೀಗ 67ನೇ ಬಾರಿ ಟಾಪ್ ಸ್ಕೋರರ್ ಆಗಿದ್ದಾರೆ. ಇದಲ್ಲದೆ, ಐಪಿಎಲ್‌ನಲ್ಲಿ 50+ ಸ್ಕೋರ್‌ಗಳಿಸಿ ಅತ್ಯಧಿಕ ಬಾರಿ ಅಜೇಯರಾಗಿ ಉಳಿದ ಬ್ಯಾಟರ್ ಎಂಬ ದಾಖಲೆಯನ್ನು ವಿರಾಟ್ ಕೊಹ್ಲಿ ತಮ್ಮದಾಗಿಸಿಕೊಂಡಿದ್ದಾರೆ.



ಸಿಕ್ಸರ್‌ಗಳ ಸುರಿಮಳೆ, ರನ್ ಹೊಳೆ

ಐಪಿಎಲ್ ಇತಿಹಾಸದಲ್ಲೇ ಅತೀ ಹೆಚ್ಚು ಬಾರಿ 50+ ಸ್ಕೋರ್‌ಗಳಿಸಿ ತಂಡಕ್ಕೆ ಗೆಲುವು ತಂದುಕೊಟ್ಟ ಆಟಗಾರ ಎಂಬ ಹೆಗ್ಗಳಿಕೆಗೂ ಕೊಹ್ಲಿ ಪಾತ್ರರಾಗಿದ್ದಾರೆ. ಸನ್‌ರೈಸರ್ಸ್ ಹೈದರಾಬಾದ್ ತಂಡದ ವಿರುದ್ಧ ಅತಿ ಹೆಚ್ಚು ರನ್ (874) ಗಳಿಸಿದ ಆಟಗಾರ, ಐಪಿಎಲ್ ಇತಿಹಾಸದಲ್ಲೇ ಅತೀ ಹೆಚ್ಚು ಸಿಕ್ಸ್ ಸಿಡಿಸಿದ ಭಾರತೀಯ ಓಪನರ್ ಎಂಬ ದಾಖಲೆ ಕೂಡ ವಿರಾಟ್ ಕೊಹ್ಲಿ ಪಾಲಾಗಿದೆ. ಇದಲ್ಲದೆ ಐಪಿಎಲ್ ಇತಿಹಾಸದಲ್ಲಿ ಒಂದೇ ತಂಡದ ಪರ 19 ಸೀಸನ್ ಆಡಿದ ಏಕೈಕ ಆಟಗಾರ ಎಂಬ ಹೆಗ್ಗಳಿಕೆಯನ್ನು ವಿರಾಟ್ ಕೊಹ್ಲಿ ತಮ್ಮದಾಗಿಸಿಕೊಂಡಿದ್ದಾರೆ. ಹಾಗೆಯೇ ಎಸ್‌ಆರ್‌ಎಚ್ ವಿರುದ್ಧ ಗಳಿಸಿದ 69 ರನ್‌ಗಳೊಂದಿಗೆ ಟಿ20 ಕ್ರಿಕೆಟ್‌ನಲ್ಲಿ ಅತ್ಯಧಿಕ ರನ್ ಕಲೆಹಾಕಿದ ಬ್ಯಾಟರ್‌ಗಳ ಪಟ್ಟಿಯಲ್ಲಿ ಆರನೇ ಸ್ಥಾನಕ್ಕೇರಿದ್ದಾರೆ.

ವಿರಾಮದಿಂದ ಒಳಿತು: ವಿರಾಟ್ ಕೊಹ್ಲಿ

• **ಬೆಂಗಳೂರು:** ಸರಣಿಗಳ ನಂತರ ಸಿಗುವ ವಿರಾಮ ನನಗೆ ಕ್ರಿಕೆಟ್‌ಗಾಗಿ ಉತ್ಸುಕರನ್ನಾಗಿ ಮಾಡಿದೆ ಎಂದು ವಿರಾಟ್ ಕೊಹ್ಲಿ ತಿಳಿಸಿದರು.

ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಉದ್ಘಾಟನಾ ಪಂದ್ಯದಲ್ಲಿ ಬೆಂಗೂರು ತಂಡ ಗೆಲ್ಲುವಲ್ಲಿ ಪ್ರಮುಖ ಪಾತ್ರ ವಹಿಸಿದ ಅವರು, ಅಜೇಯ 69 ರನ್ ಗಳಿಸಿದ್ದರು. ಪಂದ್ಯಕ್ಕೂ ಮುನ್ನ ಕೊಹ್ಲಿಯ ಕ್ರಿಕೆಟ್‌ನಿಂದ ದೂರ ಉಳಿದ ದಿನಗಳ ಬಗ್ಗೆ ಚರ್ಚೆಯಾಗುತ್ತಿದ್ದವು. ಪಂದ್ಯದ ಬಳಿಕ ಇಷ್ಟು ದಿನ ಕ್ರಿಕೆಟ್‌ನಿಂದ ದೂರ ಇದ್ದಿರಿ, ಇದೀಗ ಮತ್ತೊಮ್ಮೆ ಮೈದಾನಕ್ಕೆ ಮರಳಿದ ನಂತರ ಯಾವ ಸವಾಲು ಮುಂದಿತ್ತು ಎಂಬ ಪ್ರಶ್ನೆಗೆ ಉತ್ತರಿಸುತ್ತಾ ವಿರಾಟ್ ಕೊಹ್ಲಿ, ಸುಮಾರು 15 ವರ್ಷಗಳಿಂದ ನಾನು ನಿರಂತರ ಕ್ರಿಕೆಟ್ ಆಡುತ್ತಿರುವುದನ್ನು ನೀವು ನೋಡಿದ್ದೀರಿ. ಸತತ ಆಟದಿಂದಾಗಿ ನನಗೆ ವಿರಾಮವಿಲ್ಲದಂತೆ ಮಾಡಿತ್ತು. ಇದರಿಂದ ಹಲವು ಸಮಸ್ಯೆಗಳಾಗುತ್ತಿದ್ದವು. ಆದರೆ ಈಗ ಸಿಗುತ್ತಿರುವ ವಿರಾಮ ನನಗೆ ಈ ರೀತಿಯ ಸಮಸ್ಯೆಗಳಿಗೆ ಸಹಾಯ ಮಾಡುತ್ತಿದೆ ಎಂದರು. ವಿರಾಮ ಸಿಗುವುದರಿಂದ ಉತ್ಸುಕನಾಗಿರುತ್ತೇನೆ. ಮತ್ತು ಫ್ರೆಶ್ ಆಗಿರುತ್ತೇನ ಇದರಿಂದ ನನ್ನ ವೈಯಕ್ತಿಕ ಆಟದ ಮೇಲೆ ಭಾರೀ ಪರಿಣಾಮ ಬೀಳುತ್ತದೆ ಎಂದಿದ್ದಾರೆ.

ಮನ್ ಕಿ ಬಾತ್‌ನಲ್ಲಿ ಪ್ರಸ್ತಾಪ | ವಿಶ್ವಕಪ್ ಗೆಲುವು ಭಾರತಕ್ಕೆ ಹೆಮ್ಮೆ

ಜಮ್ಮು-ಕಾಶ್ಮೀರ ಆಟಕ್ಕೆ ಮೋದಿ ಮೆಚ್ಚುಗೆ

• **ಹೊಸದಿಲ್ಲಿ:** ಕಳೆದ ತಿಂಗಳು ಮುಕ್ತಾಯಗೊಂಡ ದೇಶಿ ಕ್ರಿಕೆಟ್ ಪಂದ್ಯಾವಳಿ ರಣಜಿ ಟ್ರೋಫಿ ಮುಡಿಗೇರಿಸಿಕೊಂಡಿರುವ ಜಮ್ಮು-ಕಾಶ್ಮೀರ ತಂಡದ ವೈಖರಿಯನ್ನು ಪ್ರಧಾನಿ ನರೇಂದ್ರ ಮೋದಿ ಹೊಗಳಿದರು.

ಭಾನುವಾರದ ಮನ್ ಕಿ ಬಾತ್ ಕಾರ್ಯಕ್ರಮದಲ್ಲಿ ಈ ಬಗ್ಗೆ ಪ್ರಸ್ತಾಪಿಸಿರುವ ಅವರು, ಮೊದಲ ಬಾರಿಗೆ ರಣಜಿ ಟ್ರೋಫಿ ಗೆದ್ದುಕೊಂಡಿರುವುದು ಜಮ್ಮು ಮತ್ತು ಕಾಶ್ಮೀರದ ಕ್ರೀಡಾ ಕ್ಷೇತ್ರಕ್ಕೆ ಐತಿಹಾಸಿಕ ಕ್ಷಣವಾಗಿದೆ. ಮುಂದಿನದಿನಗಳಲ್ಲೂಜಮ್ಮು-ಕಾಶ್ಮೀರಚಾಂಪಿಯನ್ ಪಟ್ಟ ಅಲಂಕರಿಸಲಿದೆ, ಅಲ್ಲಿನ ಕ್ರೀಡಾಪಟುಗಳು ಎತ್ತರ ಸಾಧನೆಗಳನ್ನು ಮಾಡುತ್ತಾರೆಂಬ ಭರವಸೆ ನನಗಿದೆ ಎಂದರು. ತಿಂಗಳ ಆರಂಭದಲ್ಲಿ ಮುಕ್ತಾಯಗೊಂಡಿರುವ ಟಿ20 ವಿಶ್ವಕಪ್ ಪಂದ್ಯಾವಳಿ ಬಗ್ಗೆ ಪ್ರಸ್ತಾಪಿಸಿರುವ ಮೋದಿ, ಈ ಗೆಲುವು ಐತಿಹಾಸಿಕ ಸಾಧನೆ. ನಮ್ಮ ತಂಡ ಗೆದ್ದಿರುವುದು ದೇಶದ ಎಲ್ಲಾ ಜನರಿಗೂ ಹೆಮ್ಮೆಯ ವಿಚಾರ ಎಂದು ಬಣ್ಣಿಸಿದರು.



ಈ ಗೆಲುವಿನ ಮೂಲಕ ಜಮ್ಮು-ಕಾಶ್ಮೀರದಲ್ಲಿ ಕ್ರೀಡಾ ಪ್ರೀತಿ ಹೆಚ್ಚಳಗೊಂಡಿದೆ. ಕ್ರಿಕೆಟ್ ವಿಚಾರಲ್ಲಿ ಜನರು ಇನ್ನಷ್ಟು ಉತ್ಸುಕರಾಗುವಂತೆ ಮಾಡಿದೆ. ಅಲ್ಲಿನ ಜನರಿಗೆ ಕ್ರೀಡೆಯಲ್ಲಿ ಗಮನಾರ್ಹ ಆಸಕ್ತಿಯಿದೆ. ಇಂತಹ ಗೆಲುವುಗಳಿಂದ ಈಗ ಜಮ್ಮು ಸ್ಪೋರ್ಟ್ಸ್ ಹಬ್ ಆಗುತ್ತಿರುವುದು ಹೆಮ್ಮೆಯ ವಿಚಾರ.
■ ನರೇಂದ್ರ ಮೋದಿ, ಪ್ರಧಾನಿ

ಹೃದಯಸ್ಪರ್ಶಿ ಗೆಲುವು

ಜಮ್ಮು-ಕಾಶ್ಮೀರ ಗೆದ್ದಿರುವ ವಿಚಾರದ ಬಗ್ಗೆ ಮಾತನಾಡುತ್ತಾ, ಏಳು ದಶಕದ ಕಾಯುವಿಕೆಯ ನಂತರ ಜಮ್ಮು ಮತ್ತು ಕಾಶ್ಮೀರಕ್ಕೆ ಚಾಂಪಿಯನ್ ಪಟ್ಟ ದಕ್ಕಿದ್ದು ಹೃದಯ ಸ್ಪರ್ಶಿಯವಾಗಿದೆ. ಇದು ಅಲ್ಲಿನ ಆಟಗಾರರ ವರ್ಷಾನುಗಟ್ಟಲೆ ಪಟ್ಟ ಪ್ರಯತ್ನ ಮತ್ತು ಶ್ರಮದ ಬಗ್ಗೆ ಹೇಳುತ್ತದೆ. ತಂಡದ ಬಗ್ಗೆ ಅಲ್ಲದೆ, ಗೆಲುವಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಆಕಿಬ್ ನಬಿ ದಾರ್ ಬಗ್ಗೆಯೂ ಮಾತನಾಡಿರುವ ಪ್ರಧಾನಿ ಮೋದಿ, 60 ವಿಕೆಟ್ ಪಡೆದ ಆಕಿಬ್ ನಬಿ ಪ್ರದರ್ಶನ ಗಮನಾರ್ಹವಾಗಿತ್ತು ಎಂದಿದ್ದಾರೆ.

ಪದಬಂಧ

» ರಾಜಾ ಸಂಗಮೇಶ ಹಿರೇಮಠ



5938

ಎಡದಿಂದ ಬಲಕ್ಕೆ
1.ಚಾರರು ಸರದ ಬಗ್ಗೆ ತಂದ ಸುದ್ದಿ (4)
3.ಬೆದರಿಸಿ ಕಿತ್ತುಕೊಳ್ಳುವುದು (3)
5.ಮುದಿತನ ಎಂಬರ್ಥದ ಹಟ್ಟದಿಯ ಹೆಸರು (3)
7.ಹುಡುಗುತನದಿಂದ ಕೂಡಿದ್ದು (3)
8.ಮತಿಯ ನಡುವೆ ಜೇನಿನಂತೆ ಸಿಹಿಯಾದದ್ದಿದೆ (4)
10.ನಕಲಿ ಒಳಗೊಂಡ ಶೌರ್ಯದಿಂದ ಕೂಡಿದ್ದು (4)
12.ಅಪರಾಧಿಗೆ ಹಾಕುವ ಬೇಡಿ (3)
14.ಕುಲದ ನಡುವೆ ಮೋಸದಿಂದ ಕೂಡಿದ್ದಿದೆ (3)
15.ಕಾಗದ-ಪತ್ರಗಳನ್ನಿಡಲು ಬಳಸುವ ಚೀಲ (3)
16.ಗಬಗಬನೆ ತಿನ್ನುವಿಕೆ (4)

ಮೇಲಿನಿಂದ ಕೆಳಕ್ಕೆ
1.ನಿಜವಾದ ವಿವರ-ಸಂಗತಿ (3)
2.ಶರದ ನಡುವಿನ ಸಪ್ತಾಹದ ದಿನ ತಲೆಕೆಳಗಾಗಿದೆ (4)
4.ಚಿಕ್ಕ ಮಕ್ಕಳ ಊಟದ ಪಂಕ್ತಿ (4)
6.ಕನಿಕರ ತಲೆಕೆಳಗಾಗಿದೆ (3)
7.ಆಕಾಶವಾಣಿಯನ್ನು ಹೀಗೂ ಕರೆಯಬಹುದು (3)
9.ಬಾಣಸಿಗ ರುಚಿ ಹೆಚ್ಚಿಸಲು ಬಳಸುವ ಪದಾರ್ಥ (3)
10.ಕಲದ ನಡುವೆ ಋಷಿಯ ಹೆಸರಿದೆ (4)
11. ಮನುಷ್ಯ ಮೊದಲಿರುವ ಅತೀವ ನೋವು (3)
12. ಕಾರ್ಯಕ್ರಮವನ್ನು ಮುನ್ನಡೆಸುವ ವ್ಯಕ್ತಿ (4)
13.ದೃಷ್ಟಿಗೆ ಬೀಳುವಂತೆ ಮಾಡು (3)

5937 ಉತ್ತರ

ಎಡದಿಂದ ಬಲಕ್ಕೆ:
3.ರೆಕ್ಕೆಬಡಿ 5.ವ್ಯವಹಾರ
6.ಆಯಾಸ 7.ನೆಗೆತ
9.ಜಾನಕಿ 10.ಟಗರು
12.ರಜತ 14.ಕುಟೀರ
16.ಹವಿರ್ಭಾಗ
17.ತೋಷುಖಾನೆ

ಮೇಲಿನಿಂದ ಕೆಳಕ್ಕೆ :
1.ಭವ್ಯಮನೆ 2.ಸರಸ
3.ಆಸರೆ 4.ಬಡತನ
8.ತವರು 9.ಜಾಗರ
11.ಗಜರಿಪು 13.ತರಗತಿ
14.ಕುಲೀನೆ 15.ರಹಸ್ಯ

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M N S Printers No.345/4, Bhattarahalli, Virgo Nagar Post Old Madras Road, K R Puram, Bangalore 560 049 and Published at No. 1/1, 1Floor, 6th cross, 8th Main, Malleshwara, Bengaluru 03 Ph: (080) 23560302, 340 , Editor: P.S.Prakash, Group Editor: Vinayak S. Bhat, Posted at PSO Bengaluru, Bengaluru 26